ಟ್ಟ ಕವಿಕಂಠಪಾಶವೆಂಬುದೊಂದು ಅತಿ ಕಠಿಣವಾದ ಚಿ
ಕ್ಕ ಕಾವ್ಯ ವಿರುವದು. ಅದರೊಳಗಣ ಶ್ಲೋಕ

॥ಮತ್ತೇಭ ವಿಕ್ರೀಡಿತ ವೃತ್ತ॥

ಲೀಲಾವಾಸಗೃಹಂ ಗಿರಿಷತ್ರಿಕರಂ ಲಕ್ಷ್ಮೀನಿವಾಸಾಸ್ಪದಂ।
ಕಾಕಾಲ್ಹಾದ ವಿಘಾತಕಂ ಪರಶಿಶುತ್ರಾಣಪ್ರವೃತ್ಯಾತುರಂ॥
ವಕ್ಷೋಜದ್ವಿತಯಂ ವಿಭಾತಿನಲಿನೀ ರೂಹೇಕ್ಷಣೆ ತಾವಕಂ।
ಕಾಂತಾವತ್ಕರಿ ದಂತವತ್ಕಮಲವತ್ಕಾಕುತ್ಥವತ್ಕಾಕವತ್॥೮॥

ಅರ್ಥ–ನಲಿನೀರೂಹೇಕ್ಷಣೇ= ಕಮಲದೋಪಾದಿಯುಳ್ಳ
ಕಣ್ಣುಳ್ಳ ಸ್ತ್ರೀಯೇ। ಕಾಂತಾವತ್ = ಚಲುವಿಕೆಯುಳ್ಳ
ಸ್ತ್ರೀಯುಳ ಹಾಗೆ। ಲೀಲಾವಾಸಗೃಹಂ=ನರ್ತನ, ವೈಯ್ಯಾ
ರ, ಇವೇ ಮುಂತಾದ ಆಟಗಳಿಗೆ ಸ್ವಂತ ಮನೆಯಂತೆ ತೋ
ರುವಂಥಾ (ಸುರತ ಕ್ರೀಡೆಗೆ ಶೈಯ್ಯಾಗೃಹದಂತೆ ಒಪ್ಪುವಂ
ಥಾ)। ಕರಿದಂತವತ್=ಆನೆಯ ಕೋರೆಗಳ ಹಾಗೆ। ಗಿರಿಷ
ತ್ರಿಕರಂ=ಕರಗಸದಿಂದ ಕೊರಿಯಲ್ಪಟ್ಟ। ವಜ್ರದಂತೆ ಶುಭ್ರ
ವಾದ (ಕೇಸರದಿಂದ ಲೇಪಿಸಲ್ಪಟ್ಟಂಥಾ, ಕಸ್ತೂರಿಯಂತೆ
ಕಪ್ಪಾದ ಚೂಚುಕವುಳ್ಳಂಥಾ)। ಕಮಲವತ್=ತಾವರೇ ಹೂ
ವಿನಹಾಗೆ। ಲಕ್ಷ್ಮೀನಿವಾಸಾಸ್ಪದಂ=ಲಕ್ಷ್ಮಿಗೆ ಮನೆಯಾದಂ
ಥಾ, (ಹೃದಯವೇ ಸ್ಥಾನವಾಗಿ ವುಳ್ಳಂಥಾ)। ಕಾಕುತ್ಥ
ತ್=ಕಾಕುತ್ಥನೆಂಬ ರಾಜನ ಕುಲದಲ್ಲಿ ಹುಟ್ಟಿದ ರಾಮಚಂ
ದ್ರನಹಾಗೆ। ಕಾಕಾಲ್ಹಾದವಿಘಾತಕಂ=ಕಾಕಾಸುರನೆಂಬ ದೈತ್ಯ

ನನ್ನು ಕೊಂದಂಥಾ। (ಕೀಳವಾದ ಕಾಮೋದ್ರೇಕದ ಸಂತೋಷವನ್ನು ಶಾಂತಮಾಡುವಂಥಾ)। ಕಾಕವತ್=ಕಾಗೆಯ ಹಾಗೆ। ಪರಶಿಶು ತ್ರಾಣಪ್ರವೃತ್ತ್ಯಾತುರಂ=ಕೋಗಿಲೆಯ ಮರಿಗಳನ್ನು ಪೋಷಣಮಾಡುವಂಥಾ (ಕೇವಲ ಸಣ್ಣ ಕೂಸುಗಳಿಗೆ ತ್ರಾಣವನ್ನುಂಟುಮಾಡುವಂಥಾ)। ತಾವಕಂ=ನಿಂನ ಸಂಬಂಧಿಯಾದ। ವಕ್ಷೋಜದ್ವಿತಯಂ=ಯೆರಡು ಮೊಲೆಗಳು। ವಿಭಾತಿ=ಚನ್ನಾಗಿ ಶೋಭಿಸುತ್ತವೆ।

ಭಾವಾರ್ಥ—ಯೆಲೇ ಕಮಲದಂತೆ ಕಣ್ಣುಳ್ಳ ಸ್ತ್ರೀಯೇ, ಚಲುವಿಕೆಯುಳ್ಳ ಸ್ತ್ರೀಯರ ಹಾಗೆ ನರ್ತನ, ವೈಯ್ಯಾರ, ಇವೇ ಮುಂತಾದ ಆಟಗಳಿಗೆ ಸ್ವಂತ ಮನೆಯಂತೆ ತೋರುವಂಥಾ (ಸುರತ ಕ್ರೀಡೆಗೆ ಶೈಯ್ಯಾಗೃಹದಂತೆ ತೋರ್ಪುವಂಥಾ)। ಆನೆ ಕೋರೆಗಳಹಾಗೆ, ಕರಗಸದಿಂದ ಕೊರಯಲ್ಪಟ್ಟಂಥಾ, ವಜ್ರದಂತೆ ಶುಭ್ರವಾದಂಥಾ (ಕೇಸರದಿಂದ ಲಿಪ್ತವಾದಂಥಾ ಕಸ್ತೂರಿಯಂತೆ ಕಪ್ಪಾದ * ಚೂಚುಕವುಳ್ಳಂಥಾ), ತಾವರೆಯ ಹೂವಿನ ಹಾಗೆ ಲಕ್ಷ್ಮಿಗೆ ಮನೆಯಾದಂಥಾ (ಹೃದಯವೇ ಸ್ಥಾನವಾಗಿ ವುಳ್ಳಂಥಾ) ಕಾಕುತ್ಸ್ಥನೆಂಬ ರಾಜನ ಕುಲದಲ್ಲಿ ಹುಟ್ಟಿದ ರಾಮಚಂದ್ರನಂತೆ, ಕಾಕಾಸುರನೆಂಬ ದೈತ್ಯನನ್ನು ಕೊಂದಂಥಾ (ಕೀಳವಾದ ಕಾಮೋದ್ರೇಕವನ್ನು ಶಾಂತಮಾಡುವಂಥಾ) ಕಾಗೆಯ ಹಾಗೆ, ಕೋಗಿಲೆಯ ಮರಿಗಳನ್ನು ಪೋಷಣ ಮಾಡುವಂಥಾ (ಕೇವಲ ಸಣ್ಣ ಕೂಸುಗಳಿಗೆ ತ್ರಾಣವನ್ನುಂಟು ಮಾಡುವಂಥಾ), ಇವೇ ಮೊದಲಾದ ಲಕ್ಷಣಗಳುಳ್ಳ ನಿನ್ನ ಯೆರಡೂ ಮೊಲೆಗಳು ಈ ಪ್ರಕಾರ ಚನ್ನಾಗಿ ವೊಪ್ಪುತ್ತವೆ.॥೬॥

※ ಮೊಲೆಯ ಮೂಗು.

ಟ್ಟ ಕವಿಕಂಠಹಾರವೆಂಬುದೊಂದು ಅತಿ ಕಠಿಣವಾದ ಚಿ
ತ್ರ ಕಾವ್ಯ ವಿರುವದು. ಅದರೊಳಗಣ ಶ್ಲೋಕ

॥ಮತ್ತೇಭ ವಿಕ್ರೀಡಿತ ವೃತ್ತ॥

ಲೀಲಾವಾಸಗೃಹಂ ಗಿರಿಕ್ಷತಿಕರಂ ಲಕ್ಷ್ಮೀನಿವಾಸಾಸ್ಪ
ದಂ।
ಕಾಕಾಲ್ಹಾದ ವಿಘಾತಕಂ ಪರಶಿಶುತ್ರಾಣಪ್ರವೃತ್ತ್ಯಾತು
ರಂ॥
ವಕ್ಷೋಜದ್ವಿತಯಂ ವಿಭಾತಿನಲಿನೀ ರೂಹೇಕ್ಷಣೇ ತಾ
ವಕಂ।
ಕಾಂತಾವತ್ಕರಿ ದಂತವತ್ಕಮಲವತ್ಕಾಕುತ್ಸ್ಥವತ್ಕ
ವತ್॥೧॥

ಅರ್ಥ—ನಲಿನೀರೂಹೇಕ್ಷಣೇ= ಕಮಲದೋಪಾದಿಯಲ್ಲಿ ಕಣ್ಣುಳ್ಳ ಸ್ತ್ರೀಯೇ। ಕಾಂತಾವತ್ = ಚಲುವಿಕೆಯುಳ್ಳ ಸ್ತ್ರೀಯರ ಹಾಗೆ। ಲೀಲಾವಾಸಗೃಹಂ=ನರ್ತನ, ವ್ಯಯ್ಯಾರ, ಇವೇ ಮುಂತಾದ ಆಟಗಳಿಗೆ ಸ್ವಂತ ಮನೆಯಂತೆ ತೋರುವಂಥಾ (ಸುರತ ಕ್ರೀಡೆಗೆ ಶೈಯಾಗ್ರಹದಂತೆ ಒಪ್ಪುವಂಥಾ)। ಕರಿದಂತವತ್=ಆನೆಯ ಕೋರೆಗಳ ಹಾಗೆ। ಗಿರಿಕ್ಷತಿಕರಂ=ಕರಗಸದಿಂದ ಕೊರಿಯಲ್ಪಟ್ಟ। ವಜ್ರದಂತೆ ಶುಭ್ರವಾದ (ಕೇಸರದಿಂದ ಲೇಪಿಸಲ್ಪಟ್ಟಂಥಾ, ಕಸ್ತೂರಿಯಂತೆ ಕಪ್ಪಾದ ಚೂಚುಕವುಳ್ಳಂಥಾ)। ಕಮಲವತ್=ತಾವರೇ ಹೂವಿನಹಾಗೆ, ಲಕ್ಷ್ಮೀನಿವಾಸಾಸ್ಪದಂ=ಲಕ್ಷ್ಮಿಗೆ ಮನೆಯಾದ ಥಾ, (ಹೃದಯವೇ ಸ್ಥಾನವಾಗಿ ವುಳ್ಳಂಥಾ)। ಕಾಕುತ್ಸ್ಥ ತ್=ಕಾಕುತ್ಸ್ಥನೆಂಬ ರಾಜನ ಕುಲದಲ್ಲಿ ಹುಟ್ಟಿದ ರಾಮಚಂ ದ್ರನಹಾಗೆ। ಕಾಕಾಲ್ಹಾದವಿಘಾತಕಂ=ಕಾಕಾಸುರನೆಂಬ ದೈ

ನನ್ನು ಕೊಂದಂಥಾ। (ಕೀಳವಾದ ಕಾಮೋದ್ರೇಕದ ಸಂತೋಷವನ್ನು ಶಾಂತಮಾಡುವಂಥಾ)। ಕಾಕವತ್=ಕಾಗೆಯ ಹಾಗೆ। ಪರಶಿಶು ತ್ರಾಣಪ್ರವೃತ್ತ್ಯಾತುರಂ=ಕೋಗಿಲೆಯ ಮರಿಗಳನ್ನು ಜೋಪಾನಮಾಡುವಂಥಾ (ಕೇವಲ ಸಣ್ಣ ಕೂಸುಗಳಿಗೆ ತ್ರಾಣವನ್ನುಂಟುಮಾಡುವಂಥಾ)। ತಾವಕಂ=ನಿಂನ ಸಂಬಂಧಿಯಾದ। ವಕ್ಷೋಜದ್ವಿತಯಂ=ಯೆರಡು ಮೊಲೆಗಳು। ವಿಭಾತಿ=ಚನ್ನಾಗಿ ಶೋಭಿಸುತ್ತವೆ।

ಭಾವಾರ್ಥ—ಯೆಲೇ ಕಮಲದಂತೆ ಕಣ್ಣುಳ್ಳ ಸ್ತ್ರೀಯೇ, ಚಲುವಿಕೆಯುಳ್ಳ ಸ್ತ್ರೀಯಳ ಹಾಗೆ ನರ್ತನ, ವೈಯ್ಯಾರ, ಇವೇ ಮುಂತಾದ ಆಟಗಳಿಗೆ ಸ್ವಂತ ಮನೆಯಂತೆ ತೋರುವಂಥಾ (ಸುರತ ಕ್ರೀಡೆಗೆ ಶಯ್ಯಾಗೃಹದಂತೆ ವೊಪ್ಪುವಂಥಾ)। ಆನೆ ಕೋರೆಗಳಹಾಗೆ, ಕರಗಸದಿಂದ ಕೊರಯಲ್ಪಟ್ಟಂಥಾ, ವಜ್ರದಂತೆ ಶುಭ್ರವಾದಂಥಾ (ಕೇಶರದಿಂದ ಲಿಪ್ತವಾದಂಥಾ ಕಸ್ತೂರಿಯಂತೆ ಕಪ್ಪಾದ *ಚೂಚುಕವುಳ್ಳಂಥಾ), ತಾವರೆಯ ಹೂವಿನ ಹಾಗೆ ಲಕ್ಷ್ಮಿಗೆ ಮನೆಯಾದಂಥಾ (ಹೃದಯವೇ ಸ್ಥಾನವಾಗಿ ವುಳ್ಳಂಥಾ) ಕಾಕುತ್ಸ್ಥನೆಂಬ ರಾಜನ ಕುಲದಲ್ಲಿ ಹುಟ್ಟಿದ ರಾಮಚಂದ್ರನಂತೆ, ಕಾಕಾಸುರನೆಂಬ ದೈತ್ಯನನ್ನು ಕೊಂದಂಥಾ (ಕೀಳವಾದ ಕಾಮೋದ್ರೇಕವನ್ನು ಶಾಂತಮಾಡುವಂಥಾ) ಕಾಗೆಯ ಹಾಗೆ, ಕೋಗಿಲೆಯ ಮರಿಗಳನ್ನು ಜೋಪಾನ ಮಾಡುವಂಥಾ (ಕೇವಲ ಸಣ್ಣ ಕೂಸುಗಳಿಗೆ ತ್ರಾಣವನ್ನುಂಟು ಮಾಡುವಂಥಾ), ಇವೇ ಮೊದಲಾದ ಲಕ್ಷಣಗಳುಳ್ಳ ನಿನ್ನ ಯೆರಡೂ ಮೊಲೆಗಳು ಈ ಪ್ರಕಾರ ಚನ್ನಾಗಿ ವೊಪ್ಪುತ್ತವೆ.॥೬॥

---

* ಮೊಲೆಯ ಮುಗು.

ತಾ॥ ೧ ಮಾಹೆ ಜಾನೇವಾರಿ ಸನ್ ೧೮೭೪ ನೇ ಇಸವಿ. } ನಾರಾಯಣಾಚಾರ್ಯ ಕೂರಪಾಲ.

ಮಾರ್ಕಾಂಡೇರಾಮಾಯಣದೊಳಗಣ
೫ ನೇ ಸಂಧಿಯಲ್ಲಿರುವ ೧೯ ನೇ ಶ್ಲೋಕವು.

ಸಸಿಯೆಂತೆ ನಿಸಿಯೆಂತೆ ಪಗಲಂತೆ ಮುಗಿಲಂತೆ।
ಋಷಿಯೆಂತೆ ಕುಸಿಯೆಂತೆ ಜಪದಂತೆ ದಪದಂತೆ।
ದೆಸೆಯೆಂತೆ ರಸದಂತೆ ಕೃತಿಯೆಂತೆ ಶ್ರುತಿಯೆಂತೆ ಶುಕದಂತೆ ಸೌಖ್ಯದಂತೆ॥
ಅಸಿಯೆಂತೆ ಲಸಿಯೆಂತೆ ಹರಿಯೆಂತೆ ಗಿರಿಯೆಂತೆ।
ಬೆಸಲಂತೆ ಬಿಸಿಲಂತೆ ಹಯದಂತೆ ವಯದಂತೆ।
ಪೊಸತೆನಿಸಿತ್ತೊಂದು ಸಮ್ಯಕ್ಕರಂ ಶ್ರೀಕರಂ ರಾಘವೇಶ್ವರ ನಿದಿರೊಳು॥೧೯॥

ಮೇಲೆ ಬರೆದ ಶ್ಲೋಕಕ್ಕೆ ಯೆರಡರ್ಥಗಳುಂಟು; ಆದರೆ ಯಾರಾದರೂ ಮಾಸ್ತರಜನರಾಗಲಿ, ಅವರುಗಳ ಮಿತ್ರರಾದ ವಿದ್ವಜ್ಜನರುಗಳಾಗಲಿ, ಯೆರಡು ಅರ್ಥಮಾಡಿ ಬರುವ ತಿಂಗಳ ಕನ್ನಡ ಮಾಸಪತ್ರಿಕೆಯಲ್ಲಿ ಬರೆದು ಕಳಸುವಿರೆಂದು ಕೋರುತ್ತೇನೆ.

ತಾ. ೧ನೇ ಜಾನೇವಾರಿ ಸನ್ ೧೮೭೩ ಇಸವಿ. } ನಾರಾಯಣ ವೇಣುಗೋಪಾಲಾಚಾರ್ಯ ಕೂರಪಾಲಿ.

ರಾವಸಾಹೇಬ ದಕ್ಷಣಭಾಗ ಶಾಲಾಪತ್ರಿಕೆ ಕರ್ತರವರ ಚರಣಕ್ಕೆ —

ಬಹಳ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದ

ರೆ ಈ ಕೆಳಗೆ ಬರೆದ ಶ್ಲೋಕವನ್ನು ತಮ್ಮ ಪತ್ರದಲ್ಲಿ ಪ್ರಕಟಿಸಿ ಇದಕ್ಕೆ ಯಾರಾದರೂ ಕೊಟ್ಟ ಉತ್ತರವನ್ನಾದರೂ ಇದೇ ಪತ್ರದ್ವಾರದಿಂದ ತಿಳಿಸುವಿರೆಂದು ಬೇಡಿಕೊಳ್ಳುತ್ತೇನೆ.

ಮುಕ್ತಾಭಿಗುಂಫಿತಾ ಮಾಲಾ ಕಂಠರಾಮಸ್ಯ ಸೀತಯಾ॥
ಅತ್ರ ಮುಹ್ಯಂತಿ ಕವಯಃ ಪ್ರತ್ಯಕ್ಷೇಪಿ ಕ್ರಿಯಾಪದೇ॥೧॥

ಈ ಶ್ಲೋಕದಲ್ಲಿ ಕ್ರಿಯಾಪದ ಯಾವದು ಇದನ್ನು ಬಲ್ಲವರು ತಿಳಿಸುವರೆಂದು ಕೋರುತ್ತೇನೆ. ತಾರೀಖು ೪ ನೇ ಡಿಸೆಂಬರ ಸನ್ ೧೮೭೫ ಇಸವಿ.

ಮು. ಧಾರವಾಡ—

ದಾದಾ ಗುಂಡಾಚಾರ್ಯ ಶಿರವಾಲಿ.

ಮ॥ ರಾ॥ ರಾಜಶ್ರೀ ಶಾಲಾಪತ್ರಿಕೆಯ ಎಡಿಟರ ಇವರಿಗೆ—

ತಮ್ಮ ಸ್ನೇಹಿತನಾದ ಮಂಜುಗುಣೀ ಗ್ರಾಮನಿವಾಸಿಕನು ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ— ತಮ್ಮ ಕರಕಮಲದಲ್ಲಿ ಹುಟ್ಟಲ್ಪಡುವ ಶಾಲಾಪತ್ರಿಕೆಯಲ್ಲಿ ಕೆಳಗೆ ಬರೆದ ವಿಚಾರಸಮವಾದ ನಿಬಂಧವನ್ನು ಛಾಪಿಸಿ ಪ್ರಸಿದ್ಧ ಮಾಡಿ ವಿದ್ವಾಂಸರಾದವರು ಯೋಗ್ಯವಾಗಿ ಉತ್ತರ ಕೊಟ್ಟದ್ದು ಪ್ರಸಿದ್ಧ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಸ್ತ್ರೀಯರಿಗೆ ಗರ್ಭಾಧಾನವಾಗಿ ನವಮಾಸದೂರ್ಧ್ವದಲ್ಲಿ ಜನನವಾಗತಕ್ಕಂಥಾದ್ದು ಶಾಸ್ತ್ರರೀತಿಯಿಂದ ಲೋಕರೂಢಿಯುಂಟು.

ಪ್ರಶ್ನ.— ಹೀಗೆ ಇರುವಾಗ್ಯೆ ಇದಕ್ಕೂ ಅತಿಕ್ರಮಿಸಿ

ಸ್ತ್ರೀಯು ರಜಸ್ವಲವಾಗದೆ ವರ್ಷೇವರ್ಷೇಸ್ತನಗಳಿಗೆ ಕ್ಷೀರ ಉತ್ಪನ್ನವಾಗಿ ಪುನಹಾ ಬತ್ತುತ್ತಾ ಉದರವು ಪೂರ್ಣ ನವಮಾಸ ತುಂಬಿತ್ತೋ ಎಂಬುವಹಾಗೆ ಗರ್ಭ ತೋರುತ್ತಾ ಇದೇ ಮೇರೆಗೆ ಪ್ರಾಪ್ತಿಯಲ್ಲಿ ಇಂಗಿ ಹೋಯಿತೋ ಎಂಬಂತೆ ಕಂಡು ಮೂರುವರ್ಷ ಆದನಂತರ ಗರ್ಭವಾಸದಿಂದ ಜನನವಾಗುತ್ತದೆ. ಈ ದೇಶದಲ್ಲಿ ಈ ಪ್ರಕಾರ ಮೂರು ವರ್ಷ ಪರಿಯಂತರ ಗರ್ಭವು ನಿಂತು ಜನಿಸುವದಕ್ಕೆ (ಮೂರುಮೂವು) ಹೇಳುವದುಂಟು.

ಪ್ರಶ್ನೆ. ಗರ್ಭ ಉತ್ಪತ್ತಿಯಾಗಿ ನವಮಾಸಾದೂರ್ಧ್ವ ಮೂರು ವರ್ಷಪರಿಯಂತರ ಗರ್ಭವು ನಿಂತು ಆ ಮೇಲೆ ಜನನವಾಗಲಿಕ್ಕೆ ಕಾರಣವೇನು? ಈ ಮೇರಿಗೆ ಗರ್ಭದಲ್ಲಿ ಶಿಶು ನಿಲ್ಲುವಂಥಾದ್ದೇ ನಿಶ್ಚಯವೋ ಇದಕ್ಕೆ ಯಾವಶಾಸ್ತ್ರದಿಂದ ಶಿದ್ಧಾಂತವಾಗುತ್ತದೆ.

ಇವಕ್ಕೆ ಶಾಸ್ತ್ರರೀತಿಯಿಂದ ಈ ಮೇರೆಗೆ ಆಗತಕ್ಕದ್ದೋ? ಇಲ್ಲವೇ ರೋಗಾದಿಗಳಿಂದ ಆಗತಕ್ಕಂಥಾದ್ದೋ? ಇದು ನಂಮ ಮನಸಿಗೆ ಬಹು ಸಂದೇಹವಾಗಿ ತೋರಿದರಿಂದ ಬರಕೊಂಡದ್ದಾಯಿತು. ವಿದ್ವಜ್ಜನರಾದವರು (ಸೂಜ್ಞ ಪುರುಷರು) ಇದ್ದರೆ ಈ ನಮ್ಮ ಸಂದೇಹವನ್ನು ಮುಂದಿನ ಕಾಲಾಪತ್ರಕದಲ್ಲಿ ಛಾಪಿಸಿ ತಂಮ ಕೈಲಾದಮಟ್ಟಿಗೆ ತ್ವರ್ಯದಿಂದ ನಿವೃತ್ತಿನೆ ಮಾಡ್ಯಾರೆಂದು ಇಚ್ಛಿಸುತ್ತೇನೆ. ಇಂತಿವಿಜ್ಞಾಪನ.

ತಾ. ೮ನೇ ನವಂಬರ. } ಪುಟ್ಟಭಟ್ಟ ಬಿನ್ನ ಅಣ್ಣಭಟ್ಟ ಮುಂ
ಸನ್ ೧೮೭೪ ಇಸವಿ. } ಜಗುಣೇ. ಕಾ. ಶಿರ್ಸಿ. ಜಿ. ಕಾನಡಾ.

ಮಹಾರಾಜರಾಜಪೂಜಿತ ರಾಜಮಾನ್ಯರಾಜಶ್ರೀ ಕನ್ನಡ ಮಿತ್ರಪತ್ರಿಕೆ ಕರ್ತರಾದ ಎಡಿಟರಾಯರ ಚರಣಕ್ಕೆ—

ಳಗೆ ಸಹಿಮಾಡುವ ಹುಕ್ಕೇರಿ ಸಾಲಿಯ ವಿದ್ಯಾರ್ಥಿಗಳು ನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ ಈ ಕೆಳಗೆ ಬರೆದಿರುವ ಲೆಕ್ಕದ ನಾಲ್ಕು ಪಂಕ್ತಿಗಳನ್ನು ತಮ್ಮ ಅಂಸವಾದ ಮಿತ್ರಪತ್ರಿಕೆಯಲ್ಲಿ ಛಾಪಿಸಿ ಪ್ರಸಿದ್ಧಪಡಿಸುವಿರೆಂದು ಪೂರ್ಣ ಆಶೆಯುಳ್ಳವರಾಗಿದ್ದೇವೆ.

ಲೆಕ್ಕವು.

ಒಬ್ಬ ಚ್ಯಾಕರನು ಒಬ್ಬ ಸಾವಕಾರನ ಕಡೆಯಿಂದ ವರ್ಷಕ್ಕೆ ೫೦ ರೂಪಾಯಿ ೮ ವರ್ಷಕ್ಕೆ ೪೦೦ ನೂರು ರೂಪಾಯಿಯಂತೆ ಕರಾರು ಮಾಡಿ ಚ್ಯಾಕರಿಗೆ ನಿಂತನು ಮುಂದೆ ಆ ಚ್ಯಾಕರನಿಗೆ ಈ ದಿವಸ ರೂಪಾಯಿಯು ಆಗತ್ಯಬಿದ್ದದರಿಂದ ಸಾವಕಾರನು ದರ ತಿಂಗಳಿಗೆ ದರ ನೂರು ರೂಪಾಯಿಗೆ ಕೆಲವು ವ್ಯಾಜದಂತೆ ಕಾಟಾಯಿಸಿಕೊಂಡು ಈ ದಿವಸ ಆ ಚ್ಯಾಕರನಿಗೆ ೨೦೦ ನೂರು ರೂಪಾಯಿಗಳನ್ನು ಕೊಟ್ಟನು ಆದರೆ ಬಡ್ಡಿಯು ದರ ಏನು.

ಈ ಲೆಕ್ಕವನ್ನು ನಮ್ಮ ಎಲ್ಲ ಸಾಲಿಯ ಮಾಸ್ತರರು ತ್ರೈರಾಶಿ ರೀತಿಯಿಂದ ಬಿಡಿಸಿ ವಿದ್ಯಾರ್ಥಿಗಳಿಗೆ ತಿಳಿಯುವಹಾಗೆ ಮಾಡುವರೆಂದು ಪೂರ್ಣ ಆಶೆಯುಳ್ಳವರಾಗಿದ್ದೇವೆ.

ತಾರೀಖು ೭೬ ನೇ	ಶ್ರೀನಿವಾಸ ಲಕ್ಷ್ಮಣ ಕೋಪ್ಪರ
ನವಂಬರ ೧೮೭೩	ಅಪ್ಪಯ್ಯಾ ಚೂಡಪ್ಪ ನಾಯಿಕ
ಮುಕ್ಕಾಂ ಹುಕ್ಕೇರಿ.	ವಿ. ಶಾಳಾ ಹುಕ್ಕೇರಿ.

ಮಹಾರಾಜ ರಾಜಶ್ರೀ ಕನ್ನಡ ಶಾಲಾಪತ್ರಕದ ಎಡಿಟರ ಸಾಹೇಬರವರಿಗೆ-

ವಿಜ್ಞಾಪನಾ ಮಾಡಿ ಬೇಡಿಕೊಳ್ಳುವದೇನಂದರೆ ತಮ್ಮ ಕಡಿಗೆ ಬಂದರೆ ನಂನಸಂಶಯವು ಪರಿಹಾರವಾಗುವದೆಂದು ನಿಶ್ಚಯವಾಗಿ ತಿಳಿದು ಈ ಕೆಳಗಿನ ಶ್ಲೋಕವನ್ನು ಬರೆದು ಕಳುಹಿಸಿದ್ದೇನೆ ದಯಮಾಡಿ ಶಾಲಾಪತ್ರಕದಲ್ಲಿ ಛಾಪಿಸಿ ಪ್ರಸಿದ್ಧ ಮಾಡುವಿರೆಂದು ನಂಬುತ್ತೇನೆ ಮತ್ತು ಯಾರಾದರೂ ಸುಜ್ಞರು ಅದರ ಶಬ್ದಾರ್ಥ ಭಾವಾರ್ಥಗಳನ್ನು ಚನ್ನಾಗಿ ಬರೆದು ತಮ್ಮ ಪತ್ರ ಮುಖದಿಂದ ತಿಳಿಸಿದರೆ ಅವರ ಆಭಾರಿಯಾಗುತ್ತೇನೆ ಯಿಂತಿವಿಜ್ಞಾಪನಾ—

॥ಕಂದ॥ ಕರೆದಳೆಯದಿಂದುಕಳೆಕಳೆ।
ದೊರಿಯದಚಂದ್ರಿಕೆಪಗಲ್ಪಗಲ್ಮುಗಿದುಮುದಂ।
ಮುರಿಯದಕೋಮಳೆಕೋಮಳೆ।
ಬರಿಯವಶಿಂಗರದ ಪೊಳೆಪೊಳೆವುತೆಸೆದಿದ್ದರ್ಳ್॥೧॥

ಮುಕ್ಕಾಮು ನವಲಗುಂದ
ತಾರೀಖು ೧೦।೧೦।೭೩.

ಕೃಷ್ಣಾಜಿ ಹಣಮಂತ ದೇ॰
ಪಾಂಡೆ ವಿದ್ಯಾರ್ಥಿ ನವಲಗುಂದ

ಶಾಲಾಪತ್ರಕವು.

ಪುಸ್ತಕ ೯] [ಸಂಚಿಕೆ ೧೧.

ಬೆಳಗಾವಿ, ಮಾಹೆ ಫೇಬ್ರುವಾರಿ ೧೮೭೪.

SELF HELF

ತನಗೆ ತಾನೇ ನೆರವಾಗುವದು.

ಹೀಥಕೋಟನಲ್ಲಿ ಯೆಷ್ಟೋ ವರ್ಣಿಸತಕ್ಕಂಥ ಗುಣಗ
ದ್ದವು. ಅವನು ಬಳ್ಳೇ ತಿಳುವಳಕೆಯುಳ್ಳವನೂ, ಚು
ಕ್ಕಾದ ಧೂರ್ತತ್ವವುಳ್ಳವನೂ, ಮೇಲಾದ ವ್ಯವಹಾರಚಾ
ಯರ್ಯವುಳ್ಳವನೂ ಇದ್ದನು. ಇವಲ್ಲದೆ ಅವನಲ್ಲಿ ಸರ
ತ್ವವೂ, ಪ್ರಮಾಣಿಕತನವೂ, ನಿಷ್ಕಾಪಟ್ಯವೂ ತುಂಬಾ ವಾ
ನಾಗಿರುತ್ತಿದ್ದವು. ಇವೇ ಗುಣಗಳಿಂದ ಮನುಷ್ಯನ
ಶತ್ರಿಗೆ ನಿಜವಾದ ಭೂಷಣವುಂಟು. ಅವನು ಸ್ವತಃ ಮ
ನುಟ್ಟಿ ವಿದ್ಯಾಭ್ಯಾಸ ಮಾಡುವವನಾದದರಿಂದ, ಅವನು
ಷ್ಟಲ್ಲಿ ಕೆಲಸಕ್ಕೆ ಬರುವ ಚಿಕ್ಕ ಪ್ರಾಯದ ಜನರಲ್ಲಿ
ಾರನ್ನಾದರೂ ವಿದ್ಯಾಭ್ಯಾಸಕ್ಕೆ ಯೋಗ್ಯರಾದವರನ್ನು
ಂಡರೆ, ಅವರಿಗೆ ತತ್ಕಾಲವೇ ಆಶ್ರಯ ಕೊಟ್ಟು ಅವರ
ದ್ಧಿಯು ದೃಢವಾಗಿ ಉತ್ತೇಜನ ಪಡುವಂತೆ ಮಾಡುವ
. ತಾನು ಪೂರಾಕೆಲಸದಲ್ಲಿ ತೊಡಗಿರುವ ಕಾಲದಲ್ಲಿ ಸಹ
ವನು ಅದರೊಳಗೇ ಸ್ವಲ್ಪ ವೇಳೆಯನ್ನು ಉಳಿಸಿಕೊಂ
ಫ್ರೆಂಚ, ಇತಾಲಿಯನ್ ಭಾಷೆಯುಗಳನ್ನು ಶುದ್ಧವಾ

ಗಿಯೂ, ವ್ಯಾಕರಣ ಸಹಿತವಾಗಿಯೂ, ಕಲಿತುಕೊಂಡನು.
ಅವನು ಹಲವು ಉತ್ತಮ ಗ್ರಂಥಗಳನ್ನು ಓದಿ ಒಳ್ಳೇ ಜ್ಞಾ
ನ ಸಂಪಾದನೆಯು ಮಾಡಿಕೊಂಡಿದ್ದನು. ಬಹುಶಃ ಇಂ
ಥಾದೊಂದು ವಿಷಯದಲ್ಲಿ ಅವನು ತನ್ನ ಕಲ್ಪನೆಯನ್ನು
ನಡಿಸಲಿಲ್ಲೆಂಬ ಹಾಗಿದ್ದಿಲ್ಲ. ಅವನ ಕೈಕೆಳಗಿದ್ದ ೭೦೦೦
ಜನ ಆಳುಗಳು ಅವನನ್ನು ತಮ್ಮ ತಂದೆಯಂತೆ ಯೆಣಿಸು
ತ್ತಿದ್ದರು; ಅದರಂತೆ ಅವನಾದರೂ ಆ ಜನರು ಸುಧಾರಣೆ
ಯುಳ್ಳವರಾಗಿ ಸುಖಪಡುವಂತೆ ಯತ್ನಿಸುತ್ತಿದ್ದನು. ಸಂ
ಪತ್ತಿಯಿಂದ ಬೇರೆ ಜನರು ಕೆಡುವಂತೆ ಅವನು ಕೆಡಲಿಲ್ಲ.
ಬಡವರನ್ನು ಕಂಡು ಅವನ ಅಂತಃಕರಣವು ಕರಗದೆ ಯೆಂ
ದು ನಿಲ್ಲಲಿಲ್ಲ; ಅವರಲ್ಲಿ ಕನಿಕರ ಪಟ್ಟು ಯಾವಾಗಲೂ,
ಸಹಾಯ ಮಾಡುತ್ತಿದ್ದನು. ತನ್ನ ಚಾಕರಿಯವರ ಮ
ಕ್ಕಳ ವಿದ್ಯಾಭ್ಯಾಸಕ್ಕೋಸ್ಕರವಾಗಿ ಅವನು ಸುಮಾರು
೬೦೦೦ ಪೌಂಡುಗಳನ್ನು ವೆಚ್ಚಮಾಡಿ ಶಾಲೆಗಳನ್ನು ಕಟ್ಟಿ
ಸಿದನು. ಅವನು ವಿಲಕ್ಷಣವಾಗಿ ಸಂತೋಷವೃತ್ತಿಯು
ಳ್ಳವನಾಗಿ ಯೆಲ್ಲ ಜಾತಿಯ ಜನರಿಂದಲೂ ಪ್ರೀತಿಸಲ್ಪಡು
ತ್ತಿದ್ದನು.

ಸನ್ನ ೧೮೩೧ನೇ ವರ್ಷದಲ್ಲಿ ಟಿವರ್ಟನ್ ಗ್ರಾಮ
ನಿವಾಸಿಗಳು ಹೀಥಕೋಟನನ್ನು ಪಾರ್ಲಿಮೆಂಟಿನಲ್ಲಿ ತ
ಮ್ಮ ಊರಿನ ಪ್ರತಿನಿಧಿಯ ಕೆಲಸಕ್ಕೆ ನೇಮಿಸಿದರು. ಈ
ಕೆಲಸವನ್ನು ಅವನು ಸುಮಾರು ೨೦ ವರ್ಷಗಳವರೆಗೆ ನಡೆ
ಸಿದನು, ಈ ಕೆಲಸ ನಡಿಸುತ್ತಿರಲಾಗಿ ಲಾರ್ಡ್‌ಪಾಲ್ಮರಸ್ತನ
ನೆಂಬ ದೊಡ್ಡ ಮನುಷ್ಯನು ಅವನ ಸಂಗಡಿಗನಾಗಿದ್ದನು
ಆ ಗೃಹಸ್ಥನು ತನ್ನ ಸ್ನೇಹಿತನಾದ ಹೀಥಕೋಟನಿಗೆ ತ

ನು ಕೊಡುವ ಬಹು ಮಾನವನ್ನು ಕುರಿತು ಯೊಷ್ಟೋ ಸಾ
ರಿ ಸಭೆಯಲ್ಲಿ ಮಾತಾಡಿದನು. ಅವನು ಸನ್ನ೧೮೫೭
ನೇ ವರ್ಷ ವಾರ್ಧಕ್ಯದಿಂದ ಉಂಟಾದ ಅಶಕ್ತತೆಯ ಮೂಲ
ಕವಾಗಿ ಆ ಕೆಲಸವನ್ನು ಬಿಟ್ಟು ಕೊಡಬಾಗಿ, ಚಾಕರಿಯ
ವರಲ್ಲಿ ೧೨೦೦ ಮಂದಿ ಕೂಡಿ ಅವನಿಗೆ ಒಂದು ಬೆಳ್ಳಿಯ
ಪಾತ್ರೆಯನ್ನು, ಒಂದು ಚಿನ್ನದ ಲೇಖನಿಯನ್ನು ತಮ್ಮ
ಪ್ರೀತಿಯ ಗುರುತೆಂದು ಕಾಣಿಕೆಯಾಗಿ ಕೊಟ್ಟರು. ಆ
ನಂತರ ಅವನು ಯೆರಡು ವರ್ಷ ಮಾತ್ರ ಬದುಕಿದನು. ಅ
ವನು ಸನ್ನ೧೮೬೦ನೇ ವರ್ಷ ಜನೇವರಿ ತಿಂಗಳಿನಲ್ಲಿ ಎ
ಪ್ಪತ್ತೇಳು ವರ್ಷದ ವಯಸ್ಸಿನಲ್ಲಿ ಮರಣ ಹೊಂದಿದನು.
ಇವನು ತನ್ನ ಹಿಂದಿಟ್ಟ ನಿಜಸ್ತಿಕೆ, ಸದ್ಗುಣ, ಧೈರ್ಯ,
ಯಂತ್ರ ಕೌಶಲ್ಯಗಳ ಉದಾಹರಣೆಗಳಿಗಾಗಿ ಅವನ ವಂಶ
ಸ್ಥರು ಒಳ್ಳೇ ಅಭಿಮಾನ ಪಡುವದು ತಕ್ಕದ್ದಾಗಿರುತ್ತದೆ.

ಇನ್ನು ಇದಕ್ಕಿಂತ ತೀರ ಭಿನ್ನವಿಧವಾದ ವೃತ್ತಾಂತವ
ನ್ನು ವರ್ಣಿಸುವಾ. ಆ ವೃತ್ತಾಂತವು ಕೀರ್ತಿವಂತನಾ
ದಾಗ್ಯೂ ದುರ್ದೈವಿಯಾದ ಜಾಕಾರ್ಡನೆಂಬವನದು. ಇವನ
ವೃತ್ತಾಂತದಿಂದಾದರೂ ತೀರ ಕಡಿಮೆ ತರದ ಮನುಷ್ಯರ
ಬುದ್ಧಿಯಿಂದ ಸಹ ಕೆಲವೊಂದು ದೇಶದ ವ್ಯಾಪಾರ ಉ
ದ್ಯೋಗಗಳಲ್ಲಿ ಹೆಚ್ಚು ಕಡಿಮೆಯು ಹ್ಯಾಗಾಗುತ್ತದೆಂಬದು
ಸ್ಪಷ್ಟವಾಗಿ ತಿಳಿಯುತ್ತದೆ. ಜಾಕರ್ಡನ ತಾಯಿ ತಂದೆಗ
ಳು ಲಾಯನ್ಸ ಪಟ್ಟಣದಲ್ಲಿ ಬಹು ಕ್ರಮದಿಂದ ಕಾಲಕ್ಷೇ
ಪ ಮಾಡುತ್ತಿದ್ದರು. ಇವನ ತಂದೆಯು ನೇಯುವ ಕೆಲ
ಸ ಮಾಡುತ್ತಿದ್ದನು; ತಾಯಿಯು ನೇಯುವವರ ಹತ್ತರ
ಕುಳಿತು ಯಾವಾಗ ಯಾವ ಯಾವ ಯೆಳೆಗಳನ್ನು ಯೆತ್ತು

ತಕ್ಕಷ್ಟೆಂದು ಹೇಳುವ ಕೆಲಸ ಮಾಡುತ್ತಿದ್ದಳು. ಅವರು ತೀರ ಬಡವರಾದುದರಿಂದ ಜಾಕಾರ್ಡನಿಂದ ಚನ್ನಾಗಿ ವಿದ್ಯಾಭ್ಯಾಸ ಮಾಡಿಸಗೊಡುವು ಅವರಿಂದಾಗಲಿಲ್ಲ. ಅವನು ಹೊಟ್ಟೆಯ ಉದ್ಯೋಗ ಕಲಿಯುವದಕ್ಕೆ ತಕ್ಕ ವಯಸ್ಸಿನವನಾದಾಗ ಅವನ ತಂದೆಯು ಒಬ್ಬ ಪುಸ್ತಕಗಳನ್ನು ಕಟ್ಟುವವನ ಕೈಕೆಳಗೆ ಅವನನ್ನು ಇಟ್ಟನು. ಲೆಕ್ಕಬರೆಯುವನಾದ ಒಬ್ಬ ಮುದಿ ಕಾರಕೂನನು ಜಾಕಾರ್ಡನಿಗೆ ಸ್ವಲ್ಪ ಲೆಕ್ಕಗಳನ್ನು ಕಲಿಸಿದ್ದನು. ಆದರೆ ಸ್ವಲ್ಪ ಕಾಲದೊಳಗೇ ಅವನು ಯಂತ್ರ ರಚನೆಯಲ್ಲಿ ತನ್ನ ಬುದ್ಧಿ ಕೌಶಲ್ಯವನ್ನು ಪ್ರಕಟಿಸ ಹತ್ತಿದ್ದನು. ಅವನು ಮಾಡಿದ ಕೆಲವು ಕಲ್ಪನೆಯ ಕೃತ್ಯಗಳನ್ನು ನೋಡಿ ಆ ಕಾರಕೂನನು ಆಶ್ಚರ್ಯಪಟ್ಟು, ಪುಸ್ತಕಗಳನ್ನು ಕಟ್ಟುವದಕ್ಕಿಂತ ಜಾಕಾರ್ಡನು ತನ್ನ ಕಲ್ಪನೆಯನ್ನು ನಡಿಸುವದಕ್ಕೆ ಹೆಚ್ಚು ಅನುಕೂಲವಾದ ಕೆಲಸದಲ್ಲಿ ಅವನನ್ನು ಇಡುವದಕ್ಕೋಸ್ಕರ ಅವನ ತಂದೆಗೆ ಹೇಳಿದನು. ಆದದರಿಂದ ಅವನ ತಂದೆಯು ಅವನನ್ನು ಒಬ್ಬ ಛೂರಿ, ಕತ್ತರಿ ಮುಂತಾದ ಶಸ್ತ್ರಗಳ ವ್ಯಾಪಾರ ಮಾಡುವವನ ಕೈಕೆಳಗೆ ಇಟ್ಟನು. ಆದರೆ ಅಲ್ಲಿ ಅವನ ಒಡೆಯನು ಅವನನ್ನು ಚನ್ನಾಗಿ ನಡಿಸಿಕೊಳ್ಳದೆ ಇದ್ದ ಕಾರಣ ಅವನು ಬೇಗ ಆ ಕೆಲಸ ಬಿಟ್ಟು ಒಬ್ಬ ಅಚ್ಚಿನ ಮೊಳೆಗಳನ್ನು ಮಾಡುವವನ ಕೈಕೆಳಗೆ ಹೋಗಿ ನಿಂತನು.

ಜಾಕಾರ್ಡನ ತಂದೆ ತಾಯಿಗಳು ತೀರಿದನಂತರ ಅವನು ತನ್ನ ತಂದೆಯಿಂದ ನಡಿಸಲ್ಪಟ್ಟ ಎರಡು ಮಗ್ಗಗಳನ್ನೇ ನಡಿಸುವದು ಅವಶ್ಯಕವಾಯಿತು. ಆದರೆ ಆ ಧಂಧದಲ್ಲಿ ಯೋ

ಅವನು ಆ ಮಗ್ಗಗಳನ್ನು ತಿದ್ದುವ ಕೆಲಸಕ್ಕೆ ಹತ್ತಿ, ಅದರ ಆಲೋಚನೆಯಲ್ಲಿ ತಾನು ಮಾಡತಕ್ಕ ನೇಯುವ ಕೆಲಸವನ್ನು ಮರತು ಬಿಟ್ಟನು. ಆದದರಿಂದ ಸ್ವಲ್ಪ ದಿವಸದೊಳಗೇ ಅವನ ಕೈಯಲ್ಲಿ ಹಣವಿಲ್ಲದ ಹಾಗಾಯಿತು. ಆ ಸ್ಪೂರ್ವದಲ್ಲಿ ತಾನು ಮಾಡಿದ ಸಾಲವನ್ನು ತೀರಿಸುವದಕ್ಕೋಸ್ಕರ ಅವನು ಮಗ್ಗಗಳನ್ನು ಮಾರಿಕೊಂಡನು. ಆದರೆ ಅಷ್ಟರೊಳಗೆ ಲಗ್ನಮಾಡಿಕೊಂಡು ಕುಟುಂಬದ ತೊಡಕನ್ನು ಕೊರಳಿಗೆ ಹಾಕಿಕೊಂಡನು. ಆಗ ಅವನ ಬಡತನವು ಮೊದಲಿಗಿಂತ ಹೆಚ್ಚಾಯಿತು; ಅವನಿರುವ ಮನೆ ಸಹಾ ಸಾಲದವರಿಗೆ ಹೋಯಿತು. ಅವನು ಯೆಲ್ಲಾದರು ಒಂದು ಕೆಲಸವನ್ನು ಸಂಪಾದಿಸಬೇಕೆಂದು ಯತ್ನ ಮಾಡಿದಾಗ್ಯೂ, ಅವನು ಕೇವಲ ಅಲಕ್ಷ್ಯಗಾರನಾಗಿ ಹೊಸ ಶೋಧವೆಂಬ ಸ್ವಪ್ನದ ಆಲೋಚನೆಯಲ್ಲಿಯೇ ಹೊತ್ತುಗಳಿಯುವವನೆಂದು ಜನರ ಗ್ರಹಿಕೆಯಾಗಿದ್ದ ಕಾರಣ ಅವನಿಗೆ ಮೊದಲು ಯೆಲ್ಲಿಯೂ ಕೆಲಸ ಸಿಕ್ಕಲಿಲ್ಲ. ಆದರೆ ಕಡೆಯಲ್ಲಿ ಬ್ರಿಶ್ ಯೆಂಬ ಗ್ರಾಮದಲ್ಲಿ ಒಬ್ಬ ಮಾರ್ಗಕಟ್ಟುವವನ ಕೈಕೆಳಗೆ ಅವನಿಗೆ ಕೆಲಸ ಸಿಕ್ಕಿತು. ಆಗಲವನು ತನ್ನ ಹೆಂಡತಿಯನ್ನು ಲಾಯನ್ಸದಲ್ಲಿಯೇ ಇಟ್ಟು ಅಲ್ಲಿಗೆ ಹೋದನು. ಅವಳು ಹುಲ್ಲಿನ ಟೊಪ್ಪಿಗೆಗಳನ್ನು ಮಾಡಿ ಮಾರಿ ಹೊಟ್ಟೆ ತುಂಬಿಕೊಳ್ಳುತ್ತಿದ್ದಳು.

Champu Ramayen and Champu Bharata with Commentaries in Canarese by M. Shantaviraya.

ಚಂಪೂರಾಮಾಯಣೇಸವ್ಯಾಖ್ಯಾನೇಬಾಲಕಾಂಡಃ

॥ವಸಂತತಿಲಕಾವೃತ್ತಂ॥

ತಾಮಾವಸದ್ದಶರಥಸ್ಸುರವಂದಿತೇನ।
ಸಂಕ್ರಂದನೇನವಿಹಿತಾಸನಸಂವಿಭಾಗಃ।
ಬೃಂದಾರಕಾರಿವಿಜಯೀಸುರಲೋಕಲಬ್ಧ।
ಮಂದಾರಮಾಲ್ಯಮಧುವಾಸಿತವಾಸಭೂಮಿಃ॥೧೮॥

ಅನ್ವಯಃ

ಸುರವಂದಿತೇನ=ಸುರರಿಂದ ಸೇವ್ಯನಾದಂಥ। ಸಂಕ್ರಂದನೇನ=ಇಂದ್ರನಿಂದ। ವಿಹಿತಾಸನಸಂವಿಭಾಗಃ, ವಿಹಿತ=ಪಡೆಯಲ್ಪಟ್ಟ, ಆಸನ=ಸಿಂಹಾಸನದ, ಸಂವಿಭಾಗಃ=ಅರ್ಧವುಳ್ಳಂಥ। ಬೃಂದಾರಕಾರಿವಿಜಯೀ, ವೃಂದಾರಕ=ದೇವತೆಗಳ್ಗೆ, ಅರಿ=ವೈರಿಯಾದ ರಾಕ್ಷಸರನ್ನು, ವಿಜಯೀ=ಜಯಿಸುವಿಕೆಯುಳ್ಳ। ಸುರಲೋಕಲಬ್ಧಮಂದಾರಮಾಲ್ಯಮಧುವಾಸಿತವಾಸಭೂಮಿಃ, ಸುರಲೋಕಲಬ್ಧ=ಸುರಲೋಕದಿಂದ ಪಡೆಯಲ್ಪಟ್ಟ, ಮಂದಾರಮಾಲ್ಯ=ಪಾರಿಜಾತಪುಷ್ಪಮಾಲೆಗಳ, ಮಧು=ಮಕರಂದ ರಸದಿಂದ, ವಾಸಿತ=ಪರಿಮಳಿಸಿದ, ವಾಸಭೂಮಿಃ=ವಾಸಸ್ಥಾನವುಳ್ಳಂಥ, ಸಃ=ಆ ದಶರಥನು। ತಾಂ=ಆ ಅಯೋಧ್ಯಾಪುರವನ್ನು। ಅವಸತ್=ನಿವಾಸ ಮಾಡಿದನು.

ಶಾಸ್ತ್ರವಿಷಯಃ

ದಶರಥಃ, ಕರ್ತಾ; ತಾಂ, ಕರ್ಮ; ಅವಸತ್, ಕ್ರಿಯ

ಪದಂ; ಸ, ಕ, ಪ್ರ. ಅನುಪ್ರಾಸಾಲಂಕಾರ—ವೀರಸ—ಅವಸ
ತ್=(ಅ+ವಸ್+ಅ+ತ್)ಅ ಎಂಬುದು ಧಾತುವಿನ ಹಿಂದೆ
ಲಙವಿದ್ದರೆ ಬರುವ ಸೇವಾವ್ಯಂತು, ವಸ್ ಎಂಬುದು ಧಾ
ತು, ಅ ಎಂಬದು ವಿಕರಣ, ತ್ ಎಂಬುದು ಲಙ್ ಲಕಾರ
ಭೂತಕಾಲ, ಪರಸ್ಮೈಪದ, ಪ್ರಥಮ ಪುರುಷ, ಏಕವಚನ.

ಕರ್ನಾಟಕ ಭಾವಾರ್ಥ

ಸುರ ಸೇವ್ಯನಾದ ದೇವೇಂದ್ರನಿಂದ ತದರ್ಧಾಸನವನ್ನು ಪಡೆದವನಾಗಿಯೂ ರಾಕ್ಷಸ ವಿಜಯದಲ್ಲಿ ಸುರಲೋಕದಿಂದ ಪಡೆದ ಪಾರಿಜಾತ ಪುಷ್ಪಮಾಲೆಗಳ ಮಕರಂದ ರಸದಿಂದ ಪರಿಮಳಿಸುವ ರಾಜಸ್ಥಾನವುಳ್ಳವನಾಗಿಯೂ ಸಂಭ್ರಮದಿಂದ ಆ ಅಯೋಧ್ಯಾ ಪಟ್ಟಣದಲ್ಲಿ ದಶರಥಮಹಾರಾಜನು ಇದ್ದನು.

संस्कृत भावार्थ.

सुर सेवित देवेंद्रेण तदर्धासनं उपार्जितःसन् — राक्षस विजये सुरलोकात् उपार्जित पारिजात पुष्प माल्यानां मकरंदरसान् परिमालितवासभूमिःसन् — वैभवेन दशरथः अयोध्यां अवसत्.

ಇಂಗ್ಲಿಷುಭಾವಾರ್ಥ.

Dasharatha, whose court was perfomed with the nectar of wreaths of párijata flowrs, which were obtained in Amaravati, at the time of his conquest of the evil spirits, lived in ayòdhya. a-nd obtained half the throne of. Dávéndra, who is adored by all the gods.

ಶಾಂತವೀರ ರಾಜದೇವ ಕಿತ್ತೂರ ಟ್ರೇನಿಂಗಕಾಲೇಜ.

ಟ್ರೇನಿಂಗಕಾಲೇಜದ ಸರಟೀಫಿಕೀಟದ ಪರೀಕ್ಷೆ.

ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಿ ಆದ ಸರಟೀಫಿಕೀಟದ ಪರೀಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳಪಟ್ಟಿ—

ಪಾಸಾದ ಕ್ರಮದ ನಂಬರು.	ಹೆಸರುಗಳು.	೫೦೦ರಲ್ಲಿ ಪಡೆದ ಗುಣಗಳು.	೧೦೦ಕ್ಕೆ ಪಡೆದ ಗುಣಗಳು.	ರು. ಆ. ಸ. ದೊರೆಯುವದು.
	ಎರಡನೇ ವರುಷದ ಅಭ್ಯಾಸದವರು. ಫಸ್ಟ ಕ್ಲಾಸ ಸರಟೀಫಿಕೀಟನ್ನು ಪಡಕೊಂಡವರು.			
೧	ರಾಮಚಂದ್ರ ದಾದಾಚಾರ್ಯ ಜೋಶಿ ಅಥಣಿ.	೬೦೭ ೧/೮	೮೦ ೧/೨ ೯/೦	೨೫
೨	ಬಾಪು ಪರಶುರಾಮ ವ್ಯಾಸಕರ.	೫೩೨	೭೦ ೨/೧ ೪/೫	,,
೩	ವಿಠಲ ರಂಗೋ ಕವಲಗುಡ್ಡ.	೫೨೭ ೧/೩	೭೦ ೧/೩	,,
೪	ದಿವಾಕರ ಸದಾಶಿವ ಜೋಶಿ ಐನಾಪುರ.	೫೨೫	೭೦	,,

ಸೇಕಂಡ ಕ್ಲಾಸ.

೧	ಅಂಣಾಜಿ ಆನಂದರಾವ ಬಾಗೇವಾಡಿ.	೫೦೪ ೧/೪	೬೭ ೭/೩೦	೭೦
೨	ಶ್ರೀನಿವಾಸ ಗಣೇಶ ಕವಲಗುಡ್ಡ.	೫೦೩ ೩/೪	೬೭ ೧/೬	,,
೩	ವಿಷ್ಣು ಲಕ್ಷ್ಮಣ ಕೇಳಕರ.	೪೭೭ ೧/೨	೬೩ ೧/೩	,,
೪	ವೇಣು ವಾಸುದೇವ ತಡಕೋಡ.	೪೭೧ ೧/೪	೬೨ ೫/೭	,,
೫	ರಾಮಚಂದ್ರ ಗಣಪ್ಪಯ್ಯಾ ಶಿಶಿಹಿತ್ತಲ.	೪೬೪	೬೧ ೮/೧೭	,,
೬	ನಾರಾಯಣ ಶಂಕರ ಪುರಂದರೆ.	೪೬೧ ೩/೪	೬೧ ೫/೧೭	,,
೭	ಕಲೋ ನಾರಾಯಣ ಕಹಲಿಗಿ.	೪೫೮	೬೧ ೭/೧೬	,,
೮	ಬಾಳಕೃಷ್ಣ ಜನಾರ್ಧನ ಛೀಡ.	೩೮೧ ೧/೩	೫೦ ೧೫/೧೭	,,

ಮೊದಲನೇ ವರುಷದ ಅಭ್ಯಾಸದವರು.

ಫಸ್ಟ ಕ್ಲಾಸ ಸರಟೀಫಿಕೀಟನ್ನು ಪಡಕೊಂಡವರು.

೧	ಜೀವಾಜಿ ಶ್ರೀನಿವಾಸ ಕುಲಕರ್ಣಿ.	೬೪೦	೮೫	೧೫
೨	ಶಿಖರೆ ಪರ್ವತಪ್ಪ.	೬೨೦	೮೨	,,
೩	ಹಣಮಂತ ಭೀಮಾಜಿ ಹುನಗುಂದ.	೬೦೩	೮೦	,,
೪	ಪರಮೇಶ್ವರ ಪುಟ್ಟಯ್ಯಾ ಹೇಗಡೆ.	೫೯೪	೭೯	,,
೫	ತಿಂಮಾಜಿ ಸುಬ್ಬರಾವ ಮಿಶ್ರಿಕೋಟಿ.	೫೯೩	೭೯	,,
೬	ಸುಬ್ಬಾಜಿ ಶಿವರಾಮ ದೇಶಪಾಂಡೆ.	೫೯೦	೭೮	,,
೭	ಅಡವಯ್ಯಾ ರುದ್ರಯ್ಯಾ ಚಿಕ್ಕಮಠ.	೫೭೨	೭೬	,
೮	ನರ್ಸಿಂಹಾಚಾರ್ಯ ಸುಬ್ಬಣಾಚಾರ್ಯ ಮೇಲಿಕಟ್ಟಿ.	೫೬೭	೭೫	,,
೯	ಕೇಶವ ಆತ್ಮಾರಾಮ ಘಸಾಸ.	೫೫೯	೭೪	,,
೧೦	ಅಡವಪ್ಪಾ ಮಲ್ಲಪ್ಪಾ ನಿರಡಿ.	೫೫೯	೭೪	,,
೧೧	ಧೋಂಡೋ ಶ್ರೀಧರ ಗೋಖಲೇ.	೫೫೨	೭೩	,,
೧೨	ವೀರಪ್ಪಾ ಶಿವಲಿಂಗಪ್ಪಾ ಪುರಗೋಡ.	೫೫೨	೭೩	,,
೧೩	ಅಮಿನ ಸಾಬ ಮಲ್ಲ ಇಮಾಮಸಾಬ.	೫೩೧	೭೦	,,

ಶೇಕಂಡಕ್ಲಾಸ.

೧	ಧರ್ಮಾ ತವನಪ್ಪಾ ಗುಲಾಲಗಾರ.	೫೩೧	೬೯	೧೨
೨	ಕಾಳಪ್ಪಾ ಸ್ವಾರೋಬ ಕೊಪ್ಪ.	೫೧೧	೬೮	,,
೩	ಲಕ್ಷ್ಮಣ ಧೋಂಡದೇವ ದ್ರಾತೆ.	೫೦೯	೬೭	,,
೪	ನಾಗಯ್ಯಾ ಶಿದ್ಧಯ್ಯಾ ಸಾತದ.	೫೦೫	೬೭	,,
೫	ಅಬ್ದುಲ್ ಸಾಬ ಮಲ್ಲದ ಇಮಾಮಸಾಬ.	೫೦೩	೬೭	,,
೬	ಸಂಗೇಶ ನಾಗಪ್ಪಾ ಗೋಕರ್ಣ.	೫೦೨	೬೬	,,
೭	ಸುಬ್ಬಾಜಿ ಕೃಷ್ಣ ಪತ್ರಿ.	೫೦೧	೬೬	,,
೮	ಗೋವಿಂದಭಾವು ನಾಯಿಕ ಬಿವಪೂಗ್ಗಿ.	೪೯೮	೬೬	,,
೯	ಮಲ್ಲಯ್ಯಾ ಬೆದ್ದಯ್ಯಾ ಹಗಾಪುರ.	೪೯೪	೬೫	,,
೧೦	ವೆಂಕಟೇಶ ಗೋಪಾಳ ಕಣಬರಗಿ.	೪೮೭	೬೫	,,
೧೧	ಕೇಶೋ ರಾಮಚಂದ್ರ ಬಾಗೇವಾಡಿ.	೪೮೪	೬೪	,,
೧೨	ಚಿತಂಬರ ಶಿವಾಜಿ ಗುಡಿಶಾಸ್ತ್ರಿ ದೇಶಾಯಿ.	೪೮೪	೬೪	,,
೧೩	ಗುರುರಾವ ಸ್ವಾಮಿರಾವ ತಾವರಗೇರಿ.	೪೮೧	೬೪	,,
೧೪	ಮಹಾಲಿಂಗ ನಿರಂಜನಯ್ಯಾ ಬೈಲಹೊಂಗಲ.	೪೭೦	೬೪	,,
೧೫	ಬಾಳಾಜಿ ಲಕ್ಷ್ಮಣ ಪಟವರ್ಧನ.	೪೬೯	೬೩	,,
೧೬	ನೂರಂದಪ್ಪಾ ಶಿವಲಿಂಗಪ್ಪಾ ಮೆಳ್ಳಿಕಟ್ಟಿ.	೪೬೬	೬೩	,,
೧೭	ಶಂಕರ ಕೃಷ್ಣ ಕುಲಕರ್ಣಿ.	೪೬೬	೬೩	,,
೧೮	ಹಣಮಂತ ವೆಂಕಟೇಶ ಹೊದಲೂರ.	೪೬೩	೬೩	,,

೧೯	ಭೀಮರಾಜ ಶ್ರೀನಿವಾಸ ಗಾಡಿಕೊಪ್ಪ.	೪೭೦ ೧/೭	೬೨ ೨/೭	೧೨
೨೦	ಸ್ವಾಮಿ ಶ್ರೀಪಾದ ಸವದತ್ತಿ.	೪೬೩ ೧/೭	೬೧ ೩/೪	,,
೨೧	ಗುಲಾಬಬಾಪು ಶಿಂಗ ಜಮಾದಾರ.	೪೫೯ ೧/೭	೬೧ ೧ ೪/೫	,,
೨೨	ಶ್ಯಾಮರಾವ ವಲ್ಲದ ಫಕೀರರಾವ.	೪೫೪ ೪/೭	೬೦ ೧/೨ ೭/೦	,,
೨೩	ಸೈದ ಅಬ್ದುಲ್ ವಲ್ಲದ ಸೈದ ಇಮಾಮ.	೪೪೯ ೧/೭	೫೯ ೧ ೪/೫	,,
೨೪	ಅಬ್ದುಲ್ ರಹಿಮಾನ ವ॥ ಅಬ್ದುಲ್ ಸಾಬ.	೪೪೮ ೧/೭	೫೯ ೪/೫	,,
೨೫	ತಿಮ್ಮರಾಜ ರುದ್ರೋಜಿ ಪಾಟೀಲ.	೪೩೭ ೧/೮	೫೮ ೧/೨ ೭/೦	,,
೨೬	ಇಮಾಮಖಾನ್ ವ॥ ಕಾಸಿಮಖಾನ್.	೪೩೩	೫೭ ೧ ೧/೫	,,
೨೭	ವಿಠಲ ಶೇಷೋ ಮುಳಲಿ.	೪೩೦ ೧/೪	೫೭ ೧/೨ ೧/೦	,,
೨೮	ಧೋಂಡೋ ನರಸಪ್ಪ ಘೋರಪಡೆ.	೪೩೦ ೧/೪	೫೭ ೧/೨ ೧/೦	,,
೨೯	ಮಹಿಪತ ರುದ್ರೋಜಿ ಪಾಟೀಲ.	೪೨೫ ೨/೪	೫೬ ೭/೨ ೭/೦	,,
೩೦	ಫಕೀರಯ್ಯಾ ವಿರೂಪಾಕ್ಷಯ್ಯಾ ಕೊಟ್ಟೂರ.	೪೨೨ ೧/೭	೫೬ ೧/೨	,,
೩೧	ವೆಂಕಟೇಶ ರಾಮಚಂದ್ರ ಕುಲಕರ್ಣಿ.	೪೨೦ ೧/೭	೫೬ ೧/೫	,,
೩೨	ಶಿವಲಿಂಗಯ್ಯಾ ರಾಚಯ್ಯಾ ಸಾಮಳಗಿ.	೪೧೮ ೧/೭	೫೫ ೪/೫	,,
೩೩	ದತ್ತೋ ಬಾಳಕೃಷ್ಣ ಬೋಚೆ.	೪೧೭ ೨/೪	೫೫ ೧ ೭/೦	,,
೩೪	ಗುರುಶಾಂತಯ್ಯಾ ಚನಬಸಯ್ಯಾ ಕಂಠಿ.	೪೧೬ ೨/೪	೫೫ ೨ ೭/೦	,,
೩೫	ದಾಮೋಧರ ಮಾಧವರಾವ ಕುಲಕರ್ಣಿ.	೪೧೧ ೨/೪	೫೪ ೧ ೯/೦	,,
೩೬	ಗುರುನಾಥ ನಾರಾಯಣ ಕೋಲಂಗಡೆ.	೪೦೭	೫೪ ೧ ೪/೫	,,
೩೭	ಬಾಳಕೃಷ್ಣ ಜಗನ್ನಾಥ ಗರ್ದೆ.	೪೦೬ ೨/೪	೫೪ ೨ ೩/೦	,,
೩೮	ಬಾಳಾಜಿ ರಘುನಾಥ ಸವಡಿ.	೪೦೫	೫೪	,,
೩೯	ಶೇಷೋ ಶ್ರೀನಿವಾಸ ಹೂಡೇದ.	೪೦೩ ೫/೮	೫೩ ೫೯/೦	,,
೪೦	ಬಾಳಾಜಿ ವಿಠಲ ಕಾಳೆ.	೩೯೭ ೧/೭	೫೩	,,
೪೧	ಬಾಳಕೃಷ್ಣ ಬಾಪೂಜಿ ದಾರೋಜಿ.	೩೯೬ ೧/೭	೫೨ ೧ ೨/೫	,,
೪೨	ಕೃಷ್ಣಾಜಿ ಶೇಷೋ ಜಮನೀಸ.	೩೮೨ ೧/೪	೫೦ ೭/೨ ೯/೦	,,

ರವಾನೆ ತಾ. ೭ ನೇ ಜನವರಿ ೧೮೭೪ ಇಸವಿ.

Signed) Shrinivas R. Sowady.

ಆ. ಪ್ರ. ಟ್ರೇ. ಕಾ. ಬೆಳಗಾವಿ.

ಮಾರ್ಕಾಂಡೇಯ ರಾಮಾಯಣ.

೯ ನೇ ಸಂಧಿ.

೪೩ ನೇ ಶ್ಲೋಕ.

ಸ್ಮರನ ಶರವೆಂದಡೆಲ್ಲಾ ದೇವರುಂ ತಮ್ಮ।
ಶಿರದೊಳಾನುವರು ಸರ್ವತ್ರ ಪೂಜ್ಯಂಸುರಾ।
ಸುರರ್ಗಳೆಮಗಿದಿರಿಲ್ಲ ಮಿಕ್ಕ ಮಾತ್ರೇನು ಘಣೆಯಕ್ಕರಂ
ಮೀರಬಹುದೆ॥

ದುರುಳ ಮಾನವರೆಂಮ ಕಾಲ್ಗಟ್ಟಿ ನಾರಿನಿಂ।
ಸರಗೈದು ಮಾರುವರ್ಕಂದರ್ಪಗಿದು ಹೇಳು।
ನರ ಕಾಣೆವೆನುತ ಬಾಯಿಬಿಡುವ ಪೋಲರೆಬಿರಿದ ಪೂ
ಸರಂಗಳೊಪ್ಪಿರ್ದವು॥೪೩॥

ಅರ್ಥ—ಸ್ಮರನಶರವೆಂದೊಡೆ=ಕಾಮನ ಬಾಣಗಳೆಂದರೆ। ಯೆಲ್ಲಾ ದೇವರುಂ=ಯೆಲ್ಲ ದೇವತೆಗಳು। ತಮ್ಮ ಶಿರದೊಳ್=ತಮ್ಮ ತಲೆಯಲ್ಲಿ। ಆನುವರು=ಧರಿಸುವರು। ಸರ್ವತ್ರ ಪೂಜ್ಯಂ=ಯೆಲ್ಲ ಕಡೆಯಲ್ಲೂ ಪೂಜ್ಯರು। ಸುರಾಸುರರ್ಗಳ್=ದೇವದಾನವರುಗಳೂ। ಯೆಮಗೆ=ನಮಗೆ। ಇದಿರಿಲ್ಲ=ಕೇಡಾಗುದಲ್ಲ। ಮಿಕ್ಕ ಮಾತ್ರೇನು=ಉಳಿದ ಮಾತ್ರೇನು?। ಘಣೆಯಕ್ಕರಂ=ಹಣೆಯಲ್ಲಿದ್ದ ಅಕ್ಷರಗಳನ್ನು। ಮೀರಬಹುದೆ=ಮೀರುವರುಂಟೇ?। ದುರುಳಮಾನವರು=ಕೀಳಜನರು। ಯೆಮ್ಮ ಕಾಲ್ಗಟ್ಟಿ=ನಮ್ಮನ್ನು ಕಾಲಿಗೆ ಕಟ್ಟಿ। ನಾರಿನಿಂ=ನಾರಿಂದ। ಸರಗೈದು=ಸರಗಳನ್ನು ಮಾಡಿ। ಮಾರುವರ್=ಮಾರುವರು। ಕಂದರ್ಪಗೆ=ಮನ್ಮಥಗೆ। ಇದಹೇಳುವ

ಸೊಲ್ಲ ಮನದಲ್ಲಿಟ್ಟು ನಿತ್ಯದಿ।
ನಿಲ್ಲದೇ ಸೇವೆಗೆ ಕಲಿತರೆ ಯಿಲ್ಲಿ ಫಲವಹುದು॥೯॥

ತಾ. ೪ ಫೆಬ್ರುಆರಿ ಸನ್ನ
೧೮೭೪ ನೇ ಇಸವಿ.

ನಾರಾಯಣ ವೇಂಕಟಾಚಾರ್ಯ
ಕೂರಮಾಲಿ.

CORRESPONDENCE.
ಪತ್ರವ್ಯವಹಾರವು.

ಇನ್ನು ಆಗಿನ ಕಾಲದಲ್ಲಿ ಕನ್ನಡ ಭಾಷೆಯ ಪ್ರವರ್ತ ...ನವು ಹ್ಯಾಗಿತ್ತಂದರೆ: ಸರಕಾರೀ ಸಾಲಿಗಳಲ್ಲಿ ಮಹೀಶೂರ ಕನ್ನಡ ಎರಡನೇ, ಮೂರನೇ ಪುಸ್ತಕಗಳೂ, ಎಪ್ಪತ್ತು ...ಕಥೆ, ಕಥಾಮಂಜರಿ ಮುಂತಾದವುಗಳೂ ಓದಿಸಲ್ಪಡುತ್ತಿ ...ವು. ಕನ್ನಡ ಕವಿತ್ವಗಳೆಂದರೇನು? ಇದು ಹುಡುಗ ...ರಿಗೆ ಗೊತ್ತಿಲ್ಲ. ಅದಂತಿರಲಿ. ಮಾಸ್ತರರಿಗೇ ಮೊದಲು ಪರಿಚಯವಿಲ್ಲ. ಪಂತೋಜಿಗಳು ಬೆಂಗಳೂರದೊಂದು ಸಣ್ಣ ವ್ಯಾಕರಣವಿತ್ತು; ಅದನ್ನು ತಾವೂ ಪಾಠಮಾಡಿ, ಹುಡುಗರಿಗೂ ಘಟ್ಟಮಾಡಿಸುತ್ತಿದ್ದರು. ಪರಂತು ಅದರ ...ಲ್ಲಿರುವ ಅಭಿಪ್ರಾಯವು ಅವರಿಗೂ, ಇವರಿಗೂ ಕೂಡಾ ...ಹಯೋ. ಇದರ ಮೇಲಿಂದ ಸಾಲಿಯಲ್ಲಿ ನಡಿಯುವ ಕನ್ನಡಭಾಷೆಯು ಹ್ಯಾಗಿತ್ತೆಂಬುದು ತಿಳಿಯದೇ ಇರಲಿಕ್ಕ ... ವ್ಯವಹಾರದಲ್ಲಂತೂ ಬಹಳವಾಗಿ ಕನ್ನಡ ಪತ್ರಗ ...ೇ ಪಠ್ಯವೆಂದು ಮೇಲೆ ಹೇಳಿರುತ್ತದಷ್ಟೆ. ಕಚೇರಿ ...ಗಳಲ್ಲಿ ಅವಶ್ಯವಿದ್ದಲ್ಲಿ ಕನ್ನಡು ಇತ್ತು. ಪರಂತು ಕ ...ೇರಿಯ ಕನ್ನಡವೆಂಬ ಅದೊಂದು ದ್ವೀಪಾಂತರದ ವಿಚಿತ್ರ ...ದ ಭಾಷೆಯೆಂದು ಇಂದಿಗೂ ಗೋತ್ತಿದ್ದ ಮೇರೆಗೆ ಆ

ಸಾವಕಾರರು ಹಾಗು ಧೃತಜನರು ಈ ಯಾವತ್ತರು ಖುಂದು
ವಿದ್ಯಾರ್ಥಿಗಳ ಪರೀಕ್ಷಾ ತೆಗೆದು ಕೊಂಡರು. ಪರೀಕ್ಷೆಯ
ಲ್ಲಿ ಪಾಸಾದ ಹುಡುಗರಿಗೆ ಎರಡು ರುಪಾಯಿಯ ಬುಕ್ಕುಗ
ಳನ್ನು ಇನಾಮು ಕೊಟ್ಟರು. ಹಾಗು ಸ್ಟ್ಯಾಂಡರ್ಡಲಾ
ಗು ಇಲ್ಲದ ಹುಡುಗರಿಗೆ ಮೇವೆ ಮಿಠಾಯಿಗಳನ್ನು ಕೊ
ಟ್ಟು ವಿದ್ಯಾರ್ಥಿಗಳ ಮನಸ್ಸು ಸಂತೋಷ ಬಡಿಸಿ ಹೋಗಿ
ರುತ್ತಾರೆ ಹಿಂದಕ್ಕೆ ತಾರೀಖು ೧ನೇ ಜೂನ್ ಸಂನ ೧೮೭೪ ಇ
ಸವಿ ದಿವಸಾ ಬಂದು ಈಗಿನಂತೆ ಇನಾಮುಗಳನ್ನು ಕೊಟ್ಟು
ಹೋಗಿದ್ದರು ಇದರ ಮೇಲಿಂದಾ ನೋಡಲಾಗಿ ಇವರ ಅಪೇ
ಕ್ಷೆಯು ವಿದ್ಯಾವೃದ್ಧಿಯ ಕಡೆಗೆ ಇದ್ದು ವಿದ್ಯಾರ್ಥಿಗಳಿಗೆ ಉ
ತ್ತೇಜನವನ್ನು ಕೊಡುವಲ್ಲಿ ಆಶೆವುಳ್ಳವರಾಗಿದ್ದಾರೆ ಇದ
ರಂತೆಯೇ ನಿರಂತರ ಇರಬೇಕು ಎಂಬುವ ನನ್ನ ಅಭಿಪ್ರಾ
ಯವದೆ ಕಾರಣಾ ತಮ್ಮ ಕಡೆಯಿಂದಾ ಹೊರಡುವ ಮಾಸ ಪ
ತ್ರಿಕೆಯಲ್ಲಿ ಛಾಪಿಸುವಿರಿ ಎಂದು ಬಹಳ ಅಪೇಕ್ಷೆಯಿಂದ
ಬರಕೊಂಡಿದ್ದೇನೆ ಇಂತಿ ವಿಜ್ಞಾಪನೆ.

ತಾರೀಖು ೩ನೇ ದಿಜಂಬರ
ಸಂನ ೧೮೭೪ ಇಸವಿ.

ಕೇಶವ ಕೃಷ್ಣ ಬೋಡಸ
ಜಮುಖಂಡಿಕರ ಸ್ಕೂ. ಮಾ.
ಚೆಂಚಣಿ.

ಮಹಾರಾಜ ರಾಜಮಾನ್ಯ ರಾಜಶ್ರೀ ದಕ್ಷಿಣ ಭಾಗ
ದ ಕಾಲಾಪತ್ರಿಕೆಯ ಎಡಿಟರ ಇವರಿಗೆ—

ವಿನಯಪೂರ್ವಕವಿಜ್ಞಾಪನಃ ಯೇನಂದರೆ—ಕೆಳಗೆ ಬರೆ
ದನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಕರದ್ವಯಗ
ಳಲ್ಲಿ ಉದ್ಧವಿಸುವ ಇಂದು ಪ್ರಕಾಶಸಮವಾದ ಅಂದುಳ್ಳ ಪ

ತ್ರಿಕೆಯಲ್ಲಿ ಅಚ್ಚು ಹಾಕಿಸಿ ಪ್ರಕಟಿಸುವದಕ್ಕೆ ಸ್ಥಳಕೊಡಬೇಕೆಂಬ ಅಪೇಕ್ಷೆಯನ್ನು ಮಾಡಿದ್ದೇನೆ ಆದರೆ ಉಪೇಕ್ಷಾಮಾಡದೆ ಮುದ್ರಿಸುವಿರೆಂದು ಕೋರುತ್ತೇನೆ.

ತಾರೀಖು ೨೩ನೇ ಮಾಹೆ ಜನವರಿ ಸನ್ನ ೧೮೭೪ ಇಸವಿ ದಿವಸ ಮೇಹರ್ಬಾನ್ ರಾವಸಾಹೇಬ ಡಿಸ್ಟ್ರಿಕ್ಟ ಸುಪರಿಟೆಂಡೆಂಟ ಆಫ್ ವ್ಯಾಕಸನೇಶನ್ ಜಿಲ್ಹಾ ಬೆಳಗಾಂವಿ ಇವರು ಸಾಲಿಯೊಳಗೆ ಬಂದು, ಈ ಗ್ರಾಮದ ಪಂಚ ಜನರ ಸಮಕ್ಷ ಮೊದಲನೇ ಎರಡನೇ ವರ್ಗದ ಪರೀಕ್ಷೆ ತೆಗೆದು ಕೊಂಡರು. ಹುಡುಗರು ಬಹಳು ಚನ್ನಾಗಿ ಉತ್ತರಗಳನ್ನು ಕೊಟ್ಟರು; ಓದೋಣ ಬರಿಯೋಣ ಗಣಿತ ಮೊದಲಾದ ಅಭ್ಯಾಸ ನೆಟ್ಟಗ ಇದೆ. ಹೆಡ್ಮಾಸ್ತರನು ಹುಡುಗರಿಗೆ ಕಲಿಸುವದರಲ್ಲಿ ದಕ್ಷನಿದ್ದಾನೆಂದು ಷರಾಸಹ ಬರೆದು ಇದ್ದಾರೆ. ಈ ಧೊರೆಗಳ ಲಕ್ಷವು ವಿದ್ಯಾಭಿವೃದ್ಧಿಯ ಕಡೆಗ ವಿಶೇಷವಾಗಿ ಇದ್ದು, ಚಿಕ್ಕ ಮಕ್ಕಳಿಗೆ ಕಲಿಯುವ ಬಗ್ಗ ಉತ್ತೇಜನ ಕೊಡುತ್ತಾರೆ.

ಇಲ್ಲಿಯ ಜನರಿಗೆ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂಬುದಾಗಿ ಸ್ವತಃ ಬೋಧಿಸಿದರು. ಇದರಂತೆ ದೊಡ್ಡ ದೊಡ್ಡ ಅಧಿಕಾರಿಗಳು ಶಾಲೆಗಳ ಕಡೆಗೆ ಲಕ್ಷಗೊಟ್ಟರೆ ವಿದ್ಯಾಭಿವೃದ್ಧಿಗೆ ಉತ್ತೇಜನವಾಗುವದಲ್ಲದೆ ಜನರಿಗೆ ಹಿತಕರವಾಗುವದೆಂದು ಇಚ್ಛಿಸುತ್ತೇನೆ.

ಮುಕ್ಕಾಮು ಅಕ್ಕೋಳ ತಾರೀಖು ೨೩ ಜನವರಿ ಸನ್ನ ೧೮೭೪ ಇಸವಿ.	ನಾಗೇಂದ್ರ ಶಿವಲಿಂಗೇಶ್ವರ ಹೆ. ಮ್ಯಾ. ಸ್ಕೂ. ಅಕ್ಕೋಳ ತಾ. ಚಿಕ್ಕೋಡಿ.

ಮೇಹೆರಬಾನ ದಕ್ಷಿಣಭಾಗ ಕಂನಡ ಶಾಲಾಪತ್ರಿಕ
ದ ಎಡೀಟರ ಅವರ ಸನ್ನಿಧಾನಕ್ಕೆ—

ರಾಣೀ ಬೆಂನೂರ ತಾಲೂಕ ಕಸಬಾ ಹಲಿಗೇರಿ ಸರಕಾರಿ ಶಾಲಿಯ ಹೆಡ್ಡ ಮಾಸ್ತರನ ವಿನಯ ಪೂರ್ವಕವಾಗಿ ವಿಜ್ಞಾಪನಃ ಏನಂದರೆ ಕೆಳಗೆ ಬರೆದಿರುವ ನಾಲ್ಕು ಪಂಗ್ತಿಗಳನ್ನು ತಂವು ಸುಂದರವಾದ ಕರದ್ವಯಗಳಲ್ಲಿ ಹುಟ್ಟಿಲ್ಪಡುವ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವದಕ್ಕೆ ಸ್ಥಳದೊರಬೇಕೆಂದು ಪರಮಾಶಾಬದ್ಧನಾಗಿದ್ದೇನೆ ತಾರೀಖು ೨೦ ನೇ ಮಾಹೆ ಜನೆವರಿ ಸನ್ನ ೧೮೭೪ ನೇ ಇಸವಿ ದಿವಸ ಈ ಶಾಲೆಯೊಳಗೆ ಮಹಾರಾಜ ರಾಜಮಾನ್ಯ ರಾಜಶ್ರೀ ತಿರಕಪ್ಪಾ ನಾಯಿಕ ಭುಜಂಗ ಸಾವಕಾರ ವ ಚಂನವೀರಪ್ಪಾ ಕೋಡದ ವ ಸಿದ್ಧಪ್ಪಾ ಪೋಲಿಸ ಪಾಟೀಲ ಮತ್ತು ಗಣಪ್ಪಾ ನಾಡಿಗೇರ ಅವರು ಹಾಂಗು ಇಲ್ಲಿಯ ಕೆಲ ವಿದ್ವಜ್ಜನರು ಕೂಡಿಕೊಂಡು ಬಂದು ಮೊದಲನೇ ಮತ್ತು ಎರಡನೇ ಹಾಂಗು ಮೂರನೇ ವರ್ಗದ ಹುಡುಗರ ಪರೀಕ್ಷೆ ತೆಗದುಕೊಂಡು ಹುಡುಗರ ಅಕ್ಷರಸ್ವಚ್ಛ ಉಂಟು ಮತ್ತು ಓದೋಣಬರಿಯೋಣ ವ್ಯಾಕರಣ ಗಣಿತ ಮುಂತಾದ ಅಭ್ಯಾಸವು ಮಾಸ್ತರರು ವ ಶೀಕ್ಷಕರು ಚಂನಾಗಿ ನಡಿಸಿದ್ದಾರೆಂದು ಹಾಜರೀ ರಜಿಸ್ಟರದಲ್ಲಿ ಷರಾ ಬರೆದು ಪ್ರತ್ಯೇಕ ವರ್ಗದ ಹುಡುಗರೊಳಗೆ ಪಾಸಾದ ವಿದ್ಯಾರ್ಥಿಗಳಗೆ ಪುಸ್ತಕಗಳ ಬಕ್ಷೀಸ ಗಳನ್ನು ಕೊಟ್ಟು ಇದರ ಹೊರ್ತು ಮಿಠಾಯಿ ತಂದು ಹಂಚಿದರು ಇದರಿಂದ ನನಗ ಬಹು ಸಂತೋಷವಾಯಿತು ಮತ್ತು ಇವರ ಲಕ್ಷವು ವಿದ್ಯಾಭಿವೃದ್ಧಿಯ ಕಡಿಗೆ ವಿಶೇಷವಾಗಿದ್ದು ವಿದ್ಯಾರ್ಥಿಗಳಗೆ ಉತ್ತೇಜನವಂನು ಕೊಡುವಲ್ಲಿ ಆಶಾಯುಳ್ಳ

ವರಾಗಿದ್ದಾರೆ ಇದೇ ತೋರಿಗೆ ಮೇಲೆ ಮೇಲೆ ಉದಾತ ಮನಸ್ಸುಳ್ಳ ವಿದ್ವಜ್ಜನರ ಕಡೆಯಿಂದ ಚಿಕ್ಕ ಬಾಲಕರಿಗೆ ತಕ್ಕ ಉತ್ತೇಜನದೊರೆದು ಈ ಶಾಲೆಯು ಸ್ಥಿತಿಯು ಇದಕ್ಕೂ ಉತ್ತಮಾವಸ್ಥೆಯಲ್ಲಿ ಬರಬೇಕೆಂದು ಆಶೆಯುಳ್ಳವನಾಗಿದ್ದೇನೆ ತಾರೀಖು ೨೬ ಮಾಹೆ ಜನವರಿ ಸನ್ನ ೧೮೭೪ ಇಸವಿ.

ಮುಕ್ಕಾಂ ಹರಿಗೇರಿ ತಾಲೂಕ ರಾಣೇಬೆಂನೂರ ಜಿ. ಧಾರವಾಡ.

ಸಹಿ ಜೇವಾಜೀ ವ್ಯಂಕಾಜೀ ಕಲಘಟಗಿ ಹ. ಮಾ.

ಮ. ರಾ. ರಾ. ಮಾಸಪತ್ರಿಕ ಕರ್ತರೇ—

ಮಂದ ಮಿತ್ರಿಯಾದ ನಾನು ತಮಗೆ ವಂದನೆಯನ್ನು ಮಾಡಿ ತಮ್ಮ ಅಂದವಾದ ಪತ್ರದ್ವಾರದಿಂದಾ ಈ ಚಂದವಾದ ಲೆಖ್ಖವನ್ನು ಪ್ರಕಟಿಸಿ ತಂಮ ವಾಚಕರ ಕಡೆಯಿಂದಾ ಇದರ ರೀತಿಯನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವನಾಗಿದ್ದೇನೆ ಅದನ್ನು ತಾವು ತಂಮ ವಾಚಕರೊ ಕೈಗೂಡಿಸುವಿರೆಂದು ಕೋರುತ್ತೇನೆ.

ಒಂದು ಊರಲ್ಲಿ ಒಂದು ಹಾಂವು ಇತ್ತು ಅದು ಹಗಲಿನಲ್ಲೆಲ್ಲಾ ಸಂಚಾರವನ್ನು ಮಾಡಿ ರಾತ್ರಿಕಾಲಕ್ಕೆ ಒಂದು ಹೊಲದಲ್ಲಿ ಅದು ಶಯನವನ್ನು ಮಾಡುತ್ತಿತ್ತು. ಆ ಹೊಲದ ಅಗಲು ಒಂದು ಯೆಕರೆ ಇತ್ತು ಆ ಹಾಂವಿನ ತಳದ ಅಗಲು ೬ ಆರು ಬಟ್ಟು ಇತ್ತು ಆದರೆ ಆ ಹಾಂವು ಎಷ್ಟು ಉದ್ದವು ಇತ್ತು—ಇದರ ರೀತಿಯನ್ನು ಉತ್ತರವನ್ನೂ ತಿಳಿಸಿದವರ ಉಪಕಾರವನ್ನು ಮನ್ನಿಸುತ್ತೇನೆ.

ತಾರೀಖು ೪ ಜನೆವರಿ ಸನ ೧೮೭೪ ಇಸ್ವಿ ಮುಕ್ಕಾಮ ಶಿರಸಂಗಿ.

ಶಿರಸಂಗಿ ತಾಲೂಕ ಪರಸಗಡ ಜಿಲ್ಹಾ ಬೆಳಗಾಂವಿ ಇಲ್ಲಿಯ ಸರಕಾರಿ ಸಾಲಿಯ ವಿದ್ಯಾರ್ಥಿ ಗೋವಿಂದ ರಾಮಚಂದ್ರ ಕುಲಕರ್ಣಿ ಹಳವಳ.

ರಾವಸಾಹೇಬ ದಕ್ಷಿಣಭಾಗದ ಶಾಲಾಪತ್ರಿಕೆ ಕರ್ತರವರ ಚರಣಕ್ಕೆ —

ಬಹಳ ವಿನಯಪೂರ್ವಕ ಬಿನ್ನಹ ಯೇನಂದರೆ ರಾ. ರಾ. ಶ್ರೀನಿವಾಸ ಲಕ್ಷ್ಮಣ ಕೋಪುರ, ಅಪ್ಪಯ್ಯಾ ಚೂಡಯ್ಯಾ ನಾಯಿಕ ವಿದ್ಯಾರ್ಥಿ ಶಾಲಾ ಹುಕ್ಕೇರಿ ಇವರ ೧೮೭೪ನೇ ಇಸವಿ ಜಾನೇವಾರಿ ತಿಂಗಳ ತಮ್ಮ ಪತ್ರಿಕದಲ್ಲಿ ಪ್ರಕಟಿಸಿದ ಗಣಿತದ ಉತ್ತರವು ಕೈಲಾದಮಟ್ಟಿಗೆ ತೆಗದಿದ್ದೇನೆ.

೧ ನೇ ವರ್ಷ ೪೦೦ಕ್ಕೆ ಬಡ್ಡಿಯನ್ನು ಕೊಡಬೇಕು. ೨ ನೇ ವರ್ಷ ತನಗೆ ಬರತಕ್ಕ ೫೦ ರೂಪಾಯಿ ಮುರಕೊಂಡು ೩೫೦ ರೂಪಾಯಿಗೆ ಬಡ್ಡಿ ಕೊಡಬೇಕಾಯಿತು ಇವರಂತೆ ದರ ವರ್ಷಕ್ಕೆ ೫೦ ರೂಪಾಯಿ ಮುರಕೊಂಡು ಬಾಕಿ ರೂಪಾಯಿಗೆ ಬಡ್ಡಿ ಕೊಡುತ್ತಾ ಹೋಗಬೇಕಾಯಿತು.

೧ ನೇ ವರ್ಷ ೪೦೦ ಕ್ಕೆ	೫ ನೇ ,, ೨೦೦ ರೂ. ಕ್ಕೆ
೨ ನೇ ,, ೩೫೦ ಕ್ಕೆ	೬ ನೇ ,, ೧೫೦ ಕ್ಕೆ
೩ ನೇ ,, ೩೦೦ ಕ್ಕೆ	೭ ನೇ ,, ೧೦೦ ಕ್ಕೆ
೪ ನೇ ,, ೨೫೦ ಕ್ಕೆ	೮ ನೇ ,, ೫೦ ಕ್ಕೆ
೧೩೦೦	೫೦೦

೧೮೦೦ ರೂಪಾಯಿಗೆ ಬಡ್ಡಿ ಕೊಡಬೇ

ಕಾಯಿತು.

ಚಾಕರನಿಗೆ ಬರತಕ್ಕ ರೂಪಾಯಿ

೪೦೦

ರು. ಕ್ಕೆ ತು. ಬ. ರು. ಯೇನು. ೨೦೦ರು. ಬಂದರೂ,

೧೮೦೦ : ೨೦೦ : ೧೦೦   ೨೦೦ ಬಡ್ಡಿ

೧೨ ತಿಂ ಗೆ.   ೧ ತಿಂಗಳಿಗೇನು

೨೧೬।೦೦   ೧೦೦

೨೦೦

೨೦೦।೦೦

೧೬   ಅಣೆ ಸ್ಯೆ ದರ ತಿಂ. ದತ್ರ

೩೨೦೦ಅಣೆ. ೧೪ ೯/೯ ನೂರಕ್ಕೆ

೧೭೬   ಉತ್ತರ.

೧೨

೨೧೧೨ ಪೈಗಳು

೧೬೮ ಬಾಕಿ ಪೈಗಳು.

ತಾ. ೨೫ ಜಾನೇವಾ ರಿ ೧೮೭೪ ಇ. } ದಾದಾ ಗುಂಡಾಚಾರ್ಯ ಕುರವಾಲಿಕರ.

ರಾವಸಾಹೇಬ ದಕ್ಷಿಣಭಾಗ ವುತಪತ್ರಿಕೆ ಕರ್ತರವರ ಚರಣಕ್ಕೆ—

ಬಹಳ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ— ಈ ಕೆಳಗೆ ಬರೆದ ಲೆಕ್ಕವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಇದಕ್ಕೆ ಯಾರಾದರು ಕೊಟ್ಟ ಉತ್ತರವೇನಾದರೂ ತಂ

ವು ಪತ್ರದ್ವಾರದಿಂದ ತಿಳಿಸಿ ಪುನಃ ಸಂತೋಷಪಡಿಸಬೇಕೆಂದು ಕೋರುತ್ತೇನೆ.

ಒಬ್ಬ ಮನುಷ್ಯನು ಒಬ್ಬ ಸಾವಕಾರನ ಕಡೆಯಿಂದ ೨೦೦ ರೂ. ಸಾಲಾ ತೆಗಿದುಕೊಂಡು ಆ ರೂಪಾಯಕ್ಕೆ ಯುರಡು ಕಟ್ಟು ಅಂದರೆ ೪೦೦ ರೂಪಾಯಿ ಮಾಡಿ ದರ ವರ್ಷಕ್ಕೆ ೧೦೦ ರೂ. ದಂತೆ ೪ ವರ್ಷ ಕೊಟ್ಟು ಮುಟ್ಟಿಸಿದನು. ಅಂದರೆ ಈ ವ್ಯಾಪಾರದಲ್ಲಿ ಬಡ್ಡೀ ದರ ಯಾವ ಪ್ರಕಾರ ಬಿತ್ತು ಇದನ್ನು ಸುಜನರು ತಿಳಿಸುವರೆಂದು ಕೋರುತ್ತೇನೆ.

ತಾರೀಖು ೨೫ ನೇ ಜಾನೇವಾರಿ ೧೮೭೪ ಇ. ಮುಕ್ಕಾಂ ಸವದತ್ತಿ } ದಾದಾ ಗುಂಡಾಚಾರ್ಯ ಕುರಪಾಲಿಕರ.

ಸಿದ್ಧರಾಮ ವಾಚನ ಮಂದಿರ.
[illegible]

ಶಾಲಾಪತ್ರಿಕವು.

ಪುಸ್ತಕ ೯]　　　　[ಸಂಚಿಕೆ ೧೨

ಬೆಳಗಾವಿ, ಜನವರಿ ಮಾಹೆ ೧೮೭೪.

SELF HELF

ತನಗೆ ತಾನೇ ನೆರವಾಗುವದು.

ಅನಂತರ ಮುಂದೆ ಕೆಲವು ವರ್ಷಗಳವರೆಗೆ ಜಾಕಾರ್ಡನ ಪರ್ಯವಸಾನವು ಯಾರಿಗೂ ತಿಳಿಯಲಿಲ್ಲ. ಆದರೆ ಈ ಕಾಲದಲ್ಲಿ ವಿಧ ವಿಧದ ಆಕೃತಿಗಳುಳ್ಳ ವಸ್ತ್ರಗಳನ್ನು ಚನ್ನಾಗಿ ನೇಯಲಿಕ್ಕೆ ಬರುವ ಹಾಗೆ ಅವನು ತನ್ನ ಮಗ್ಗದ ಸುಧಾರಣೆಯ ಆಲೋಚನೆಯನ್ನೇ ನಡಿಸಿದ್ದನೆಂದು ತೋರುತ್ತದೆ. ಯಾಕಂದರೆ ಸನ್ ೧೮೦೦ನೇ ವರ್ಷದಲ್ಲಿ ಅವನು ಬೇಕಾದಂಥ ಆಕೃತಿಯು ಹುಟ್ಟುವ ಹಾಗೆ ಮಗ್ಗದ ನೂಲುಗಳನ್ನು ಆರಿಸಿಕೊಳ್ಳುವದಕ್ಕೋಸ್ಕರವಾಗಿ ತಾನು ರಚಿಸಿದ ಹೊಸ ಯಂತ್ರವನ್ನು ಪ್ರಸಿದ್ಧಿಗೆ ತಂದನು. ಇದನ್ನು ಮಗ್ಗದ ಹತ್ತರ ಹಚ್ಚಿಟ್ಟರೆ, ಒಬ್ಬ ಹುಡುಗನು ಮಾಡಬೇಕಾದ ಕೆಲಸವು ಇಲ್ಲದಂತಾಗುತ್ತಿತ್ತು. ಈ ಯಂತ್ರದ ಪ್ರಸಾರವು ಜನರಲ್ಲಿ ಶೀಘ್ರವಾಗಿ ಬೆಳೆಯಲಿಲ್ಲ; ಆದರೂ ಬೆಳೆದದ್ದು ಯಾರೂ ಹಿಂದೆಗೆಯಲಿಲ್ಲ. ಹತ್ತು ವರ್ಷಗಳಲ್ಲಿ ೪೦೦೦ಕ್ಕೆ ಮೇಲ್ಪಟ್ಟು ಯಂತ್ರಗಳು ಲಿಯಾನ್ಸ ಪಟ್ಟಣದಲ್ಲಿ ಕೆಲಸ ನಡಿಸುತ್ತಿದ್ದವು. ಆದರೆ ಅ

ಕಾಲದಲ್ಲಿ ಪ್ರಾಪ್ತ ಸೂಳೆ ದುಃಖದ ದಾಕ್ಷ್ಯಕ್ಕಾಗಿಯೇ ಯಾದ ಜಾಕಾರನ ಉದ್ದೇಶಗಳು ಅಲ್ಲಿಗೆ ನಿಂತವು. ಸನ್ನಿವೇಶದಿ ಸೇವಕರಲ್ಲಿ ಜಾಕಾರನು ಬಾಂಧವ್ಯದ ಜನರ ಸಂಗದ ಜೊತೆಗೆ ಬಾಳಬೇಕಾಗಿತ್ತು. ಅಂಥ ನಡತೆಯಿಂದ ವ್ಯಕ್ತಿ ಗೆ ಅವನ ಸಹಚರರ ಸ್ವಭಾವದ ಸಂಗತಿ ಗೊತ್ತಾಗುತ್ತಿ ದ್ದಿತು. ಈ ವ್ಯಕ್ತಿಗಳನ್ನು ತಿಳಿದು ಕೊಂಡನಂತರ ಜಾಕಾ ರನು ಹಿಂದೆ ದೊರೆಗೆ ತನ್ನ ದೊರೆತನದ ಸ್ವಭಾವದೊಳಗೆ ಸೇರಿ ಅಲ್ಲಿ ಸಾಮಾನ್ಯವಾಗಿ ಸಂಭವಿಸುವ ವಿಚಾರ ಯೋಚಿಸಿ ದನು. ಅವನು ಇನ್ನು ಮುಂದೆ ಶಿಕ್ಷೆಯಿಲ್ಲದೆ ಕೆಲಸದಲ್ಲಿ ದ್ದು ಅರಮನೆಯಲ್ಲಿದ್ದನು. ಅವನ ಅವನಿಗಿದ್ದ ಇಷ್ಟ ಸೇವೆ ಮಾಡು ಕಾಲದಲ್ಲಿ ಬಿದ್ದ ಸಣ್ಣ ಬಡತನ ಅನುಭವ ಹೇಳದೆ ಅವ ನು ತನ್ನ ದೊರೆಗೆ ಸಹಾನುಭೂತಿ ದೊರೆಯದಂತೆ ಕಾಪಾಡು ತಿದ್ದನು. ಅವನು ತನ್ನ ಇಷ್ಟದ ದೊರೆಯು ಬಂದು ಮಾಡಿ ದ ಪ್ರಶ್ನೆಗೆ ಹೇಳಿದ ಉತ್ತರದಿಂದ ಕೋಪದಿಂದ ತಿಳಿದಿದ್ದನು ಜೀವನ ಸಾಗಿಸುವ ಜನ ಮನಸ್ಸಿನ ಆಸ್ತಿ ದ್ದನು. ಅಲ್ಲಿ ಅವನ ಸಂಗತಿ ಗೊತ್ತಾದ ಅದರಿಂದ ಅ ವನ ಮನಸ್ಸಿನಲ್ಲಿ ಸ್ವಭಾವದಲ್ಲಿ ಬದಲಾಯಿಸಿ ದ ನಿರ್ದಿಷ್ಟ ದೊಡ್ಡ ಕೆಲಸದ ಆಲೋಚನೆ ಬರುತ್ತಿತ್ತು. ಅವನ ತನ್ನ ಕಲ್ಪನೆಗಳನ್ನು ಅನುಭವಕ್ಕೆ ತಂದು ನೋಡುವ ಬೇಕಾದರೆ ಅವನ ಹತ್ತಿರ ಹಣವಿದ್ದಿಲ್ಲ. ಮುಂದೆ ಕೆಲವು ದಿನಗಳನಂತರ ಜಾಕಾರನ ಸಂಬಳವನ್ನು ಏರಿಸಿ ಕೊ ಟ್ಟು ಮಿತ್ಯಾದರೂ ಕೆಲಸವನ್ನು ನೋಡಿಕೊಳ್ಳುವದು ಅ ವಶ್ಯಕವಾಯಿತು. ಒಬ್ಬ ಬುದ್ಧಿವಂತನಾದ ಶಿಲ್ಪಿಗನು ಅ ವನನ್ನು ತನ್ನ ಕೈಕೆಳಗೆ ಇಟ್ಟುಕೊಂಡನು. ಅಲ್ಲಿ ಅವನು

ಹಗಲು ಹೊತ್ತು ತನ್ನ ಒಡೆಯನ ಕೆಲಸ ಮಾಡಿ, ರಾತ್ರಿಯ
ಲ್ಲಿ ತನ್ನ ಸ್ವಂತದ ಕೆಲಸವನ್ನು ನಡೆಸುತ್ತಿದ್ದನು. ಮಗ್ಗ
ಗಳಲ್ಲಿ ಇನ್ನು ಬೇಕಾದಷ್ಟು ಸುಧಾರಣೆಯು ಮಾಡಬೇಕೆ
ನ್ದು ಅವನಿಗೆ ತೋರಿದುದರಿಂದ ಅವನು ಒಂದು ದಿವಸ ಆ
ಧೈರ್ಯವಾಗಿ ತನ್ನ ಕಲ್ಪನೆಯನ್ನು ತನ್ನ ಯಜಮಾನನಿಗೆ ತಿ
ಳಿಸಿ, ಅದರಂತೆ ಯಂತ್ರವನ್ನು ರಚಿಸಿ ನೋಡುವದಕ್ಕೆ ತನ
ನ ಹತ್ತಿರ ಹಣವಿಲ್ಲವೆಂದು ಹೇಳಿದನು. ಸ್ವಂತ ಯೋಗ್ಯತೆಯಿಂದ
ಈ ಕಲ್ಪನೆಯು ಆ ಶಿಲ್ಪಿಗನ ಮನಸ್ಸಿಗೆ ಬಂದು, ಅವನು ನಿ
ನಗೆ ಅವಕಾಶ ಸಿಕ್ಕಾಗ ನಿನ್ನ ಯಂತ್ರವನ್ನು ರಚಿಸಿ ನೋ
ಡೆಂದು ಹೇಳಿ, ಔದಾರ್ಯದಿಂದ ಕೆಲವು ಹಣವನ್ನು ಜಾ
ಕಾರ್ಡನ ವಶಕ್ಕೆ ಕೊಟ್ಟನು. ಮೂರಾರು ತಿಂಗಳು
ಗಳೊಳಗೆ ಅವನು ತನ್ನ ಹೊಸ ಯಂತ್ರವನ್ನು ಸಿದ್ಧಗೊ
ಳಿಸಿದನು. ಯಾವ ಕೆಲಸದಲ್ಲಿ ಮನುಷ್ಯರು ಬೇಕಾಗುತ್ತಿದ್ದ
ರು ಹೋಗುವರೋ, ಅಂಥಾ ಕೆಲಸವನ್ನು ಆ ಯಂತ್ರವು
ಮಾಡುತ್ತಿತ್ತು. ಪಾರಿಸದಲ್ಲಿ ಸನ್ ೧೮೦೧ನೇ ವರ್ಷದ
ಲ್ಲಿ ಕಲಾಕೌಶಲ್ಯಗಳ ಪ್ರದರ್ಶನವಾದಾಗ ಆ ಯಂತ್ರದ
ಕೌಶಲ್ಯಕ್ಕೋಸ್ಕರವಾಗಿ ಜಾಕಾರ್ಡನಿಗೆ ಒಂದು ಪದಕ
ದ ಇನಾಮು ಸಿಕ್ಕಿತು. ಇದಲ್ಲದೆ ಜಾಕಾರ್ಡನು ಲಾಯನ್ಸ
ನಲ್ಲಿ ಇರುವಾಗ ಕಾರ್ನ್ಯನೆಂಬ ಪ್ರಧಾನನು ಅವನ ಮ
ನೆಗೆ ಹೋಗಿ, ಈ ಯಂತ್ರವ ರಚಿಸಿದಕ್ಕಾಗಿ ಅವನನ್ನು ಶ
ಲ್ಲಾಘಿಸಿದನು. ಮುಂದಿನ ವರ್ಷ ಲಂಡನ ಪಟ್ಟಣದ "ಕ
ಲಾಕೌಶಲ್ಯಗಳ ಸಮಾಜ"ವೆಂಬ ಹೆಸರಿನ ಸಂಘದವರು ಮೀ
ನುಗಾರರ ಜಾಳಿಗೆಗಳನ್ನು, ಹಡಗಗಳ ಹೋರೆ ಸುತ್ತು ಮುತ್ತು
ಹಿಡಿದ ಜಾಳಿಗೆಗಳನ್ನು, ಹೆಣೆಯುವ ಯಂತ್ರವನ್ನು ಮಾ

ಬಿಕ್ಕೊಟ್ಟವರಿಗೆ ಅನೇಕರು ಸಿಕ್ಕಿ ಬಿದ್ದಂತೆ ಪ್ರಸಿದ್ಧಪಡಿಸಿದ್ದರು. ಜಾಕಾರ್ಡನು ಈ ಸುದ್ದಿಯು ಕೇಳಿ, ಒಂದು ದಿವಸ ಕೆಲಸಗಳಲ್ಲಿ ಮಾಡಿಕೆಯಾಗಿ ತಾನು ತಿರುಗಾಡುವಂತೆ ತಿರುಗಾಡುತ್ತಿರುವಾಗ, ಈ ವಿಧವ ಯಂತ್ರವನ್ನು ಕುರಿತು ಆಲೋಚಿಸಿ, ಅದರ ರಚನೆಯನ್ನು ಮನಸ್ಸಿನಲ್ಲಿ ಸಿದ್ಧಪಡಿಸಿಕೊಂಡನು. ಅವನ ಸಹಾಯಕನಾದ ಶಿಲ್ಪಿಗನು ಕೂಡ ಅವನಿಗೆ ಹಣಕೊಟ್ಟು ಸಹಾಯಮಾಡಿದ್ದರಿಂದ ಮೂರು ವಾರಗಳಲ್ಲಿ ಜಾಕಾರ್ಡನ ಯಂತ್ರವು ಸಿದ್ಧವಾಯಿತು.

ಜಾಕಾರ್ಡನ ಕೃತ್ಯವು ಆ ಪ್ರಾಂತದ ಮುಖ್ಯಾಧಿಕಾರಿಗಳಿಗೆ ತಿಳಿದನಂತರ ಅವನು ಜಾಕಾರ್ಡನನ್ನು ಕರೆಸಿಕೊಂಡು, ಅವನು ಯಂತ್ರವನ್ನು ತನ್ನೆದುರಿನಲ್ಲಿ ನಡಿಸಿ ನೋಡಿ, ಅದನ್ನು ಕುರಿತು ಅರಸನಿಗೆ ಪತ್ರ ಬರೆದನು. ಆಗಲೇ ಅರಸು ಜಾಕಾರ್ಡನನ್ನು ಅವನ ಯಂತ್ರದೊಡನೆ ಪಾರಿಸಕ್ಕೆ ಕರೆಸಿಕೊಂಡು, ಅವನ ಬುದ್ಧಿಗೆ ತಕ್ಕ ಸನ್ಮಾನದಿಂದ ಅವನ ಭೆಟ್ಟಿಯು ತಕ್ಕೊಂಡನು. ಆಗ ಜಾಕಾರ್ಡನು ಸುಮಾರು ಎರಡು ವರುಷ ಅರಸನ ಸನ್ನಿಧಾನದಲ್ಲಿ ಕಾಲಕಳೆದನು, ಅರಸನು ಪ್ರೀತಿಯಿಂದ ತನ್ನ ಸಂಗಡ ಯಥೇಷ್ಟವಾಗಿ ಮುದ್ರಾಲಯವನ್ನು ನೋಡಿ ನಿಶ್ಚಿಂತನಾಗಿ, ಆಕೃತಿಗಳುಳ್ಳ ವಸ್ತ್ರಗಳನ್ನು ನೇಯುವ ಮಗ್ಗಗಳಲ್ಲಿ ತಾನು ಆಲೋಚಿಸಿದ ಸುಧಾರಣೆಯನ್ನು ಅವರಿಗೆ ತಿಳಿಸಿ ಹೇಳಿದನು. ಅದರಿಂದ ಅವನಿಗಾದ ಫಲವೇನೆಂದರೆ, ಅರಸು ಅವನಿಗೆ "ತನ್ನ ಜೀವದಾವಧಿ ಪಟ್ಟಿ" ಎಂಬ ಕಾಲದಲ್ಲಿ ಅವನಿಗಾಗಿ ಕೆಲವು ಕೋಣೆಗಳನ್ನು, ಕೊಡಿಸಿ, ತಕ್ಕ ಸಂಬಳವನ್ನು ಕೊಡಿಸಿಕೊಟ್ಟನು. ಅಗ್ಗಿ ಆತುರನಾಗಿ ಅಲ್ಲಿಯ ಕಾರ್ಯ

ನೆಯ ಅಂಗಡಿಯಲ್ಲಿ ಅವನಿಗೆ ಬೇಕಾದ ಕೆಲಸ ಮಾಡಿಕೊಳ್ಳುವದಕ್ಕೆ ಅನುಕೂಲವಿತ್ತು.

ಈ ಮೇರೆಗೆ ಆ ಕಾಲೆಯಲ್ಲಿ ವಾಸಿಸುತ್ತಿರಲಾಗಿ ಜಾಕಾರನು ಮಗ್ಗಗಳ ಸುಧಾರಣೆಯ ಕೆಲಸವನ್ನು ಆರಂಭಿಸಿದನು. ಮನುಷ್ಯ ಜಾತಿಯು ಬುದ್ಧಿ ಕೌಶಲ್ಯದ ದೊಡ್ಡ ಭಾಂಡಾರವೇ ಎಂದೆನಿಸಿಕೊಂಡ ಆ ಕಾಲೆಯಲ್ಲಿ ವಿಧ ವಿಧದ ಅತ್ಯುತ್ತಮ ಯಂತ್ರಗಳನು ಬೇಕಾದ ಹಾಗೆ ನೋಡ ಬರುವದಾದ್ದರಿಂದ ಅವನಿಗೆ ದೊಡ್ಡ ಸಾಧನವಿತ್ತು. ಅಲ್ಲಿ ಅವನು ವಿಶೇಷ ಲಕ್ಷ್ಯವಿಟ್ಟು ನೋಡಿದ ಯಂತ್ರಗಳಲ್ಲಿ ಆ ಜೋಹೋಟನೆಂಬ ಸ್ವಶಕ್ತಿ ಗ್ರೇಟಿವಾಹಕನ ಯಂತ್ರವನ್ನು ರಚಿಸಿದ ವಾಕೆನ್ಸನ್ನನೆಂಬ ಗೃಹಸ್ಥ ಯಂತ್ರಜ್ಞನಿಂದ ನಿರ್ಮಿಸಲ್ಪಟ್ಟ ವಿಧ ವಿಧದ ಹೂವುಗಳುಳ್ಳ ರೇಶಿಮೆಯ ವಸ್ತ್ರಗಳನ್ನು ನೇಯುವ ಮಗ್ಗದ ಯಂತ್ರದಿಂದ ಅವನಿಗೆ ಬಹಳವಾಗಿ ಸಹಾಯವಾಯಿತು.

ವಾಕೆನ್ಸನ್ನನು ಅತ್ಯುತ್ತಮ ತರದ ಬೇರೆ ಕಲ್ಪನೆಯುಳ್ಳವನಾಗಿದ್ದನು. ಹೊಸ ವಸ್ತುಗಳನ್ನು ರಚಿಸುವದು ಅವನಿಗೆ ಕೇವಲ ವ್ಯಸನವೇ ಆಗಿತ್ತು; ಆ ವ್ಯಸನಕ್ಕೆ ದೂಷಕರಿಂದಲೂ ಅಡ್ಡಿ ಆಗುತ್ತಿದ್ದಿಲ್ಲ. ಕವಿತ್ವ ಗುಣವು ಮನುಷ್ಯನಲ್ಲಿ ಜನ್ಮತಃ ಇರತಕ್ಕದ್ದೇ ಹೊರತು ಕಲಿತದ್ದಾದು, ಎಂಬ ಹೇಳುವ ಮಾತು ಹೊಸ ಕಲ್ಪನೆಗಳನ್ನು ತೆಗೆಯುವವರಿಗೆ ಸಹ ಸಮನಾಗಿ ಅನ್ವಯಿಸುತ್ತದೆ. ಕವಿಯಂತೆ ಕಲ್ಪಕ ಬುದ್ಧಿಯುಳ್ಳ ಸಂಶೋಧಕರು ವಿದ್ಯಾಭ್ಯಾಸವು ಇಲ್ಲದವರಾಗಿದ್ದರೂ, ಅವನು ಕೇವಲ ತನ್ನ ಮನಸ್ಸಿನ ಪ್ರೇರಣೆಯು ಬಲವಾಗಿಯೇ ಅನೇಕ ಯುಕ್ತಿಗಳನ್ನು ಹೋಚ್ಚ

ಸಿ ಹೊಸ ಯಂತ್ರಗಳನ್ನುಂಟುಮಾಡುತ್ತಾನೆ. ವಾಕೆನ್ಸನ್ನನ ಸ್ಥಿತಿಯು ಹೀಗೆ ಇತ್ತು. ಅವನು ಅತಿ ಪ್ರಯಾಸಪಟ್ಟು ರಚಿಸಿದ ಯಂತ್ರಗಳಿಂದ ಉಪಯೋಗ ನೋಡುವರೆ ಬಹು ಸ್ವಲ್ಪ ಇದ್ದಾಗ್ಯೂ ಅವುಗಳ ರಚನೆಯ ಕೌಶಲ್ಯವು ವರ್ಣನಾತೀತವಾಗಿತ್ತು. ಇವನು ಚಿಕ್ಕವನಾಗಿದ್ದಾಗ ತನ್ನ ತಾಯಿಯ ಸಂಗಡ ಪ್ರತಿ ಆದಿತ್ಯವಾರದಲ್ಲಿ ಸಂಭಾಷಣೆಯು ನಡೆಯುತ್ತಿದ್ದ ಸ್ಥಳಕ್ಕೆ ಹೋಗುತ್ತಿರಲಾಗಿ, ಅಲ್ಲಿ ಒಂದು ಗೋಡೆಯ ಬಿರುಕುಗಳೊಳಗಿಂದ ಅದರ ಆಚೆಯ ಕೋಣೆಯಲ್ಲಿ ಇಟ್ಟಿರುವ ಒಂದು ಘಡಿಯಾರವು ದೃಗ್ಗೆ ನಡೆಯುತ್ತಿರಲು ಲಕ್ಷ್ಯಪೂರ್ವಕವಾಗಿ ನೋಡುತ್ತಿದ್ದನು. ಅದರ ರಚನೆಯನ್ನು ತಿಳಿದುಕೊಳ್ಳುವದಕ್ಕೆ ಅವನು ಯತ್ನಪಟ್ಟನು. ಮುಂದೆ ಎಷ್ಟೋ ತಿಂಗಳುಗಳವರೆಗೆ ಅದರ ಆಲೋಚನೆಯನ್ನು ನಡಿಸಿ, ಕಡೆಯಲ್ಲಿ ಅದರ ಅಂದೋಲಕವು ನಿಜ ಪ್ರಕಾರವಾಗಿ ಅಲುಗಾಡುವದರ ಕಾರಣವನ್ನು ತಿಳಿದುಕೊಂಡನು.

Champu Ramayen and Champu Bharata with Commentaries in Canarese by M. Shantaviraya.

॥ಚಂಪೂರಾಮಾಯಣಸವ್ಯಾಖ್ಯಾನೇ ಬಾಲಕಾಂಡಃ॥

॥ಗದ್ಯ ೧॥

ಅಥಾಸ್ಮಿನ್ನಪಪ್ರತ್ಯೂಹಮಾನವಮಾನಸೇ ಪ್ರತ್ಯರ್ಥಿ ಕ್ರಮಾಕ್ಷ್ಯವೇಧವಿಧಾತುಂಪಾತ್ರಿಭಿಸ್ಸಹಪಾತ್ರ ಯಾಪನ ಲೇದಶರಥೇಂಗುಪಾತ್ರಾಃ ಪ್ರಜ್ವಷ್ಟ ಮಾನುಷಾಣಾಂ ಸೇಂಗವೇ ಶಾಗತಾಪನ್ನಹನಿ, ದಶಾಂತಸ್ಯ ವಿಷಂಡಕಸಾಸೋಂತಸ್ಯ

...ವೃಷ್ಕ್ಯೋಗಸ್ಯ ಪ್ರಸಾದಾತ್ ಭವೇದ್ಭವಿತಾ ಕಾಮದಾನಾ
...ತಿಕಸತ್ಕುಮಾರೋದಿತಂ ಪುರಾವೃತ್ತಮನುಮುಷ್ಯ ಪರತಃ
...ಶಕ್ಷಯಪಾಪನ.

॥ಅನ್ವಯಃ॥

ಅಥ=ಆ ಬಳಿಕ। ಅನಪತ್ಯತಾಪಾಭ್ಯಾಮದಿತಿಃ ಸಹ,
ಸಪತ್ನೀ (ಅನ್+ಅಪತ್ಯ+ತಾ)=ಮಕ್ಕಳಿಲ್ಲದ ಭಾವ
ದಿಂದುಂಟಾದ ತಾಪ=ಸಂತಾಪದಿಂದ, ಕಾಮನಸಿ=ಮನಸ್ಸಿನಲ್ಲಿ
...ಅನ್ವಿತಾ। ಪರತ್ವ=ಪರವಶವಾದವಳು। ಪುತ್ರಾರ್ಥಂ=
...ಮಕ್ಕಳನ್ನು ಪಡೆವ ನಿಮಿತ್ತವಾಗಿ। ಅಶ್ವಮೇಧಂ ...=ಆ
...ಶ್ವಮೇಧಯಜ್ಞವನ್ನು। ವಿಧಾತುಂ= ಮಾಡುವುದಕ್ಕಾಗಿ।
...ಪ್ರತಿಷ್ಠಿಸಲು=ಪ್ರಧಾನರಿಂದ ಕೂಡಿ। ಮಂತ್ರಾನುಮಾನೇ
...=ಆಲೋಚಿಸುತ್ತಿರಲಾಗಿ। ಸುಮಂತ್ರಃ=ಸುಮಂತ್ರನೆಂ
...ವನು। ಪ್ರತ್ಯಕ್ಷಮಾಹ=ಸಂತೋಷಪಟ್ಟವನಾಗಿ ಹೇಳಿದನು
... ಅಂಗದೇಶಕ್ಕೆ ಸಂಗತಿಯನ್ನು ಹೇಳಿ ಪ್ರಶಾಂತವಸ್ಯ, ಅಂಗದೇ
=ಅಂಗದೇಶದ ದೇಶದಲ್ಲಿ, ಸಂಗತ=ಪ್ರಾಪ್ತನಾದ, ಅವಗ್ರ
=ಅನಾವೃಷ್ಟಿಯನ್ನು, ಓಪ್ರ=ಪರಿಹಾರಮಾಡಲು, ಶಾಂ
ತ್ಯ= ಶಾಂತ್ಯರ್ಥವಾಗಿ। ವಿಭಾಂಡಕಸೂನೋಃ = ವಿ
ಭಾಂಡಕನ ಮಗನಾದ। ಮುನೇಃ = ಮುನಿ ಋಷಿಯಾ
ದ। ಋಷ್ಯಶೃಂಗಸ್ಯ=ಋಷ್ಯಶೃಂಗನ। ಪ್ರಸಾದಾತ್=ಅ
ನುಗ್ರಹದಿಂದ। ಅಪತ್ಯಂ=ಶಿಶುವಾಗಿ; ಕಾಮದಾ
...=ಮಕ್ಕಳು। ಪ್ರಜಾಃ=ಪ್ರಜೆಗಳು। ಭವಿತಾ=ಆಗುವದು।
...=... ಸನತ್ಕುಮಾರೋದಿತಂ, ಸನತ್ಕುಮಾರ=
...ಸನತ್ಕುಮಾರನು ಹೇಳಿದ, ಉದಿತಂ=ಬ್ರಹ್ಮ ಸಭೆಯಲ್ಲಿ
...ನಾಡಿದ। ಪುರಾವೃತ್ತಂ=ಪೂರ್ವ ವೃತ್ತಾಂತವನ್ನು। ಆಮು

ಸ್ಯ=ಈ। ದಶರಥಾಯ=ದಶರಥರಾಯನಿಗೆ। ಕಥಯಾಮಾಸ=ತಿಳಿಸಿದನು. (ಹೇಳಿದನು).

॥ಶಾಸ್ತ್ರವಿಷಯ॥

ಸುಮಂತ್ರಃ(ಕ) ಪ್ರಾವೃತ್ತ್ಯ(ಕ್ರಿ) ಕಥಯಾಮಾಸ(ಕ್ರಿ) ಸ, ಕ್,ಪ್ರ. ಕಥಯಾಮಾಸ=(ಕಥ+ಅಯ್+ಆಮ್+ಅಸ್+ಅ) ಕಥ ಎಂಬುದು ೧೦ನೆ ಗಣದಲ್ಲಿ ಸಕರ್ಮಕವಾಗಿರುವ ಅರ್ಥವು ಕರಡ ಧಾತು, ಅಯ್ ಎಂಬುದು ವಿಕರಣ, ಆಮ್ ಎಂಬುದು ಪ್ರತ್ಯಯ, ಅಸ್ ಎಂಬುದುಉಭಯ ಪದದ ೨ನೇ ಗಣದ ಧಾತು, ಅ ಎಂಬುದು ಪರೋಕ್ಷ ಭೂತಕಾಲ, ಲಿಟ್ಲ, ಕಾರ ಪರಸ್ಮೈಪದ, ಪ್ರಥಮಪುರುಷ, ಏಕವಚನ. ಭವಿಷ್ಯತಿ=(ಭೂ+ಅ+ಅವ್+ಇ+ಷ್ಯತಿ) ಭೂ ಎಂಬುದು ೧ ನೇ ಗಣದ ಧಾತು, ಅ ಎಂಬುದು ವಿಕರಣ, ಅವ್ ಎಂಬುದು ಆದೇಶ, ಇ ಎಂಬುದು ಆಗಮ, ಷ್ಯತಿ ಎಂಬುದು — ಲೃಟ್ ಲಕಾರ, ಅನದ್ಯತನಭವಿಷ್ಯತ್ಕಾಲ, ಪ್ರಥಮಪುರುಷ, ಏಕವಚನ.

॥ಕರ್ನಾಟಕ ಭಾಷಾರ್ಥ॥

ಬಳಿಕ ಜನಗೆ ಮಕ್ಕಳಿಲ್ಲೆಂಬುವ ಭಾವದಿಂದ ಸಂತಾಪ ಪಡುವ ಮನಸಿನ ದಶರಥರಾಯನು ಮಕ್ಕಳನ್ನು ಪಡೆಯಬೇಕೆಂಬ ಕಾಂಕ್ಷೆಯುಳ್ಳ ಅಶ್ವಮೇಧಯಜ್ಞವನ್ನು ಮಾಡುವ ಗೋಕ್ಷ್ತ ವ ಮಂತ್ರಿಗಳೊಡನೆ ಆಲೋಚಿಸುತ್ತಿರಲಾಗಿ, ಸುಮಂತ್ರನೆಂಬವನು ಸಾತ್ರೋಪಕ್ರಮದಿಂದ ವಿಶ್ವಸ್ತನಾಗಿ ಅಂಗದೇಶದಲ್ಲಿ ಇದ್ದ ಬರವನ್ನು ಸೂಚಿಸುವ ಏಕಾಂತದ ಮುಖದಿಂದ ಮೊದಲ ಋಷ್ಯಶೃಂಗಮುನಿಯ ಅನುಗ್ರಹಬಲದಿಂದ ಈ ರಾಜನಿಗೆ ಮಕ್ಕಳಾಗುವವು ಎಂದು ಸನತ್ಕುಮಾರನು ಹೇಳಿದ ಭವಿಷ್ಯತ್ಕಥನದ ಪ್ರಾಚೀನ ವೃತ್ತಾಂತವ

ಸ್ತು ಈ ದಶರಥರಾಯನಿಗೆ ನಿವೇದಿಸಿದನು.

॥ಸಂಸ್ಕೃತ ಭಾಷಾರ್ಥ॥

ಅನಂತರಂ, ಅಪುತ್ರಭಾವೇನ ಸಂತಾಪಿತ ಮನಸಃ ದಶರಥಃ ಪುತ್ರಕಾಮ್ಯಯಾ ಅಶ್ವಮೇಧಯಜ್ಞಂ ಕರ್ತುಂ ಸುಮಂತ್ರೇಣ ಸಹ ಆಲೋಚಿತ ಸಮಯೇ ಸುಮಂತ್ರಃ ಸಾಕೋಪ ಹೃದಯೋಗ ಅಂಗದೇಶೇಷ್ವನಾವೃಷ್ಟಿಕಾಲಂ ದೂರೀಕೃತವಿಭಾಂಡಕಮುನಿಸುತಸ್ಯ ಋಷ್ಯಶೃಂಗಮುನಿಸ್ಯ ಅನುಗ್ರಹಾತ್ ಕುಮಾರಾಣಾಂ ಪ್ರಭವಃ ಭವಿಷ್ಯತಿ ಇತಿ ಸನತ್ಕುಮಾರೇಣ ಪ್ರೋಕ್ತಸಭಾಯಾಂ ಕಥಿತವೃತ್ತಾಂತಂ ದಶರಥಾಯ ನಿವೇದಯಾಮಾಸ.

ಶಾಂತವೀರ ರಾಜದೇವ ಕಿತ್ತೂರ ಪ್ರೇಸಿಂಗಸಾರೀಪ.

NOTICES.

ನೋಟೀಸು.

ಯಾವತ್ತು ಪುಸ್ತಕ ಜನರಿಗೆ ತಿಳಿಯ ಪಡಿಸುವದೇನಂದರೆ— ಪೈರೆಯನ್ನು ಕೆಡಿಸುವವನು ನಿಮ್ಮ ಹೊಲಗಳಿಗೆ ಬರುವದಕ್ಕೆ ನೋಡಲು ಪೈರು ಕೆಡಿಸಿಕೊಂಡವನು ಕೆಡಿಸಿಕೊಳ್ಳುವವನು ಮತ್ತು ಪೈರಿ ಬಂದು ಹೋದವನು ಇಷ್ಟು ದ್ದು ಹೃಡಾಗದು ಹಾಳಾಗಿ ಇವು ದಂಡ ಬಿಂಪು ಯಾದಿಯನ್ನು ತಯಾರ ಮಾಡಿ ಮ್ಯಾಜಿಸ್ಟ್ರೇಟರಿಗೆ ಕೊಡಬೇಕು. ಪೈರಿ ಕೆಡಿಸುವವನು ನಿಮ್ಮ ಹೊಲಗಳ ಬರುವದಕ್ಕೆ ನೋಡಲು ಅಂಥಾ ಜನರ ಬರುವದೆಂದು ನಿಮಗೆ ತಿಳಿಸುವದು. ಆದರು ಬಂದ ಕಾಲಕ್ಕೆ ಪೈರಿ ಕೆಡಿಸುವ ಕೆಲಸಕ್ಕೆ ನಿಂವಿತ್ತಿವಾದಷ್ಟು ಸಹಾಯವನ್ನು ನೀವು ಮಾಡ

ಬೇಕು. ಮತ್ತು ಹಳ್ಳಿಯ ಜನರಿಗೆ, ಅವರ ಮಕ್ಕಳ ವ್ಯ
ಲಿಯನ್ನು ಕಲಿಸುವದರಿಂದ ಉಂಟಾಗುವಂಥ ನಿಶ್ಚಯವಾದ ಪ್ರ
ಪ್ತಾ; ಮುಖ್ಯವುಳ್ಳವುಗಳೂ ಆದ ಲಾಭಗಳನ್ನು ತಿಳಿಯ
ಪಡಿಸಿ, ವಿದ್ಯೆಯು ಹೆಚ್ಚುವದಕ್ಕೆ ಯಥಾಶಕ್ತಿ ಸಹಾಯ
ಮಾಡುವದು ಅತ್ಯವಶ್ಯಕವಾಗಿ ನಿಮ್ಮ ಕರ್ತವ್ಯ ಕರ್ಮವಾಗಿ
ರುತ್ತದೆ. ಈ ಅಪ್ಪಣೆಯಂತೆ ಯಾವತ್ತು ಮಾಸ್ತರರು ನ
ಡೆಯುತ್ತಾರೋ ಇಲ್ಲವೋ ಎಂಬುವದನ್ನು ನೋಡುವದ
ಕ್ಕೂ, ಇವರಲ್ಲಿ ಯೋಗ್ಯರಾದ ಮಾರ್ಗಸ್ಥರ ಉಪಾಧ್ಯಾಯ
ಯರು ಕಂಡು ಬಂದರೆ ತಮಗೆ ಕೂಡಲೇ ತಿಳಿಸುವದಕ್ಕೂ,
ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದ್ದೂರರ
ರು, ಡೆ. ಎ. ಇನಸ್ಪೆಕ್ಟರವರಿಗೆ ಹುಕುಮು ಕೊಟ್ಟಿದ
ದ್ದಾರೆ. ಮತ್ತು ಇಂಥಾ ಮಾರ್ಗಸ್ಥರು ಬಹಳ ಪ್ರಖ
ವಾಗಿ ಶಿಕ್ಷಿಸಲ್ಪಡುವರು.

ಮುಕ್ಕಾಮ ಕಿತ್ತೂರ
ತಾ. ೧೮ ಫೆಬ್ರುವಾರಿ
ಸನ್ ೧೮೭೪ನೇ ಇ||

(Signed) J. F. Fleet,
ಎ. ಇನಸ್ಪೆಕ್ಟರ ದಕ್ಷಿಣಭಾಗ

ದಕ್ಷಿಣ ಭಾಗದೊಳಗಿನ ಯಾವತ್ತು ಸೆಕಂಡಗ್ರೇ
ಆಂಗ್ಲೋವರ್ನ್ಯಾಕ್ಯುಲರ ಮತ್ತು ವರ್ನ್ಯಾಕ್ಯುಲರ ಶಾ
ಗಳ ಹೆಡ್‌ಮಾಸ್ತರರಿಗೆ ಕೊಟ್ಟ ಹುಕುಮು ಮಾಸ್ತರ ಜನರ
ಹಾಜರಿ ಶಾಲೆಗಳ ರಜಿಸ್ತರವನ್ನು ಪ್ರತಿದಿವಸದಲ್ಲಿ ಬಹಳ ಹೆ
ತ್ತಾದ ಬಳಿಕ ಕಾಂಬುವ ಪ್ರಚಾರವು ಸಾಧಾರಣವಾಗಿ ನ
ಯುತ್ತದೆಂದು ಕಂಡು ಬರುತ್ತದೆ. ಇದು ಯೋಗ್ಯವಲ್ಲ
ಇನ್ನು ಮುಂದೆ ಯಾವತ್ತು ಹೆಡ್‌ಮಾಸ್ತರರು ತಮ್ಮ

ಕಗಳನ್ನು ತರಿಸಿ ಬಳಿಕ ಪ್ರಾಂತ ತಾಲೂಕ ಪೋಲೀಸಿನಿಯು
ರುದಿಂದ ಹಾಜರಿಯನ್ನು ತೆಗೆದು ತಕ್ಷಣ ರಜಿಸ್ತ
ಪನ್ನು ಕಳುಹಬೇಕು; ಆ ಕಾಲಕ್ಕೆ ಹಾಜರು ಇಲ್ಲದಂಥಾ
ರುಗಳೆಲ್ಲಾ ಗೈರಹಾಜರಿಯಲ್ಲಿ ದಾಖಲು ಆಗತಕ್ಕವರು.
ಕ ಠಾಣಾದಿ.ನಂತೆ ಯಾವತ್ತು ವರ್ತನೆಯವರು ನಡೆಯುತ್ತಾ
ಗೋ ಇಲ್ಲವೋ ನೋಡಬೇಕೆಂದ್ದಲ್ಲ, ಅವರಲ್ಲಿ ಯಾರ
ರು ದುರ್ವರ್ತನೆಯು ಕಂಡುಬಂದರೆ ಅವರ ಬಗ್ಗೆ ಶಿಕ್ಷೆ ಆಗ
ಬೇಕೆಂಬವಾಗಿ ತನ್ನ ಕಡೆಗೆ ರಿಪೋರ್ಟ ಮಾಡಬೇಕೆಂತ
ಣ ದಕ್ಷಿಣ ಭಾಗದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾ
ಹೇಬ ಬಹಾದ್ದೂರವರು,ಡಿ. ಎಂ. ಅಸಿಸ್ಟೆಂಟರವರಿಗೆ ಹು
ಕುಮು ಕೊಟ್ಟಿರುತ್ತಾರೆ.

ಧಾರವಾಡ	(Signed) J. F. Fleet
ತಾ|| ೫ ನವಂಬರ	ಡಿ. ಅಸಿಸ್ಟೆಂಟ ದಕ್ಷಿಣ ಭಾಗ.
ಸನ ೧೮೭೯ ಇ||	

ಕಲಾಪನ ಜಪ್ತ (ಕೈಗಳಿಗೆ) ಯಾವನ್ನು ನಡ್ಡಿಲ ವಸ್ತು
ಗೆ ಕೆಳಗಾಪಿಸುವದೇನಂದರೆ— ಸಾಲಿ ಗ್ರಾಮದ ಖೀ
ಷ ಪರ ಕೋಗಳಿಗೆ ಬಜ್ಜ್ಯಾನಿಗೆ ಜಮಾ ಮಾಡುವದಕ್ಕೆ ಕೆ
ಕ್ಯಾಲೆಕ್ಟರ ಹುಕುಂ ಕೊಟ್ಟದ್ದು ಇನ್ನು ಕೆಲವು ವಸ್ತುಗಳ
ಪ್ರಕಾರ ವಹಿವಾಟ ಮಾಡುವದಿಲ್ಲಾ ಹೀಗೆ ತಿಳಿಯುತ್ತದೆ.
ದಸಿ ಸಾಹೇಬರ ತಸ್ಲಿ ದಬಗ್ಗೆ ಅವರಿಗೆ ಯೋಗ್ಯ ಶಿಕ್ಷೆ ಮಾ
ಡ್ಡಿ ದನ್ನು ಶರೀರ ಅನುಮಾಡತಕ್ಕ ಹುಕುಂ ಕೊಡುತ್ತಾ
ಕೊಟ್ಟಿರುತ್ತದೆ— ಇನ್ನು ಮೇಲೆ ಅದೇ ಪ್ರಕಾರ ಗ್ರ
ಕವಾಟ ಮಾಡುವದರಿಗೆ ಯೋಗ್ಯ ಶಿಕ್ಷೆ ಕಾನೂನ ಬಗ್ಗೆ

ಡೆ. ಎ. ಇನಸ್ಪೆಕ್ಟರ ಸಾಹೇಬ ಬಹಾದ್ದೂರವರ ಕಛೇರಿಗೆ

ಭಾರತ ಪಾಠಶಾಲೆಗಳು. ಕೀಳುಜಾತಿಯವರು ಶಾ. ೫ ಫೆಬ್ರು

ವಾರಿ ೧೮೭೪ನೇ ಮುಕ್ಕಾಮು ಕೆಲೂರ.

Ramchandra A. Sawanoor.

ಡೆ. ಎ. ಇ. ಜಿಲ್ಲಾ ಕಲಾದಗಿ.

ಪತ್ರವ್ಯವಹಾರವು.

ಈ ಭಾಷೆಯ ಪ್ರಾಬಲ್ಯಕ್ಕೆ ಮೂಲ ಕಾರಣಗಳಾದ ಮುಖ್ಯ ಸಂಗತಿಗಳು.

೧ ಕರ್ನಾಟಕ ಮುಖ್ಯ ಭಾಗದ ಡಿಸ್ಟ್ರಿಕ್ಟ ಎಜ್ಯುಕೇಶನಲ ಇನಸ್ಪೆಕ್ಟರರು ಸರ್ಕಾರ ಮನಸ್ಸಿನಿಂದಲೂ, ಪ್ರಾಂತ್ಯದಿಂದಲೂ ಅವನ್ನು ಎತ್ತಲಾರಂಭಿಸಿದ್ದಾರೆ; ಹಾಗು ಈ ದೇಶಾಭಿಮಾನಿಗಳಾಗಿದ್ದಾರೆ.

೨ ಕನ್ನಡ ಟ್ರಾನ್ಸ್ಲೇಟರರ ಸ್ಥಳವು ಹೊಂದಲು ಇದ್ದಿಲ್ಲವಾದಕಾರಣ ಈ ಭಾಷೆಯ ಪುಸ್ತಕಗಳು ಬೇಕಾದರೆ ಸಿಕ್ಕುತ್ತಿದ್ದಿಲ್ಲ. ಈಗ ಅದು ನೇಮಕವಾದದರಿಂದ ಅಂಥಾ ತ್ರೊಂದರೆಯು ಪರಿಯಿತು. ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಉಪಯೋಗವಾಗಿ ಬಾವ ಪುಸ್ತಕಗಳು ಬೇಕಾದವೊ ಅವನು ಕೇಳುವನ್ನು ಅನಾವಶ್ಯಕವಾಗಿದೆ. ಹಾಗೆ ಆ ಕೆಲ ಮುಖ್ಯವಾಗಿರುವ "ರಾವಸಾಹೇಬ ವೆಂಕಟರಂಗೋ ಕಟ್ಟಿ ಇವರು ಈ ದೇಶದ ಅಭಿಮಾನಿಗಳೂ, ಈ ಭಾಷೆಯಲ್ಲೂ, ಅನ್ಯ ಭಾಷೆಗಳಲ್ಲಿಯೂ ಚನ್ನಾಗಿ ಬಲ್ಲವರೂ, ವಿಚಾರಿಗಳೂ ಆಗಿದ್ದಾರೆ. ಹಾಗೂ ಇವರ ಉಪಾಧ್ಯಾಯರಾದ ಗಂಗಾಧರ ಮಡಿವಾಳೇಶ್ವರ ಇವರು ಪತ್ರಾನುಸಾರ

ನ್ನಾಡಿನಲ್ಲಿ ಸಂಪೂರ್ಣ ಜ್ಞಾನಿಗಳೂ, ಈ ದೇಶ ಭಾಷಾ ಸುಧಾರಣೆಗೆ ಮೆಚ್ಚಿಕೊಂಡವರೂ, ಅದರಂತೆ ಯತ್ನಯಿಸುವರೂ. ಕನ್ನಡ ೩. ೪. ೫. ೬. ನೇ ಪುಸ್ತಕಗಳೂ, ಇನ್ನೂ ಕೆಲವು ಪುಸ್ತಕಗಳೂ ಈ ಉಭಯತರಿಂದಲೇ ಭಾಷಾಂತರಿಸಲ್ಪಟ್ಟು, ವಿದ್ಯಾರ್ಥಿಗಳಿಗೆ ಅನುಕೂಲವಾಗಿದ್ದಾವೆ. ಇನ್ನು ಮುಂದಾದರೂ ಇವರ ಯೋಗದಿಂದಲೇ ನಾವು ಮಾತಾಡುವವಿಷಯವು ಚನ್ನಾಗಿ ಸ್ಥಾಪಿಸಲ್ಪಡತಕ್ಕದ್ದಾಗಿದೆ.

೩ ಈ ನಾಡಿನಲ್ಲಿ ಕನ್ನಡ ಮೊಳೆಗಳು ಇದ್ದಿಲ್ಲವಾದ್ದರಿಂದ ನಾನಾತರದ ಪುಸ್ತಕಗಳನ್ನು ಸೆಟ್ಟಿಗೆ ಅಚ್ಚಾಹಾಕುವ ಕೆಲಸವು ಸಾಗುತ್ತಿದ್ದಿಲ್ಲ. ಅನ್ಯ ದೇಶಸ್ಥರನ್ನು ಕೇಳಿ, ಅವರು ಹೇಳಿದ ಮೇರೆಗೆ ನಡಿಯಬೇಕಾಗುತ್ತಿತ್ತು. ಆದರೂ ದೇಶ ಪರತ್ವದಿಂದ ಪಕ್ಷಿಸಿತ ಕೆಲಸವು ನಡೆಯುತ್ತಿದ್ದಿಲ್ಲ. ಈ ತೊಂದರೆಯು ಬೆಳಗಾಂವಿಯಲ್ಲಿ ಮುದ್ರಾಕ್ಷರ ಶಾಲೆಯು ಇಡಲ್ಪಟ್ಟದ್ದರಿಂದ ಪರಿಹಾರವಾಯಿತು. ಈ ಭಾಷಾಭಿವೃದ್ಧಿಗೆ ಇದೊಂದು ದೊಡ್ಡ ಸಹಾಯವೇ. ಇದರಲ್ಲಿ ಸಂಶಯವಿಲ್ಲ. ದೇವರ ಪ್ರಸಾದದಿಂದ ಇದರ ಕರ್ತೃಗಳಿಗೆ ಲಾಭವಾಗಿ, ನಿರ್ವಿಘ್ನದಿಂದ ಈ ಕಾರಖಾನೆಯು ಬೆಳದು, ಉತ್ತಮ ಸ್ಥಿತಿಯನ್ನು ಹೊಂದಬೇಕು. ಹೀಗೆ ಅರ್ಥಿ ಅದೆ.

೪ ಮುಲ್ಕೀ ಪರೀಕ್ಷೆಯು ಮೂಲಕಶಿ ಶಾಲಾಖಾತೆಯಧಿಕಾರಿಗಳ ಕಡೆಗೆ ಬಂದದೊಂದು—ಈ ಪರೀಕ್ಷೆಗೆ ರಾಜಶೇಖರ, ಜಯಮಿನಿ ಮುಂತಾದ ಕಾವ್ಯಗಳ ಕವಿತಾಜ್ಞಾನವೂ, ಕನ್ನಡ ವ್ಯಾಕರಣ ಜ್ಞಾನವೂ, ಶುದ್ಧ ಲಿಪಿಯೂ, ಬೇಕಷ್ಟೆ! ಇವನ್ನೆಲ್ಲಾ ಅನಿವಾರ್ಯಪಕ್ಷಕ್ಕಾದರೂ ನಿದಾನವಾದ ಅ

ಭ್ಯಾಸ ಮಾಡದೇ, ಮುಂದೆ ಮಾರ್ಗವೇ ಇಲ್ಲ. ಆದಕಾ
ರಣ ಆ ಉಪೋದವಾರರು ಕಾಲಾಂತರದಲ್ಲಿ ಶುದ್ಧ ಲಿಪಿಯ
ನ್ನು ಬರೆಯುವ ಕಾರಕೂನರಾಗಿ, ಕಚೇರಿಯ ಕಾಗದ ಪ
ತ್ರಗಳು ಶುದ್ಧಿಯನ್ನು ಹೊಂದ್ಯಾವೆಂಬ ದೀರ್ಘಾಲೋಚನೆ
ಯು ಮನಸ್ಸಿನಲ್ಲ್ಯಾದರೂ ಬರುತ್ತದಲ್ಲ! ಇಷ್ಟೇ ಸಾಕು
ಈ ಆಲೋಚನೆಯು ಈ ಖಾತೆಗೆ ಈ ಪರೀಕ್ಷೆಯು ಹೊ
ದದಿದ್ದ್ಯ ಬರಬಹುದಾಗಿತ್ತೋ? ಇಲ್ಲ. ಮತ್ತು ಅಜ್ಞಾ
ಧ್ವಂಸಕವಾದ ವಿದ್ಯಾಖಾತೆಯ ಜನರನ್ನು, ಕವಿತಾ ವ್ಯಾಕ
ರಣಾದಿಗಳನ್ನು, ಕರ್ನಾಟಕ ಭಾಷೆಯನ್ನು ಅಟ್ಟಹಾಸದಿಂ
ದ ನಗುವ ಅಜ್ಞಾನಮೂಢ ಗರ್ವಿತರು ಇಲ್ಲಿ ಬಂದು, ಶರಣು
ಹೊಡಿಯಬೇಕಾಯಿತಲ್ಲ? ಹೀಗೆ ಬರೆಯುವದರಿಂದ ನಾವು
ಅವರ ದ್ವೇಷಭಾವವನ್ನು ಹಿಡಿದೇವೆಂದು ಯಾರೂ ತಿಳಿಯಲಾ
ಗದು. ಸ್ವಲ್ಪವಾದರೂ ಅವರಿಗೆ ಸ್ವದೇಶ ಭಾಷೆಗಳ ಮೇ
ಲೆ ಮಮಕಾರವು ಹುಟ್ಟಬೇಕೆಂಬ ತಾತ್ಪರ್ಯವಲ್ಲದೆ ಮ
ನಸಿನಲ್ಲಿ ಮತ್ತೊಂದಿಲ್ಲ.

ಈ ಕನ್ನಡ ಟ್ರೇನಿಂಗಕಾಲೇಜವುಂಟು. ಇದು ಸರ್ಕಾ
ಗದಿಂದಲೂ ಕಂನಡಂನು ಖ್ಯಾತಿಪಡಿಸುವದಕ್ಕೂ, ಜನರಿ
(ವಿಶೇಷವಾಗಿ ತಯಾರಾಗುವ ಮಾಸ್ತರರಿಗೆ) ಆ ಜ್ಞಾನವನ್ನು
ಉಪದೇಶಿಸುವದಕ್ಕೂ ಮುಖ್ಯವಾಗಿ ಸ್ಥಾಪಿಸಲ್ಪಟ್ಟಿರುತ್ತ
ದೆ. ಕಾಲಾಂತರದಲ್ಲಿ ಬಂದು ಇದು ಕರ್ನಾಟಕ ಭಾಷೆ
ಯ ಮೂಲಸ್ಥಳವಾಗತಕ್ಕದ್ದಾಗಿರುತ್ತದೆ. ಇದರಲ್ಲಿ ಈ
ಗಿರುವ ಕನ್ನಡ ಶಿಕ್ಷಕರಾದ ರಾ. ಶಾಂತವೀರಯ್ಯನವರು ತಿ
ದ್ದಲ್ಪಡುವ ಮಾಸ್ತರ ಜನರ ಮೇಲೆ ಕೃಪಾದೃಷ್ಟಿಯಿಂದ ಕ
ನ್ನಡ ಭಾಷೆಯ ಮೂಲಗಳ ಯಥಾರ್ಥ ಜ್ಞಾನವನ್ನು ಹೇ

ಸಮರ್ಥರಾಗಿದ್ದಾರೆ. ಇವರಿಗೆ ಅಂಥಾ ಸೋಸನ್ನು ದೇವರು ಕೊಡಲಿ!

೧ ರಾಜಶೇಖರವೆಂಬ ಹಳೆಗನ್ನಡ ಕಾವ್ಯದ ಟೀಕಾಕಾರರಿಗೆ ಇನಾಮು ದೊರೆಯುತ್ತದೆಂಬದೊಂದು. ಈ ಕಾವ್ಯವನ್ನು ಯಥಾಸ್ಥಿತಿಯಾಗಿ, ತಿಳಿದುಕೊಂಡವನು ಕರ್ನಾಟಕ ಭಾಷೆಯಲ್ಲಿ ಬಲ್ಲಿದನಾದವನೆಂದು, ಪಂಡಿತರ ಮತವುಂಟು. ಇದು ನನಗೆ ನಿಜವೆಂದು ತೋರುತ್ತದೆ. ಇನಾಮಿನ ಆಶೆಯಿಂದ ಇದನ್ನು ಟೀಕಿಸುವದಕ್ಕೆ ಬಹುಜನರು ಉದ್ಯೋಗಿಸಿದ್ದಾರೆ. ಆದರೆ ಅವರು ಈ ಭಾಷೆಯಲ್ಲಿ ಚನ್ನಾಗಿ, ಪರಿಶ್ರಮವನ್ನು ಮಾಡದೇ, ಸಮರ್ಥರಾಗಲಾರರು. ಈ ಕಾರಣದಿಂದ ತಮ್ಮಿಷ್ಟಕ್ಕೆ ತಾವೇ ಆ ಜ್ಞಾನವನ್ನು ಸಂಪಾದಿಸಿಕೊಂಡಾರೆಂಬ ನಂಬಿಗೆಯು ಹುಟ್ಟುತ್ತದೆ. ಈಗ ಈ ಗ್ರಂಥದ ೧|೨ ಭಾಗಗಳು ಟೀಕಿಸಲ್ಪಟ್ಟವೆಂದು ತೋರುತ್ತದೆ. ಇವರೆ ಎರಡು ಮಾತ್ರ ಪ್ರಸಿದ್ಧವಾಗಿವೆ; ಒಬ್ಬರಿಗೆ ಆದರ ಇನಾಮು ಸಿಕ್ಕದೆ. ಇದು ಸಂಪೂರ್ಣವಾಗಿ ಟೀಕಿಸಿ, ಪ್ರಸಿದ್ಧಿಸಲ್ಪಡುವಷ್ಟು ದಿವಸ (ಅಂದರೆ ೧೦|೧೫ ವರ್ಷ) ಗಳಲ್ಲಿ ಈ ಭಾಷೆಯು ಉತ್ತರ ಕರ್ನಾಟಕದಲ್ಲಿ ಚನ್ನಾಗಿ ಹಬ್ಬುವವೆಂದು, ನನ್ನ ಬುದ್ಧಿಗಂತೂ ತೋರುತ್ತದೆ.

೨ ವರ್ಥಪ್ರಾಯಿಜ್ ಎಂಬ ಇನಾಮು ಇದು ಕನ್ನಡ ಭಾಷೆಯಲ್ಲಿ ಪಂಡಿತನಾದವನಿಗೆ ದೊರೆಯುವದು. ಪ್ರತಿ ವರ್ಷದಲ್ಲಿ ಅಂಥಾ ಜನರಿಗೆ ಆಮಂತ್ರಣವನ್ನು ಕೊಟ್ಟು, ಬಂದವರ ಪರೀಕ್ಷೆಯನ್ನು ತಕ್ಕೊಂಡು, ಉತ್ತಮ ಸ್ಥಾನಾಪನ್ನನಾದವನಿಗೇ ಕೊಡಬೇಕೆಂದು ಮೆ. ರಸಲ್ದೊರೆಗಳು ಸ್ವಂತದಾದ ಖರ್ಚಿನಿಂದಲೂ, ಉದಾರ ಮನದಿಂದಲೂ ಪ್ರತಿ ವ

ಷ್ಟೇಕ್ಕೆ ಸಾವಿರತ್ತು ರೂಪಾಯಿಗಳನ್ನು ಕೊಡುತ್ತಾರ ಇದರ ಅಭಿಲಾಷೆಯಿಂದ ಈಗ ಬಂದ ಜನರು ಹಳೆಗನ್ನಡ ವ್ಯಾಕರಣ ಕವಿತಾ ಮುಂತಾದವುಗಳನ್ನು ತಿಳಿದುಕೊಳ್ಳಲಿಕ್ಕೆ ಮನಃಪೂರ್ವಕವಾಗಿ ಯತ್ನವನ್ನು ನಡಿಸಿದ್ದಾರೆ. ಇದರಿಂದ ಕನ್ನಡ ಭಾಷೆಯು ಚೆನ್ನಾಗಿ ಪ್ರಸಿದ್ಧಿಪಡಿಸಲ್ಪಡುವದೆಂದು ತೋರುತ್ತದೆ. ಸನ ೧೮೭೭ ಇಸ್ವಿಯ ನವಂಬರ ತಿಂಗಳ ೬-೭ ನೇ ತಾರೀಖುಗಳಲ್ಲಿ ಮೊದಲು ಪರೀಕ್ಷೆಯಾಗಿ ಇನಾಮು ಕೊಡಲ್ಪಟ್ಟಿತು. ಆದರೆ ಈ ಸಾರಿಯು (೧೮೭೮) ಪರೀಕ್ಷೆಯ ಇನಾಮು ದಾರಿಗೂ ಸಿಗಲಿಲ್ಲ; ಪರೀಕ್ಷೆಕ್ಕೆ ಬಂದ ಮಂದಿ ಕೂಡಲಿಲ್ಲವೆಂದು ಕೇಳಿ ನನಗೆ ಬಹು ಅಸಮಾಧಾನವಾಗುತ್ತದೆ. ಮೊದಲು ಸಾರಿ ಪರೀಕ್ಷಕರ ಪ್ರಶ್ನದ ಮೇರೆಗೆ ಈ ಪರೀಕ್ಷೆಯಲ್ಲಿ ಇವರ ಕರ್ತೃಗಳಾದ ರಸೆಲ್ ದೊರೆಗಳನ್ನು ಹೊಗಳುವ ಕೆಲವು ಪದ್ಯಗಳು ರಚಿಸಲ್ಪಟ್ಟವು. ಅವು ಇಲ್ಲಿ ಬರೆಯಲಿಕ್ಕೆ ತಕ್ಕವುಗಳೆಂದು ಕೆಳಗೆ ಬರೆಯಲ್ಪಟ್ಟವೆ.

॥ಮಾಲಿನೀವೃತ್ತಂ॥

ಬೆಳೆಯಲಿನುಸುಳ್ದಿತ್ತು ಕನ್ನಡೀರಾಷ್ಟ್ರದಲ್ಲಂ।
ದಳಸಿಯತನದಿಂದಂ ನಮ್ಮಮಾತರ್ವಿದಗ್ಧ॥
ಕೆಳಕೆರಣೆಗಳಪ್ಪಂ ಶ್ರೀರಸೆಲ್ ದೇಶಮಾತ್ರಂ।
ಕೆಳೆದರಮಳಕೀರ್ತಿಕ್ರೀಯಮಂಪೋಮ್ಮೆಯಿಂದಂ॥೧॥

ಜಾಹೀರಾತು.

ಬರಸಾಲ ಜುಲಯಿ ತಿಂಗಳಲ್ಲಿ ಬರಪ್ರೊಂದು ಜಿಲ್ಹೆಯಲ್ಲಿ ಮುಲ್ಕೀ, ಪೋಲೀಸ ವಗೈರೆ ಖಾತೆಗಳಲ್ಲಿ ನೌಕರೀ

ದ ಜನರ ರಿಪೋರ್ಟ ಮೆಂಟಲ್ ಪರೀಕ್ಷಾ ಆಗುತ್ತಾ ಇದ್ದ ಸಂಬಂಧದ ಕಾಯಿದೆಗಳೂ, ರೂಲ್ಸಗಳೂ ಏಕತ್ರವಾಗಿ ವ ಪುಸ್ತಕವು ಇಲ್ಲದೆ ಇರುವದರಿಂದ ಉಮೇದವಾರ ನರಿಗೆ ಬಹಳ ತೊಂದರೆಯುಂಟಾಗುತ್ತದೆ. ಇದರದೆ ಯಿಂದ ಎಲ್ಲ ವಿಷಯಗಳನ್ನು ಒಂದೇ ಕಡೆಗೆ ಕೂಡಿಸಿ, ಮಹಾರಾಷ್ಟ್ರ ಭಾಷೆಯಲ್ಲಿ ನಾನು ಒಂದು ಪುಸ್ತಕವನ್ನು ಹಿ ಧಾರವಾಡದಲ್ಲಿ ಛಾಪಿಸಿದ್ದೇನೆ ಆದರೆ ಇದರ ಕ್ರಯವು ೨॥ ಎರಡುವರೆ ರೂಪಾಯಿ; ಟಪಾಲ ಹಾಸಲು ೨ ಆಣೆ, ಬೀಳುವದು. ಈ ಪುಸ್ತಕವನ್ನು ಕೊಂಡಕೊಳ್ಳ ಪೇಕ್ಷೆಯುಳ್ಳವರು ಮೇಲೆ ಕಾಣಿಸಿದ ಕಿಮ್ಮತ್ತು ಅಥವಾ ಅದರ ಬದಲು ಟಿಕೀಟು, ಅರ್ಧಆಣೇದವು, ಮತ್ತು ತ್ತಾರವಳ ಸಹಿತ, ನಮ್ಮ ಮಿತ್ರನಾದ ರಾ. ರಾ. ಗೋಪಾಳಶ್ರೀನಿವಾಸ ಕಾರಕೂನ ಕನ್ನಡ ತ್ರಾನ್ಸಲೇಟರ ಕಚೇರಿ ಧಾರವಾಡ ಇವರ ಕಡೆಗೆ ಕಳುಹಿಸಿದರೆ ಪುಸ್ತಕವು ಕಳಿಸಲಾಗುವದು.

ಧಾರವಾಡ ತಾ. ೯ ಮಾರ್ಚ ಸ. ೧೮೭೪ ಇಸವಿ.

ರಂಗೋ ರಾಮಚಂದ್ರ ಶಿರಹಟ್ಟಿ
ಕರ ಕಾರಕೂನ ತಾಲೂಕ ನ ಜಿಲ್ಲಾ ಧಾರವಾಡ

ಮಾರ್ಕಂಡೇ ರಾಮಾಯಣ.

೧೨ನೇ ಸಂಧಿ

೨೦ ನೇ ಶ್ಲೋಕ.

ಸುರುಚಿರ ಶ್ರೀಧರಂ ಶ್ರೀಧರಂ ಶ್ರೀಧರಂ।
ವರ ಚಿತ್ರ ಚಿತ್ರ ಚಿತ್ರಂ ಚಿತ್ರ ಸಂಯುತಂ।

ಭರಿತ ಗೋಪಾಲ ಗೋಪಾಲ ಗೋಪಾಲನಂಕೋಲ ಕೋ
ಲಂಗಳಿಂದ।
ಶರವೃಕ್ಷ ಶರವೃಕ್ಷ ಶರವೃಕ್ಷ ಸಂಗಿತಂ।
ಕರಮೊಸೆವ ಪುಷ್ಕರಂ ಪುಷ್ಕರಂ ಪುಷ್ಕರಂ।
ಸುರರಾಜ ಸುರರಾಜ ಸುರರಾಜನೆನಿಸಿಯುಂ ವಿಂಧ್ಯಾದ್ರಿ
ಕಣ್ಗೆಸೆದುದು॥೨೦॥

ಅರ್ಥ—ಸುರಚಿರ ಶ್ರೀಧರಂ=ಉತ್ತಮವಾದ, ಮನೋಹರವಾದ, ಆದ ದೇವದಾರುಗಳಿಂದಲೂ। ಶ್ರೀಧರಂ =ಶ್ರೀಗಂಧಗಳಿಂದಲೂ। (ಲವಂಗದ ಬಳ್ಳಿಗಳಿಂದಲೂ)। ಶ್ರೀಧರಂ =ಚಂದನದ ಮರಗಳಿಂದಲೂ।ವರಚಿತ್ರ=ಶ್ರೇಷ್ಠವಾದ, ಚಿತ್ರಮೂಲವೆಂಬ ಬಳ್ಳಿಗಳಿಂದಲೂ। ಚಿತ್ರಚಿತ್ರಂ= ಚಮತ್ಕಾರವಾದ ಹೂವುಗಳಿಂದಲೂ। ಚಿತ್ರಸಂಯುತಂ=ಚಿತ್ರವೆಂಬ ನದಿಯ ಪ್ರವಾಹದಿಂದಲೂ। ಭರಿತಗೋಪಾಲ=ತುಂಬಿಕೊಂಡಿದ್ದ ಆಕಳುಗಳನ್ನು ಕಾಯುವ ಹುಡುಗರುಗಳಿಂದಲೂ।ಗೋಪಾಲಗೌಳಿಗರಿಂದಲೂ। ಗೋಪಾಲನಂ=ಕೃಷ್ಣನಮೂರ್ತಿಯಿಂದಲೂ। ಕೋಲ=ಬೋರಿಗಿಡಗಳಿಂದಲೂ।ಕೋಲಂಗಳಿಂದ ಸಂಗ ಹಂದಿಗಳಿಂದಲೂ। ಶರವೃಕ್ಷ=ಬಿದುರುಗಳಿಂದಲೂ ಶರವೃಕ್ಷ=ಬೆತ್ತಗಳಿಂದಲೂ। ಶರವೃಕ್ಷ=ದವಿಗೆಗಳಿಂದಲೂ। ಸಂಗಿತಂ=ಧಭಧಬೆಗಳಿಂದಲೂ। ಕರಮೊಸೆವಪುಷ್ಕರಂ=ಚೆನ್ನಾಗಿ ಒಪ್ಪುವಪಕ್ಷಿಗಳಿಂದಲೂ। ಪುಷ್ಕರಂ=ಕೆಂಪು ಕಮಲಗಳಿಂದಲೂ। ಪುಷ್ಕರಂ=ಸರೋವರಗಳಿಂದಲೂ। ಸುರರಾಜ=ದೇವತಾಶ್ರೇಷ್ಠರುಗಳಿಂದಲೂ। ಅಸುರರಾಜ=ದೈತ್ಯಶ್ರೇಷ್ಠರುಗಳಿಂದಲೂ। (ಸಮುರ್ಕಂದವೆಂಬ ವನಸ್ಪತಿಗಳಿಂದಲೂ)। ಸುರರಾಜಂ=ಪರ್ವತಶ್ರೇಷ್ಠನು।ಯೆನಿಸಿಯುಂ=ಯ

ನಿಸಿ। ವಿಂಧ್ಯಾದ್ರಿ= ವಿಂಧ್ಯಾದ್ರಿ ಪರ್ವತವು। ಕಣ್ಗೆಸೆದುವು =ಶೋಭಿಸಿತು॥೨೦॥

ಭಾವಾರ್ಥ— ಉತ್ತಮವೂ, ಮನೋಹರವೂ, ಆದ ದೇವದಾರುಗಳಿಂದಲೂ, ತೇಗಿನಮರಗಳಿಂದಲೂ, ಗಂಧದ ಮರಗಳಿಂದಲೂ, ಶ್ರೇಷ್ಠವಾದ ಚಿತ್ರಮೂಲವೆಂಬ ಬಳ್ಳಿಗಳಿಂದಲೂ, ಚಮತ್ಕೃತಿಯುಳ್ಳ ಹಾವುಗಳಿಂದಲೂ, ಚಿತ್ರವೆಂಬ ನದಿಯ ಪ್ರವಾಹದಿಂದಲೂ, (ಉತ್ತಮೋತ್ತಮವಾದ) ತುಂಬಿಕೊಂಡಿದ್ದ ಆಕಳಗಳನ್ನು ಕಾಯುವ ಹುಡುಗರುಗಳಿಂದಲೂ, ಗೌಳಿಗರಿಂದಲೂ, ಕೃಷ್ಣನ ಮೂರ್ತಿಯಿಂದಲೂ, ಬೋರಿಗಿಡಗಳಿಂದಲೂ, ಸಣ್ಣ ಹಂದಿಗಳಿಂದಲೂ, ಬಿದಿರುಗಳಿಂದಲೂ, ಚಿತ್ತಗಳಿಂದಲೂ, ಡವಿಗೆಗಳಿಂದಲೂ, ಧಭಧಬಿಗಳಿಂದಲೂ, (ಪರ್ವತದ ಮೇಲುಗಡೆಯಿಂದ ಬೀಳುವ ನೀರಿನ ಪ್ರವಾಹದಿಂದಲೂ) ಚನ್ನಾಗಿ ಒಪ್ಪುವ ಪಕ್ಷಿಗಳಿಂದಲೂ, ಕೆಂಪು ಕಮಲಗಳಿಂದಲೂ, ಸರೋವರಗಳಿಂದಲೂ, (ಕೊಳ್ಳಗಳಿಂದಲೂ), ದೇವತಾಶ್ರೇಷ್ಠರುಗಳಿಂದಲೂ, ಸ್ತ್ರೀ ಶ್ರೇಷ್ಠರುಗಳಿಂದಲೂ, (ಸಮುಕ್ತಾಂದವೆಂಬ ವನಸ್ಪತಿಗಳಿಂದಲೂ) ಇವೇ ಮುಂತಾದವುಗಳಿಂದ ಯೆಲ್ಲ ಪರ್ವತಗಳಿಗೆ ಶ್ರೇಷ್ಠವಾದ ವಿಂಧ್ಯಾಪರ್ವತವು (ಜಾಂಬುವಾದಿಗಳ) ಕಣ್ಣುಗಳಿಗೆ ಚನ್ನಾಗಿಶೋಭಿಸಿತು. ॥೨೦॥

ಸ್ವಕೃತ.

ಶ್ಲೋಕ.

ವೃತ್ತ॥ ರಮಾಶ್ರಯಂ ರಾಮಗುಣಾಭಿ ಸ್ತೂರ್ಣಂ।
ರಾಜೀವನೇತ್ರಂ ರಘುವಂಶನಾಥಂ॥

ರಾಷ್ಟ್ರೈಕಛತ್ರಂ ರಮಣೀಯರೂಪಂ।
ಗಾಪಾಪಭಿದಂ ರಾಜಮಣಿಂ ನಮಾಮಿ॥೬॥

ನಾರಾಯಣ ವೇಂಕಟಾಚಾರ್ಯ
ಕೂರವಾಲೀ.

ಕಾಲಿದಾಸಕೃತ್ ಕಾಲಿಕಾದಂಡದೊಳಗಣ.

ಶ್ಲೋಕವು.

॥ವೃತ್ತ॥

ಮೋಚಾರಸ ಪಾಚಾಕಥ ಮಾಚಾರ ವಿಹೀನಾ।
ಸ್ನೀಚಾನಿವ ಕಾಚಾನಿವ ಯಾಚಾಮಿ ದುರರ್ಥಾನ್॥
ಪಾಚಾಮಥ ಪಾಚಾಯರ್ ಸುಪಾಚಾ ನತಸೀಲಾನ್।
ಮಾಚಾಲಯ ಮಾಚಾಪಲ ಮಾ ಚಾರುಪದಾ ಬ್ರೂತ್॥೬॥

ಯಾರಾದರು ಮಾಸ್ತರ ಜನರಾಗಲಿ, ಅವರ ಮಿತ್ರರಾದ ಬೇರೆ ವಿದ್ವಾಂಸರಾಗಲಿ, ಮೇಲೆ ಬರೆದ ಶ್ಲೋಕದ ಅರ್ಥ ಮಾಡಿ ಬರುವ ತಿಂಗಳ ಮಠಪತ್ರಿಕೆಯಲ್ಲಿ ಕೊಡುವರೆಂದು ಕೇಳುತ್ತೇನೆ.

ಧಾರವಾಡ ತಾ॥೭ ಮಾರ್ಚ ಸನ್ ೧೮೭೭ನೇ ಇ.	ಶಿವಯೋಗಪ್ಪ ಷಣ್ಮುಖಪ್ಪ ಅ. ಮಾಸ್ತರ ಧಾರವಾಡ ೬ ನೇ ಸಂಚಾ ರ ಶಾಲಿ.

ರಾ. ರಾ. ಶಾಲಾಪತ್ರಿಕದ ಎಡಿಟರರಾಯರಿಗೆ—
ಕೆಳಗೆ ಸಹಿ ಮಾಡುವವನ ಅತಿ ವಿನಯಪೂರ್ವಕ ವಿಜ್ಞಾಪನೆಯೇನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ

ಂತರವಾದ ಕಾಲಾಪತ್ರಿಕೆಯಲ್ಲಿ ಮುದ್ರಿಸುವಿರೆಂದು ಆಶಿ
ಸುತ್ತೇನೆ—

ಚಂದ್ರಗ್ರಹಣವು ಸ್ವಲ್ಪ (ಅರ್ಧದಕ್ಕಿಂತಲು ಕಡಿಮೆ) ಹಿಡಿದಸಮಯದಲ್ಲಿ ಧೂಮ್ರವರ್ಣವೂ, ಅರ್ಧ ಹಿಡಿದ ವೇಳೆ ಲ್ಲಿ ಕೃಷ್ಣವರ್ಣವೂ, ಪೂರಾ (ಖಗ್ರಾಸ) ಹಿಡಿದಾಗ್ಗೆ ಪಿಂ ಗವರ್ಣವೂ ಇರುತ್ತದೆಂದು ಗ್ರಹಲಾಘವವೆಂಬ ಗ್ರಂಥದ ಲ್ಲಿ ಬರೆದಿರುತ್ತದೆ. ಅದರಂತೆ ದೃಷ್ಟಿಗೋಚರವಾದರೂ ಗುತ್ತದೆ. ಆದರೆ ಹೀಗೆ ಬೇರೆ ಬೇರೆ ವರ್ಣವು ತೋ ರುವಕಾರಣವೇನಿರುವದು ಅದು ನನ್ನಿಂದ ಅರಿಯಲ್ಪಡಲಿ ಲ್ಲದು. ಆದಪ್ರಯುಕ್ತ, ದಾರಾದರೂ ವಿದ್ವಾಂಸರು ಮೇ ಲೆ ಬರೆದ ತರತರದ ಬಣ್ಣವಾಗುವದಕ್ಕೆ ಕಾರಣವೇನೆಂ ಬ ರುವದು ಅದನ್ನು ಮುಂದಿನ ಕಾಲಾಪತ್ರಿಕೆಯಲ್ಲಿ ದಯವಿ ಟ್ಟು ಮುದ್ರಿಸುವರೆಂದು ಆಶಿಸುತ್ತೇನೆ.

ಮುಕ್ಕಾಮು ಕಲಾದಗಿ ತಾ
ರೀಖು ೭ ಮಾಹೆ ಫೆಬ್ರು
ವಾರಿ ಸನ್ ೧೮೭೪ ಇ.

ಹಣಮಂತ ಗೋವಿಂದ ಶೃಂಗೇ
ಕುಲಕರ್ಣಿ.

ಮ. ರಾ. ರಾ. ಕನ್ನಡ ಮಾಸಪತ್ರಿಕೆ ಕರ್ತರ
ಚರಣಕ್ಕೆ —

ಸೇವಕನ ವಿನಂತಿ. ವಿ. ತಾರೀಖು ೧೮ ಫೆಬ್ರುವಾರಿ ಸನ ೧೮೭೪ ಇಸ್ವಿ ತರುವಾಯಾ—ಈ ಕೆಳಗೆ ಬರೆದಿರುವ ನಾ ಲ್ಕು ಪಂಕ್ತಿಗಳಿಗೆ ತಮ್ಮ ಕರಪತ್ರದಲ್ಲಿ ಸ್ಥಳಕೊಟ್ಟು ವಂಥ ಂದನಾದ ಪತ್ರಿಕೆಯಲ್ಲಿ ಮುದ್ರಿಸುವಿರೆಂದು ಆಶಿಸುತ್ತಾ ವನ್ನು ಕೆಳಗೆ ಕಳುಹಿಸಿದ್ದೇನೆ.

ಸರಿಂ ಹರಿಣ್ಯಾವಪ್ರಮೇಯಯಾತ್ರಿಕಂಕಾಲವಂಕೋರುಹಚ್ಛಂ
ದ್ರಬಿಂಬಂ।
ರಾಹುಂ ರುಚಾಂಚಂದನ ಶೀತಲಾನಾಂಘನಂಘನಂ ವೋದಯ
ತ್ರಾಂ ಪ್ರಪಂಚ॥೧॥

ಈ ಶ್ಲೋಕದ ಅರ್ಥವನ್ನು ಸ್ಪಷ್ಟ ರೀತಿಯಿಂದಾ ಬಲ್ಲವರು ತಿಳಿಸಿದರೆ ಅವರ ಉಪಕಾರವನ್ನು ಮನ್ನಿಸುತ್ತೇನೆ.

ಗೋವಿಂದ ರಾಮಚಂದ್ರ ಹಳಸಳೀ ಕುಲಕರ್ಣಿ
ಮುಕ್ಕಾಂ ಶಿರಸಂಗಿ ತಾಲೂಕ ಪರಸಗಡ ಜಿಲ್ಲಾ
ಬೆಳಗಾಂವಿ.

ರಾವಸಾಹೇಬ ದಕ್ಷಿಣಭಾಗದ ಶಾಲಾಪತ್ರಿಕ ಕರ್ತರವ
ಚರಣಸಂನಿಧಾನಕ್ಕೆ —

ನಾನು ಬಹಳ ವಿನಯಪೂರ್ವಕವಾಗಿ ತಮಗೆ ಬೇಡಿಕೊಳ್ಳುವದೇನಂದರೆ—ಸನ್ ೧೮೭೪ ಇ. ಫೆಬರವಾರೀ ತಿಂಗಳ ತಮ್ಮ ಪತ್ರಿಕೆಯಲ್ಲಿ ಪರಸಗಡ ತಾಲೂಕ ಸಿರಸಂಗಿ ವಿದ್ಯಾರ್ಥಿಯು ಪ್ರಕಟಿಸಿದ ಗಣಿತದ ಉತ್ತರವನ್ನು ನನ್ನ ಅಲ್ಪಬುದ್ಧ್ಯಾನುಸಾರವಾಗಿ ತೆಗದು ಇದ್ದೇನೆ. ಇದನ್ನು ದಯವಿಟ್ಟು ಮುದ್ರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಒಂದು ಯೆಕರೆಕ್ಕೆ ೫೮೪೦ ಅಂಗುಲಗಳು_ ಅಂಗುಲ ಮತ್ತು ಬಟ್ಟು ಇವುಗಳಲ್ಲೇನು ಭೇದವಿಲ್ಲಾ.

೬ ಅಂಗುಲ ಅಗಲಿತ್ತವೆಂದರೆ ಒಂದು ಬಟ್ಟು ಉದ್ದವಾಗಿದ್ದ ೬ ಅಂಗಳಸ್ಥಲ ಅದಕ್ಕೆ ಬೇಕು.

೬ ಅಂಗಳೇ ಜಾಗೆಕ್ಕೇ ೧ ಅ. ಉದ್ದ ೫೮೪೦ಅ.ಜಾ. ಯಷ್ಟು ಉದ್ದ ಇರಬೇಕು.

೯೫೪೦ ಸ. ಲೆಕ್ಖ

೫೯೪೦

೨೪) ೯೬೦ (೨೪ ಅಂಗುಳ=೧ ಮೊಳ

೪೦ ಮೊಳಗಳು ಉದ್ದವಾಗಿತ್ತು.

ಇದೇ ಉತ್ತರವು.

ಈ ಪ್ರಕಾರವೆಂತು ನಾನು ಮಾಡಿದ್ದೇನೆ. ಇದರಲ್ಲಿ ದೋಷವಿದ್ದರೆ ವಿದ್ವಜನರು ತಿದ್ದುವರೆಂದು ಕೋರುತ್ತೇನೆ.

ತಾರೀಖು ೭ ನೇ
ಮಾರ್ಚ ೧೮೭೪ ಇ.
ಮುಕ್ಕಾಮು ಅಥಣಿ.

ದಾದಾ ಗುಂಡಾಚಾರ್ಯ
ಕುರವಾಲಿಕರ ಮಾನಿಟರ
ಅಂ ಸ್ಕೂ. ಅಥಣಿ.

ಮಹಾರಾಜ ರಾಜಪೋಷಿತ ರಾಜಮಾನ್ಯ ರಾಜಶ್ರೀ ಕನ್ನಡ ಮಠಪತ್ರಿಕ ಕರ್ತರಿಗೆ.

ವಿನಂತಿ ವಿಶೇಷ ತಮ್ಮ ಅಂದವಾದ ಕರದ್ವಯದಿಂದ ಸೃಷ್ಟಿಪ ಛಂದವಾದ ಪತ್ರಿಕೆಯಲ್ಲಿ ಮುಂದಮತಿಯ ಅಭಿಲಾಷೆಯನ್ನು ಕೊನೆಗಾಣಿಸುವರೆಂಬ ಅತ್ಯಾಶೆಯನ್ನು ತಾಳಿ ಈ ಕೆಳಗೆ ಬರೆದಿರುವ ಲೆಕ್ಖಕ್ಕೆ ಒಂದು ಮೂಲೆಯಲ್ಲಿ ಸ್ಥಳ ದೊರೆದು ನನಗೆ ಹುಟ್ಟಿದ ಸಂಶಯವನ್ನು ದೂರಮಾಡುವ ಮೇಹರಬಾನಗಿಯಾಗಬೇಕು.

ಲೆಕ್ಖವು.

ಯಾವನೊಬ್ಬ ಮನುಷ್ಯನು ೧ ತಿಂಗಳಿಗೆ ೧೦೦ ರೂಪಾಯಿಗೆ ೩ ರೂಪಾಯಿ ಬಡ್ಡಿಯಂತೆ ಕರಾರುಮಾಡಿ ೩೦೦ ರೂಪಾಯಿ ಪೈದನು. ಮುಂದೆ ಎಷ್ಟೋ ವರ್ಷದ ಮೇಲೆ

ಚಕ್ರ ನಾಡಿ ಬಡ್ಡಿಯು ಪ್ರಕಾಶ ರೂಪಾಯಿ ೩೨೦ $\frac{೨೬೨೫}{೪೦೦೦}$
ರಾಸ ತಂದು ಕೊಟ್ಟನು ಆದರೆ ಎಷ್ಟು ವರ್ಷದವೋ
ತಂದು ಕೊಟ್ಟನು?

ಎಂಬುವದನ್ನು ನನ್ನ ಗುರುಗಳಾದ ವಿದ್ವಜ್ಜನರು ತ್ರೈ
ರಾಶಿಕ ರೀತಿಯಿಂದ ಬಿಡಿಸಿ ಇದೇ ಪತ್ರದ್ವಾರದಿಂದ ರೀ
ವಾರ ತಿಳುಹಿಸುವರೆಂದು ಬೇಡಿಕೊಳ್ಳುತ್ತೇನೆ. ಇಂತಿ

ಜ್ಞಾಪನಃ

ಮುಕ್ಕಾಮ ತಿಗಡಿ ತಾಲೂಕ ಸಂಪಗಾಂವಿ ಜಿಲ್ಲಾ ಬೆಳಗಾಂವಿ ತಾ॥೫॥೩॥೨೪ ಇಸ್ವಿ.

ಚನ್ನಪ್ಪಾ ಬಸಲಿಂ ಪ್ಪಾ ಮುದಕ್ಕನೀಸ ಗಡ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೧.

ಬೆಳಗಾವಿ, ಮಾಹೆ ಎಪ್ರೇಲ ೧೮೭೪.

SELF HELP

ತನಗೆ ತಾನೇ ನೆರವಾಗುವದು.

ಆ ಕಾಲದಿಂದ ಹೊಸ ಯಂತ್ರಗಳನ್ನು ರಚಿಸುವ ಹವಸೆಯು ಅವನ ಮನಸ್ಸಿನಲ್ಲಿ ಸೇರಿಕೊಂಡಿತು. ಅದರಿಂದ ಅವನು ಕೆಲವು ಅಡ್ಡ ತಿಡ್ಡ ಶಸ್ತ್ರಗಳನ್ನು ಮಾಡಿಕೊಂಡು ಅವುಗಳಿಂದ ಒಂದು ಕಟ್ಟಿಗೆಯ ಘಡಿಯಾಲವನ್ನು ಮಾಡಿದನು. ಅದರಿಂದ ತಾಸುಗಳು ಯೆಸ್ಟು ಮಾತ್ರವು ತಪ್ಪದೆ ತಿಳಿಯುತ್ತಿದ್ದವು. ಇವಲ್ಲದೆ ಅವೇ ಕಾಲದಿಂದ ಅವನು ಒಂದು ಗುಡಿಯಲ್ಲಿ ಇಡುವದಕ್ಕೋಸ್ಕರವಾಗಿ ಕೆಲವು ದೇವದೂತರ ಮೂರ್ತಿಗಳನ್ನೂ, ಉಪಾಧ್ಯಾಯರ ಮೂರ್ತಿಗಳನ್ನೂ ಮಾಡಿದ್ದನು. ದೇವದೂತರ ಮೂರ್ತಿಗಳು [illegible] ಗಳನ್ನು ಬಾರಿಸುತ್ತಿದ್ದವು; ಉಪಾಧ್ಯಾಯರ ಮೂರ್ತಿಗಳು ನಿತ್ಯದ ಧರ್ಮಕೃತ್ಯದ ಸಂಬಂಧದ ಹಾವಭಾವಗಳನ್ನು ಮಾಡಿತೋರಿಸುತ್ತಿದ್ದವು. ಇವಲ್ಲದೆ ಇನ್ನು ಕೆಲವು ಸ್ವಶಕ್ತಿಯಿಂದಲೇ ನಡೆಯುವಂಥ ಯಂತ್ರಗಳನ್ನು ರಚಿಸುವ ಹೇತುವಿನಿಂದ ಅವನು ಶಾರೀರಶಾಸ್ತ್ರ, ಗಾಯನವಿದ್ಯೆ, ಯಂತ್ರವಿದ್ಯೆಗಳ ಅಭ್ಯಾಸಕ್ಕೆ ಆರಂಭಮಾಡಿದನು. ಈ

ಅಭ್ಯಾಸದಲ್ಲಿ ಕೆಲ ವರ್ಷಗಳನ್ನು ಕಳೆದನಂತರ, ಒಂದು ದಿವಸ ತುಲೆರೀ ಯೆಂಬ ತೋಟದಲ್ಲಿ ಒಬ್ಬ ಕೊಳಲ ಊದುವವನನ್ನು ನೋಡಿ, ಅವನ ಹಾಗೆ ಕೊಳಲನ್ನು ಊದುವದೊಂದು ಗೊಂಬೆಯನ್ನು ರಚಿಸಬೇಕೆಂದು ನಿಶ್ಚೈಸಿಕೊಂಡನು. ಮುಂದೆ ಎಷ್ಟೋ ವರ್ಷಗಳವರೆಗೆ ಬಹು ಶ್ರಮಪಟ್ಟು, ಮೈಯಲ್ಲಿ ಸ್ವಸ್ಥವಿಲ್ಲದಿದ್ದಾಗ್ಯೂ, ಆ ಯತ್ನವನ್ನು ಹಾಗೇ ನಡಿಸಿ, ಹಿಡಿದ ಉದ್ದೇಶವನ್ನು ಕಡೆಗಾಣಿಸಿದನು. ಇದರನಂತರ ಅವನು ಒಂದು ಬಜಂತ್ರಿಯು ಊದುವ ಗೊಂಬೆಯನ್ನು ಮಾಡಿದನು. ಆ ಮೇಲೆ ಒಂದು ನೀರಕೋಳಿಯನ್ನು ರಚಿಸಿದನು. ಅದು ಅತ್ಯಾಶ್ಚರ್ಯಕರವಾದದ್ದು. ಅದು ನಿಜವಾದ ಕೋಳಿಯಂತೆ ಈಜುವದು, ಮೇಲೆ ನೀರಡಿಸಿಕೊಳ್ಳುವದು, ನೀರ ಕುಡಿಯುವದು ಒದರುವದು. ತರುವಾಯ ಕ್ಲಿಯೋಪಾತ್ರಾ ಯೆಂಬ ನಾಟಕದಲ್ಲಿ ಕೆಲಸಕ್ಕೆ ಬರುವಂಥದೊಂದು ಹಾವನ್ನು ಮಾಡಿದನು. ಅದು ಆ ಸೊಬಗಿನವಳ ಹೊಟ್ಟೆಯ ಕಡೆಗೆ ಸವಣಿಸುತ್ತ ಫೂತ್ಕಾರ ಹಾಕುವದು.

ಆದರೂ ವಾಕೆನ್ಸನ್ನನು ಇಂಥಾ ಯಂತ್ರಗಳನ್ನು ರಚಿಸುವದರಲ್ಲಿಯೇ ಕಾಲಹರಣ ಮಾಡಲಿಲ್ಲ. ಇವನ ಬುದ್ಧಿಚಾತುರ್ಯವನ್ನು ನೋಡಿ, ಕಾರ್ಡಿನಲಡೀಫ್ಲೂರೀ ಎಂಬವನು ಫ್ರಾನ್ಸದೊಳಗಿನ ರೇಶಿಮೆಯ ಕಾರಖಾನೆಗಳ ವ್ಯವಸ್ಥೆಯನ್ನು ನೋಡುವ ಕೆಲಸಕ್ಕೆ ಇವನನ್ನು ನೇಮಿಸಿದನು. ಇವನು ಆ ಕೆಲಸಕ್ಕೆ ನೇಮಿಸಲ್ಪಟ್ಟ ಕ್ಷಣವೇ ತಂನ ಅಪ್ರತಿಬಂಧವಾದ ಸ್ವಾಭಾವಿಕ ಕಲ್ಪನಾಶಕ್ತಿಯ ಬಲದಿಂದ ರೇಶಿಮೆಯ ಯಂತ್ರಗಳಲ್ಲಿ ಸುಧಾರಣೆಯ ಮಾಡತೊ

ನೋಹರವಾದ, ಪದಾಬ್ಜಾತ್= ಪಾದಕಮಲದದೆಶೆಯಿಂದ, ಮಾಚಾಲಯ=ಚಲಿಸಬೇಡಾ, ಅ=ಚನ್ನಾಗಿ, ಚಾಪಲಂ= ಚಾಂಚಲ್ಯವು, ಮಾ=ಆಗಬೇಡ.

ಭಾವಾರ್ಥ

ಎಲೈ ಕಾಳಿಕಾದೇವಿಯೇ, ರಸಬಾಳೆಯ ಹಣ್ಣಿನಕಿಂತಲೂ ಅತ್ಯಂತ ಮಧುರತರವಾದ ನನ್ನ ವಾಕ್ಯದಿಂದೆ ದುರಾಚಾರಿಗಳಾದ ನೀಚರುಗಳನ್ನೇ ವೆ, ಪ್ರದ್ದೇಶ ಮಾಡಿಕೊಂಡು ಕಾಜೂಗಳಿಗೆ ಸಮಾನವಾದ ದುಷ್ಟ ದ್ರವ್ಯಗಳನ್ನು ನಾನು ಹ್ಯಾಗೆ ಬೇಡಲಿ? ಸರ್ವಥಾ ಬೇಡಲಾರೆ, ಸರಸ ವಾಕ್ಯಗಳನ್ನು ಬಲ್ಲವರಿಗೆ ಉಪದೇಶಕನಾದ ಬ್ರಹಸ್ಪತ್ಯಾಚಾರ್ಯನ ಸುಂದರವಾಕ್ಯೋಪದೇಶದಿಂದ ನಮ್ರ ಸ್ವಭಾವವುಳ್ಳ ದೇವತೆಗಳಂತೆ, ನೀನು ನಂನಂನು ನಿಂನ ಸುಂದರವಾದ ಪಾದಕಮಲಗಳಿಂದ ಅಗಲಸಬೇಡ, ಹಾಗು ನಿಂನ ಪಾದಗಳಲ್ಲಿ ನನಗೆ ಚಾಂಚಲ್ಲ್ಯವು ಸರ್ವಥಾ ಆಗುವಂತೆ ಮಾಡಬೇಡ.

ಮುಕ್ಕಾಂ ಮುಂಡರಗಿ ತಾ. ೨೬ ಎಪ್ರೀಲ ೧೮೭೪ ಇ.	ಸಹಿ ಗೋಪಾಳಾಚಾರ್ಯ ಸುಲ್ಲದ ಸಾಕೀನ ಹುಬ್ಬಳ್ಳಿ ಮುಕ್ಕಾಮ ಮುಂಡರಗಿ.

ರಾವ ಸಾಹೇಬ ಮತಪತ್ರಿಕ ಕರ್ತೃ ಪ್ರಾಂತ ದಕ್ಷಿಣಭಾಗ ಇವರ ಚರಣಾರವಿಂದಕ್ಕೆ—

ನಾನು ಬಹು ಆದರೋಕ್ತಿಯಿಂದಾ ತಮಗೆ ಅರಕೆ ಮಾಡಿಕೊಳ್ಳುವದು ಏನಂದರೆ ಮಾಹೆ ಮಾರ್ಚ ಸನ್ನ ೧೮೭೪ ಇಸವಿ ತಿಂಗಳ ಮತಪತ್ರಿಕೆಯಲ್ಲಿ ಮುದ್ರಿಸಿದ ಮಾರ್ಕಾಂಡೆ ರಾಮಾಯಣದ ೭೦ನೇ ಶ್ಲೋಕದ ಟೀಕಾದಲ್ಲಿ ಒಂದು

ಶಬ್ದವು ಸಂಶಯ ಬಂದಿದರಿಂದಾ ಅದನ್ನು ದೂರ ಮಾಡಿಕೊಳ್ಳುವದರ ಸಲುವಾಗಿ ಕೆಳಗೆ ಎರಡು ಪಂಗ್ತಿಗಳನ್ನು ಬರದಿದ್ದೇನೆ. ಅವನ್ನು ದಯ ಮಾಡಿ ಈ ತಿಂಗಳ ಪತ್ರಿಕೆಯಲ್ಲಿ ಮುದ್ರಿಸುವಿರೆಂದು ಆಶಿಸುತ್ತೇನೆ.

ಈ ಶ್ಲೋಕದಲ್ಲಿರುವ (ಸುರರಾಜ, ಸುರರಾಜ, ಸುರರಾಜನೆನಿಸಿಯುಂ) ಎಂಬ ಪದದ ಟೀಕಾ। ಸುರರಾಜ=ದೇವತಾ ಶ್ರೇಷ್ಟರುಗಳಿಂದಲೂ। ಅಸುರರಾಜ=ದೈತ್ಯರುಶ್ರೇಷ್ಟರುಗಳಿಂದಲೂ। ಸುರರಾಜಂ=ಪರ್ವತ ಶ್ರೇಷ್ಟನು। ಎನಿಸಿಯುಂ=ಎನಿಸಿ ಹೀಗೆ ಮುದ್ರಿಸಲ್ಪಟ್ಟದೆ. ಆದರೆ ಸುರರಾಜ, ಸುರರಾಜ ಎಂಬ ತತ್ಸಮ ಪದಗಳಲ್ಲಿ ಸುರರಾಜ, ಅಸುರಾಜ ಹೀಗೆ ಎರಡು ಪದಗಳು ಯಾವ ಸಂಧಿ ನೇಮದಂತೆ ಹೊರಟವು. ಅದು ನನ್ನ ಕೀಳ ಬುದ್ಧಿಗೆ ಸೂಸದೆ ಇರುವದರಿಂದ ವಿನಂತಿಮಾಡಿಕೊಂಡು ಇದ್ದೇನೆ. ದಯಮಾಮುಂದಿನ ಪತ್ರಿಕೆಯಲ್ಲಿ ಈ ಸಂಶಯವನ್ನು ಪರಿಹರಿಸುವಿರೆಂದು ನನ್ನ ಕೋರಿಕೆಯುಂಟು.

ತಾ. ೨೦ ಪರಾಪ ಎಪ್ರೀಲ } ಮೋಬಿನ್ನೂರ ತಾ. ರಾ. ಜ. ಧಾ.
೧೯೩೩. ಮು.ಮೋಟಬಿನನೂರ. } ಸ. ಸಾ. ಮ. ನಾ.ಚೆ.ಕು. ಬ್ಯಾ.

—೦೦೦—

ಸಟೀಕ ರಾಜಶೇಖರ ವಿಳಾಸ

ತೃತೀಯಾಶ್ವಾಸದ

ನೋಟೀಸು.

ಅಧೋ ಭಾಗದಲ್ಲಿ ಸಹಿ ಮಾಡಿರುವರು — ವಿದ್ಯಾಭಿವೃದ್ಧಿಯನ್ನು ಕೋರುವ ಸರ್ವರಿಗೂ ತಿಳಿಸುವದೇನಂದರೆ ರಸಿಕಜನಮಾನಿತೋಭಯ ಕವಿತಾವಿಶಾರದನೆಂಬ ಬಿರುದಂಪಡೆದ ಷಡಕ್ಷರಾಖ್ಯ ಮಹಾ ಕವಿಯಿಂ ನಿರ್ಮಿಸಲ್ಪಟ್ಟ ರಾಜಶೇ

ರ ವಿಳಾಸವನ್ನು ಶ್ಲೋಕರೂಪವಾಗಿ ಓದುವದೇ ಅತಿ ಶ,
ಸುವಿದೆ; ಅರ್ಥಾದಿಗಳ ಗ್ರಹಣ ಮಾಡುವದು ಮಹಾ ಪ್ರಯಾ
ಸವೆಂದು ತಿಳಿಯುತ್ತದೆ. ಸಂಮತಿ— "ಯಾವಗ್ವಾಮಪಿಸಂ
ದೇಹಂ, ಕಕುಂದೇಷು ಚಕಾಕಥಾ" ಎಂಬ ಸೂತ್ರಾನುಸಾರ
ವಾಗಿರುವ ಕಾಠಿಣ್ಯ (ಗೂಢಾ) ನ್ವಯಗಳಂ ಗರ್ಭೀಕೃತ
ಮಾಡಿ ಆ, ಲೋಕೋತ್ತರ ಕಾವ್ಯದ ಮೂರನೇ ಅಧ್ಯಾ
ಯವನ್ನು—ಸರ್ವ ವಿದ್ವಜ್ಜನಾಂಗೀಕಾರವಾಗುವಂತೆ (ದಿವ್ಯ
ಸೂಚನೆಯನ್ನು, ೧೩ ಹೊಸ ಕವಿತಾ ಶ್ಲೋಕಗಳನ್ನು
ಬರೆದು;) ಆರು ತೆರದಿಂ ಟೀಕಿಸಿರುವ ವಿವರಗಳು.

೧. ನೇ ಕಲ್ಮ—ಮೂಲ ಶ್ಲೋಕದಲ್ಲಿ ಅಡಿ, ಪ್ರಾಸ, ವೃತ್ತಗಳ ನಾಮಂಗಳಿಂದಲೂ,

೨. ಕ—ಶಬ್ದಾರ್ಥದಲ್ಲಿ: ಪದಖಂಡಣ, ಬೇರೆ ಬೇರೆ ಶಬ್ದ ಬಿಡಿಸಿ ಅರ್ಥ, ಮತ್ತು ಶ್ಲೇಷಾರ್ಥ, ತದ್ಭವ, ವ್ಯಾಕರಣಪ್ರಯೋಗ, ಪ್ರಾಸನಾಮ, ರಸ, ಅಲಂಕಾರಗಳಿಂದಲೂ,

೩. ಕ—ನಿಘಂಟಿನಲ್ಲಿ: ಕಠಿಣ ಶಬ್ದಗಳಿಗೆ—ಅಮರ ವಿಶ್ವ, ವೈಜಯಂತಿ, ಹಲಾಯುಧ, ನಾನಾರ್ಥ ರತ್ನಮಾಲಾ, ಧನಂಜಯ, ಮೇದಿನಿ, ಶಬ್ದಾರ್ಣವ, ಏಕಾಕ್ಷರ, ಮಂಗಿರಾಜ, ನಾನಾರ್ಥ, ಕರ್ನಾಟಕ ಶಬ್ದಮಂಜರಿ, ಕಬ್ಬಿಗರಕೈಪಿಡಿ; ಈ ಗ್ರಂಥಗಳ ಉದಾಹರಣೆಗಳಿಂದಲೂ,

೪. ಕ—ತಾತ್ಪರ್ಯ ಸಂಗ್ರದಲ್ಲಿ: ಗೂಢಾರ್ಥಗಳಿಗೆ—ಶ್ರುತಿಸ್ಮೃತಿ ಪುರಾಣಾಗಮ ಸಮಂತವಾದ ಶ್ಲೋಕದಾಧಾರಗಳಿಂದಲೂ,

೫. ಕ — ಭಾವಾರ್ಥದಲ್ಲಿ: [ಅನ್ವಯದ ಮೇಲಿಂದ] ಸಾರಾಂಶ ಅರ್ಥದಿಂದಲೂ,

೬. ಕ— ನೋಟಿನಲ್ಲಿ: ವ್ಯಾಕರಣ ಸಂಧಿ, ಸಮಾ
ಮುಂತಾದವುಗಳು; ಛಂದೋಲಕ್ಷಣ, ಮತ್ತು ಪುರಾಣಾಂ
ತರ್ಗತವಾದ ಪೂರ್ವಿಕರ (ಶಿವನಪಂಚವಿಂಶತಿಲೀಲಾ) ಮಹ
ಕಥೆಗಳಿಂದಲೂ,

ದ್ರಾಕ್ಷಾಪಾಕದಂತೆ ಸುಲಭ ಭಾಷೆಯಿಂದಲೂ, ಅರ್ಥ ಸ್ಪ
ಷ್ಟಯಿಂದಲೂ ರಮ್ಯವಾಗಿ "ಮುತ್ತಿನ ಚಿಪ್ಪಿನಂತೆ" ಇರ
ವ ಈ ಪುಸ್ತಕವನ್ನು — ಬೆಂಗಳೂರು ಹೊಳಕಲ್ಲ ನರಸಿ
ಹಯ್ಯನವರ ವಿಚಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ
ಸುಂದರವಾದ ನೊಳ್ ಅಕ್ಷರಗಳಿಂ ಮುದ್ರಿಸಿದ ಅವಲ್ ಅ
ವೀ ಬೈಂಡು ಬಿಳ್ಳೀ ಬಿಳ್ಪಿನಿಂ ಸಫೆಯಾಗಿರುವ ಧಪ್ಪ ಕಾ
ದ ಪ್ರತಿ ೧ ದಕ್ಕೆ— ೨ ರೂಪಾಯಿ ೪ ಅಣೆ; ದುಯ್ಯ
ಬೈಂಡಿನ ಪುಸ್ತಕಕ್ಕೆ —೧ ರೂ, ೧೨ ಅಣೆ. ಷ್ಟಿಪ್ ಕವ
ಪ್ರತಿಗೆ—೧ ರೂ, ೮ ಅಣೆ, ಈ ನಿಬಂಧನೆಯಂತೆ (೧೭
ಪುಟಗಳಿಂದ ಕೂಡಿ) ಇರುವ ಬುಕ್ಕುಗಳು ಬಹು ಸೊಗಸ
ಗಿವೆ; ಕಾರಣ, ಇದರ ಕಾಂಕ್ಷೆಯುಳ್ಳವರು— ರೂ ೧ ಕ್ಕೆ
೧ ಅಣೆ ವಟ್ಟ, ಬಾಂಗೀ ಹಾಸಲ್ ೩ ಅಣೆ; ಆಯಾಯ
ಪುಸ್ತಕಕ್ಕೆ ಸರಿಯಾಗಿ ಅರ್ಧ ಅಣೇದವೇ ಟಿಕೀಟ್ ಕಳ
ಹಿದ್ದದರೆ—ಬುಕ್ಕು ರವಾನಿಸುತ್ತೇವೆ.

ತಾರೀಖು ೨೧ ಜನವರಿ ಸನ್ ೧೮೭೪ ಇಸವಿ.

ಸಹಿ—ಅನ್ನದಾನಿ ಬಸಲಿಂಗ
ಯ್ಯ ಮಂಗಳೂರು ಅರ
ಲೇ ಮಠದ, ಮುಕ್ಕಾ
ಮುಂಡರಗಿ, ತಾಲೂಕ ಗ
ಗ ಜಿಲ್ಲಾ ಧಾರವಾಡ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೩

ಬೆಳಗಾವಿ, ಮಾಹೆ ಜೂನ ೧೮೭೪.

SELF HELF

ತನಗೆ ತಾನೇ ನೆರವಾಗುವದು.

ಹೇಲ್ಮನ್ನನು ಬಡತನದಲ್ಲಿಯೂ, ವಿಪತ್ತುಗಳಲ್ಲಿಯೂ ಹೊಳಲಾಡುತ್ತಿರಲಾಗಿ, ಅವನ ಹೆಂಡತಿಯು ಮರಣಹೊಂದಿ ಳು; ತನ್ನ ಗಂಡನು ನಿಶ್ಚಯವಾಗಿ ಹಾಳಾದನೆಂದು ಅವ ು ತಿಳಿದುಕೊಂಡಿದ್ದಳು. ತರುವಾಯ ಅವನು ಇಂಗ್ಲಂಡ ಕ್ಕೆಹೋಗಿ ಮಾಂಚೆಸ್ತರದಲ್ಲಿ ತನ್ನ ಯಂತ್ರದ ಉದ್ಯೋಗ ವನ್ನೇ ಮಾಡುತ್ತ ನಿಂತುಕೊಂಡನು. ಯಂತ್ರಗಾರರಲ್ಲಿ ಹೆ ರಾದ ಶಾರ್ಪ, ರಾಬರ್ಟ, ಎಂಬ ಸಂಘದವರಿಂದ ಅವನು ನ್ನ ಕಲ್ಪನೆಯಂತೆ ಒಂದು ಮಾದರಿಯ ಯಂತ್ರವನ್ನು ಮಾಡಿಸಿಕೊಂಡಿದ್ದನು. ಆದರೆ ಅದರಿಂದ ಆಗತಕ್ಕಂತೆ ಕೆಲ ವಾಗುತ್ತಿದ್ದಿಲ್ಲ. ಆದದರಿಂದ ಅವನು ತೀರ ಆಶಾಹೀನ ಾಗುವ ಹೊತ್ತು ಬಂದಿತ್ತು. ಆಗಲವನು ಫ್ರಾನ್ಸಕ್ಕೆ ತ ನ್ನ ಕುಟುಂಬದವರ ಭೇಟಿಯಸಲುವಾಗಿ ತಿರುಗಿ ಬಂದ ನು; ಆಗಲೂ ಅವನ ಮನಸ್ಸಿನಲ್ಲಿ ಆ ಯಂತ್ರದ ವಿಚಾರ ನೇ ಹೊರ್ತು ಬೇರೆ ಏನು ಇದ್ದಿಲ್ಲ. ಒಂದು ದಿವಸ ಸಾ ಯಂಕಾಲದಲ್ಲಿ ಅವನು ಬೆಂಕೆಯ ಹತ್ತರ ಕೂತು ಕಾಸಿಕೊ

ಳ್ಳುತ್ತಾ ಹೊಸ ಯಂತ್ರಗಳನ್ನು ರಚಿಸುವ ಮೋಸಕ್ಕೆ ಒಳಗಾದವರ ದುರ್ದೈವವನ್ನೂ, ಅವರ ಕುಟುಂಬದವರ ವಿಪತ್ತನ್ನೂ ಕುರಿತು ಆಲೋಚಿಸುತ್ತಿರಲಾಗಿ, ಅವನು ತನ್ನ ಹೆಣ್ಣುಮಕ್ಕಳು ತಮ್ಮ ಉದ್ದ ಕೂದಲುಗಳನ್ನು ಹಣಿಗೆಯಿಂದ ಹಿಕ್ಕಿ, ಅವುಗಳನ್ನು ಸರಲವಾಗಿ ಉದಕ್ಕೆ ಮಾಡಿ, ತಮ್ಮ ಬೆರಳುಗಳ ಸಂದುಗಳಲ್ಲಿ ಹಿಡಿಯುತ್ತಿದ್ದದ್ದನ್ನು ತನ್ನ ಕಣ್ಣೆದುರಿಗೆ ನೋಡುತ್ತಿದ್ದಾಗ್ಯೂ, ಅದರಲ್ಲಿ ಅವನ ಲಕ್ಷವಿದ್ದಿಲ್ಲ. ಆದರೆ ಅಷ್ಟರಲ್ಲಿ ಅವನ ಲಕ್ಷವು ಅತ್ತಕಡೆಯಲ್ಲಿ ಹೋದಬರಿಂದ, ಉದ್ದವಾದ ತಂತುಗಳನ್ನು ಹಣಿಗೆಯಿಂದ ಹಿಕ್ಕಿ ಸರಲಮಾಡುವದೂ, ಅದೇ ಹಣಿಗೆಯನ್ನು ಹಿಂದಿರುಗಿಸಿ, ಕಿರಿತಂತುಗಳನ್ನು ಹಿಂದಕ್ಕೆ ಒತ್ತುವದೂ ಯಂತ್ರದಿಂದ ಸಾಧಿಸಿದರೆ, ತನ್ನ ವಿಘ್ನವು ಪರಿಹಾರವಾಗುವದೆಂಬ ಆಲೋಚನೆಯು ಅವನ ಮನಸಿನಲ್ಲಿ ಸೇರಿತು. ಈ ಚಮತ್ಕಾರದ ಸಂಗತಿಯು ಚಿತ್ರ ಕೊರೆದು, ಎಲ್ಮೋತನೆಂಬವನು ಸನ್ ೧೮೬೨ ನೇ ವರ್ಷದ ಪ್ರದರ್ಶನದಲ್ಲಿ "ರಾಯಲೀ ಅಕಾಡೆಮಿಯಾ" ಎಂಬ ಸಂಗ್ರಹಾಲಯದಲ್ಲಿ ಇಟ್ಟಿದ್ದನೆಂಬದನ್ನು ಇಲ್ಲಿ ನೆನಸಿಕೊಳ್ಳಬಹುದು.

ಈ ಕಲ್ಪನೆಯನ್ನನುಸರಿಸಿ ಅವನು ತನ್ನ ಯಂತ್ರದ ಕೆಲಸವನ್ನು ಮುಂದಕ್ಕೆ ಸಾಗಿಸಿ, ತೋರಿಕೆಯಲ್ಲಿ ಸುಲಭವಾದದ್ದಾದಾಗ್ಯೂ ವಾಸ್ತವ ನೋಡಲಾಗಿ ಬಹು ತೊಡಕುಳ್ಳ ಕೆಲಸವಾದ ಯಂತ್ರದಿಂದ ಹಿಕ್ಕುವ ಯುಕ್ತಿಯನ್ನು ರಚಿಸಿ, ಒಳ್ಳೇ ಕ್ರಮದಿಂದ ತನ್ನ ಯಂತ್ರವನ್ನು ಮುಗಿಸಿದನು. ಈ ಯಂತ್ರದಿಂದ ಕೆಲಸ ನಡಿಯುವಾಗ ನೋಡಿದರೆ ಮಾತ್ರ ಇದರ ವ್ಯಾಪಾರದ ವಿಲಕ್ಷಣಸೌಂದರ್ಯವು ಚನ್ನಾಗಿ ತಿಳಿ

ಯುವದು; ಕೂದಲುಗಳನ್ನು ಹಿಕ್ಕುವ ಕ್ರಮದಂತೆಯೇ ಇದರಲ್ಲಿ ಕ್ರಮವು ನಡಿಯುತ್ತದೆಂದು ಆಗ ಸಂಗಡಲೆ ತ್ರೋರಿ ಬರುವದು. ಮನುಷ್ಯರ ಕೈಬೊಟ್ಟುಗಳ ಸ್ಪರ್ಶವು ಎಷ್ಟು ಮೃದುವೋ ಅಷ್ಟೇ ಮಾರ್ದವದಿಂದ ಇದು ಕೆಲಸ ನಡಿಸುತ್ತದೆಂದು ಹೇಳುತ್ತಾರೆ. ಇದು ಅರಳೆಯ ತಂತುಗಳನ್ನು ಎರಡೂ ತುದಿಗಳಲ್ಲಿ ಹಿಕ್ಕಿ, ಅವುಗಳನ್ನು ಒಂದಕ್ಕೊಂದು ತೀರ ಸಮಾಂತರವಾಗುವ ಹಾಗೆ ಹಿಡಿದು, ಕಿರಿತಂತುಗಳನ್ನು ಉದ್ದವಾದವುಗಳಿಂದ ಬೇರೆ ಮಾಡಿ, ಉದ್ದತಂತುಗಳನ್ನೂ, ಕಿರಿತಂತುಗಳನ್ನೂ ಬೇರೆ ಬೇರೆ ಹೊಡಿದು ನೂಲನ್ನು ಮಾಡುತ್ತದೆ. ತಾತ್ಪರ್ಯವೇನಂದರೆ ಈ ಯಂತ್ರವು ಮನುಷ್ಯರ ಕೈಬೊಟ್ಟುಗಳಂತೆ ಅತಿಸೂಕ್ಷ್ಮವ್ಯಾಪಾರವನ್ನು ತಪ್ಪದೆ ಮಾಡುವದಿಷ್ಟೇ ಅಲ್ಲ. ಮನುಷ್ಯರ ಮನಸ್ಸಿನಲ್ಲಿ ನಡೆಯುವ ಸೂಕ್ಷ್ಮವಿಚಾರಗಳಂತೆ ಸಹ ಇದರಲ್ಲಿ ಕೆಲಸ ನಡೆಯುತ್ತದೆ.

ಅತಿ ಸಾಧಾರಣ ಜಾತಿಯ ಅರಳೆಯಿಂದ ಸಹ ಈ ಯಂತ್ರದಲ್ಲಿ ಬೇಕಾದಷ್ಟು ಜೀಣುಗಾದ ನೂಲು ಹುಟ್ಟುವದು; ಇದೇ ಕಾರಣದಿಂದ ಇದು ವ್ಯಾಪಾರಸ್ಥರಿಗೆ ಬಹಳ ಬೆಲೆಯುಳ್ಳದ್ದಾಯಿತು. ಇದರ ಸಹಾಯದಿಂದ ಬೆಲೆಯುಳ್ಳ ವಸ್ತ್ರಗಳಿಗೆ ತಕ್ಕ ತಂತುಗಳುಳ್ಳ ಅರಳೆಯನ್ನು ಶೋಧಿಸಿಕೊಳ್ಳುವದಕ್ಕೆ ಅರಿವೆಯ ವ್ಯಾಪಾರದವರಿಗೆ ಅನುವಾಯಿತು; ಇದಲ್ಲದೆ ಮೊದಲಿಗಿಂತ ಹೆಚ್ಚು ಜೀಣುಗಾದ ಉಣ್ಣೆಯ ನೂಲನ್ನು ಬೇಕಾದಷ್ಟು ಮಾಡುವದಕ್ಕೆ ಸಹ ಅವರಿಗೆ ಆಸ್ಪದವಾಯಿತು. ಈ ಯಂತ್ರದಿಂದ ಒಂದು ಪೌಂಡು ತಯಾರುಮಾಡಿದ ಅರಳೆಯಿಂದ ೩೩೪ ಮೈಲು

ದ್ದ ನೂಲನ್ನು ಹೊಸೆಯ ಬಹುದಾಯಿತು. ಈ ನೂಲಿನಿಂದ ಸೂಕ್ಷ್ಮವಾದ ಗೋಟುಗಳನ್ನು ಮಾಡಲಾಗಿ, ನೂಲುಗಾರರ ಕೈಯಲ್ಲಿ ಬರುವದಕ್ಕೆ ಮೊದಲು ಒಂದು ಶಿಲಿಂಗು ಬೆಲೆಯುಳ್ಳ ಅರಳೆಯ ಕ್ರಯವು ೭೦೦,೪೦೦ ಪೌಂಡುಗಳ ವರೆಗೆ ಬೆಳೆಯುವದು.

ಹೆಲ್ಮನ್ನನ ಯಂತ್ರದ ಉಪಯೋಗವನ್ನೂ, ಸೌಂದರ್ಯವನ್ನೂ ಇಂಗ್ಲಂಡದ ನೂಲುಗಾರರು ಸಂಗಡಲೆ ತಿಳಿದುಕೊಂಡರು. ಲಾಂಕಾಶಾಯರದೊಳಗಿನ ಆರು ಜನರು ವರ್ತಕರು ಕೂಡಿ, ಇಂಗ್ಲಂಡದಲ್ಲಿ ಈ ಯಂತ್ರದಿಂದ ಕೆಲಸ ನಡಿಸುವದರ ಬಗ್ಗೆ ೭೦೦೦೦ ಪೌಂಡುಗಳನ್ನು ಕೊಟ್ಟು ಸನದನ್ನು ಮಾಡಿಸಿಕೊಂಡರು. ಉಣ್ಣೆಯ ನೂಲುಗಾರರು ಉಣ್ಣೆಯ ಕೆಲಸದಲ್ಲಿ ಈ ಯಂತ್ರವನ್ನು ಪ್ರಯೋಗಿಸುವದರ ಬಗ್ಗೆ ಇದರಷ್ಟೇ ಹಣವನ್ನು ಕೊಟ್ಟರು. ಇದಲ್ಲದೆ ಲೀಡ್ಸಗ್ರಾಮದ ಮಾರ್ಶಿಲ್ಲೆಂಬ ಸಂಘದವರು ಸಣಬಿನ ನೂಲನ್ನು ಮಾಡುವದರಲ್ಲಿ ಇದನ್ನು ಪ್ರಯೋಗಿಸುವ ಪರವಾನೆಯ ಸಲುವಾಗಿ ೨೦೦೦೦ ಪೌಂಡುಗಳನ್ನು ಕೊಟ್ಟರು. ಈ ಮೇರಿಗೆ ಕಟ್ಟಕಡೆಯಲ್ಲಿ ಬಡಹೆಲ್ಮನ್ನನ ಮನೆಗೆ ಸಂಪತ್ತಿಯು ತಾನೇ ಹರಿದು ಬಂದು ಆದರೆ ಅದನ್ನು ಉಪಭೋಗಿಸುವಪಕ್ಕೆ ಅವನು ಬಹಳ ದಿವಸ ಬದುಕಲಿಲ್ಲ. ಇವನು ಬಹು ಕಾಲದಿಂದ ನಡಿಸಿದ ಶ್ರಮವು ಸಿದ್ಧಿಗೆ ಹೋದ ಕೂಡಲೆ ಮರಣ ಹೊಂದಿದನು; ಇವನ ಮಗನಾದರೂ ಇವನ ಸಂಗಡ ಬಡತನದ ಬಾಧೆಯನ್ನು ಸೈರಿಸಿ, ಇವನ ಹಿಂದೆ ಸ್ವಲ್ಪ ಕಾಲದೊಳಗೆ ತಂದೆಯ ಮಾರ್ಗವನ್ನೇ ಹಿಡಿದನು. ಈ ಲೋಕದ ಸುಧಾ

ರಣೆ ಎಂಬ ಕೌತುಕವು ಈ ವಿಧದ ಬೆಲೆಯುಳ್ಳ ಜೀವಗಳನ್ನೀ ವೆಚ್ಚಮಾಡಿ ಸಂಪಾದಿಸಲ್ಪಟ್ಟದೆ.

೩ ನೇ ಸಂಧಿ
(ಮೂಲಪುಸ್ತಕದಲ್ಲಿ ೪ ನೇದು)
ಆಸಕ್ತಿಯೂ, ದೃಢನಿಶ್ಚಯವೂ.

||ಭಾಮಿನಿಷಟ್ಪದಿ||

ಸೃಷ್ಟಿಕರ್ತನು ತನಗೆ ದಯದಿಂ।
ತುಷ್ಟಿವಡೆದಾಯುಷ್ಯವೆಂಬುವ।
ಶ್ರೇಷ್ಟಬದುಕನುಕೊಟ್ಟು ತನ್ನಂಸಲಹುತಿರಲಾಗಿ॥
ಅಷ್ಟುಕಾಲವ ವಿತದಿವೆಚ್ಚ।
ಶಿಷ್ಟತನವೋಳ್ಕೊಳ್ಳ ಮನುಜನು।
ಭ್ರಷ್ಟನಾಗದೆ ಸೃಷ್ಟಿಯೊಳಗತಿ ಧನಿಕನೆನಿಸುವನು ॥೧॥

||ವಾರ್ಧಿಕಷಟ್ಪದಿ||

ಘಡಿಯಾಲ ಕೈತಪ್ಪಿಬಿದ್ದು ತಾಪೊಡವಿಯೊಳು।
ಒಡೆಯಲವರೊಳಗಿರ್ದ ಮಳಲಂಗಳಂಕಂಡು।
ಯೊಡೆಬಿಡದೆ ಕಷ್ಟದಿಂನಕ್ಷತ್ರಗಣವೆಂಬ ಬೀಜಗಳಗಾಗಿ ತಾನು॥
ತಡೆಯದೇ ಬೊಗ್ಗುವಂದದಲಿ ಬೊಗ್ಗುತಬಿದ್ದ।
ಯೊಡೆಯೊಳವುಗಳನೊಂದು ಬಿಡದಲಾರಿಸಿ ಕೊಳ್ವ।
ಸಡಗರದ ಮನುಜನೇ ಕಡುಧನಿಕನೆಂದು ನಾಂಸಾರಿದೆನು ಸೃಷ್ಟಿಯೊಳಗೆ॥೨॥

ಸುಲಭವಾದ ಉಪಾಯಗಳಿಂದಲೂ, ಸರ್ವಸಾಧಾರಣ

ನಾದ ಗುಣಗಳ ಸಹಾಯದಿಂದಲೂ, ದೊಡ್ಡ ದೊಡ್ಡ ಕೃತ್ಯಗಳು ಸಾಧಿಸಲ್ಪಡುತ್ತವೆ. ನಮ್ಮ ದಿನಚರ್ಯದ ಅತಿ ಸಾಧಾರಣವಾದ ವ್ಯವಹಾರಗಳಲ್ಲಿ ಉಂಟಾಗುವ ಚಿಂತೆಗಳಿಂದಲೂ, ತೊಂದರೆಗಳಿಂದಲೂ, ಕರ್ತವ್ಯ ಕರ್ಮಗಳಿಂದಲೂ ನೇಲಾದ ಅನುಭವಜ್ಞಾನವನ್ನು ಸಂಪಾದಿಸುವದಕ್ಕೆ ಬೇಕಾದಷ್ಟು ಸಾಧನವಿರುತ್ತದೆ. ನಮ್ಮ ನಿತ್ಯ ಕೃತ್ಯಗಳಲ್ಲಿ ಎಲ್ಲರಿಂದಲೂ ಅನುಸರಿಸಲ್ಪಡುವಂಥ ಮಾರ್ಗಗಳಲ್ಲಿಸಹ ನಾವು ಮನಮುಟ್ಟಿ ಉದ್ಯೋಗ ಮಾಡುವವರಿದ್ದರೆ, ನಾವು ಯತ್ನಿಸತಕ್ಕಂಥ ವಿಷಯಗಳೂ, ನಮ್ಮ ಸ್ವಂತ ಸುಧಾರಣೆಗೆ ಅವಕಾಶವೂ ಬೇಕಾದಷ್ಟು ಉಂಟು. ತಪ್ಪದೆ ಸತ್ಕೃತ್ಯಗಳನ್ನು ಮಾಡುವ ಮಾರ್ಗದ ನೆರೆಯಲ್ಲಿಯೇ ಮನುಷ್ಯನ ಸ್ವಹಿತದ ಮಾರ್ಗವು ಬಿದ್ದಿರುತ್ತದೆ. ಇದರಲ್ಲಿ ಯಾರು ಪರಮಾವಧಿಯ ಹಟದಿಂದ ನಿಜವಾದ ಉತ್ಸಾಹದೊಂದಿಗೆ ಕೆಲಸಮಾಡುವರೋ, ಅವರೇ ವಾಡಿಕೆಯಾಗಿ ಅತ್ಯುತ್ತಮ ಲಾಭಗಳನ್ನು ಪಡಕೊಳ್ಳುವರು.

ದೈವವು ಕುರುಡಾದ್ದೆಂದು ಜನರು ಪುನಃ ಪುನಃ ಅದಕ್ಕೆ ಕುಂದನಿಡುತ್ತಾರೆ; ಆದರೆ ಮನುಷ್ಯರಲ್ಲಿ ಕುರುಡತನವಿದ್ದಷ್ಟು ಅದರಲ್ಲಿಲ್ಲ. ಈ ಲೋಕದ ನಡಾವಳಿಯನ್ನು ಲಕ್ಷ್ಯವಿಟ್ಟು ನೋಡಿದರೆ, ಚತುರನಾದ ನಾವಿಕನಿಗೆ ತೆರೆಗಳೂ, ಗಾಳಿಯೂ ಹ್ಯಾಗೆ ಅನುಕೂಲವಾಗುತ್ತವೆಯೋ ಹಾಗೆ ದೈವವು ಉದ್ಯೋಗಿಗಳಿಗೆ ಅನುಕೂಲವಾಗುತ್ತದೆಂದು ತಿಳಿದು ಬರುವದು. ಅತಿ ಮಹತ್ವವುಳ್ಳ ಶೋಧಗಳಲ್ಲಿಸಹ ಅತಿ ಸಾಧಾರಣವಾದ ಗುಣಗಳು ಬಹಳೇ ಪ್ರಯೋಜನವುಳ್ಳವುಗಳಾಗಿರುತ್ತವೆಂದು ಕಂಡುಬಂದದೆ. ಆ ಗುಣ

ಗಳು ಯಾವವೆಂದರೆ, ಧೂರ್ತತ್ವವೂ, ಲಕ್ಷ್ಯವೂ, ಆಸಕ್ತಿಯೂ, ದೃಢನಿಶ್ಚಯವೂ, ಇತ್ಯಾದಿ. ಮನುಷ್ಯನಲ್ಲಿ ಬುದ್ಧಿಕೌಶಲ್ಯವಿಲ್ಲದಿದ್ದರೂ, ಅವನಿಂದ ಮಹತ್ಕಾರ್ಯಗಳಾಗುವವು; ಆದರೆ ಮೇಲಾದ ಬುದ್ಧಿಕೌಶಲ್ಯವುಳ್ಳವನು ಸಹ ಈ ಸಾಮಾನ್ಯ ತರದ ಗುಣಗಳ ಸಹಾಯವನ್ನು ಧಿಕ್ಕರಿಸಲಾರನು. ಈ ಲೋಕದಲ್ಲಿ ಪರಮೋನ್ನತಿಯ ಪಡೆದವರು, ಬುದ್ಧಿಕೌಶಲ್ಯವೆಂಬದೊಂದು ಶಕ್ತಿಯುಂಟೆಂದು ನಂಬದಂಥವರಲ್ಲಿಯೇ ಆದರು; ಅವರಲ್ಲಿ ಲೌಕಿಕ ಚಾತುರ್ಯವೂ, ದೃಢನಿಶ್ಚಯವೂ, ತಮ್ಮ ಮನೋರಥವನ್ನು ಸಾಧಿಸಿಕೊಂಡಂಥ ಸಾಧಾರಣ ಜನರಲ್ಲಿ ಇರುವಷ್ಟೇ ಇತ್ತು. ಬಲವಾದ ಧೂರ್ತತ್ವವೇ ಬುದ್ಧಿಕೌಶಲ್ಯವೆಂದು ಸಹ ಕೆಲವರು ಪ್ರತಿಪಾದಿಸುತ್ತಾರೆ. ಒಬ್ಬ ಹೆಸರಾದ ವಿದ್ಯೋಪದೇಶಕನೂ, ಮಹಾ ವಿದ್ಯಾಲಯದ ಮುಖ್ಯಾಧಿಕಾರಿಯೂ ಆದ ಗೃಹಸ್ಥನು ಯತ್ನನಡಿಸುವ ಶಕ್ತಿಯೇ ಬುದ್ಧಿಕೌಶಲ್ಯವೆಂದು ಹೇಳಿದ್ದಾನೆ. ಮನುಷ್ಯನ ಆವೇಶವೆಂಬ ಅಗ್ನಿಯನ್ನು ಜಾಜ್ವಲ್ಯಪಡಿಸುವ ಶಕ್ತಿಯೇ ಬುದ್ಧಿಕೌಶಲ್ಯವೆಂದು ಜಾನ್‌ಫಾಸ್ತರನೆಂಬವನ ಮತವಿತ್ತು. ತಾಳ್ಮೆಯೇ ಬುದ್ಧಿಕೌಶಲ್ಯವೆಂದು ಬಫನ್ನನೆಂಬವನು ಅನ್ನುತ್ತಿದ್ದನು.

Champu Ramayen and Champu Bharata with Commentaries in Canarese by M. Shantaviraya.

ಚಂಪೂ ಭಾರತೆ ಸವ್ಯಾಖ್ಯಾನೆ ಪ್ರಥಮ ಸ್ತಬಕಃ

॥ವೃತ್ತಂ॥

ಜಗ್ರಾಹನಿಗ್ರಾಹವರಃ ಪರಶ್ರಿಯಾಂ।

ಕರೈಃ ಕರಾಗ್ರೇಣ ಕರೇಣುಚಂಕ್ರಮಃ।
ಕುಂತೀಂ ಶಕುಂತೇಶರಥೋ ಯಥಾ ರಮಾಂ।
ಸಮುದ್ರಕಾಂಚೀಂ ಚ ಸಮುದ್ರಕನ್ಯಕಾಂ॥೩೭॥

ಅನ್ವಯಃ

ಕರೈಃ=ಕಾಣ್ಕೆಗಳಿಂದ। ಪರಶ್ರಿಯಾಂ, ಪರ=ಶತ್ರುಗಳ, ಶ್ರಿಯಾಂ=ಸಂಪದವನ್ನು। ನಿಗ್ರಾಹಪರಃ, ನಿಗ್ರಾಹ=ಅತಿಶಯ ಗ್ರಹಿಸುವಲ್ಲಿ, ಪರಃ=ಆಸಕ್ತನಾದಂಥ। ಕರೇಣುಚಂಕ್ರಮಃ, ಕರೇಣು=ಆನೆಯೋಪಾದಿಯಲ್ಲಿ, ಚಂಕ್ರಮಃ=ಗಮನವುಳ್ಳಂಥ। ಸಃ=ಆ ಪಾಂಡುರಾಯನು। ಕುಂತೀಂ=ಕುಂತೀದೇವಿಯನ್ನೂ। ಮದ್ರಕನ್ಯಕಾಂ ಚ = ಮಾದ್ರಿಯನ್ನೂ। ಯಥಾ=ಹ್ಯಾಂಗೆ। ಶಕುಂತೇಶರಥಃ, ಶಕುಂತ=ಪಕ್ಷಿಗಳ್ಗೆ, ಈಶ=ಶ್ರೇಷ್ಟವಾದ ಗರುಡನೆ, ರಥಃ=ವಾಹನನಾಗ್ಯುಳ್ಳ ನಾರಾಯಣನು। ರಮಾಂ= ಲಕ್ಷ್ಮೀಯನ್ನೂ। ಸಮುದ್ರಕಾಂಚೀಂ=ಸಮುದ್ರವೆ ಒಡ್ಯಾಣವಾಗುಳ್ಳ ಭೂದೇವಿಯನ್ನೂ (ಗ್ರಹಿಸಿದನು) ತಥಾ=ಹಾಂಗೆ। ಕರಾಗ್ರೇಣ=ಹಸ್ತದಿಂದ। ಜಗ್ರಾಹ=ಗ್ರಹಿಸಿದನು.

॥ಶಾಸ್ತ್ರವಿಷಯಃ॥

ಸಃ, (ಕ) ಕುಂತೀಂ, ಸಮುದ್ರಕನ್ಯಕಾಂ (ದ್ವಿ) ಜಗ್ರಾಹ(ಕ್ರಿ)–ಉಪಮಾಲಂಕಾರ–ಜಗ್ರಾಹ=(ಜ+ಗ್ರಹ್+ಅ) ಜ ಎಂಬುದು * ಲಿಟಿಧಾತೋರನಭ್ಯಾಸಸ್ಯ * ಪೂರ್ವೋಭ್ಯಾಸಃ * ಹಲಾದಿಶೇಷಃ * ಕುಹೋಶ್ಚುಃ – ಈ ಸೂತ್ರಗಳಿಂದಾದ ಅಭ್ಯಾಸದ ವರ್ಣವು, ಗ್ರಹ್ ಎಂಬುದು ಉಪಾದಾನಾರ್ಥದಲ್ಲಿಯೂ ಸ್ವರಿತಸ್ವರದಲ್ಲಿಯೂ ೯ ನೇ ಕ್ರ್ಯಾದಿಗಣದಲ್ಲಿಯೂ ಉಭಯ ಪದಗಳಲ್ಲಿಯೂ ಇರುವ ಧಾತು,

ಥ ಎಂಬುದು ಲಿಟ್‌ಲಕಾರ, ಭೂತಕಾಲ, ಪ್ರಥಮ ಪುರು
ಷ, ಏಕವಚನ, (ಅ ಎಂಬುದು ಣಿತ್ ಇದ್ದದರಿಂದ ಗ್ರಾ
ಹ್ ಆಯಿತ್ತು).

॥ಭಾವಾರ್ಥ॥

ಹರಿಯು ಲಕ್ಷ್ಮಿಯನ್ನೂ ಭೂದೇವಿಯನ್ನೂ ಅಂ
ಗೀಕರಿಸಿದ ಹಾಂಗೆ ಶತೃಗಳಿಂದ ಕಷ್ಟವನ್ನು ತೆಗೆದುಕೊಂ
ಡ ಮಂದ ಗಮನದ ಪಾಂಡುರಾಜನು ಕುಂತಿಯನ್ನೂ ಮಾ
ದ್ರಿಯನ್ನೂ ಅಂಗೀಕರಿಸಿದನು.

ಶಾಂತವೀರ ರಾಚದೇವ ಕಿತ್ತೂರ ಟ್ರೇನಿಂಗಕಾಲೇಜ.

NOTICES.

ನೋಟೀಸುಗಳು.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾ
ಸ್ತರಿಗೆ ತಿಳಿಯ ಪಡಿಸುವದೇನಂದರೆ—

೧ ಚಡಚಣ ಸಾಲಿಯ ವಾರ್ಷಿಕ ಪರೀಕ್ಷೆಕ್ಕೆ ನಾವು
ಹೋದಾಗ್ಗೆ ಅಲ್ಲಿಯ ಮಾಸ್ತರನಾದ ರಾಮಚಂದ್ರ ಗಂಗಾ
ಧರ ಇವನು ಎಡರ್ಡ್ ದಿವಸದ ಹಾಜರಿ ತುಂಬಿದ್ದಿಲ್ಲಾ ಕಾ
ರಣ ಅವನಿಗೆ ನಾಲ್ಕು ಅಣೆ ದಂಡ ಮಾಡಿರುತ್ತದೆ.

೨ ಕುಂದರಗಿ ಸಾಲಿಗೆ ಮೆ. ಫಷ್ಟ ಅಶಿಸ್ಟಂಟ ಕ
ಲೇಕಟರ ಸಾಹೇಬ ಬಹಾದ್ದೂರ ಜಿಲ್ಲಾ ಕಲಾದಗಿ ಇವ
ರು ಪರೀಕ್ಷೆಗೋಸ್ಕರ ಹೋದಾಗ್ಯೆ ತಾರೀಖು ೩೦ ಎ
ಪ್ರೀಲದ ಹಾಜರಿ ಅಲ್ಲಿಯ ಮಾಸ್ತರರಾದ ಪ್ರಭಾಕರ ದಿ
ನಕರ ಇವರು ತುಂಬಿದ್ದಿಲ್ಲಾ ಕಾರಣಾ ೪ ಅಣೆ ದಂಡ
ಆಗುವದಕ್ಕೆ ಅವರ ಕಡಿಂದ ಬರೆದು ಬಂದ ಕಾರಣ ಸದ

ರ ಮಾಸ್ತರರಿಗೆ ೪ ಆಣೆ ದಂಡ ಮಾಡಲ್ಪಟ್ಟಿತು.

ಮೇಲಿನ ಮಜಕೂರ ನೋಡಿ ಯಾವತ್ತು ಮಾಸ್ತರರು ಜಾಗ್ರತೆಯಿಂದ ನಡಕೊಳ್ಳ ತಕ್ಕದ್ದು ದುರ್ಲಕ್ಷ್ಯ ಮಾಡಿದಲ್ಲಿ ಯೋಗ್ಯ ಶಿಕ್ಷೆಯಾಗುವದು ತಿಳಿಯುವದು. ತಾರೀಖು ೧೯ ಮೇ ಸನ್ನ ೧೮೭೪ ಇಸವಿ.

Ramchandra A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ತಿಳಿಯ ಪಡಿಸುವದೇನಂದರೆ ಕೆಲವು ಮಾಸ್ತರರು ಇತ್ತ ಕಡೆಯ ಪರವಾನಗಿಯ ಹೊರ್ತು ರಜೆದ ಮೇಲೆ ಹೋದರು ಅವರಿಗೆ ಇತ್ತ ಕಡಿಂದ ಶಿಕ್ಷೆ ಮಾಡಲ್ಪಟ್ಟ ವಿವರಾ—

೧ ರಾಮಚಂದ್ರ ಅಣ್ಣಾಜಿ ರಾಯಬಾಗ ಸ್ಕೂಲಮಾಸ್ತರ ಯಂಡಿಗೇರಿ ಇವರು ರಿಪೋರ್ಟ ಮಾಡಿ ರಜೆದ ಮೇಲೆ ಹೋದರು. ಹುಕುಮಿನ ಜರೂರ ಇದಲಿಲ್ಲಾ ಕಾರಣ ಡೆ. ಇ. ಇನಸ್ಪೇಕಟರ ಸಾಹೇಬರವರ ಮಂಜೂರಿಯಿಂದ ೧೨ ರೂಪಾಯಿ ಸಂಬಳದಿಂದ ಕಡಿಮೆ ಮಾಡಿ ೮ ರೂಪಾಯಿ ಸಂಬಳಕ್ಕೆ ನೇಮಿಸಿರುತ್ತದೆ.

೨ ಅಣ್ಣಾಜಿ ಜೀವಾಜಿ ಗೋತಗಿ ಸ್ಕೂಲ ಮಾಸ್ತರ ಜೀ॰ ಶಾಲಿ ಮುದ್ದೇಬಿಹಾಳ ಇವರು ಎರ್ಡು ದಿವಸ ಗೈರಹಾಜರ ಆದದರಿಂದ ಆ ಎರಡು ದಿವಸದ ಸಂಬಳ ಹಿಡಕೊಂಡದ್ದಲ್ಲದೆ ೪ ಅಣೆ ದಂಡ ಮಾಡಿರುತ್ತದೆ.

೩ ನೀಲಪ್ಪಾ ಗುರಲಿಂಗಪ್ಪಾ ಸ್ಕೂಲಮಾಸ್ತರ ತುಂಬ

ಗಿ ಇವರು ರಿಪೋರ್ಟ ಮಾಡಿ ೮ ದಿವಸ ಗೈರಹಾಜರಾದರು ಹುಕುಮಿನ ಜರೂರ ಇಡಲಿಲ್ಲಾ ಕಾರಣ ಅಷ್ಟು ದಿವಸದ ಸಂಬಳ ಕೊಯಿದದ್ದಲ್ಲದೆ ೪ ಆಣೆ ದಂಡ ಮಾಡಿರುತ್ತದೆ.

೪ ಸಂಜೀವ ರಾಮಚಂದ್ರ ಖಾನಪೇಟ ಸ್ಕೂಲಮಾಸ್ತರ ತಾಂಬೆ ಇವರು ರಜೆದ ಹೊರ್ತು ಹೆಚ್ಚಿಗೆ ೨೩ ದಿವಸ ಗೈರಹಾಜರಾದದರಿಂದ ಮೆ. ಇ. ಇನಸ್ಪೇಕಟರ ಸಾಹೇಬರವರ ಮಂಜೂರಿಯಿಂದ ಅವರಿಗೆ ಒಂದು ತಿಂಗಳ ಸಂಬಳ ದಂಡಮಾಡಿಪುತ್ತದೆ.

ಮೇಲಿನ ಮಜಕೂರ ಯಾವತ್ತು ಮಾಸ್ತರರು ನೋಡಿ ಜಾಗ್ರತೆಯಿಂದ ನಡಕೊಳ್ಳ ತಕ್ಕದ್ದು ಯಾಗಾದರೂ ಬಗರ ಹುಕುಮಿನಿಂದ ಗೈರಹಾಜರಾದಲ್ಲಿ ಶಿಕ್ಷೆಕ್ಕೆ ಪಾತ್ರರಾಗುವರು ಹೊರ್ತು ಕೆಲಸದ ಮೇಲೆ ಹಕ್ಕ ಸಹ ಉಳಿಯುವದಿಲ್ಲಾ ಇದು ಲಕ್ಷದಲ್ಲಿಡತಕ್ಕದ್ದು. ತಿಳಿಯುವದು ತಾರೀಖು ೧೯ ಮಾಹೆ ಮೇ ಸನ್ನ ೧೮೭೪ ಇಸವಿ.

Ramchandra A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

Correspondence.

ಪತ್ರವ್ಯವಹಾರವು.

೪ ಕನ್ನಡ ಶಾಳೇ ಖಾತಿನ ಅಧ್ಯಕ್ಷರು ಭಗೀರಥ ಪ್ರಯತ್ನದಿಂದ ಹ್ಯಾಗೆ ಶಾಳೆಗಳನ್ನು ತಂದರೋ, ಹಾಗೆ ಅದನ್ನು ಉಪಯೋಗಿಸಿ, ಅದರ ಲಾಭವನ್ನು ತೆಗೆಯಬೇಕು. ಜನರಿಗೆ ಹೆಚ್ಚಾಗಿ ಪ್ರಿಯವಾಗಿರುವ ಗ್ರಂಥಗಳಂ

ನು ಬೇಗ ಬೇಗನೇ ಶುದ್ಧವಾಗಿ ಭಾಷಿಸಬೇಕು. ಸಂಸ್ಕೃ
ತ ಭಾಷೆಯನ್ನು ಕಲಿಯಲಿಚ್ಛಿಸುವ ಬಹು ಜನರಿಗೆ ಕನ್ನ
ಡದಲ್ಲಿ ಭಾಷಾಂತರಿಸಿದ ಪುಸ್ತಕಗಳು (ಈ ಮಾದರಿಯ
ಸ್ತುತ್ಯ ಕೆಲಸವನ್ನು ಈಗ ಶಾಲಾಪತ್ರಿಕೆಯಲ್ಲಿ ಚಂಪೂ
ಭಾರತ ರಾಮಾಯಣಗಳ ವ್ಯಾಖ್ಯಾನ ರೂಪದಿಂದ ಶಾಂತ
ವೀರಯ್ಯನವರು ಮಾಡಿ ತೋರಿಸುತ್ತಾರೆ) ಇಲ್ಲದ ಕಾರ
ಣ ನಿರುಪಾಯರಾಗಿದ್ದಾರೆ ಅಂಥಾ ಗ್ರಂಥಗಳು ಇಂಗ್ಲಿಷ
ಭಾಷೆಯಲ್ಲಿ ತಯಾರಾಗಿರುವದನ್ನು ನೋಡಿದಿರಾ! ಆ ಪ್ರ
ಕಾರಾ ಇದರಲ್ಲಿಯೂ ಅನ್ಯ ಭಾಷೆಗಳ ಮೂಲ ಗ್ರಂಥಗ
ಳು (ಮುಖ್ಯವಾಗಿ ವ್ಯಾಕರಣವೇ ಭಾಷಾ ಮೂಲವೆನಿಸು
ತ್ತದೆ) ಸಿಗುತ್ತಿದ್ದರೆ ಜನರು ಈ ದೇಶಭಾಷೆಯ ಮೇಲೆ
ಪ್ರೀತಿ ಮಾಡದೇ ಇರಲಿಕ್ಕೇ ಇಲ್ಲ. ಅಂಥಾ ಯಾವಗ್ರಂ
ಥಗಳೂ ಈ ಭಾಷೆಯಲ್ಲಿಲ್ಲದ ಕಾರಣಾ ಕುರೂಪ ಸ್ತ್ರೀ
ಯನ್ನು ಕಂಡರೆ ಜನರ ಯಾವ ಮೇರೆಗೆ ಕಣ್ಣೆತ್ತುವದಿ
ಲ್ಲೋ ಹಾಗೆಯೋ ಈ ನಮ್ಮ ಭಾಷೆಯೆಂದರೆ ಎಲ್ಲರಿಗೂ
ಅರೋಚಕವು ಹುಟ್ಟಿಹೋಗಿದೆ. ಈ ಭಾಷಾರೂಪ ಸ್ತ್ರೀ
ಯು ನಾನಾ ತರದ ಉಪಾಧಿಗಳಿಂದ ಕುರೂಪೆಯಾಗಿದ್ದಾ
ಳೆ. ಆ ಉಪಾಧಿಗಳು ಹಿಂದೆ ಹೇಳಲ್ಪಟ್ಟವು ಹಾಗು
ಮುಂದಾದರೂ ಹೇಳಲ್ಪಟ್ಟಾವು. ಅವುಗಳನ್ನು ಮೊದ
ಲು ಇಲ್ಲದಂತೆ ಮಾಡಬೇಕು. ಹಿಂದುಗಡೆ ಅವಳನು
ಅಲಂಕಾರಗಳಿಂದ ಶೃಂಗರಿಸಬೇಕು:– ವ್ಯಾಕರಣವೇ
ಅವಳ ಮೂಲ ಸ್ವರೂಪವು; ಛಂದಶ್ಶಾಸ್ತ್ರವೇ ಕಂಚುಕ
ವು; ಸರ್ವೋಪಯೋಗಿಗಳಾದ ಗದ್ಯ, ಪದ್ಯಾತ್ಮಕಳಾದ
ಸ್ವಭಾಷಾ ಗ್ರಂಥಗಳೇ ಪೀತಾಂಬರವು; ಅನ್ಯ ಭಾಷೆಯ

ಶ್ನೂಲಗಳನ್ನು ವಿವರಿಸುವ ಈ (ಕನ್ನಡ) ಭಾಷೆಯು
ಗ್ರಂಥಗಳೇ ಅನಪ್ಯರ್ಕವಾದ ಅಲಂಕಾರಗಳು ಹೀಗೆ ಶೃಂಗ
ರಿಸಲ್ಪಟ್ಟ ವಾಗ್ದೇವಿಯನ್ನು ಕಂಡರೆ ದಾರು ಮೋಹಿಸಲಿ
ಕ್ಕಿಲ್ಲ? ಸಾರಾಂಶವೇನಂದರೆ: ಜನರಿಗೆ ಪ್ರೀತ್ಯಾಸ್ಪದವಾ
ದ ಅನೇಕ ಪುಸ್ತಕಗಳನ್ನು ಭಾಷಿನ ಪ್ರಮುಖರು ಸಿಂಹ
ಪ್ರಯತ್ನದಿಂದ ಪ್ರಸಿದ್ಧಿ ಪಡಿಸಿದರೆ ತಮಗೆ ವಾಕ್ಸಧಾರ
ಣೆಯು ಕೀರ್ತಿಯೂ, ಲೋಕೋಪಕಾರವೂ, ಲಾಭವೂ,
ದೇಶ ಬಾಂಧತ್ವವೂ ದೊರೆಯುತ್ತವೆ. ಪ್ರಯಾಸದಿಂದ
ಸ್ಥಾಪಿಸಲ್ಪಟ್ಟ ಅವರ ಕಾರಖಾನೆಯು ಸಫಲವಾಗುತ್ತದೆ.
ಈ ಈಗಿನ ಪ್ರಭುತ್ವವು ಇಂಗ್ಲಿಷ ಜನರದಾದ ಕಾರ
ಆ ಭಾಷೆಗೆ ಬಹುಮಾನವಾಗಿ, ಲಾಭವಾದರೂ ಆಗುತ್ತ
ವೆಂದು ಎಲ್ಲಾ ಜನರು ತಮ್ಮ [illegible]ಗರಿಗೆ ೭।೧೦ ವರ್ಷ
ಗಳಿಂದ ಇಂಗ್ಲಿಷ ಅಭ್ಯಾಸವನ್ನೇ ಮಾಡ ಹಚ್ಚುತ್ತಾರೆ.
ಅವರು ತಮ್ಮ ೨೦ ವರ್ಷಗಳವರಿಗೆ ಅಭ್ಯಾಸವನ್ನು
ಮಾಡಿಯೂ "ಮ್ಯಾಟ್ರಿಕ್ಯುಲೇಶನ್" ಎಂಬ ಪ್ರಥಮ
ಇಂಗ್ಲಿಷ ಪರೀಕ್ಷೆಯನ್ನು ಕೊಡಬೇಕಾದರೆ ಪ್ರಯಾಸ
ವಾಗಿ ಹೋಗುತ್ತದೆ. ಇದರ ಕಾರಣವೇನಂದರೆ: ಅವರಿ
ಗೆ ತಮ್ಮ ಭಾಷೆಯ ವ್ಯಾಕರಣಜ್ಞಾನವು ಇರುವದಿಲ್ಲ.
ಹ್ಯಾಗೆ ಇಂಗ್ಲಿಷವನ್ನು ಶುದ್ಧವಾಗಿ ಬರಿಯಲೋದಲು
ಶಕ್ತರಾಗಿರುತ್ತಾರೋ, ಹಾಗೆ ತಮ್ಮ ಮಾತಿನಲ್ಲಿ ಶುದ್ಧ
ವಾಗಿ ಒಂದು ಕಾಗದವನ್ನು ಬರಿಯೋಣವು ಅವರಿಂದಾ
ಗುವದಿಲ್ಲ. ಪಲ್ಯಾ ಕಾಂಖಿಗಳ, ದೇವರು ದಿಂಡರ, ಮಂ
ತ್ರತಂತ್ರಗಳ, ವೇಳೆಯಲ್ಲಿ ಸುದ್ಧಾ ಬೇಗನೇ ಇಂಗ್ಲಿಷ
ಶಬ್ದಗಳು ಬಾಯಿಂದ ಹೊರಟಂತೆ ಉಳಿದ ಮಾತುಗಳು

ಹೊರಡುವದಿಲ್ಲ, ದಾವದಾದರೊಂದು ಇಂಗ್ಲಿಷ ವಾಕ್ಯದ ಅರ್ಥವನ್ನು ಸ್ವಭಾಷೆಯಲ್ಲಿ ಭಾಷಾಂತರಿಸೆಂದು ಹೇಳಿದರೆ ಅದೂ ಅವರಿಗೆ ಬರುವದಿಲ್ಲ. ಹಾಗೂ ಈಗಿನ ಕನ್ನಡಿಗರು ಇಂಗ್ಲಿಷ ಶಬ್ದಗಳಿಗೆ ಮಹಾರಾಷ್ಟ್ರ ಶಬ್ದಗಳ ಅರ್ಥವನ್ನೇ ಪಾಠ ಮಾಡುತ್ತಾರೆ; ಒಳ್ಳೇದು! ಅವರಿಗೆ ಆ ಮಹಾರಾಷ್ಟ್ರದ ಶುದ್ಧ ಜ್ಞಾನವಿರುತ್ತದೋ? ಇಲ್ಲವೇ ಇಲ್ಲ ಅದರಿಂದ ಅವರಿಗೆ ಒಂದು ಶಬ್ದವನ್ನು ಕೇಳಿ, ಇದರ ಅರ್ಥವನ್ನು ಕಂನಡಿನಲ್ಲಿ ಹೇಳೆಂದರೆ: ಏನಾದರೂ ಒಂದು ಚಮತ್ಕಾರದ, ಉದ್ದವಾದ ಅಶುದ್ಧ ಶಬ್ದವೆಂನು ಹೇಳಿಬಿಡುತ್ತಾರೆ; ಕೆಲವರು ನಮ್ಮ ಮಾಸ್ತರರು ಕನ್ನಡದ ಅರ್ಥವನ್ನು ಹೇಳಲ್ಲೆಂನುತ್ತಾರೆ; ಕೆಲವರು ಮಹಾರಾಷ್ಟ್ರವನ್ನೇ ಹೇಳುತ್ತಾರೆ; ಕೆಲವರಿಗೆ ಅದೂ ಬರದೆ ಸುಮ್ಮನೇ ತುಟಿಗಳಂನಲ್ಲಾಡಿಸುತ್ತಾರೆ; ಅವರಿಂದ ಸಮರ್ಪಕ ಉತ್ತರವನ್ನು ಕೊಡೋಣವಾಗುವದಿಲ್ಲ. "ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲೆಂಬಂತೆ" ಇಂಥವರ ಅವಸ್ಥೆಯು ಕಡಿಗೆ ಏನಾಗುತ್ತದೆಂದರೆ: ಇಂಗ್ಲಿಷಿನಲ್ಲಿರುವ ಅಭಿಪ್ರಾಯವನ್ನು ಕನ್ನಡಿನಲ್ಲೂ, ಮಹಾರಾಷ್ಟ್ರದಲ್ಲೂ ಕೂಡಾ ಹೇಳಲಿಕ್ಕೆ ಬರುವದಿಲ್ಲ. ಅವರ ಆತ್ಮಕ್ಕೆ ಹ್ಯಾಗೆ ಗೊತ್ತಾಗಿರುತ್ತದೋ ಆಗಿರಲಿ; ಇನ್ನೊಬ್ಬರಿಗೆ ಚನ್ನಾಗಿ ತಿಳುಹಿಸಲಿಕ್ಕೆ ಬರುವದಿಲ್ಲ. ಕಡೆಗೆ ಕೈ ಸೊನ್ನೆ ಬಾಯಿ ಸೊನ್ನೆಯಾಗಿ, ಮೂಕರ ವಿಚಾರವಾಗಿ ಹೋಗುತ್ತದೆ. ಒಳ್ಳೇದು; ಅವರಿಗೆ ಲೆಕ್ಕ ಪತ್ರಗಳ ಜ್ಞಾನವೇನಾದರೂ ಇರುತ್ತದೋ? ಬಾಲ್ಯದಲ್ಲಿಯೇ ಇಂಗ್ಲಿಷ ಅಭ್ಯಾಸದ ಝಪಾಟೆಯಿಂದ ಆ ವಿಷಯಗಳು

ಅಪ್ರಾರ್ಥಿಯಾಗಿ ಕೂತಿರುತ್ತವೆ. ಇಂಥವರೇ ಕೆಲವು ಸ್ಕೂಲಿಯ ಶಿಕ್ಷಕರೂ, ಹೆಡ್ಡಮಾಸ್ತರರೂ ಆಗಿ ನೇಮಿಸಲ್ಪಟ್ಟಿರುತ್ತಾರೆ. ಈ ತರದ ವಿದ್ವಾಂಸರು ಈಗ ಅನೇಕರಾಗಿದ್ದಾರೆ. ಇವರಿಂದ ತಿದ್ದಲ್ಪಡುವ ವಿದ್ಯಾರ್ಥಿಗಳು ಹ್ಯಾಣಗುವರೆಂಬದಂನು ಹೇಳಿ ತಿಳುಹಿಸಬೇಕೆಂಬ ಹಾಗಿಲ್ಲ. ಇದೇ ಮೇರೆಗೆ ಈಗ ಸಂಸ್ಕೃತ ಅಭ್ಯಾಸವನ್ನು ಕನ್ನಡ ಹುಡುಗರು ಇಂಗ್ಲಿಷದಲ್ಲಿಯೇ ಮಾಡುತ್ತಾರೆ. ಅವರಿಗೆ ಸಂಸ್ಕೃತದ ಅರ್ಥವು ಇಂಗ್ಲಿಷನಲ್ಲಿ ಅಲ್ಲದೇ ಕನ್ನಡಿನಲ್ಲಿ ತಿಳಿಯುವದಿಲ್ಲ. ಸಂಸ್ಕೃತ ವ್ಯಾಕರಣದ ನಿಯಮಗಳನ್ನು ಕನ್ನಡಿನಿಂದ ಹೇಳಲಿಕ್ಕೇ ಬರುವದಿಲ್ಲ. ನೋಡಿದಿರಾ! ಎಂಥಾ ಪ್ರಮಾದವು! ಹೀಗೆ ಕಲಿತರೆ ನಮಗೆ ಏನು ಲಾಭವೆಂದು ಯಾರಿಗೂ ತಿಳಿಯುವದಿಲ್ಲ. ಹೀಗೆಯೇ ಸಂಸ್ಕೃತವನ್ನು ಕಲಿತು ಪಂಡಿತರಾಗಿರುವ ಆಚಾರ್ಯರು ಬಹು ಮಂದಿಯು (ಇವರು ಇಂಗ್ಲಿಷಿನಿಂದ ಕಲಿತವರಲ್ಲ ಕನ್ನಡಿನಲ್ಲಿಯೇ ಕಲಿತು, ಉಭಯ ವ್ಯಾಕರಣಗಳನ್ನೂ ಅರಿಯದಂಥವರೆಂದು ತಿಳಿಯಿರಿ) ಇಂಗ್ಲಿಷವನ್ನು ಕಲಿತ ಸದರಹು ವಿದ್ವಾಂಸರ ವರ್ಣನೆಯಂತೆ ಈ ಸಂಸ್ಕೃತಜ್ಞರಾದ ಆಚಾರ್ಯರ ಸ್ಥಿತಿಯೆಂದು ತಿಳಿಯಬೇಕು. ಇದರ ಮೇಲಿಂದ ಅನ್ಯ ಭಾಷೆಯ ಅಭ್ಯಾಸವನ್ನು ಮಾಡಬಾರದೆಂದು ಹೇಳುವದಿಲ್ಲ. ಪರ ಭಾಷೆಯ ಜ್ಞಾನವು ಮನುಷ್ಯರಿಗೆ ಬಹು ಅವಶ್ಯವಾದದ್ದು. ಬಹು ಭಾಷಿಗೆ ಸನ್ಮಾನವಾದರೂ ಬಹಳೇ. ಪರಂತು ತಮ್ಮ ಮಕ್ಕಳಿಗೆ—ಅನ್ಯ ಭಾಷೆಯು ಬರಬೇಕೆಂದೂ ಮೇಲೆ ಹೇಳಿರುವ ಅವ್ಯವಸ್ಥೆಗಳಾಗಬಾರದೆಂದೂ ಬಯಸುವವರು ಹು

ಡುಗರನ್ನು ಮೊದಲು ತಮ್ಮ ಭಾಷೆಯಲ್ಲಿ ಬಳತಾಗಿ ತ್ರಿದ್ದಿಸಿ, ಅದರಲ್ಲಿ ಯುಕ್ತಾಯುಕ್ತ ವಿಚಾರಗಳು ಅವರಿಗೆ ಅರಿಕೆಯಾದ ಬಳಿಕ ದಾವ ಇತರ ಭಾಷೆಯುಂನಾದರೂ ಹೇಳಿಸಿದರೆ, ಸ್ವಲ್ಪ ಕಾಲದಲ್ಲಿಯೂ, ಸುಲಭವಾಗಿಯೂ ಬಂದು, ಜನರಲ್ಲಿ ಆ ವಿದ್ಯಾರ್ಥಿಗಳು ಸನ್ಮಾನವನ್ನು ಹೊಂದುವಂಥ ವಿದ್ವಾಂಸರಾಗಿ ಲಾಭವನ್ನು ಪಡೆಯುವರು. ಇಷ್ಟೇ ನಮ್ಮ ಅಭಿಪ್ರಾಯವು. ಯಾಕಂದರೆ "ಮನೆ ಗೆದ್ದು ಮಾರ ಗೆಲಿಯಬೇಕು" ಎಂದು ಹಿರಿಯರ ಗಂಭೀರ ವಾಕ್ಯವುಂಟು. ಕನ್ನಡ ಜನರು ಇಂಗ್ಲಿಷ ಶಬ್ದಗಳಗೂ, ಸಂಸ್ಕೃತ ಶಬ್ದಗಳಗೂ ಅನ್ಯ ಭಾಷೆಯ ಪರ್ಯಾಯ ಶಬ್ದಗಳನ್ನು ಪರಿಸದೆ ಶುದ್ಧ ಕನ್ನಡ ಶಬ್ದಗಳನ್ನೇ ಹುಡುಕಿ ಘಟ್ಟಿ ಮಾಡಬೇಕು ಅಂದರೆ ಮುಂದೆ ಭಾಷಾಂತರ ಮುಂತಾದವುಗಳಲ್ಲಿ ಅವ್ಯವಸ್ಥೆಯು ಎಂದಿಗೂ ಆಗಲಿಕ್ಕಿಲ್ಲ. ಇದರಿಂದ ಸ್ವಭಾಷೆಯ ಪ್ರಯೋಗವನ್ನು ತ್ಯಾಗ ಮಾಡಬೇಕೆಂಬದು ನಿಃಸಂದೇಹವಾಗಿ ತಿಳಿಯುತ್ತದೆ. ಇಷ್ಟೊತ್ತು ಬರೆದ ಈ ಪಾರಿಗ್ರಾಮದ ಸಾರಾಂಶವೇನಂದರೆ: "ಸ್ವಭಾಷೆಯು ಶುದ್ಧವಾಗಿ ಬರದೆ ಪರ ಭಾಷೆ ಎಂದಿಗೂ ಚಸ್ನಾಗಿ ಬರಲಿಕ್ಕಿಲ್ಲ"

ರಾವ ಸಾಹೇಬ ದಕ್ಷಿಣಭಾಗದ ಕನ್ನಡ ಶಾಲಾ ಪತ್ರಿಕದ ಎಡಿಟರರ ಸನ್ನಿಧಿಗೆ—

ವಿನಂತಿ ವಿಶೇಷ—ಕೆಳಗೆ ಬರೆದು ನಾಲ್ಕು ಪಂಕ್ತಿಗಳನ್ನು ತಾವು ಕರಕಂಜಭವವಾದ ಸರಸ ವಿಷಯಗಳಿಂದೆ ಸರವ ಸಂಕಲಿತಾದ ದರ ಒಂದು ತಿಂಗಳಿಗೆ ತೋರದ್ದಿಂ ಪ್ರೊರಪ

ಷ್ಟು ಧೀರಜನ ಸ್ತೋಮಗಳಿಗಾನಂದ ಕೊಡುವಂಥ ಶಾಲಾಪತ್ರಕದಲ್ಲಿ ಮುದ್ರಿಸಿ ಪ್ರಕಟಿಸುವಿರೆಂದು ಪರಮೋತ್ಸುಕನಾಗಿದ್ದೇನೆ.

ನಮ್ಮ ಈ ಉತ್ತರ ಕರ್ನಾಟಕ ದೇಶದಲ್ಲಿ, ಕನ್ನಡ ವ್ಯಾಕರಣಗಳೆಂದರೆ, ಬಾಲ ವ್ಯಾಕರಣ ಹಾಗೂ ಶಾಲಾ ವ್ಯಾಕರಣ ಇವೆರಡೇ ಇರುತ್ತವೆ. ಈ ಎರಡೂ ವ್ಯಾಕರಣಗಳಲ್ಲಿ, ಮುಖ್ಯವಾಗಿ ವ್ಯಾಕರಣ ಮಾಡುವ ಪದ್ಧತಿ ತೋರಿಸಿರುವದಿಲ್ಲದರಿಂದ, ವ್ಯಾಕರಣ ಕಲಿಯುವವರಿಗೂ, ಕಲಿಸುವವರಿಗೂ ಬಹಳ ತೊಂದರೆ ಉಂಟಾಗುತ್ತದೆ. ಬೇಕಾದವರು ಬೇಕಾಧಾಗೆ ವ್ಯಾಕರಣ ಮಾಡುತ್ತಾರೆ ಇಂಥಾ ರೀತಿಯಿಂದಲೇ ಮಾಡಬೇಕೆಂಬ ಕಟ್ಟಳೆ ಉಳದಿರೋದಿಲ್ಲ. ವ್ಯಾಕರಣ ಮಾಡುವಾಗ, ನಾಮ, ಸರ್ವನಾಮ, ಕ್ರಿಯಾಪದ ಇವುಗಳಲ್ಲಿ ನಾಮಪದಗಳಿಗೆ, ಅಂತ್ಯ, ಲಿಂಗ, ವಿಭಕ್ತಿ, ವಚನಗಳನ್ನೂ, ಸರ್ವನಾಮಗಳಿಗೆ ಅಂತ್ಯ ಹೊರ್ತಾಗಿ ಯಾವತ್ತು ನಾಮ ಪದದಂತೇ ಹಚ್ಚತಕ್ಕದ್ದು ಪರಂತು ಅದರ ವ್ಯಾಕರಣ ಹ್ಯಾಗೆ ನಡಿಸ ಬೇಕೆಂಬ ಕ್ರಮವು ಗೊತ್ತಿಲ್ಲ. ಕೆಲವರು ಕ್ರಿಯಾಪದ ನಡಿಸುವದೇ ಇಲ್ಲ. ಧಾತು ಹೇಳಿ ಅಷ್ಟಕ್ಕೆ ಬಿಟ್ಟು ಬಿಡುತ್ತಾರೆ. ಎಷ್ಟೋ ಸ್ಕೂಲಮಾಸ್ತರರ ಕ್ರಿಯಾಪದ ನಡಿಸುವ ರೀತಿಯಿಂದ ಅದರ ಸಂಬಂಧ ಏನೇನು ತಿಳಿಯುವದಿಲ್ಲ. ಅದು ಹ್ಯಾಗೆಂದರೆ—

"ಮಾಡುತ್ತಾರೆ ಕ್ರಿಯಾಪದ" ಮಾಡು ಧಾತು" ಸಕರ್ಮಕ"

"ನಿಶ್ಚಯಾರ್ಥ" ವರ್ತಮಾನ ಕಾಲ" ಪುಲ್ಲಿಂಗ" ಪ್ರ

ಥಮ ಪುರುಷದ ಬಹುವಚನ"

ಹೀಗೆ ವ್ಯಾಕರಣ ನಡಿಸುವ ಕ್ರಮವು ನ್ಯಾಗತೋ ರುತ್ತದೆಂದರೆ.

"ಸಾವುಕಾರ" ಮಗ" ದೇವದಾಸ"

"ಮಾವು" ಗಿಡದ ತೊಪ್ಪಲಾ"

ನಾವು ಸರ್ವ ನಾಮಗಳಾದರೂ ಇದೇ ಮೇರಿಗೆ ನಡಿಸುತ್ತಾರೆ. ಈ ವಿಷಯದಲ್ಲಿ ನಾನು ಸಂಶಯವೆಂಬ ಮಹಾ ಸಾಗರದಲ್ಲಿ ಬಿದ್ದಿದ್ದೇನೆ. ಆದರೆ ಈಗ ಮೇಲೆ ತೋರಿಸಿರುವ ಇದೇ ರೀತಿಯು ನಿಜವಾದದ್ದಾದರೆ, ಯಾವ ಕನ್ನಡ ವ್ಯಾಕರಣದಲ್ಲಿ ಹೇಳರುತ್ತದೆ? ಮತ್ತು ಬೇರೆ ಪ್ರಕಾರದಿಂದ ನಡಿಸ ಬೇಕಾದರೆನ್ಯಾಗೆ ನಡಿಸಬೇಕೆಂಬ ದಾಗ ನಮ್ಮ ಸ್ಕೂಲಮಾಸ್ತರರಾಗಲಿ, ಅಥವಾ ಮತ್ಯಾರಾದರೂ ವಿದ್ವಾಜ್ಞನರಾಗಲಿ ಈ ಸಂಶಯವು ಪರಿಹಾರವಾ ಹುವರೆಂದು ನಾನು ಬೈಸಿದ್ದೇನೆ.

ತಾ. ೨೬ನೇ ಮಾಹೆ ಮೇ ಸನ್ನ ೧೮೭೪ಳ ಇಸವಿ. } ಗೋವಿಂದ ರಾಮಚಂದ್ರ ಕಾಲಕುಂದರಗಿ ಸ್ಕೂ. ಧುಂಡಸಿ ತಾ. ಬಂಕಾಪೂರ.

ಬಗಟಿ.

ರಾ. ರಾ. ಕನ್ನಡ ಶಾಲಾಪತ್ರದ ಎಡಿಟರ ಇವರ ಸನ್ನಿಧಿಗೆ—

ಶೇವಕನು ಮಾಡಿಕೊಳ್ಳುವ ಬಿನ್ನಹ ಏನಂದರೆ, ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಅಂದವಾದ

ಸ್ಕೂಲ ಪೇಪರಿನಲ್ಲಿ, ಮುದ್ರಿಸುವದಕ್ಕೆ ಸ್ಥಳ ದೊರದೀತ್ತೆಂದು ಕೋರುತ್ತೇನೆ.

॥ಶ್ಲೋಕ॥ ಏಣಿಸಾಪಂಗತಿಲೆಖಾ।
ಗುಣಿಸಾರವಿದಳದಿಂದಾ॥
ಕೂಡಿದ ಧನದೊಳುರಿಣವನುಕಳಯಲು।
ಶವಣಿಲೆಖಾ ತಪ್ಪದೆ ಆಗೊದು॥೧॥

ಈ ಒಗಟಿಯು ಸ್ವಲ್ಪ ಚಮತ್ಕಾರವಾಗಿ ತೋರಿದ್ದರಿಂದ, ತಮ್ಮ ಕಡಿಗೆ ಕಳುಹಿಸಿದ್ದೇನೆ ನಮ್ಮ ಗುರುಗಳಾದ ಮಾಸ್ತರೂ ಬೇರೆ ವಿದ್ವಾಜ್ಞನರೂ ಇದನ್ನು ಚಂನಾಗಿ ವಿಂಗಡಿಸಿ ಇದೇ ಪತ್ರದ್ವಾರದಿಂದ ಬೋಧಿಸುವರೆಂದು ಆಶೆ ಗೈಯ್ಯುತ್ತೇನೆ ಇಂತಿ ಬಿನ್ನಹ.

ಮುಕ್ಕಾಮನಂದಿಕೇಶ್ವರ ತಾಲೂಕ ಬಾದಾಮಿ ಜಿಲ್ಲಾ ಕಲಾದಗಿ ತಾರಿಖು ೧೫ ಎಪ್ರೀಲ ಸನ್ನ ೧೮೭೪	ನಂದಿಕೇಶ್ವರ ಸಾಲಿಯ ವಿದ್ಯಾರ್ಥಿ. ರಾಮಚಂದ್ರ ಭೀಮಾಜಿ ದೇಶಪಾಂಡೆ ಬಾದಾಮಿ.

ಶ್ರೀಮದ್ರಾಜಸನ್ಮಾನಿತ ರಾ. ರಾ. ವಿದ್ಯಾ ಮತಪತ್ರಿಕ ಕರ್ತರಿಗೆ—

ಕೆಳಗೆ ಸಹಿ ಮಾಡುವವನು ವಿಜ್ಞಾಪನೆ ಮಾಡುವದೇನಂದರೆ—ನಾನು ವೃಷಭೇಂದ್ರವಿಜಯ ಪುರಾಣದೊಳಗಿನ ಎರಡು ಪದ್ಯಗಳನ್ನು ಟೀಕಿಸಿ ಕೆಳಗೆ ಬರೆದಿದ್ದೇನೆ. ಇವ್ರಗಳನ್ನು ತಮ್ಮ ಕರಕಂಜಾತದಿಂದ ಹುಟ್ಟುವ ಸುಂದರವಾದ ವಿದ್ಯಾ ಮತಪತ್ರಿಕದಲ್ಲಿ ಮುದ್ರಿಸುವಿರೆಂದು ಆಶಿಸು

ತ್ರೀನೆ.

॥ವೃ॥ಹರಿವಿಧಿಸುರಪತಿ ನತಪದವನಜೆ।
ಕರತಳಚಳದಸಿಹೃತಖಲದನುಜೆ॥
ವರವಿತರಣಜಿತದಿವಿಷದವನಿಜೆ।
ಪೊರೆಶರಣಜನರನಗವರತನುಜೆ॥೮॥

ಅನ್ವಯ—ಹರಿ ವಿಧಿಸುರಪತಿನತಪದವನಜೆ, ಹರಿ=ವಿಷ್ಣು, ವಿಧಿ=ಬ್ರಹ್ಮ, ಸುರಪತಿ=ದೇವತೆಗಳ ಪತಿಯಾದ ಇಂದ್ರರಿಂದ, ನತ=ನಮಸ್ಕರಿಸಲ್ಪಟ್ಟ, ಪದವನಜೆ= ಪಾದಕಮಲಗಳುಳ್ಳವಳೇ, ಕರತಳಚಳದಸಿಹೃತ ಖಲದನುಜೆ, ಕರತಳ=ಹಸ್ತಸ್ಥಾನದಲ್ಲಿ, ಚಳತ್=ಚಲಿಸುತ್ತಿರ್ದ, ಅಸಿ=ಖಡ್ಗದಿಂದ, ಹೃತ=ಹತಿಸಲ್ಪಟ್ಟ, ಖಲ=ನೀಚರಾದ, ದನುಜೆ=ರಕ್ಕಸರುಳ್ಳವಳೇ, ವರ ವಿತರಣಜಿತದಿವಿಷದವನಿಜೆ, ವರ=ಇಷ್ಟಾರ್ಥ, ವಿತರಣ=ದಾನದಿಂದ, ಜಿತ=ಗೆಲಿಯಲ್ಪಟ್ಟ, ದಿವಿಷದವನಿಜೆ=ದೇವಲೋಕದ ವೃಕ್ಷವಾದ ಕಲ್ಪವೃಕ್ಷವುಳ್ಳವಳೇ, ಅಗವರ=ಪರ್ವತರಾಜನ ತನುಜೆ=ಮಗಳಾದ ಪಾರ್ವತಿಯೇ ಶರಣಜನರಂ=ಶಿವಭಕ್ತ ಜನರನ್ನು ಪೊರೆ=ರಕ್ಷಿಸು.

ಭಾವಾರ್ಥ—ವಿಷ್ಣು ಬ್ರಹ್ಮ ದೇವೇಂದ್ರರಿಂದ ನಮಸ್ಕರಿಸಲ್ಪಟ್ಟ ಪಾದಗಳುಳ್ಳವಳೇ, ಕೈಕತ್ತಿಯಿಂದ ನೀಚರಾದ ದೈತ್ಯರನ್ನು ಸಂಹರಿಸಿದವಳೇ, ವರ ಕೊಡೋಣದರಿಂದ ಕಲ್ಪವೃಕ್ಷವನ್ನು ಸೋಲಿಸಿರುವವಳೇ, ಪರ್ವತರಾಜನ ಮಗಳಾದ ಪಾರ್ವತಿಯೇ ಶರಣಜನರನ್ನು ರಕ್ಷಿಸು.

॥ವೃ॥ಸುರರಾಜರತ್ನಮುಕುಟಾಂಶುಮಂಜರಿ।
ಪರಿರಮ್ಯಪಾದೆಮುರಿತಾಬ್ಧಿಕುಂಜರಿ॥

ಮರುದಿಂದ್ರವೈರಿಚಯಹೃದ್ಭಯಂಕರಿ।
ಪ್ರೋರೇಯೆಂನಮಿಂದುಧರಜಾಯೆಶಾಂಕರಿ॥೨॥

ಅನ್ವಯ—ಸುರರಾಜರತ್ನಮಕುಟಾಂಶುಮಂಜರಿ ಪರಿರಮ್ಯಪಾದೆ, ಸುರರಾಜ= ದೇವತೆಗಳರಸನಾದ ಇಂದ್ರನ, ರತ್ನ=ರನ್ನದ, ಮಕುಟ=ಕಿರೀಟದ, ಅಂಶು=ಕಿರಣಗಳ, ಮಂಜರಿ=ಸಮೂಹದಿಂದ, ಪರಿರಮ್ಯ= ಬಹು ಚಂದವಾದ, ಪಾದೆ=ಚರಣಗಳುಳ್ಳವಳೇ, ದುರಿತಾಬ್ಜ ಕುಂಜರಿ, ದುರಿತ=ಪಾಪವೆಂಬ, ಅಬ್ಜ=ಕಮಲಕ್ಕೆ, ಕುಂಜರಿ=ಹೆಂಣಾನೆಯಾದಾಕೆಯೇ, (ಆನೆಗೆ ಕಮಲಗಳನ್ನು ನಾಶಮಾಡುವ ಸ್ವಭಾವವುಂಟು) ಮರುದಿಂದ್ರವೈರಿಚಯಹೃದಯಂಕರಿ, ಮರುತ್ ಇಂದ್ರ=ದೇವತೆಗಳ ರಾಜನಾದ ಇಂದ್ರನ, ವೈರಿ=ಶತ್ರುಗಳಾದ ದೈತ್ಯರ, ಚಯ=ಸಮುದಾಯದ, ಹೃತ್ ಭಯಂಕರಿ= ಮನಸಿಗೆ ಭೀತಿಯನ್ನುಂಟು ಮಾಡಿದವಳೇ, ಇಂದುಧರಜಾಯೆ, ಇಂದುಧರ=ಚಂದ್ರನನ್ನು ಧರಿಸಿದವನಾದ ಈಶ್ವರನ, ಜಾಯೆ=ಪತ್ನಿಯೇ, ಶಾಂಕರಿ=ಸುಖವನ್ನುಂಟುಮಾಡುವವಳಾದ ಪಾರ್ವತಿಯೇ, ಏನಂ=ನನ್ನನ್ನು, ಪ್ರೋರೆ=ರಕ್ಷಿಸು.

ಭಾವಾರ್ಥ—ದೇವೇಂದ್ರನಿಂದ ನಮಸ್ಕರಿಸಲ್ಪಟ್ಟ ಚರಣಗಳುಳ್ಳವಳೇ, ಪಾಪಗಳನ್ನು ನಾಶ ಮಾಡಿದವಳೇ ದೇವತೆಗಳ ಹಗೆಗಳಾದ ರಾಕ್ಷಸರ ಮನಸ್ಸಿಗೆ ಅಂಜಿಕೆ ಹುಟ್ಟಿಸಿದವಳೇ ಶಿವನ ಪ್ರಾಣಕಾಂತೆಯೇ, ಸುಖವನ್ನುಂಟು ಮಾಡುವವಳಾದ ಪಾರ್ವತಿಯೇ ಎನ್ನನ್ನು ರಕ್ಷಿಸು.

ಕುರಗುಂದ ಶಾನಭೋಗರ ಮಡಿವಾಳಯ್ಯ.

ಸಟೀಕ ರಾಜಶೇಖರ ವಿಳಾಸ

ತೃತೀಯಾಶ್ವಾಸದ

ನೋಟೀಸು.

ಅಧೋ ಭಾಗದಲ್ಲಿ ಸಹ ಮಾಡಿರುವರು—ವಿದ್ಯಾಭಿವೃ
ದ್ಧಿಯನ್ನು ಕೋರುವ ಸರ್ವರಿಗೂ ತಿಳಿಸುವದೇನಂದರೆ ರ
ಸಿಕಜನಮಾನಿತೋಭಯ ಕವಿತಾವಿಶಾರದನೆಂಬ ಬಿರುದಂಪ
ಡೆದ ಷಡಕ್ಷರಾಖ್ಯ ಮಹಾ ಕವಿಯಿಂ ನಿರ್ಮಿಸಲ್ಪಟ್ಟ ರಾಜಶೇ
ಖರ ವಿಳಾಸವನ್ನು ಶ್ಲೋಕರೂಪವಾಗಿ ಓದುವದೇ ಅತಿ ಶ್ರ
ಮವಿದೆ; ಅರ್ಥಾದಿಗಳ ಗ್ರಹಣ ಮಾಡುವದು ಮಹಾ ಪ್ರಯಾ
ಸವೆಂದು ತಿಳಿಯುತ್ತದೆ. ಸಂಮತಿ— "ಯುವಗ್ರಾಮಬಿಸಂ
ದೇಹಂ, ಕಕುಂದೇಷುಚಕಾಕಥಾ" ಎಂಬ ಸೂತ್ರಾನುಸಾರ
ವಾಗಿರುವ ಕಾರಿಣ್ಯಾ (ಗೂಢಾ)ನ್ವಯಗಳಿಂ ಗರ್ಭೀಕೃತ
ಮಾದ ಆ, ಲೋಕೋತ್ತರ ಕಾವ್ಯದ ಮೂರನೇ ಅಧ್ಯಾ
ಯವನ್ನು—ಸರ್ವ ವಿದ್ವಜ್ಜನಾಂಗೀಕಾರವಾಗುವಂತೆ(ದಿವ್ಯ
ಸೂಚನೆಯನ್ನೂ, ೧೩ ಹೊಸ ಕವಿತಾ ಶ್ಲೋಕಗಳನ್ನೂ
ಬರೆದು;) ಆರು ತೆರದಿಂ ಟೀಕಿಸಿರುವ ವಿವರಗಳು.

೧. ನೇ ಕಲ್ಮ—ಮೂಲ ಶ್ಲೋಕದಲ್ಲಿ ಅಡಿ, ಪ್ರಾಸ,
ವೃತ್ತಗಳ ನಾಮಂಗಳಿಂದಲೂ,

೨. ಕ—ಶಬ್ದಾರ್ಥದಲ್ಲಿ: ಪದಖಂಡಣ, ಬೇರೆ ಬೇರೆ
ಶಬ್ದ ಬಿಡಿಸಿ ಅರ್ಥ, ಪುತ್ರಾ ಶ್ಲೇಷಾರ್ಥ, ತದ್ಭವ, ವ್ಯಾಕ
ರಣಪ್ರಯೋಗ, ಪ್ರಾಸನಾಮ, ರಸ, ಅಲಂಕಾರಗಳಿಂದಲೂ,

೩. ಕ—ನಿಘಂಟಿನಲ್ಲಿ: ಕಠಿಣ ಶಬ್ದಗಳಿಗೆ—ಅಮರ ವಿಶ್ವ,
ವೈಜಯಂತಿ, ಹಲಾಯುಧ, ನಾನಾರ್ಥ ರತ್ನಮಾಲಾ, ಧನಂ

ಜಯ, ಮೇದಿನಿ, ಶಬ್ದಾರ್ಣವ, ಏಕಾಕ್ಷರ, ಮಂಗಿರಾಜ, ನಾನಾರ್ಥ, ಕರ್ನಾಟಕ ಶಬ್ದಮಂಜರಿ, ಕಬ್ಬಿಗರಕೈಪಿಡಿ; ಈ ಗ್ರಂಥಗಳ ಉದಾಹರಣೆಗಳಿಂದಲೂ,

೪. ಕ—ತಾತ್ಪರ್ಯ ಸಂಗ್ರದಲ್ಲಿ: ಗೂಢಾರ್ಥಗಳಿಗೆ—ಶ್ರುತಿಸ್ಮೃತಿ ಪುರಾಣಾಗಮ ಸಮಂತವಾದ ಶ್ಲೋಕದಾಧಾರಗಳಿಂದಲೂ,

೫. ಕ — ಭಾವಾರ್ಥದಲ್ಲಿ: [ಅನ್ವಯದ ಮೇಲಿಂದ] ಸಾರಾಂಶ ಅರ್ಥದಿಂದಲೂ,

೬. ಕ — ನೋಟಿನಲ್ಲಿ: ವ್ಯಾಕರಣಸಂಧಿ, ಸಮಾಸ ಮುಂತಾದವುಗಳು; ಛಂದೋಲಕ್ಷಣ, ಮತ್ತು ಪುರಾಣಾಂತರ್ಗತವಾದ ಪೂರ್ವಿಕರ(ಶಿವನಪಂಚವಿಂಶತಿಲೀಲಾ) ಮಹಾಕಥೆಗಳಿಂದಲೂ,

ದ್ರಾಕ್ಷಾಪಾಕದಂತೆ ಸುಲಭ ಭಾಷೆಯಿಂದಲೂ, ಅರ್ಥ ಪುಷ್ಟಿಯಿಂದಲೂ ರಮ್ಯವಾಗಿ "ಮುತ್ತಿನ ಚಿಪ್ಪಿನಂತೆ" ಇರುವ ಈ ಪುಸ್ತಕವನ್ನು — ಬೆಂಗಳೂರು ಹೊಳಕಲ್ಲ ನರಶಿಂಹಯ್ಯನವರ ವಿದ್ಯಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ ಸುಂದರವಾದ ವೊಳೆಅಕ್ಷರಗಳಿಂ ಮುದ್ರಿಸಿದ ಅವಲ್ ಅರಿವೀಬೈಂಡು ಒಳ್ಳೇ ಬಿಳ್ಪನಿಂ ಸಣೆಯಾಗಿರುವ ಧಪ್ಪ ಕಾಗದ ಪ್ರತಿ ೧ ದಕ್ಕೆ — ೨ ರೂಪಾಯಿ ೪ ಅಣೆ; ದುಯ್ಯಂಬೈಂಡಿನ ಪುಸ್ತಕಕ್ಕೆ —೧ ರೂ, ೧೨ ಅಣೆ. ಷ್ಟಿಪ್ ಕವರ ಪ್ರತಿಗೆ—೧ ರೂ, ೮ ಅಣೆ, ಈ ನಿಬಂಧನೆಯಂತೆ(೧೭೨ ಪುಟಗಳಿಂದ ಕೂಡಿ)ಇರುವ ಬುಕ್ಕುಗಳು ಬಹು ಸೊಗಸಾಗಿವೆ; ಕಾರಣ, ಇದರ ಕಾಂಕ್ಷೆಯುಳ್ಳವರು— ರೂ ೧ ಕ್ಕೆ ೧ ಅಣೆ ವಟ್ಟ, ಬಾಂಗೀ ಹಾಸಲ್ ೨ ಅಣೆ; ಆಯಾಯ

ಪ್ರಸ್ತಕಕ್ಕೆ ಸರಿಯಾಗಿ ಅರ್ಧ ಅಣೇದವೇ ಟಿಕೀಟ್ ಕಳುಹಿದ್ದಾದರೆ—ಬುಕ್ಕು ರವಾನಿಸುತ್ತೇವೆ.

ತಾರೀಖು ೨೧ ಜನವರಿ ಸನ್ ೧೮೭೪ ಇಸವಿ.

ಸಹಿ—ಅನ್ನದಾನಿ ಬಸಲಿಂಗಾಯ್ಯಾ ಮಂಗ[illegible]ಳೇ ಮಠದ, ಮುಕ್ಕಾಮ ಮುಂಡರಗಿ, ತಾಲೂಕ ಗದಗ ಜಿಲ್ಲಾ ಧಾರವಾಡ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೭

ಬೆಳಗಾವಿ, ಮಾಹೆ ಜುಲಾಯಿ ೧೮೭೪.

SELF HELF

ತನಗೆ ತಾನೇ ನೆರವಾಗುವದು.

ನ್ಯೂಟನ್ನನ ಮನಸು ಅತಿ ಶ್ರೇಷ್ಠವಾದದ್ದಿತ್ತೆಂಬದ
ಕ್ಕೆ ಸಂದೇಹವಿಲ್ಲ. ಆದರೂ ಯಾವ ಉಪಾಯದಿಂದ
ೀನು ನಿನ್ನ ಅಪ್ರತಿಮ ಶೋಧಗಳನ್ನು ಕಡೆಗಾಣಿಸಿದೆಂ
ದು ಅವನನ್ನು ಕೇಳಲಾಗಿ, ಅವನು "ಸರ್ವಕಾಲವೂ ಅ
ವುಗಳನ್ನು ಕುರಿತು ಆಲೋಚಿಸುವದರಿಂದಲೇ" ಎಂ
ದು ನಿರಭಿಮಾನದಿಂದ ಉತ್ತರ ಹೇಳಿದನು. ಮತ್ತೊಂ
ದು ಸಮಯದಲ್ಲಿ ಅವನು ತನ್ನ ಅಭ್ಯಾಸದ ಕ್ರಮವನ್ನು
ಹೇಳಿದ್ದು ಹ್ಯಾಗೆಂದರೆ, "ನಾನು ವಿಚಾರಿಸುವ ವಿಷಯವ
ನ್ನು ಎಡೆಬಿಡದೆ ನನ್ನ ಮುಂದೆ ಇಟ್ಟುಕೊಂಡು, ಮೊದ
ಲಿಗೆ ನನ್ನ ಮನಸಿನಲ್ಲಿ ಶೇರಿದ ವಿಚಾರವೆಂಬ ಬೆಳಕೆ
ನ್ನು ಮೆಲ್ಲಮೆಲ್ಲಗೆ ಸ್ವಲ್ಪಸ್ವಲ್ಪಾಗಿ ಬೆಳೆದು ಪೂರ್ಣ
ವಾಗಿ ಸ್ವಚ್ಛ ಪ್ರಕಾಶವಾಗುವ ಮಟ್ಟಿಗೂ ಮಾರ್ಗಪ್ರತೀ
ಕ್ಷೆಯ ಮಾಡುತ್ತೇನೆ." ಬೇರೆ ಎಲ್ಲ ದೊಡ್ಡ ಮ
ನುಷ್ಯರಂತೆ ನ್ಯೂಟನ್ನನಾದರೂ ಏಕನಿಷ್ಠವಾದ ಆಸಕ್ತಿ

ಯಿಂದಲೂ, ದೃಢನಿಶ್ಚಯದಿಂದಲೂ ವಿಶಾಲವಾದ ಕೀರ್ತಿಯನ್ನು ಪಡೆದುಕೊಂಡನು. ಅವನಿಗೆ ವಿಶ್ರಾಂತಿಯು ಸಲುವಾಗಿ ಆಟದ ಅಪೇಕ್ಷೆಯಾದರೆ, ಅವನು ಕೈಯಲ್ಲಿದ್ದ ವಿಷಯದ ಅಭ್ಯಾಸವನ್ನು ಬಿಟ್ಟು ಮತ್ತೊಂದನ್ನು ತೆಗೆದುಕೊಳ್ಳುವನು; ಇದೇ ಅವನ ವಿಶ್ರಾಂತಿಯ ಆಟವು. ಡಾಕ್ತರ ಬೆಂಟ್ಲೀ ಎಂಬವನಿಗೆ ನ್ಯೂಟನ್ನನು ಹೇಳಿದ್ದೇನಂದರೆ, "ನನ್ನಿಂದ ಪರರಿಗೆ ಉಪಯೋಗವಾಗುವಂಥ ಕೃತ್ಯಗಳು ಏನಾದರೂ ಆಗಿದ್ದರೆ, ಅವು ಉದ್ಯೋಗದಿಂದಲೂ, ತಾಳ್ಮೆಯುಳ್ಳ ವಿಚಾರಗಳಿಂದಲೂ ಆಗಿರುತ್ತವೇ ಹೊರತು ಬೇರೆ ಯಾತರಿಂದಲ್ಲ." ಇದೇ ಮೇರೆಗೆ ಕೆಪ್ಲರನೆಂಬ ಇನ್ನೊಬ್ಬ ತತ್ವಜ್ಞಾನಿಯು ತನ್ನ ಅಭ್ಯಾಸದ ಸಂಗತಿಯನ್ನು ಕುರಿತು ಮಾತಾಡುತ್ತಿರಲಾಗಿ ನುಡಿದದ್ದೇನಂದರೆ, "ಪಜಿರ್ಗಲ್ಲನಂತೆ* ನನ್ನ ಸ್ಥಿತಿಯುಂಟು; ಈ ಸಂಗತಿಗಳನ್ನು ಕುರಿತು ಏಕಾಗ್ರಚಿತ್ತದಿಂದ ಆಲೋಚನೆಯ ಮಾಡುತ್ತಿರಲಾಗಿ, ಅದೇ ಪುನಃ ಹೆಚ್ಚು ವಿಚಾರ ನಡಿಸುವದಕ್ಕೆ ಕಾರಣವಾಗುತ್ತಿತ್ತು; ಹೀಗಾಗಿ ಕಡೆಯಲ್ಲಿ ನನ್ನಲ್ಲಿದಷ್ಟು ವಿಚಾರ ಶಕ್ತಿಯನ್ನೆಲ್ಲ ವೆಚ್ಚ ಮಾಡಿ ಕೈಯಲ್ಲಿ ಹಿಡಿದ ಸಂಗತಿಯನ್ನು ಕುರಿತು ವಿಚಾರ ನಡಿಸುತ್ತಿದ್ದೆನು."

ಕೇವಲ ಉದ್ಯೋಗ, ದೃಢನಿಶ್ಚಯಗಳ ಬಲದಿಂದಲೇ ಎಷ್ಟೋ ಮಹತ್ಕೃತ್ಯಗಳು ಸಾಧಿಸಲ್ಪಟ್ಟವೆ. ಇದದರಿಂದ ಬುದ್ಧಿಕೌಶಲ್ಯವೆಂಬ ಗುಣವು ಸಾಧಾರಣವಾಗ್ರಹಿಸಲ್ಪಟ್ಟಷ್ಟು ದುರ್ಲಭವೆಂಬದರ ಬಗ್ಗೆ ಎಷ್ಟೋ

---

* ಅವನು ಅನ್ನುತ್ತಿದ್ದದ್ದೇನಂದರೆ, "ಕೀರ್ತಿಯು ಈ ಪ್ರತ್ಯಹ ದೇಶೋ ಅದರ ಬಲವುಂಟು; ಆದರಿಂದ ಅದು ಪಸರಿಸುವ ಶಾಣೆಯನ್ನು ಹೊಂದುತ್ತದೆ."

ಖ್ಯಾತಿಯುಳ್ಳ ಜನರು ಸಂಶಯ ಪಟ್ಟಿದ್ಧಾರೆ. ಇದರಂತೆ ವಾಲ್ಟೇಯರನ ಮತವಿತ್ತು; ಅವನು ಅನ್ನುತ್ತಿದ್ದದ್ದು ಏನೆಂದರೆ, ಸಾಧಾರಣ ತರದ ಮನುಷ್ಯನಿಗೂ, ಬುದ್ಧಿ ಕೌಶಲ್ಯವುಳ್ಳವನೆಂದೆನಿಸಿಕೊಳ್ಳುವವನಿಗೂ ಬಹು ಸ್ವಲ್ಪ ಮಾತ್ರ ಭೇದವುಂಟು. ಬೆಕ್ಕೇರಿಯು ಎಂಬವನು ಎಲ್ಲ ಮನುಷ್ಯರು ಕವಿಗಳೂ, ವಕ್ತೃತ್ವ ಗುಣವುಳ್ಳವರೂ ಆಗಬಹುದೆಂದೆನ್ನುತ್ತಿದ್ದನು; ಇದೇ ವೇಳೆಗೆ ಎಲ್ಲ ಮನುಷ್ಯರು ಚಿತ್ರಗಾರರೂ, ಮೂರ್ತಿಗಾರರೂ ಆಗಬಹುದೆಂದು ರೇನಾಲ್ಡನೆಂಬವನ ಮತವಿತ್ತು. ಲಾಕ್, ಹೆಲ್ವೇತಿಯುಸ, ದಿದೆರಾತ ಎಂಬ ವಿದ್ವಾಂಸರು, ಎಲ್ಲ ಮನುಷ್ಯರು ಬುದ್ಧಿಕೌಶಲ್ಯವುಳ್ಳವರೆಂದೆನಿಸಿಕೊಳ್ಳುವದಕ್ಕೆ ಸರಿಯಾಗಿ ತಕ್ಕವರಿದ್ಧಾರೆಂದು ನಂಬುತ್ತಿದ್ದರು. ಇದಲ್ಲದೆ ಬುದ್ಧಿಯು ವ್ಯಾಪಾರ ನಡಿಸುವ ನಿಯಮಗಳನ್ನು ಅನುಸರಿಸಿ ಒಬ್ಬವನು ಮಾಡಿದ ಕೆಲಸವನ್ನೆ ಬೇರೊಬ್ಬನು, ಆವನಂತೆ ಅನುಕೂಲವುಳ್ಳವನಾಗಿ ಯತ್ನ ಪಟ್ಟರೆ, ಮಾಡಬಹುದೆಂದು ಇವರ ಅಭಿಪ್ರಾಯವಿತ್ತು. ಆದ್ದರೆ ಶ್ರಮದಿಂದ ದೊಡ್ಡ ದೊಡ್ಡ ಆಶ್ಚರ್ಯದ ಕೃತ್ಯಗಳು ಸಾಧಿಸಲ್ಪಟ್ಟವೆ ಎಂದು ಪೂರ್ಣವಾಗಿ ಒಡಂಬಟ್ಟು, ಬಹು ಬುದ್ಧಿಶಾಲಿಗಳೆಂದೆನಿಸಿಕೊಂಡವರೆಲ್ಲರು ತಪ್ಪದೆ ಬಹು ಶ್ರಮಪಟ್ಟು ಕೆಲಸ ಮಾಡುವವರಿದ್ದರೆಂಬ ಸಂಗತಿಯನ್ನು ಒಪ್ಪಿಕೊಂಡಾಗ್ಯೂ, ತಲೆಯಲ್ಲಿಯೂ, ಎದೆಯಲ್ಲಿಯೂ, ಮೂಲತಃ ತಕ್ಕ ಗುಣಗಳಿಲ್ಲದಿದ್ದರೆ, ಬರೇ ಶ್ರಮವನ್ನು ಎಷ್ಟು ಯೋಗ್ಯ ರೀತಿಯಿಂದ ಮಾಡಿದರೂ ಶೇಕ್ಸಪೀಯರ, ನ್ಯೂಟನ, ಬೀಥೋವನ, ಮಿಚಲಅಂಜಿಲೋ,

ಪಟುಂತ್ರಾಪವರಂಥ ವಿದ್ವಾಂಸರು ಆಗಲಾರರೆಂಬುದು ಸ್ಪಷ್ಟವದೆ.

ರಸಾಯನ ಶಾಸ್ತ್ರಜ್ಞನಾದ ಡೆಲ್ಟನ್ನನೆಂಬುವನು ತಾನು ಬಳ್ಳೀ ಬುದ್ಧಿಶಾಲಿ ಎಂದು ಜನರು ಅಂದರೆ, ಅದು ಸುಳ್ಳೆಂದು ಹೇಳುವನು. ತಾನು ಮಾಡಿದ್ದೆಲ್ಲ ಉದ್ಯೋಗದಿಂದಲೂ, ಮಾಡಿದ್ದನ್ನು ಸಂಗ್ರಹಿಸುವದರಿಂದಲೂ ಉಂಟಾಯಿತೆಂದು ಅವನು ಹೇಳುತ್ತಿದ್ದನು. ಜಾನಹಂಟರನೆಂಬುವನು ತನ್ನ ವಿಷಯವಾಗಿ ಹೇಳಿದ್ದೇನಂದರೆ, "ನನ್ನ ಮನಸ್ಸು ಜೇನಹುಟ್ಟಿನಂತೆ ಇರುತ್ತದೆ; ಅದರಲ್ಲಿ ತುಂಬಾ ಗೊಂಗಾಟವೂ, ಗಲಿಬಿಲಿಯೂ ಉಂಟೆಂದು ತೋರಿದಾಗ್ಯೂ, ಅದರಲ್ಲಿ ವ್ಯವಸ್ಥೆಯೂ ಕ್ರಮವೂ ಬೇಕಾದಷ್ಟುಂಟು; ಇದಲ್ಲದೆ ಸೃಷ್ಟಿಯೊಳಗಿನ ಅತ್ಯುತ್ತಮ ಪದಾರ್ಥಗಳಿಂದ ಎಡೆಬಿಡದೆ ಕ್ರಮಪಟ್ಟು ಸಂಗ್ರಹಿಸಿದಂಥ ಆಹಾರವಾದರೂ ಅದರಲ್ಲಿ ವಿಪುಲವಾಗಿರುತ್ತದೆ." ನಾವು ದೊಡ್ಡ ಮನುಷ್ಯರ ಚರಿತ್ರಗಳನ್ನು ನೋಡಿದರೆ ಸಾಕು; ಅತಿ ಪ್ರಸಿದ್ಧರಾದ ಶೋಧಕರೂ, ಶಿಲ್ಪಿಗರೂ, ತರ್ಕಜ್ಞಾನಿಗಳೂ ಮೊದಲಾದ ಎಲ್ಲ ವಿಧದ ಕಷ್ಟಗಾರರು ದಣಿವಿಲ್ಲದ ಶ್ರಮದಿಂದಲೂ, ಆಶಕ್ತಿಯಿಂದಲೂ ಮುಖ್ಯವಾಗಿ ಕೀರ್ತಿಯು ಪಡೆದರೆಂದು ತಿಳಿದು ಬರುವದು. ಈ ಮನುಷ್ಯರು ಎಂಥವರೆಂದರೆ, ಎಲ್ಲ ಪದಾರ್ಥಗಳಿಂದ ಚಿನ್ನವನ್ನುಂಟು ಮಾಡಿದವರು; ವೇಳೆಯೆಂಬ ಹುಡಿವೆ ಸಹ ಇವರಿಗೆ ಚಿನ್ನವೆ ಆಯಿತು. ಹಿರಿಗುಡಿಸರಾಯುಲಿಯು, ನಾವು ಕೈಯಲ್ಲಿ ಹಿಡಿದ ವಿಷಯವನ್ನು ಪೂರಾ ತಿಳಿದುಕೊಳ್ಳುವದೇ ನಮ್ಮ ಕಾರ್ಯಸಿದ್ಧಿಯು ಗುಟ್ಟೆಂದು ಹೇಳು

ವನು. ಆದರೆ ನಿರಂತರವಾದ ಆಸಕ್ತಿಯಿಂದಲೂ, ಅಭ್ಯಾಸದಿಂದಲೂ ಮಾತ್ರ ಹಾಗೆ ತಿಳಿದುಕೊಳ್ಳಬಹುದು. ಆ ಕಾರಣ ಈ ಲೋಕದಲ್ಲಿ ಅತಿ ಪ್ರೀತಿಯನ್ನು ಸಂಪಾದಿಸಿದ ಜನರಲ್ಲಿ ಘನವಾದ ಸಾಮಾನ್ಯ ತರದ ತ್ರಾಣೆಯೂ, ಹಿಂಗದಂಥ ದೃಢನಿಶ್ಚಯವೂ ಎಷ್ಟು ಮಟ್ಟಿಗೆ ಇದ್ದವೋ, ಅಷ್ಟು ಮಟ್ಟಿಗೆ ಅವರಲ್ಲಿ ನಿಜವಾದ ಬುದ್ಧಿಚಾತುರ್ಯವೆಂಬ ಗುಣವು ಇದ್ದಿಲ್ಲೆಂದು ತಿಳಿದು ಬಂದದೆ. ಇದೇ ಮೇರೆಗೆ ತಾವು ಹಿಡಿದ ಕೆಲಸವು ಯಾವ ವಿಧದ್ದೇ ಇರಲಿ, ಅದನ್ನು ಏಕನಿಷ್ಠೆಯಿಂದ ನಡಿಸಿ ಜನರ ಪ್ರೀತಿಯನ್ನು ಸಂಪಾದಿಸಿದವರ ಉದಾಹರಣೆಗಳು ಎಷ್ಟು ಸಿಕ್ಕುವವೋ, ಅಷ್ಟು ಸ್ವಾಭಾವಿಕವಾಗಿ ಹೊಳೆಯುವ ಗುಣಗಳುಳ್ಳವರು ಸಂಪಾದಿಸಿದ ಉದಾಹರಣೆಗಳು ಸಿಕ್ಕಲಾರವು. ಒಬ್ಬ ವಿಧವೆಯು, ಒಳ್ಳೇ ಚುರುಕು ಬುದ್ಧಿಯುವನಾದಾಗ್ಯೂ ಎಚ್ಚರವಿಲ್ಲದ ತನ್ನ ಮಗನ ವಿಷಯವಾಗಿ ಮಾತಾಡುತ್ತಿರಲಾಗಿ ಅಂದದ್ದೇನಂದರೆ, “ಅವನಲ್ಲಿ ಏಕಪ್ರಕಾರವಾಗಿ ನಡಿಸುವ ಗುಣವಿಲ್ಲ,. ಏನು ಮಾಡಲಿ” ಈ ವಿಧವಾಗಿ ಚುರುಕು ಬುದ್ಧಿಯುಳ್ಳವರಾದಾಗ್ಯೂ ದೃಢನಿಶ್ಚಯವಿಲ್ಲದಂಥ ಜನರನ್ನು ದಾಟಿ ಈ ಲೋಕದ ಪ್ರವಾಸದಲ್ಲಿ ಆಸಕ್ತಿಯುಳ್ಳವರು, ಬುದ್ಧಿಹೀನರು ಸಹ ಮುಂದಕ್ಕೆ ಹೋಗುತ್ತಾರೆ. ಇತಲೀ ದೇಶದ ಒಂದು ಗಾದೆಯಲ್ಲಿ “ಮೆಲ್ಲಗೆ ಹೋಗುವವನು ಬಹು ಕಾಲವೂ ಬಹು ದೂರವೂ ಹೋಗುವ” ನೆಂದುಹೇಳಲ್ಪಟ್ಟದೆ.

Champu Ramayen and Champu Bharata with Commentaries in Canarese by Mr. Shantaviraya.

॥ಚಂಪೂರಾಮಾಯಣೆಸವ್ಯಾಖ್ಯಾನೆಬಾಲಕಾಂಡಃ॥

॥ಗದ್ಯಂ॥

ಸೋಽಪಿಸುಮಂತ್ರವಚನಾಚ್ಛಾಂತಾಧಿ ಶಾಂತಾಕುಟುಂಬಿನಂಸಂಬಂಧಿನಂ ಮುನಿಮಾನೀಯ ವಸಿಷ್ಠಾದಿಷ್ಟಮಶ್ವಮೇಧಾಧ್ವರಂಸರಯೂರೋಧಸಿವಿಧಾಯತತ್ರ ಪುತ್ರೀಯಾಮಿಷ್ಟಿಂವಿಧಿವತ್ಕರ್ತುಮಾರಭತ॥೧೮॥

ತದನುಹವಿರಾಹರಣಾಯಧರಣ್ಯಾಂ ಕೃತಾವತರಣಾಸ್ಸ್ವರ್ಗೇ ಗೀರ್ವಾಣಾಶ್ಶತಮುಖಪ್ರಮುಖಾಕ್ಷತಮುರ್ಗಖಾಯದಶಮುಖಪ್ರತಾಪಗ್ರೀಷ್ಮೋಷ್ಮಸಂಪ್ಲೋಷಣಮಾವೇದ್ಯತೇಸಸಹಶರಣವಿತ್ರಿಶಾರ್ಙ್ಗಧನ್ವಾನಂಮನ್ವಾನಾ ನಾನಾವಿಧಪ್ರಸ್ತುತಸ್ತುತಯಃಕ್ಷೀರಾಂಬುರಾಶಿಮಾಸೇದುಃ॥೧೯॥

॥ಅನ್ವಯಃ॥

ಸಃಅಪಿ=ಆ ದಶರಥರಾಯನಾದರು। ಸುಮಂತ್ರವಚನಾತ್=ಸುಮಂತ್ರನವಚನದೆಸೆಯಿಂದ। ಶಾಂತಾಧಿಃ=ಶಾಂತವಾದ ಮನೋವ್ಯಥೆಯುಳ್ಳಂಥಾತನಾಗಿ। ಶಾಂತಾಕುಟುಂಬಿನಂ=ಶಾಂತೆಯೆಂಬ ಕುಟುಂಬವುಳ್ಳಂಥ (ಅಂಗದೇಶಾಧಿಪನಾದ ರೋಮಪಾದನ ಮಗಳು) ಸಂಬಂಧಿನಂ= ಬಂಧುವಾದಂಥ। ಮುನಿಂ=ಋಷ್ಯಶೃಂಗ ಮುನಿಯನ್ನು। ಆನೀಯ=ಕರೆತಂದು। ವಸಿಷ್ಠಾದಿಷ್ಟಂ=ವಸಿಷ್ಠೋಪದಿಷ್ಟವಾದಂಥ। ಅಶ್ವಮೇಧಾಧ್ವರಂ=ಅಶ್ವಮೇಧ ಯಜ್ಞವನ್ನು। ಸರಯೂರೋಧಸಿ=ಸರಯೂ ತೀರದಲ್ಲಿ। ವಿಧಾಯ=ಮಾಡಿ। ತತ್ರ=ಆ ಸ್ಥಾನದಲ್ಲಿ। ಪುತ್ರೀಯಾಂ=ಪುತ್ರಸಂಬಂಧವಾದಂಥ। ಇಷ್ಟಿಂ=ಯಜ್ಞವನ್ನು। ವಿಧಿವತ್=ಶಾಸ್ತ್ರಕ್ರಮವತ್। ಕ

ತ್ರರ್ಗಂ=ಮೂಡುಪದಗೋಸ್ಕರ। ಆರಭತ=ಆರಂಭಿಸಿದನು॥

॥ತದನು=ಅದನ್ನು ಆರಂಭಿಸಿದ ಮೇಲೆ। ಹವಿಸ್ ಆಹರಣಾಯ=ಹವಿಸ್ಸನ್ನು ಕೈಕೊಳ್ಳುವದಕ್ಕೆ। ಧರಣ್ಯಾಂ=ಭೂಮಿಯಲ್ಲಿ। ಕೃತಾವತರಣಾಃ=ಇಳಿದು ಬರುವಂಥ। ಶತಮಖಪ್ರಮುಖಾಃ= ಇಂದ್ರ ಮೊದಲಾದಂಥ। ಸರ್ವೇ= ಸಮಸ್ತವಾದಂಥ। ಗೀರ್ವಾಣಾಃ=ದೇವತೆಗಳು। ಚತುರ್ಮುಖಾಯ=ಬ್ರಹ್ಮಂಗೆ। ದಶಮುಖಪ್ರತಾಪ ಗ್ರೀಷ್ಮೋಷ್ಮಸಂಪ್ಲೋಷಣಂ, ದಶಮುಖ=ರಾವಣನ; ಪ್ರತಾಪ=ತೇಜವೆಂಬ, ಗ್ರೀಷ್ಮೋಷ್ಮ= ಬೇಸಗೆಯ ಸೆಕೆಯ, ಸಂಪ್ಲೋಷಣಂ=ದಾಹವನ್ನು। ಆವೇದ್ಯ=ತಿಳಿಸಿ। ತೇನ=ಆ ಬ್ರಹ್ಮನಿಂದ। ಸಹ=ಕೂಡ। ಶಾರ್ಙ್ಗಧನ್ವಾನಂ=ನಾರಾಯಣನನ್ನು ಕುರಿತು। ಶರಣಂ ಇತಿ= ರಕ್ಷಿಸಲ್ಪಟ್ಟವನೆಂದು। ಮನಸ್ವಿನಾಃ=ತಿಳಿವಿಕೆಯುಳ್ಳಂಥ। ನಾನಾವಿಧ ಪ್ರಸ್ತುತಸ್ತುತಯಃ, ನಾನಾವಿಧ=ಹಲವ ಪ್ರಕಾರವಾದ, ಪ್ರಸ್ತುತಸ್ತುತಯಃ = ಸಮಯೋಚಿತ ಸ್ತೋತ್ರಗಳುಳ್ಳವರಾಗಿ। ಕ್ಷೀರಾಂಬುರಾಶಿಂ=ಹಾಲ್ಗಡಲವನ್ನು ಕುರಿತು। ಆಸೇದುಃ=ಗಮಿಸಿದರು॥

॥ಶಾಸ್ತ್ರವಿಷಯಃ॥

ಆಧಿಃ=ಪುಂಸ್ಯಾಧಿರ್ಮಾನಸಿವ್ಯಥೇತ್ಯಮರಃ।–।ಮನನಶೀಲಂಮುನಿಲಕ್ಷಣಂ।–।ಪುತ್ರಿಯಾಂ=ಘಪ್ರತ್ಯಯಃ(ಈಯ)।–।ತದರ್ಹಂ ಇತಿ ವತಿಪ್ರತ್ಯಯಃ(ವತ್)।–॥೨೧॥ ಪ್ರತಾಪಃ=ಸಪ್ರಭಾವಃ ಪ್ರತಾಪಶ್ಚ ಯತ್ತೇಜಃ ಕೋಶದಂಡಜಮಿತ್ಯಮರಃ।–।ಪ್ಲೋಷಣಂ= ಪ್ಲುಷ್ಯತೀತಿ, ಪ್ಲುಷ್ ದಾಹದಲ್ಲಿ ಲ್ಯುಟ್ ಪ್ರತ್ಯಯಃ (ಅನ) ಷಕಾರದಿಂದ ನಕಾರಕ್ಕೆ

ಣಕಾರವು।—।ಶಾರ್ಙ್ಗಧನ್ವಾನಂ= ಶೃಂಗವಿಕಾರಃ ಶಾರ್ಙ್ಗಂಧನುಃ ಯಸ್ಯ ತಂ।—। ಆಸೇದುಃ=(ಆ+ಸದ್+ಉಃ) ಆ ಎಂಬುದವ್ಯಯ, ಸದ್ ಎಂಬುದು ಷದ್ ಧಾತು ಗಮನಾರ್ಥದಲ್ಲಿಯೂ ಪರಸ್ಮೈಪದದಲ್ಲಿಯೂ(ಧಾತುವಿನ ಆದಿಯ ಷಕಾರವು ಯಾವಾಗಲು ಸಕಾರವಾಗುವದು, ಪರಂತು ಇ. ಉ. ಋ. ಇವು ಹಿಂದಿದ್ದರೆ ಧಾತುವಿನ ಷಕಾರವೇ ನಿಲ್ಲುವದು) ಒಂದನೆ ಗಣದಲ್ಲಿಯೂ ಕಸಾದಿ ಧಾತುಗಳಲ್ಲಿಯೂ ವರ್ತಿಸುವದು ಉಃ=ಎಂಬುದು ಲಿಟ್ ಲಕಾರ, ಭೂತಕಾಲ ಪ್ರಥಮ ಪುರುಷ; ಬಹುವಚನ* ಅತಏಕಹಲ್ಮಧ್ಯೇಽನಾದೇಶಾದೇರ್ಲಿಟಿ ೬।೪।೧೨೦। ಈ ಸೂತ್ರದಿಂದ ಧಾತುವಿನ ಹಿಂದಿನ ಸಕಾರದ ಅಕಾರಕ್ಕೆ ಏಕಾರಾದೇಶವಾಯಿತು.

ಭಾವಾರ್ಥ

ದಶರಥರಾಜನು ಸುಮಂತ್ರನ ವಚನದಿಂದ ಶಾಂತನಾಗಿ ಶಾಂತಾಕುಟುಂಬಿನೀಯುಳ್ಳಂಥ ಸಂಬಂಧಿಯಾದಂಥ ಋಷ್ಯಶೃಂಗ ಮುನಿಯನ್ನು ಕರಕೊಂಡು ವಸಿಷ್ಠ ಮುನಿಯು ಬೋಧಿಸಿದ ಅಶ್ವಮೇಧ ಎಂಬ ಯಜ್ಞವನ್ನು ಸರಯೂ ನದಿಯ ದಂಡಿಯ ಮೇಲೆ ಮಾಡಿ ಮತ್ತು ಅಲ್ಲಿ ಪುತ್ರಕಾಮೇಷ್ಟಿ ಎಂಬ ಯಜ್ಞವನ್ನು ಆರಂಭಿಸಿದನನು.

ಅದನ್ನು ಆರಂಭಿಸಿದ ಮೇಲೆ ಆ ಹವಿರ್ಭಾಗವನ್ನು ಕೈಕೊಳ್ಳುವದಕ್ಕೆ ಇಂದ್ರ ಮೊದಲಾದ ದೇವತೆಗಳು ಭೂಮಿಯ ಮೇಲೆ ಬಂದು ರಾವಣನ ಪ್ರತಾಪವೆಂಬ ಬೇಸಗೆಯಿಂದಾದ ಸಂತಾಪವನ್ನು ತಿಳಿಸಿ ಬ್ರಹ್ಮನನ್ನು ಕೂಡಿಕೊಂಡು ಜಗರಕ್ಷಣ ಮಾಡುವ ನಾರಾಯಣನನ್ನು ಸ್ತುತಿಸುತ್ತ ಕ್ಷೀರಸಮುದ್ರಕ್ಕೆ ಗಮಿಸಿದರು.

ಸಂಸ್ಕೃತಭಾವಾರ್ಥ

ಸುಮಂತ್ರಪ್ರಧಾನೋತ್ತಮಸ್ಯ ಸದ್ವಾಕ್ಯೇನ ದಶರಥಃ
ಶಮಿತಮನೋವ್ಯಥಾತಿಶಯಸ್ಸನ್ ರೋಮಪಾದಸ್ಯ ತನ
ಯಾಕುಟುಂಬಿನಂಬಂಧುಂ ಋಶ್ಯಶೃಂಗಮುನಿಂ ಆನೀಯ
ರಯೂನದೀತೀರೇ ವಸಿಷ್ಠೇನ ಬೋಧಿತಂ ಅಶ್ವಮೇಧಾ
ರಂ ಕೃತ್ವಾ ತತ್ರ ಪುತ್ರಕಾಮ್ಯಾಧ್ವರಂ ವಿಧಿಕ್ರಮೇಣ ಉ
ಕ್ರಮತ

॥ ಆರಂಭಾನಂತರಂ ಹವಿರ್ಭಾಗಾನ್ ಆಹರ್ತುಂ ಭುವಂ ಪ್ರ
ಆಗತಾಃ ದೇವೇಂದ್ರಾದಿಸುರಾಃ ದಶಾನನಸ್ಯ ಪ್ರತಾಪ ಏವ
ಸ್ಮತ್ತರ್ಜನಿತಸಂತಾಪಂ ವಿಜ್ಞಾಪ್ಯ ಬ್ರಹ್ಮಣಾ ಸಾಕಂ ಶರ
ಣಂ ಇತಿ ಹರಿಂ ಸ್ತುತ್ವಾ ಕ್ಷೀರಸಾಗರಂ ಪ್ರಾಪುಃ

ಶಾಂತವೀರ ರಾಜದೇವ ಕಿತ್ತೂರ ಟ್ರೇನಿಂಗಕಾಲೇಜ.

NOTICES.

ನೋಟೀಸುಗಳು.

ಕನ್ನಡ ಕವಿತೆಯು ಎರಡನೇ ಪುಸ್ತಕವು ಕ್ಯುರೆಟರ ರಿಂದ ಬುಕ್‌ಡಿಪೋಗಳಿಗೆ ಒಳಗಡೆಯುಲ್ಲಿ, ಕಳಸಲ್ಪಡು ವದಿಲ್ಲಂತಲೂ ಶಾಲೆಗಳಲ್ಲಿ ಅದು ಬೇಕಾಗಿರುತ್ತದೆಂತ ಲೂ ಕಂಡು ಬರುತ್ತದೆ. ಕನ್ನಡ ಕವಿತೆಯು ಪುಸ್ತಕಗ ಳನ್ನೂ ಓದುವ ಪುಸ್ತಕಗಳನ್ನೂ ಶುದ್ಧ ಮಾಡುವ ಕೆಲಸ ವು ಈಗ ನಡೆದಿರುತ್ತದೆ. ಈಗಿರುವ ಕನ್ನಡ ಕವಿತೆಯು ಎರಡನೇ ಪುಸ್ತಕವು ತೆಗೆದು ಹಾಕಲ್ಪಡುವದು. ಕವಿತೆ ಯು ಹೊಸ ಪುಸ್ತಕಗಳು ಸಿದ್ಧವಾಗುವ ವರೆಗೆ ಹೆಡ್‌ಮಾಸ್ತ ರರು ಈಗಿರುವ ಓದುವ ಪುಸ್ತಕಗಳೊಳಗಿಂದ ಕವಿತೆಗಳ

ವನ್ನು ಆರಿಸಿಕೊಂಡು, ಸ್ಟ್ಯಾಂಡರ್ಡುಗಳ ಪ್ರಕಾರ ತಮ್ಮ ಶಾಲೆಗಳ ಆಭ್ಯಾಸವನ್ನು ಕೈಲಾದ ಮಟ್ಟಿಗೆ ಉತ್ತಮವಾಗಿ ನಡಿಸತಕ್ಕದ್ದು. ಆದರೆ ಈಗಿನ ಕನ್ನಡ ಕವಿತೆಯು ಎರಡನೇ ಪುಸ್ತಕವು ಯಾರ ಬಳಿಯಲ್ಲಿರುವದೋ, ಅವರು ಮುಂದೆ ಮತ್ತೊಂದು ಪುಸ್ತಕವು ಆಗುವ ವರೆಗೆ ಅದನ್ನು ಉಪಯೋಗಿಸ ಬಹುದು.

ಬೆಳಗಾವ ತಾ.		*W. A. Russell.*
೨೫ ಜೂನ ಸನ್ನ		ಎ. ಇನಸ್ಪೆಕ್ಟರ ದಕ್ಷಿಣಭಾಗ.
೧೮೭೪ ಇಸವಿ.		

ದಕ್ಷಿಣ ಭಾಗದೊಳಗಿನ ಡೆಪ್ಯುಟೀ ಇನಸ್ಪೆಕ್ಟರರಿಗೂ ಶಾಲೆಗಳ ಹೆಡ್‌ಮಾಸ್ತರರಿಗೂ ತಿಳಿಯು ಪಡಿಸುವದಕ್ಕೋಸ್ಕರ

ನೋಟೀಸು.

ಹಾನಗಲ್ಲ ಶಾಲೆಯು ಬಗ್ಗೆ, ಆ ಶಾಲೆಯ ಹೆಡ್‌ಮಾಸ್ತರ ಅಸಿಸ್ಟಂಟ ಮಾಸ್ತರರುಗಳ ಕೆಲಸದ ಬಗ್ಗೆ ಡೆಪ್ಯುಟೀ ಇನಸ್ಪೆಕ್ಟರರವರ ಕಡೆಯಿಂದ ಬಂದ ಇನಸ್ಪೆಕ್‌ಶನ್ ರಿಪೋರ್ಟ ಓದಿ ಮೆಹೆರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದ್ದೂರರವರಿಗೆ ಸಂತೋಷವಾಯಿತೆಂದು ಸದರೀ ಹೆಡ್‌ಮಾಸ್ತರರಿಗೆ ತಿಳಿಸಲ್ಪಡುತ್ತದೆ. ಹಾನಗಲ್ಲ ಶಾಲೆಯು ಬಹಳ ದಿವಸದಿಂದ ಒಳ್ಳೇ ಹೆಸರನ್ನು ಪಡೆದಂತೆ ಮುಂದಾದರೂ ಬಹು ತರವಾಗಿ ಆ ಹೆಸರನ್ನು ಕಾಯ್ದು ಕೊಳ್ಳುವಂತೆ ಕಾಣುತ್ತದೆ. ೬ನೇ ಸ್ಟ್ಯಾಂಡರ್ಡನಲ್ಲಿ ೬ ಮಂದಿ ಹುಡುಗರು ಪಾಸಾದರೆಂಬುವದು ಬ

ಪ್ರ ಮೇಲಾದ ಪರಿಣಾಮವು. ೫ನೇ ಸ್ಟ್ಯಾಂಡರ್ಡಿನೊಳಗೆ ೮ರಲ್ಲಿ ೫ ಹುಡುಗರು ಪಾಸಾದರೆಂಬುವದು ಸಹ ಒಳ್ಳೇದೇ. ಆದರೆ ೪ನೇ ಸ್ಟ್ಯಾಂಡರ್ಡಿನೊಳಗೆ ೧೪ ಹುಡುಗರು ಪರೀಕ್ಷೆಗೆ ಬಂದು ಅವರಲ್ಲಿ ೩ರೇ ಹುಡುಗರು ಪಾಸಾದರೆಂಬದರಿಂದ ಏನೋ ಒಂದು ಬಗೆಯು ತಪ್ಪು ಕಂಡು ಬರುತ್ತದೆ. ೪ನೇ ಸ್ಟ್ಯಾಂಡರ್ಡಿನವರ ಅಭ್ಯಾಸವು ಲಕ್ಷ್ಯಕ್ಕೆ ತರತಕ್ಕಂತೆ ನಿಷ್ಫಲವಾಯಿತು. ೨ನೆ, ೩ನೇ, ಸ್ಟ್ಯಾಂಡರ್ಡುಗಳ ಪರೀಕ್ಷೆಯು ನೆಟ್ಟಗಾಗಲಿಲ್ಲ. ಕೆಳಗಿನ ವರ್ಗಗಳಿಗೆ ಹೆಚ್ಚು ಲಕ್ಷ್ಯ ಕೊಡತಕ್ಕದ್ದು. ನಿಪುಣತೆಯು ಬಗ್ಗೆ ಹಣವು ಜನಸಂಖ್ಯೆದ ಹಣಕ್ಕೆ ಸರಿಯಾಗಲಿಲ್ಲ.

೨ ಉತ್ತರ ಭಾಗವೆಂದರೆ ಗುಜರಾಥದೊಳಗಿನ ವರ್ನ್ಯಾಕ್ಯುಲರ ಶಾಲೆಗಳಿಗೂ, ದಕ್ಷಿಣಭಾಗದೊಳಗಿನ ಆ ಶಾಲೆಗಳಿಗೂ, ಮೇಲಿನ ಸ್ಟ್ಯಾಂಡರ್ಡುಗಳ ಬಗ್ಗೆ ಹೋದ ವರ್ಷ ವುಂಟಾದ ತಾರತಮ್ಯವು ಅಂಕೆಗಳಿಂದ ಪ್ರಕಟವಾಗುವದು ಹ್ಯಾಗಂದರೆ—

ಹೋದ ವರ್ಷ ಉತ್ತರ ಭಾಗದ (ಗುಜರಾಥದ) ಶಾಲೆಗಳಲ್ಲಿ ೬ನೇ ವರ್ನ್ಯಾಕ್ಯುಲರ ಸ್ಟ್ಯಾಂಡರ್ಡಿನ ಎಲ್ಲ ವಿಷಯಗಳಲ್ಲಿ ೧೦೩ ಹುಡುಗರು ಪಾಸಾದರು.

ಸದರೀ ವರ್ಷದಲ್ಲಿ ಯಾವತ್ತು ದಕ್ಷಿಣಭಾಗದೊಳಗೆ ೭ ಹುಡುಗರು ಮಾತ್ರ ಸದರೀ ಸ್ಟ್ಯಾಂಡರ್ಡಿನ ಎಲ್ಲ ವಿಷಯಗಳಲ್ಲಿ ಪಾಸಾದರು.

೩ ಕಳೆದ ಮೇ ತಿಂಗಳಲ್ಲಿ ಹಾನಗಲ್ಲ ಶಾಲೆಯೊಳಗೆ, ೬ನೇ ಸ್ಟ್ಯಾಂಡರ್ಡಿನ ಎಲ್ಲ ವಿಷಯಗಳಲ್ಲಿ ೬ ಹುಡುಗರು ಪಾಸಾದರು. ಈ ಬಗ್ಗೆ ಸದರೀ ಶಾಲೆಯು ಹೊಸ

ಮಾಸ್ತರರೂ ಅವರ ಅಸಿಸ್ಟಂಟರೂ (ಮೇಲೆ ಯಾವತ್ತು ಜನರಿಗೆ ತಿಳಿಯುವದರ ಸಲುವಾಗಿ ಪ್ರಸಿದ್ಧಿಸಿದ ಕಲಿಮಿನಲ್ಲಿ) ಶಿಫಾರಸು ಪಟ್ಟಿರುತ್ತಾರೆ. ಆದರೆ ಕೆಳಗಿನ (೨ನೇ ೩ ನೇ, ೪ನೇ) ಸ್ಟಾಂಡರ್ಡುಗಳ ನ್ಯೂನತ್ವವು ತೋರಿಸಲ್ಪಟ್ಟಿರುತ್ತದೆ. ಮೇಲಿನ ಸ್ಟಾಂಡರ್ಡುಗಳಲ್ಲಿ ಮಾತ್ರ ನಿಪುಣತ್ವದಿಂದ ಕೆಳಗಿನ ಸ್ಟಾಂಡರ್ಡುಗಳ ನ್ಯೂನತ್ವವು ಪರಿಹರಿಸಲ್ಪಡುವದಿಲ್ಲ.

ಬೆಳಗಾಂವಿ ತಾ||
೯ ಜುಲಾಯಿ ಸ
ನ್ ೧೮೭೪ ಇ||

W. A. Russell.
ಎ. ಇನಸ್ಪೆಕ್ಟರ ದಕ್ಷಿಣಭಾಗ.

ಧಾರವಾಡ ಜಿಲ್ಹೇದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ.–

ಭಾಗಾನುಬಂಧ ಪೂರ್ಣ ಅಂಕೆಗಳ ಬೇರೀಜವನ್ನು ಮಾಡುವಾಗ್ಗೆ ಪೂರ್ಣ ಅಂಕಿಗಳ ಬೇರೀಜವಂನು ಬೇರೆ ಮತ್ತು ಅಪೂರ್ಣ ಅಂಕೆಗಳ ಬೇರೀಜವಂನು ಬೇರೆ ಮಾಡಿ ಆ ಮೇಲೆ ಇವೆರಡು ಬೇರೀಜಗಳನ್ನು ಕೂಡಿಸ ಬೇಕಂತೆ ಕಲಿಸ ಬೇಕು. ಈಗ ಹೀಗೆ ಕಲಿಸಬೆ ಅಷ್ಟಾಗಿ ಹಾದಿಯಿಂದೆ ಕಲಿಸುತ್ತಾರೆ.–

ಉದಾಹರಣವು.

(೧) ೬೩ $\frac{೩}{೮}$, ೨೦೫ $\frac{೧೭}{೨೦}$, ೪೦೮ $\frac{೨೭}{೩೦}$, ಈ ಮೂರು ಅಪೂರ್ಣ ಅಂಕೆಗಳ ಬೇರೀಜು ಮಾಡಬೇಕಾದರೆ ಕೆಳಗೆ ಮಾಡಿ ತೋರಿಸಿದಂತೆ ಮಾಡಬೇಕು.

ಸರಳ ರೀತಿಯು.

$೧೩+೩೦೫+೪೦೮=೭೨೬$

$\frac{೭}{೮}+\frac{೧೩}{೨೦}+\frac{೨೩}{೩೦}$. ೮,೨೦,೩೦, ಈ ಅಂಕೆಗಳ ಲಘುತ್ತಮ ಸಾಧಾರಣ ಭಾಜ್ಯವು (೧೨೦) ಅದರಿಂದ;—

$\frac{೭\times೧೫}{೮\times೧೫}+\frac{೧೩\times೬}{೨೦\times೬}+\frac{೨೩\times೪}{೩೦\times೪}=\frac{೧೦೫+೭೮+೯೨}{೧೨೦}=$ $\frac{೨೭೫}{೧೨೦}=೨\frac{೩೫}{೧೨೦}=೨\frac{೭}{೨೪}$ ಅದರಿಂದೆ $೭೨೬+೨\frac{೭}{೨೪}=$ $೭೨೮\frac{೭}{೨೪}$ ಉತ್ತರವು.

ಅಡ್ಡಾಡಿ ರೀತಿಯು.

$೧೩\times೮+೭=\frac{೧೧೧}{೮}$

$೩೦೫\times೨೦+೧೩=\frac{೬೧೧೩}{೨೦}$

$೪೦೮\times೩೦+೨೩=\frac{೧೨೨೬೩}{೩೦}$

$\frac{೧೧೧}{೮}+\frac{೬೧೧೩}{೨೦}+\frac{೧೨೨೬೩}{೩೦}$

$೧೧೧\times೨೦\times೩೦=\quad೬೬೬೦೦$

$೬೧೧೩\times\ ೮\times೩೦=೧೪೬೭೧೨೦$

$೧೨೨೬೩\times೨೦\times\ ೮=೧೯೬೨೦೮೦$

$೮\times೨೦\times೩೦=೪೮೦೦$. ಒಟ್ಟು ೩೪೯೫೮೦೦

ಅದರಿಂದೆ $\frac{೩೪೯೫೮೦೦}{೪೮೦೦}=೭೨೮\frac{೭}{೨೪}$ ಉತ್ತರವು.

ಕೆಳಯುವದು ತಾರೀಖು ೨೧ನೇ ಮಾಹೆ ಜೂನ ಸನ್ನ ೧೮೭೪ ಇಸವಿ.

Chanbassappa, B. Dharwar.

ಡೆಪ್ಯುಟಿ ಇ. ಇನಸ್ಪೆಕ್ಟರ ಜಿಲ್ಹಾ ಧಾರವಾಡ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರಂಗೆ—

೨

ತಿಳಿಯಪಡಿಸುವದೇನಂದರೆ ಇತ್ತಕಡಿಂದ ಹೋದ ಸ್ಕ್ಯೂಲರ ಕಡಿಗೆ ಕೆಲವು ಮಾಸ್ತರ ಜನರು ಲಕ್ಷಕೊಡದೆ ಪೋಸ್ಟಿನ ನಿಯಮಕ್ಕೆ ವಿರುದ್ಧವಾಗಿ, ಲಖೋಟಿಯ ಮೇಲೆ ಬರೆದು, ವ ಟಿಕೀಟು ಹಚ್ಚಿ, ಟಪಾಲಿನಲ್ಲಿ ರವಾನೆ ಮಾಡೋಣದರಿಂದ, ನಾಟಪೇಡ ಆಗಿ ಲಖೋಟಿಗಳು ಇತ್ತ ಕಡಿಗೆ ಬರುತ್ತವೆ. ವ ಹಾಸಲು ಇತ್ತಕಡಿಂದ ಕೊಡಬೇಕಾಗುತ್ತದೆ ಕಾರಣಾ ಪುನಃ ಸೂಚನೆ ಕೊಡಲ್ಪಟ್ಟದೆ. ಆದರೆ ಲಖೋಟಿಗಳು ತೂಕಮಾಡಿ ಅದಕ್ಕೆ ತೂಕದ ಮಾನದಿಂದ ಟಿಕೀಟ ಹಚ್ಚಿ ಲಖೋಟಿಯ ಮೇಲೆ ಮಾಸ್ತರರು ತಮ್ಮ ಸಹಿ ಪೂರ್ಣವಾಗಿ ಅಂದರೆ ಹುದ್ದೆ ವ ಊರು ಸಹ ಬರೆದು ಹಾಗು ಲಖೋಟಿಯ ಮೇಲ್ಭಾಗಕ್ಕೆ "ಫಕ್ತ ಸರಕಾರ ಕೆಲಸದಗೋಸ್ಕರ" ಎಂದು ಬರೆದು ಕಳಿಸುತ್ತಿರಬೇಕು. ಇದಕ್ಕೆ ತಪ್ಪಿದಲ್ಲಿ ಲಖೋಟಿಯ ಹಾಸಲು ನಾವು ಕೊಟ್ಟದ್ದು ವಸೂಲ ಮಾಡಿದ್ದಲ್ಲದೆ ದಂಡ ಆಗುವದಕ್ಕೆ ಶಿಫಾರಸ ಮಾಡಲಾದೀತು ತಿಳಿಯುವದು. ತಾರೀಖು ೨೭ ಜೂನ ಸನ್ ೧೮೭೪ ಇಸವಿ.

Ramchandra A. Sawanoor

ಡಿ. ಇ. ಇನಸ್ಪೆಕ್ಟರ ಜಿಲ್ಲಾ ಕಲಾದಗಿ.

ಕಾನಡಾ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೂ ಅಸಿಸ್ಟಂಟರಿಗೂ ಡಿ. ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ ಇವರ ಕಡಿಯಿಂದ ತಿಳಿಯಪಡಿಸುವದೇನಂದರೆ—

ಕುಮಟಾ ತಾಲೂಕ ಪೈಕಿ ಬಾಡ ಸ್ಕೂಲ ಮಾಸ್ತರರಾ

ಗಿದ್ದ ತಂಮ್ಮಾಜೀ ಅಂಣಾಜೀ ಸವದಿ ಇವರು ಒಂದು ತಿಂಗಳ ರಜಾ ಪಡಕೊಂಡು ಹೋದವರು ಮುದ್ದತಿನಲ್ಲಿ ಕೆಲಸದ ಮೇಲೆ ಹಾಜರಾಗದೆ ಮಂಜೂರಾದ ರಜೆಕಿಂತಲೂ ಜ್ಯಾಸ್ತಿ ಗೈರಹಾಜರ ಉಳಿದದರಿಂದ ಅವರಿಗೆ ಕೆಲಸದಿಂದ ದೂರಮಾಡಬೇಕಾಗಿಯೂ ಪುನಃ ವಿದ್ಯಾಖಾತೆಯಲ್ಲಿ ಕೆಲಸ ದೊರೆಯುಬಾರದಾಗಿಯೂ ಠರಾವಾಗಿ ಮೆಹೆರ್ಬಾನ ಎಜ್ಯುಕೇಶನಲ್ ಇಂನಸ್ಪೆಕ್ಟರ ಸಾಹೇಬ ಬಾಹಾದ್ದೂರ ದಕ್ಷಿಣಭಾಗ ಇವರ ಕಡೆಯಿಂದ ಮಂಜೂರಿ ಹುಕುಮು ಸಾದರಾಗಿರುತ್ತದೆ. ಈ ಮುಜಕೂರು ಎಲ್ಲಾ ಮಾಸ್ತರರು ತಿಳಕೊಂಡು ಬಹಳ ಜಾಗ್ರತೆಯಿಂದ ನಡಕೊಳ್ಳತಕ್ಕದ್ದು. ತಾರೀಖ ೮ನೇ ಜುಲಾಯಿ ಸಂನ್ ೧೮೭೪ನೇ ಇಸ್ವಿ ಕಾರವಾರ.

R. W. Bhanap.
ಡಿ. ಎಜ್ಯುಕೇಶನಲ್ ಇಂನಸ್ಪೆಕ್ಟರ
ಜಿಲ್ಹಾ ಕಾನಡಾ.

Correspondence.

ಪತ್ರವ್ಯವಹಾರವು.

(೬೪ ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

೬ ನಾಲ್ಕನೇ ೫ ನೇ ೬ ನೇ ಕನ್ನಡ ಪುಸ್ತಕಗಳಲ್ಲಿ ರಾಜಶೇಖರ, ಜಯಮಿನಿ, ಕಿರಾತ, ವೃಷೇಂದ್ರವಿಜಯ, ಭಾರತ, ರಾಮಾಯಣ ಮುಂತಾದ ಅನೇಕ ಕಾವ್ಯಗಳ ಪ್ರೌಢ ಕವನಗಳು ಸೇರಿಸಲ್ಪಟ್ಟವೆ. ಆದರೆ ಇವು ಯಾವತ್ತೂ ಶಾಲೆಗಳಲ್ಲಿ ಹುಡುಗರಿಗೆ ಮಾಸ್ತರ ಜನರಿಂದ ಎ

ಥಾಯೋಗ್ಯವಾಗಿ ಕಲಿಸಲ್ಪಡುತ್ತವೆಂದು ಹೇಳುವಷ್ಟು ನಂಬಿಗೆಯಿಲ್ಲ. ಕೆಲ ಸಾಲಿಗಳಲ್ಲಿಯು ವಿದ್ಯಾರ್ಥಿಗಳಿಗೆ ಇವನ್ನು ಚನ್ನಾಗಿ ಅನ್ನಲಿಕ್ಕೆ ಬರದೆ ಇರಬಹುದೆಂಬುದು ತೋರುತ್ತದೆ. ಆದರೆ ನಮ್ಮ ಅಣ್ಣ ತಂಮಂದಿರಾದ ಎಲ್ಲಾ ಸ್ಕೂಲ್ಮಾಸ್ತರರೂ ಆಯಾ ಪುಸ್ತಕಗಳನ್ನು ಕಲಿಸುವಾಗ್ಗೆ ಅವುಗಳಲ್ಲಿರುವ ಪದ್ಯಗಳನ್ನು ಸಾರ್ಥಕವಾಗಿ, ವಿದ್ಯಾರ್ಥಿಗಳಿಗೆ ಆಗತ್ಯದಿಂದ ಹೇಳಬೇಕು; ಇವುಗಳಿಂದ ಒಂದು ಕನ್ನಡ ಕಾವ್ಯವನ್ನೇ ಕಲಿಸಿದಷ್ಟು ಜ್ಞಾನವು ವಿದ್ಯಾರ್ಥಿಗಳಿಗೆ ತಿಳುಹಿಸಲ್ಪಡುತ್ತದೆ; ಮತ್ತು ಅವರ ವಾಣಿಯು ಅವುಗಳ ಪಠಣೆಯಿಂದ ಶುದ್ಧವಾಗುತ್ತದೆ. ಬರೇ ಕಥೆಗಳನ್ನು ವಿದ್ಯಾರ್ಥಿಗಳು ಮೊದಲೇ ಓದುತ್ತಿರುತ್ತಾರೆ, ಮತ್ತು ಅವನ್ನೇ ಓದಿಸಿಕೊಳ್ಳುವದು ಹೆಚ್ಚಿನ ಕೆಲಸವಲ್ಲ. ವಿದ್ಯಾರ್ಥಿಗಳು ಗದ್ಯಗಳನ್ನು ಶುದ್ಧವಾಗಿ ಬರೆ ಪಂಕ್ತಿ ಪದ್ಯಗಳನ್ನು ಹೇಳದರೆ, ಬಹುಮಟ್ಟಿ ತಪ್ಪಿ ಬಿಡುತ್ತಾರೆ; ಆದ್ದರಿಂದ ಗದ್ಯಪದ್ಯಾತ್ಮಕವಾದ ಶುದ್ಧ ಲಿಪಿಯನ್ನು ದಿನಂಪ್ರತಿಯಲ್ಲಿ ಬರಿಸುತ್ತಿರಬೇಕು.

೨ ನಾನು ಬಹಳ ಮಾಡಿ ಹೀಗೆ ನೋಡಿರುವೆನಲ್ಲಾ: ಕಾವ್ಯವನ್ನು ಕಲಿಯುವವರು ಬರೇ ಅರ್ಥದ ಮೇಲೆ ದೃಷ್ಟಿಯಿಡುತ್ತಾರೆ. ಅದರಲ್ಲಿ ಕವಿಗಳು ಯಾವ ನಿಯಮಗಳಿಂದ ಪದಗಳನ್ನು ಪ್ರಯೋಗಿಸಿದರು? ಎಂದು ವ್ಯಾಕರಣದ ನಿಯಮಗಳನ್ನು ತಿಳಿದುಕೊಳ್ಳುವದಿಲ್ಲ; ಶಿಕ್ಷಕರೂ ಆ ವಿಷಯವಾಗಿ ಹೇಳುವದೇ ಇಲ್ಲ. ಈ ಪ್ರಕಾರ ಕಲಿತವರು ಆಚಾರ್ಯರೇ ಬಹು ಮಂದಿಯುಂಟು. ಜಯಮಿನಿ, ರಾಜಶೇಖರ ಮುಂತಾದ ಕನ್ನಡ ಕಾವ್ಯಗಳ

ನ್ನು ಕೆಲವು ಆಚಾರ್ಯರೂ, ಜಂಗಮರೂ ಹೀಗೆ ತಿಳಿದು ಕೊಂಡಿರುತ್ತಾರೆ. ಇವರಿಗೆ ಆ ನಿಯಮಗಳ ಪ್ರಶ್ನವನ್ನು ಮಾಡಿ ಈ ಪದಗಳ ವಿಕಾರಗಳು ಯಾವ ನಿಯಮಗಳಿಂದಾದವು? ಹೇಳಿರೆಂದರೆ: ಅವು ಹಾಗೇ ಸರಿ! ಮತ್ತ್ಯಾಗೆ? ಕವಿಗಿಂತ ನೀನೇನು ಪಂಡಿತನೋ? ಸುಮ್ಮನೇ ಹೇಳಿದಷ್ಟು ಕೇಳಿದರಾಯಿತು! ಎಂದು ಉತ್ತರವನ್ನು ಕೊಡುತ್ತಾರೆ. ಆದರೂ ಇದು ದೊಡ್ಡ ಮೋಸವು.:— ಒಬ್ಬನು, ಸರ್ವಾಂಗ ಸುಂದರಿಯು ಅಲಂಕಾರಗಳಿಂದ ಶೃಂಗಾರವಾಗಿ, ಬೀದಿಯಲ್ಲಿ ಹೋಗುವದನ್ನು ನೋಡಿ, ಬಹು ಸಂತೋಷವನ್ನು ಹೊಂದಿದನು; ಇನ್ನೊಬ್ಬನು ಅವಳ ಸಮಾಗಮದಿಂದ ಆನಂದ ಪಟ್ಟನು. ಆದರೆ ಇವರಿಬ್ಬರ ಸೌಖ್ಯಗಳಲ್ಲಿ ಮಹದಂತರವು. ಇದೇ ಅಂತರವು ಅವ್ಯಾಕರಣ, ಸವ್ಯಾಕರಣರಾದ ಕಾವ್ಯಜ್ಞರ ಜ್ಞಾನಾನಂದಗಳಲ್ಲಿರುತ್ತದೆ. ಹೀಗೆ ತಿಳಿದು, ದಾವದಾದರೂ ಒಂದು ಕಾವ್ಯವನ್ನಾಗಲಿ, ಪದ್ಯವನ್ನಾಗಲಿ, ಗದ್ಯವನ್ನಾಗಲಿ ಅಭ್ಯಾಸಿಸಿದರೆ ಮೊದಲು ವ್ಯಾಕರಣ ವಿಚಾರವನ್ನು ತಿಳಿದುಕೊಳ್ಳುವದು ಅವಶ್ಯವು; ಅಥವಾ ವ್ಯಾಕರಣಾಭ್ಯಾಸವಾದ ಮೇಲೆಯೇ ಅಂಥಾ ವಿಷಯಗಳನ್ನು ಹಿಡಿಯುವದಂತೂ ಬಹು ಸ್ವಾರಸ್ಯದ ವ್ಯವಹಾರವು.

೮ ಇಂದಿನವರಿಗೂ ಎಷ್ಟೋ ಕನ್ನಡಿಗರು ಇಂಗ್ಲಿಷವನ್ನು ಕಲಿತು, ಪಂಡಿತರಾದರು; ಹಲವರು ಸಂಸ್ಕೃತವನ್ನು ತಿಳಿದು, ವಿದ್ವಾಂಸರೆನಿಸಿದರು; ಕೆಲವರು ಮಹಾರಾಷ್ಟ್ರ ಭಾಷಾಭಿಜ್ಞರಾಗಿದ್ದಾರೆ. ಆದಾಗ್ಯೂ ಇವರು ಬಹು ಶರವಾಗಿ, ಸ್ವಾರ್ಥ ದೃಷ್ಟಿಯುಳ್ಳವರೇ. ದೇಶಾಭಿಮಾ

ನವ್ರುಳ್ಳವರಲ್ಲ. ತಮ್ಮ ನಾನಾತರದ ಪಾಂಡಿತ್ಯವನ್ನು ಪ
ಯೋಗಿಸಿ, ಭಾಷಾ ಸುಧಾರಣೆಯು ಒಂದಾದರೂ ಸ್ವಾತ್ರ
ಕೆಲಸವನ್ನು ಮಾಡುವದಕ್ಕೆ ದಾರೂ ಎತ್ನ್ಸಿಸಿದಂತೆ ಕಾಣ
ವದಿಲ್ಲ. ಆದರೆ ನೋಡಿರಿ! ವಿಲಾಯತೀ ಖಂಡದಿಂದ ಬಂ
ದ ಜನರಲ್ಲಿ ಬಹುಮಂದಿ ನಮ್ಮ ಹಿಂದುಸ್ಥಾನದ ಯಾವ
ಯಾವ-ಭಾಗಗಳಲ್ಲಿ ಯಾವ ಯಾವ ಭಾಷೆಗಳುಂಟೋ
ಆ ಯಾವತ್ತೂ ಮಾತುಗಳಲ್ಲಿಯೂ, ಜಾಣರಾಗಿ ಸ್ವದೇ
ಶದವರಿಗೆ ಅವು ತಿಳಿಯಬೇಕೆಂದು, ಎಲ್ಲವುಗಳ ಮೂಲ
ತತ್ವಗಳನ್ನು ತಮ್ಮ ಇಂಗ್ಲಿಷ ಭಾಷೆಯಲ್ಲಿ ನಿಃಸಂದೇಹ
ವಾಗಿಯೂ, ಸ್ಪಷ್ಟವಾಗಿಯೂ ತಿಳಿಯುವಂತೆ ರಚಿಸಿ, ಪು
ಸ್ತಕಗಳನ್ನು ಮಾಡಿ, ಒಂದು ಇಂಗ್ಲಿಷವನ್ನು ತಿಳಿದವಗ
ಸಂಸ್ಕೃತ ಮುಂತಾದ ಭಾಷೆಗಳು ಸುಲಭವಾಗಿ ಬರಬೇ
ಕು, ಇಷ್ಟು ಸುಗಮೋಪಾಯವನ್ನು ಹುಡುಕಿಟ್ಟಿದ್ದಾ
ರೆ. ಅದರ ಮೇಲಿಂದ ಅವರ ವ್ಯವಸಾಯವು ಎಷ್ಟು ಸ್ತು
ತ್ಯವಾದದ್ದು? ಇದಕ್ಕೆ ಬೆಲೆಯಿಲ್ಲ. ಈ ಜನರಿಗೆ ಶಿಕ್ಷ
ಈ ಹಿಂದುಸ್ಥಾನದ ಭಾಷೆಗಳ ಗೂಢ ಗ್ರಂಥಗಳು — ಇಂ
ನೂ ಇಲ್ಲಿರುವ ಕೆಲವರ ಕೇಳುವಿಕೆಯಲ್ಲಿ ಬಂದಿಲ್ಲ. ಇ
ನ್ನು ಅವನ್ನು ನೋಡುವದೂ, ಅಭಿಪ್ರಾಯವನ್ನು ತಿಳುಕೊ
ಳ್ಳುವದೂ ಬಹು ದೂರವು. ಇಲ್ಲಿಯ ವಿದ್ವಾಂಸರು ಕೂ
ಡಾ ಇಂಗ್ಲಿಷವನ್ನು ಕಲಿತು ಅದರ ಸಹಾಯದಿಂದ ಆ ಜನ
ರು ತಮ್ಮ ದೇಶದವರಿಗಾಗಿ, ಸಿದ್ಧ ಮಾಡಿಟ್ಟ ಗ್ರಂಥಗಳ
ಮೇಲಿಂದ ಕನ್ನಡ, ಸಂಸ್ಕೃತ ಮುಂತಾದ ಭಾಷೆಗಳ
ಮೂಲಗಳನ್ನಾದರೂ ಅರಿತು, ಅವರ ಪಾಂಡಿತ್ಯವನ್ನು ಹೊ
ಗಳುತ್ತ ಸುಮ್ಮನೇ ಕೂಡುತ್ತಾರಲ್ಲವೇ, ನಾವೂ ಇಂಗ್ಲಿ

ಷರಂತೆ ನಮ್ಮಲ್ಲಿರುವ ಜ್ಞಾನದಿಂದ ಸ್ವದೇಶದವರು ಅನ್ಯ ಭಾಷೆಗಳನ್ನು ಸುಲಭವಾಗಿಯೂ, ದೂರ ಹಂಗಿಲ್ಲದೆಯೂ ಕಲಿಯುವಂಥ ಪುಸ್ತಕಗಳನ್ನು ನಮ್ಮ (ಕನ್ನಡ) ಭಾಷೆಯಲ್ಲಿ ರಚಿಸಿ, ಲೋಕದಲ್ಲಿ ಕೀರ್ತಿಯನ್ನು ಪಡೆಯಬೇಕೆಂದು, ಅವರ ಕನಸು ಮನಸುಗಳಲ್ಲ್ಯಾದರೂ ಬರುತ್ತದೋ? ಇಲ್ಲ. ಯಾವದಾದರೊಂದು ಕೆಲಸವನ್ನು ದೊಡ್ಡ ಮನುಷ್ಯನು ಹಿಡಿದರೇ ಅದು ಕಡಿಗಾಣುತ್ತದೆ; ದರಿದ್ರನು ಅಪೇಕ್ಷಿಸಿದರೆ:— "उत्थायोत्थाय तत्रैव दरिद्राणां मनोरथाः॥ हृदयेष्वेव लीयन्ते विधवास्त्रीस्तनाविव" ಎಂಬಂತೆಯಾಗಿ, ನಗಿಗೇಡಾಗುತ್ತದೆ. ಅನೇಕ ಭಾಷೆಗಳಲ್ಲಿ ಬಲ್ಲವರಾದ ವಿದ್ವಾಂಸರು ತಮ್ಮ ಭಾಷೆಯು ಸುಧಾರಿಸಲ್ಪಡಬೇಕೆಂದು ಮನದಲ್ಲಿ ತಂದರೆ ಅದು ಕಡೆಗಾಣಲಿಕ್ಕೆ ಅಡ್ಡಿ ಏನು? ಇಂಥಾ ಮನಸು ನಮ್ಮ ಕರ್ನಾಟಕ ವಿದ್ವಾಂಸರಲ್ಲಿಲ್ಲ; ಅಂದ ಮೇಲೆ ನಮ್ಮಂಥಾ ಸಣ್ಣ ಜನರ ಅಪೇಕ್ಷೆಯಿಂದೇನಾದೀತು? ಯಾರಾದರೂ ಭಾಗ್ಯವಂತರಾದರೆ, ಇಲ್ಲವೇ ವಿದ್ವಾಂಸರಾದರೆ, ಅಥವಾ ಮಹತ್ವವನ್ನು ಹೊಂದಿದರೆ ಅವರಿಗೆ ಜನರು ಈ ಮನುಷ್ಯನು ನಮ್ಮ ಆಪ್ತನು ನಮ್ಮ ಜಾತಿಯವನು; ನಮ್ಮೂರವನು, ನಮ್ಮ ದೇಶದವನು; ನಮ್ಮ ಮನೇ ಹತ್ತರ ಇರುವವನು. ಈ ಪ್ರಕಾರವಾಗಿ ಅನ್ನುವರಲ್ಲ? ಇದರ ಭಾವವೇನೆಂದು, ಚನ್ನಾಗಿ ವಿಚಾರ ಮಾಡಿದರೆ ಅವನಿಂದ ತಮಗೆ ಏನಾದರೂ ಲಾಭವಾದೀತೆಂಬ ಆಶೆಯೋ ಹೊರ್ತು ಮತ್ತೊಂದಲ್ಲ. ಹೀಗೆಯೇ ಅವನು ಅವರಿಗೆ ಏನಾದರೂ ತನ್ನ ಮಹತ್ವದಿಂದ ಉಪಕಾರವನ್ನು ಮಾಡಿದರೆ, ಅವರು ಅವನಿಗೆ ಎಷ್ಟೆಂದ

ರೂ ನಮ್ಮಾತನಲ್ಲವೇ? ಇವನು ಎಂದು ಅವನನ್ನು ಹೊಗಳುತ್ತಾರೆ; ಸುಮ್ಮನಿದ್ದರೆ ಅದೇ ಜನರು ಆತನಿಗೆ ಏನಿದ್ದರೇನು? ಅವರಿಂದ ನಮಗೇನು ಫಲ? ಎಲ್ಲಿಯವನೋ? ಯಾವ ದೇಶದವನೋ? ಅವನು ಇದ್ದರೇನು? ಸತ್ತರೇನು? ಹೀಗೆ ನಿರಾಕರಿಸುತ್ತಾರೆ; ಈ ಮಾತಂತೂ ನಿಜವೇ? ಇದನ್ನು ಯಾವತ್ತು ವಿದ್ವಜ್ಜನರು ಚನ್ನಾಗಿ ಲಕ್ಷ್ಯದಲ್ಲಿಟ್ಟು, ಸ್ವಭಾಷಾಸುಧಾರಣಾರ್ಥವಾಗಿ, ತಮ್ಮ ಬುದ್ಧಿಚಾತುರ್ಯವನ್ನು, ಪಾಂಡಿತ್ಯವನ್ನು ಅವಶ್ಯವಾಗಿ ಉಪಯೋಗಿಸಬೇಕೆಂದು ವಿನಯಪೂರ್ವಕವಾದ ಸೂಚನೆಯುದೆ. ಹೀಗೆ ಮಾಡಿದರೆ ನಿರಾಯಾಸದಿಂದ ತಮಗೆ ಕೀರ್ತಿಯೂ, ಲೋಕೋಪಕಾರವೂ ಆಗಿ, ಬಹು ದಿವಸಗಳವರಿಗೆ ತಮ್ಮ ಹೆಸರು ಕೊಂಡಾಡಲ್ಪಡುವದು ಕಲಿತದ್ದು ಸಾರ್ಥಕ್ಯವಾಯಿತು.

ವಾದಿರಾಜ ಸ್ವಾಮಿಯ ವರ್ಣನೆ.

ಮೊದಲು ಕಾಲದಲ್ಲಿ (ಅಂದರೆ ಏಳುನೂರು ವರ್ಷದ ಹಿಂದು ಗಡೆಯಲ್ಲಿ) ವಾದಿರಾಜನೆಂಬ ಒಬ್ಬ ದೊಡ್ಡ ತಪಸ್ವಿಯಾದ ಯತಿಯು ಸ್ವಾದಿಯೆಂಬ ಪುಣ್ಯಕ್ಷೇತ್ರದ ಮಠದಲ್ಲಿ ಇರುತ್ತಿದ್ದನು. ಆದರೆ ಅವನಿಗೆ ಕವಿಸಾರ್ವಭೌಮನೆಂಬುದಕ್ಕೆ ಏನೂ ಸಂಶಯವಿಲ್ಲ. ಅವನು ತಪ ಮಾಡುವಲ್ಲಿಯೂ ಜನರುಗಳು ಯಾವದಾದರೊಂದು ವಿಲಕ್ಷಣ ಪ್ರಶ್ನೆ ಮಾಡಿದರೆ ಉತ್ತರ ಕೊಡುವಲ್ಲಿಯೂ ಇದಲ್ಲದೆ ಸಂಸ್ಕೃತ ಅತ್ಯುತ್ತಮವಾದ (ಕಾಳಿದಾಸಕೃತ ಚಂಪೂಪ್ರಬಂಧ ಮುಂತಾದ ಕವಿತ್ವಕ್ಕೆ ಸರಿಯಾದ) ಕವಿತ್ವವನ್ನು ಮಾಡು

ನಲ್ಲಿಯೂ, ಭಗೀರಥನಂತೆಯೂ, ಬೃಹಸ್ಪತ್ಯಾಚಾರ್ಯನಂತೆಯೂ, ವ್ಯಾಸಮುನಿಯಂತೆಯೂ, ಒಪ್ಪುತ್ತಿದ್ದನು. ಮತ್ತು ಮದದಿಂದ ಐರಾವತವೂ ಕಮಲದಿಂದ ಸರೋವರವೂ ಪೌರ್ಣಿಮಾ ಚಂದ್ರನಿಂದ ರಾತ್ರಿಯೂ ಉತ್ತಮವಾದ ಸ್ವಭಾವದಿಂದ ಸ್ತ್ರೀಯೂ ಅತಿ ತ್ವರಗತಿಯಿಂದ ಕುದುರೆಯೂ, ಪ್ರತಿ ದಿನದಲ್ಲಿ ಮಂಗಳೋತ್ಸವದಿಂದ ಮನೆಯೂ ವ್ಯಾಕರಣಶಾಸ್ತ್ರದಿಂದ ವಾಣಿಯೂ, ಹಂಸಮಿಥುನದಿಂದ ನದಿಯೂ ಪಂಡಿತನಿಂದ ಸಭೆಯೂ ಸತ್ಪುತ್ರನಿಂದ ಕುಲವೂ, ರಾಜನಿಂದ ಭೂಮಿಯೂ, ದೇವರಿಂದ ಮೂರುಲೋಕವೂ ಹ್ಯಾಗೆ ಶೋಭಿಸುವದೋ ಹಾಗೆ ಅವನು ಹಯಗ್ರೀವನೆಂಬ ದೇವರ ಪೂರ್ಣ ಕೃಪೆಯಿಂದ ಶೋಭಿಸುತ್ತಿದ್ದನು. ಆದರೆ ಅವನಿಗೆ ೫೬ ದೇಶಭಾಷೆಗಳಲ್ಲೂ ಅತ್ಯುತ್ತಮವಾದ ಸಂಸ್ಕೃತ ಭಾಷೆಯಲ್ಲೂ ಹದಿನೆಂಟು ಜಾತಿಯ ಜನರುಗಳ ಕುಲಕಸಬಿನಲ್ಲೂ ತುಂಬಾ ಜ್ಞಾನವಿತ್ತು. ಹೀಗಿರುವದರಿಂದ ಆ ಯತಿಯು ಒಂದಾನೊಂದು ದಿವಸದಲ್ಲಿ ಆಲೋಚನೇ ಮಾಡಿದ್ದೇನಂದರೆ ನಾನು ಇಂನ ಮೇಲೆ ದೇಶ ಸಂಚರಿಸುವದಕ್ಕೆ ಉಪ್ಯೋಗಿಸಬೇಕು; ಅದರಿಂದ ನನಗೆ ಎಲ್ಲ ದೇಶದ ಜನರುಗಳ ವಿದ್ವತ್ತವೂ, ಅವರಿಂದ ಅಗತಕ್ಕ ಮರ್ಯಾದೆಯೂ, ದೊರೆಯುತ್ತದೆಂದು ಮನಸ್ಸಿನಲ್ಲಿ ಗೊತ್ತು ಮಾಡಿಕೊಂಡು ಕಾಶಿಯ ಯಾತ್ರೆಯ ನಿಮಿತ್ತ ಮಾಡಿಕೊಂಡು ಎಲ್ಲ ಶಿಷ್ಯರಿಂದ ಕೂಡಿಕೊಂಡು ಸ್ವಂತ ಮಠವನ್ನು ಬಿಟ್ಟು ಕೆಲವ ದೇಶಗಳನ್ನು ಸಂಚರಿಸುತ್ತ ಬರುವಾಗ್ಯೆ ನಾರಾಯಣಭೂತವೆಂಬದೊಂದು ದೊಡ್ಡ ಬ್ರಹ್ಮರಾಕ್ಷಸವು ಈ ವಾದಿರಾಜಸ್ವಾಮಿಯ ಹತ್ತಿ

ರಕ್ಕೆ ಬಂದು ಸಾಷ್ಟಾಂಗನಮಸ್ಕರಿಸಿ ಪ್ರಶ್ನೆ ಮಾಡಿದ್ದೇನೆಂ
ದರೆ ಎಲೇ ಯತಿವರಿಯನೇ, ನಂನ ಮನಸ್ಸಿನಲ್ಲಿ ಒಂದು
ಸಂದೇಹವಿರುವದು ಆದರೆ ತಾವು ಅದನ್ನು ಪರಿಹರಿಸುವಿ
ರೆಂದು ಕೋರಿ ನಾನು ತಂಮ ಸಂನಿಧಿಗೆ ಬಂದಿರುವೆನೆಂದು
ಆ ಯತಿಯು ಆಢಿದ್ಗಾವರೆಗಳ ಮೇಲೆ ಬಿತ್ತು; ಅಹನ್ನು ಕಂ
ಡು ಆ ತಪೋಧನನು ಏಳು ಏಳು, ನಿಂನ ಸಂಶಯನನ್ನು
ನಾನು ಪರಿಹರಿಸುವೆನೆಂದು ನುಡಿಯಲಾಗಿ, ಅದು ಪ್ರಶ್ನೆ
ಮಾಡಿದ್ದೇನಂದರೆ "ಸೋರಕ" ಯೆಂಬ ನುಡಿಯಿತು, ಅದ
ಕ್ಕೆ (ಆ ಪ್ರಶ್ನೆಗೆ) ಈ ಯತಿಯು, "ಕೃತಭುಕ, ಘೃತಭು
ಕ, ಮಿತಭುಕ, ಸೋರಕ," ಎಂದು ಮೂರು ಪಾದಗಳಂನು
ಕೂಡಿಸಿ ಹೇಳಲಾಗಿ ಅದಕ್ಕೆ ಆ ಪಿಶಾಚಿಯು ಮೆಚ್ಚಿ, ಅಂ
ದದ್ದು-ಎಲೇ ಯತಿರಾಜನೇ ನಾನು ಈ ಹೊತ್ತಿನ ಮೊದಲು
ಗೊಂಡು ನನ್ನ ಜನ್ಮ ಉದ್ಧಾರವಾಗುವ ವರೆಗೂ ತಮ್ಮ ಸೇ
ವೆಯಲ್ಲಿ ಇರುವೆನೆಂದು ಪಂಥ ಮಾಡಿತು; ಆಗ್ಗ ಆ ಯ
ತಿಯು ಯಥಾಕ್ಕಾಗವಲ್ಲದೆಂದು ಆ ಪಿಶಾಚಿಯ ತಲೆಯ ಮೇ
ಲೆ ತನ್ನ ಕರಕಮಲರನ್ನಿಟ್ಟು, ಉಳದ ಕೆಲವು ದೇಶಗಳ
ನ್ನು ಸಂಚರಿಸಿಕೊಂಡು ಕಾಶೀಯಾತ್ರೆಯನ್ನಾದರೂ ಮಾ
ಡಿಕೊಂಡು ಪುನಃ ತಂಮ್ಮಸ್ವಾದಿಯೆಂಬ ಮಠಕ್ಕೆ ಬಂದು
ಸೇರಿದನು. ಮತ್ತು ಅವನು ಪ್ರತಿ ದಿವಸದಲ್ಲಿ ಎಷ್ಟೋ
ಮಹತ್ವಗಳನ್ನು ನಡಿಸುತ್ತಿದ್ದನು; ಒಂದಾನೊಂದು ದಿವಸ
ದಲ್ಲಿ ದ್ವಾದಶಿಯೆಂಬದೊಂದು ದೊಡ್ಡ ತಿಥಿಯು ಬಂತು
ಆ ತಿಥಿಯು ಮೇಲಾದದ್ದೆಂಬದಕ್ಕೆ ಪ್ರಮಾಣ—

ಗಂಗಾಸಮಾನದೀನಾಸ್ತಿ।
ನದೇವೋವಿಷ್ಣುನಾಸಮಃ॥

ನಾಸ್ತಿವೇದಸಮಂಶಾಸ್ತ್ರಂ।
ನತಿಥಿರ್ದ್ವಾದಶೀಸಮಾ॥೮॥

ಹೀಗೆಂದು ನೇಮ ಇರುವದರಿಂದ ಆ ತಿಥಿಯು ಅತ್ಯುತ್ತಮವಾದದ್ದೆಂದು ಹೇಳತಕ್ಕದ್ದು ಅದರೊಳಗೆ ಸಾಧನಿ ಇದ್ದರೆ ಅದಕ್ಕಿಂತಲೂ ಪ್ರಶಸ್ತವು ಇಲ್ಲವೇ ಕಳಾಮಾತ್ರವೆಂಬ ಸಾಧನಿ ಇದ್ದರೆ ಮತ್ತಷ್ಟು ಉತ್ತಮವು ಹೀಗಿರಲಾಗಿ ಅವನು ಆ ಸಾಧನಿಯ ದ್ವಾದಶಿಯಲ್ಲಿ ತನ್ನ ನಿತ್ಯನೇಮಗಳನ್ನು ತೀರಿಸಿ, ಹಯಗ್ರೀವ ದೇವರ ಪೂಜೆಯನ್ನು ಮಾಡಿ, ಅನಂತರದಲ್ಲಿ ಕಾಶಿಯಲ್ಲಿರುವ ತ್ರಿವಿಕ್ರಮ ದೇವರ ಮಾನಸಪೂಜೆ ಮಾಡಬೇಕೆಂದರೆ ಈ ತಿಥಿಯು ವಿರುತ್ತದೆ, ಹ್ಯಾಗೆ ಮಾಡಲೆಂದು ಅವನು ಆಲೋಚನೆ ಮಾಡುತ್ತಿರಲಾಗಿ, ಆ ಪಿಶಾಚಿಯು ಸ್ವಾಮಿಗಳೇ ನಿಮ್ಮ ಅಭಿಪ್ರಾಯವು ತಿಳಿಯಿತು ಎಂದು ಕ್ಷಣಮಾತ್ರದಲ್ಲಿ ಕಾಶಿ ಪಟ್ಟಣಕ್ಕೆ ಹೋಗಿ ಆ ತ್ರಿವಿಕ್ರಮ ದೇವರ ಗುಡಿಯನ್ನು ತನ್ನ ಭುಜಬಲದಿಂದ ಕಿತ್ತಿ ತಂದು ಈ ಯತಿಯ ಹತ್ತರದಲ್ಲಿ ಇಟ್ಟಿತು; ಅದನ್ನು ತರುವಾಗ್ಗೆ ಇದರ (ಈ ಪಿಶಾಚಿಯ) ರಭಸಕ್ಕೆ ಒಂದು ಗಾಲೆ ಯಲ್ಲಿಯೋ ಬಿದ್ದು ಆ ಗುಡಿಯು ಮೂರು ಗಾಲೆಗಳಿಂದ ತೇರಿನ ಆಕಾರದಂತೆ ಇದುವರೆಗೂ ಇರುವದೆಂದು ಕಂಡ ಜನರುಗಳೆಲ್ಲರು ಹೇಳುತ್ತಾರೆ, ಮತ್ತೂ ಆ ಪಿಶಾಚಿಯಿಂದ ಎಷ್ಟೋ ಮಹಮಹಾ ಕಾರ್ಯಗಳು ನಡೆದವು. ಸಾರಾಂಶವೇನಂದ್ರೆ ಆ ವಾದಿರಾಜ ಯತಿಯ ಮಹಿಮೆಯು ಎಷ್ಟು ಹೇಳಿದರೂ ತೀರದು, ಇದಲ್ಲದೆ ಅವರು ಮಾಡಿದ ಸಂಸ್ಕೃತ ಗ್ರಂಥಗಳು ಎಷ್ಟೋ ಇರುತವೆಂದು ವಿದ್ವಜ್ಜನರುಗಳು ಹೇಳುತ್ತಾರೆ. ನನಗೆ ಪರಿಶ್ರಮವಿದ್ದ

ಷ್ಟು ನಾನುಹೇಳುತ್ತೇನೆ. ಯಾವ್ಯಾವೆಂದರೆ ರುಕ್ಮಿಣೀಶವಿಜಯ, ಗೋಪಿಅಷ್ಟಕ, ದಶಾವತಾರದ ಚರಿತ್ರ, ಎಂದು ಮೂರು ಸಂಸ್ಕೃತ ಗ್ರಂಥಗಳುಂಟು ಅವುಗಳ ಪೈಕಿ ದಶಾವತಾರವೆಂಬ ಗ್ರಂಥದೊಳಗಣದೊಂದು ಶ್ಲೋಕವನ್ನು ಟೀಕಿಸಿದ್ದೇನೆ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೫

ಬೆಳಗಾವಿ, ಮಾಹೆ ಅಗಸ್ಟ ೧೮೭೪.

SELF HELF

ತನಗೆ ತಾನೇ ನೆರವಾಗುವದು.

ಆದದರಿಂದ ಕೆಲಸಮಾಡುವ ಗುಣವನ್ನು ಚೆನ್ನಾಗಿ ಜಾಗ್ರತೆ ಪಡಿಸುವದೇ ನಾವು ಮೊದಲು ಹಿಡಿಯತಕ್ಕ ಮುಖ್ಯ ಉದ್ದೇಶವು. ಇದಿಷ್ಟು ಸಾಧಿಸಿತೆಂದರೆ, ನಾವು ಮುಂದೆ ಮಾಡತಕ್ಕ ಪ್ರಯಾಣವು ಸುಲಭವಾಗುವದು. ನಾವು ಪುನಃ ಪುನಃ ಹೇಳುತ್ತೇವೆ, ಶ್ರಮದಿಂದ ಸುಲಭತ್ವವುಂಟಾಗುತ್ತದೆ. ಅತಿ ಸುಲಭವಾದ ಕೆಲಸವು ಸಹ ಶ್ರಮಪಡದೆ ಸಾಧಿಸದು. ಶ್ರಮದಿಂದ ಯಾವ ವಿಧದ ಕಾಠಿಣ್ಯವು ಪರಿಹಾರವಾಗಲಿಕ್ಕಿಲ್ಲ! ಸರರಾಬರ್ಟಪೀಲನು ಯಾವ ಗುಣಗಳಿಂದ ಇಂಗ್ಲಂಡದ ನ್ಯಾಯ ಸಭೆಯು ಹೊಳೆಯುವ ಅಲಂಕಾರವೇಂದೆನಿಸಿಕೊಂಡನೋ, ಆ ಗುಣಗಳನ್ನು ಅವನು ಚಿಕ್ಕಂದಿನಲ್ಲಿ ಅಭ್ಯಾಸದಿಂದಲೂ, ಆವೃತ್ತಿಯಿಂದಲೂ ಸಂಪಾದಿಸಿಕೊಂಡನು; ಆದರೂ ಅವು ಮಧ್ಯಸು ಪ್ರತಿಯವೇ ಇದ್ದವು. ಇವನು ಚಿಕ್ಕವನಿದ್ದಾಗ ಇವನ ತಂದೆಯು ಡ್ರೇಟನ್ ಮ್ಯಾನರ ಯೆಂಬಲ್ಲಿ ಇವನ

ನ್ನು ಟೇಬಲಿನ ಹತ್ತಿರ ನಿಲ್ಲಿಸಿ ಉಚ್ಚ ಸ್ವರದಿಂದ ವ್ಯ
ತಾಡಲಿಕ್ಕೆ ಕಲಿಸುತ್ತಿದ್ದನು. ಅದರಿಂದ ಇವನು ಪ್ರ
ಆದಿತ್ಯವಾರ ಕೇಳಿದ ಧರ್ಮಸಂಬಂಧದ ವ್ಯಾಖ್ಯಾನಗ
ನ್ನು ತನಗೆ ನೆನಪಾದಷ್ಟು ಮಾತಾಡಿ ತೋರಿಸುವದಕ್ಕೆ
ಬೇಗ ಕಲಿತನು. ಆರಂಭದಲ್ಲಿ ಇವನಿಗೆ ಬಹು ಸ್ವಲ್ಪ
ಮಾತ್ರ ನೆನಪಾಗುತ್ತಿತ್ತು; ಆದರೆ ಸ್ಥಿರವಾದ ನಿಶ್ಚಯ
ದಿಂದ ಅಭ್ಯಾಸ ನಡಿಸಲಾಗಿ, ಕೇಳಿದ್ದನ್ನೆಲ್ಲ ನೆನಪಿನಲ್ಲಿ
ಟ್ಟುಕೊಳ್ಳುವ ಸ್ವಭಾವವು ಒಳಿತಾಗಿ ಬಲಿಂಯಿತು, ಮುಂ
ದೆ ತಾನು ಕೇಳಿದ ವ್ಯಾಖ್ಯಾನವನ್ನೆಲ್ಲ ಬಹಳ ಮಾಡಿ ಅ
ಕ್ಷರಶಃ ನುಡಿದು ತೋರಿಸ ಹತ್ತಿದನು. ತರುವಾಯ
ಇವನು ಪಾರ್ಲಿಮೆಂಟಿನಲ್ಲಿ ಸಭಾಸದನಾದ ಬಳಿಕ ಇವನ
ಪ್ರತಿ ಪಕ್ಷಿಗಳು ಪ್ರತಿಪಾದಿಸಿದ ಯುಕ್ತಿಗಳನ್ನು ಒಂದ
ರ ಹಿಂದೆ ಒಂದನ್ನು ಕ್ರಮವಾಗಿ ಹಿಡಿದು ಉತ್ತರ ಕೊಡು
ತ್ತ ಹೋಗಲಾಗಿ, (ಈ ಗುಣದಲ್ಲಿ ಇವನಿಗೆ ಸರಿಯಾದ
ವರು ಬಹುಶಃ ಯಾರು ಇದ್ದಿಲ್ಲ), ಅಂಥಾ ಪ್ರಸಂಗಗಳ
ಲ್ಲಿ ಇವನ ಸ್ಮರಣ ಶಕ್ತಿಯನ್ನು ನೋಡಿ. ಅದನ್ನು ಮೂ
ಲಾರಂಭದಲ್ಲಿ ಇವನ ತಂದೆಯೇ ಡ್ರೈಟನ್ ಗ್ರಾಮದಲ್ಲಿ
ಬಹು ಪ್ರಯಾಸದಿಂದ ಜಾಗ್ರತೆ ಪಡಿಸಿದ್ದನೆಂಬ ಕಲ್ಪನೆ
ಯು ಸ್ವಲ್ಪ ಜನರ ಮನಸ್ಸಿನಲ್ಲಿಯೇ ಬರುತಿತ್ತು.

ಅತಿ ಸಾಧಾರಣವಾದ ಕೆಲಸದಲ್ಲಿ ಸಹ ಯೊಡೆಬಿಡದ
ಆಸಕ್ತಿಯಿಂದ ಉಂಟಾಗುವ ಫಲವು ಅತ್ಯಾಶ್ಚರ್ಯಕರ
ವಾದದ್ದೇ ಸರಿ. ಸಾರಂಗಿಯನ್ನು ಬಾರಿಸಲಿಕ್ಕೆ ಕಲಿ
ಯುವದು ತೀರ ಸುಲಭವಾದ ಕೆಲಸವೆಂದು ತೋರಬ
ಹುದು. ಆದರೂ ಯೆಷ್ಟು ಶ್ರಮದಿಂದ (ಯೆಷ್ಟು ದಿವ

ಸಗಳ ವರೆಗೆ ಅವರ ಅಭ್ಯಾಸ ಮಾಡಬೇಕಾಗುತ್ತದೆ! ಒಬ್ಬ ಹುಡುಗನು ಇದನ್ನು ಕಲಿಯುವದಕ್ಕೆ ಯೆಷ್ಟು ದಿವಸ ಬೇಕಾಗುವದೆಂದು ಜಿಯಾರ್ಡಿನಿ ಯೆಂಬವನನ್ನು ಕೇಳಲಾಗಿ ಅವಕ್ಕವನು ಹೇಳಿದ್ದೇನಂದರೆ, “ ಪ್ರತಿ ದಿವಸ ೧೨ ತಾಸುಗಳಂತೆ ಇಪ್ಪತ್ತು ವರ್ಷ ಬೇಕಾಗುವವು” ಉದ್ಯೋಗದಿಂದ ಕರಡಿಯು ಕುಣಿಯಲಿಕ್ಕೆ ಕಲಿಯುತ್ತದೆಂದು ಹೇಳುತ್ತಾರೆ. ಈ ಬಡ ಪ್ರಾಣಿಯು ತನ್ನ ವಿದ್ಯವನ್ನು ತೀರಗಲಿಯ ಬೇಕಾದರೆ, ಯೆಷ್ಟೋ ವರ್ಷಗಳ ವರೆಗೆ ಯೇನು ಲಾಭವಿಲ್ಲದಂಥ ಕೆಲಸದಲ್ಲಿ ಶ್ರಮಪಡ ಬೇಕಾಗುತ್ತದೆ. ಟಾಗ್ಲಿಯೂನಿ ಯೆಂಬವಳು ತನ್ನ ಸಾಯಂಕಾಲದ ಆಟವನ್ನು ಕಲಿಯುವಾಗ, ಅವಳ ತಂದೆಯು ಯೆರಡು ತಾಸುಗಳ ವರೆಗೆ ಅವಳ ಕೈಯಿಂದ ಬಹು ಕಠಿಣವಾದ ಅಭ್ಯಾಸವನ್ನು ಮಾಡಿಸಿದನಂತರ ಅವಳು ನಿಶ್ಚೇತನಳಾಗಿ ಬಿದ್ದುಕೊಳ್ಳುವಳು. ಅವಳ ಮೈಮೇಲಿನ ಪೋಷಾಗವನ್ನು ಯೆರಡನೆಯವರು ಇಳಿಸಿ, ನೀರೆರಚಿ ಸ್ಮೃತಿ ತರಿಸಬೇಕಾಗುತ್ತಿತ್ತು. ಈ ವಿಧವಾದ ಕಷ್ಟದಿಂದ ಅವಳು ತನ್ನ ಸಾಯಂಕಾಲದ ಚಾಪಲ್ಯವನ್ನೂ, ಕುಣಿತವನ್ನೂ ಕಲಿತಳು.

ಆದರೆ ಮೇಲಾದ ಸಾಧನೆಯು ಮೆಲ್ಲ ಮೆಲ್ಲನೆ ಆಗುತ್ತದೆ. ದೊಡ್ಡ ಕಾರ್ಯಗಳು ಒಮ್ಮೆಲೆ ಕೈಗೂಡಿ ಬರಲಾರವು. ನಾವು ನಡಿಯುವಾಗ ಒಂದು ಹೆಜ್ಜೆಯಿಂದ ಇಂನೊಂದು ಹೆಜ್ಜೆಯನ್ನು ಇಡುತ್ತ ಹ್ಯಾಗೆ ಮುಂದಕ್ಕೆ ಹೋಗುತ್ತೇವೋ, ಹಾಗೆ ಈ ಲೋಕದ ವ್ಯವಹಾರಗಳಲ್ಲಿ ನಾವು ಕ್ರಮ ಕ್ರಮವಾಗಿ ಮುಂದವರಿವ ಯತ್ನ

ಪಡಬೇಕು. ಡೀಮೋಸ್ತಿರ ಯೆಂಬವನು, "ಮಾರ್ಗಪ್ರ ತೀಕ್ಷೆಯನ್ನು ಹ್ಯಾಗೆ ಮಾಡಬೇಕೆಂದು ಅರಿತುಕೊಳ್ಳುವ ದೇ ನಮ್ಮ ಮನೋರಥವನ್ನು ಸಾಧಿಸಿಕೊಳ್ಳುವದರ ಗುಟ್ಟಾಗಿರುತ್ತದೆಂ"ದು ಹೇಳುವನು. ಕೊಯ್ಯುವದಕ್ಕೆ ಮೊದಲಾಗಿ ನಾವು ಬಿತ್ತುವದು ಅವಶ್ಯಕವು. ಬಿತ್ತಿದಾಗೂ [illegible] ಮುಂದಿನ ಫಲದಲ್ಲಿ ಆಶೆಯನ್ನಿಟ್ಟು ಬಹಳ ಕಾಲದ ವರೆಗೆ ಸಮಾಧಾನ ವೃತ್ತಿಯಿಂದ ಮಾರ್ಗ ಪ್ರತೀಕ್ಷೆಯನ್ನು ಮಾಡಬೇಕಾಗುತ್ತದೆ. ಯಾಕೆಂದರೆ ನಮ್ಮ ಮಾರ್ಗಪ್ರತೀಕ್ಷೆಗೆ ತಕ್ಕ ಫಲವು ಬಹಳ ನಾವ [illegible]ಕಾಶನಾಗಿ ಪಕ್ವವಾಗುವದು. ಪೂರ್ವ ದೇಶದ ಒಂದು ಗಾದೆಯಲ್ಲಿ ಹೇಳಿದ್ದೇನಂದರೆ, "ಕಾಲಕ್ರಮದಿಂದಲೂ, ತಾಳ್ಮೆಯಿಂದಲೂ, ಕಂಬಳೀ ಮರದ ಯೆಲೆಯೇ* [illegible]ಆಗುತ್ತದೆ.

Champu Ramayan and Champu Bharata with Commentaries in Canarese by Mr. Shantaviraya.

[illegible]ಭಾರತೆ ಸವ್ಯಾಖ್ಯಾನೆ ಪ್ರಥಮಸ್ತಬಕಃ॥

ಗದ್ಯಂ

[illegible] ಮೃಗಯೋಪಲಾಲಿತ ಹೃದಯೋ ನರೇಶ್ವ [illegible] ಶಶಿಶ್ವೇತರೋಚಿಷಿ ವಿಜಿತ ಮಾತರಿಶ್ವನಿ ವಿಶ್ವಾ [illegible]ತಾಧಿರೋಹಃ ಪಾರ್ಶ್ವ ವಿಧೃತಃ ವಿಶ್ವಕದ್ರುಭಿಃ [illegible]ದ್ಯುಪಕರಣೈ ರ್ಯೋಧೈ ರನುದ್ರುತಃ ಮೃಗ

---

* [illegible] ಮಹಾರಾಷ್ಟ್ರದಲ್ಲಿ ತುತ್ತೀ ಮರವೆಂದೆನ್ನಿಸಿ [illegible] ಯೆಲೆಗಳೇ ರೇಶಿಮೆಯ ಹುಳುಗಳ ಆಹಾರವು,

ಭದ್ರ ವಿನಯಾಭ್ಯಾಂ ಯದುಮುದ್ರತನಯಾಭ್ಯಾ ಮನುರುದ್ಧಃ
ಸಿದ್ಧಗಣಗಣ ನೀಯಮಹಿಮವತ್ರೋಹಿಮವತ್ರೋ ಜಗಾಹ ಹೇಮಹ
ಶೀಮಟವೀ ತಟವೀಥಿಕಾಂ॥೭೪॥

ಅನ್ವಯ

ಅಥ=ಕುಂತೀಮಾದ್ರೀಯರ ಮದುವೆಯಾದ ಮೇಲೆ, ಕದಾಚನ=ಆವದೊಂದು ವೇಳೆಯಲ್ಲಿ, ಅಯಂ=ಈ, ನರೇಶ್ವರಃ=ನರಪತಿಯಾದ ಪಾಂಡುರಾಯನು, ಮೃಗಯೋಪಲಾಲಿತಹೃದಯಃ=ಬ್ಯಾಟೆಯಿಂದೊಪ್ಪಿದ ಮನವುಳ್ಳವನಾಗಿಯೂ ವಿಶ್ವಾತಿಶಾಯಿನಿ=ವಿಶ್ವಾತಿಶಾಯಿಯಾದಂಥ, ವಿಜಿತಮಾತರಿಶ್ವನಿ=ಜಯಿಸಲ್ಪಟ್ಟ ಗಾಳಿಯುಳ್ಳಂಥ, ಶಶಿಶ್ವೇತರೋಚಿಷಿ, ಶಶಿ=ಚಂದ್ರನ ಹಾಗೆ, ಶ್ವೇತರೋಚಿಷಿ=ಶುಭ್ರಕಾಂತಿಯುಳ್ಳಂಥ, ಅಶ್ವೇ=ಕುದುರೆಯಲ್ಲಿ, ಕೃತಾಧಿರೋಹಃ=ಆರೋಹಣವನ್ನು ಮಾಡಿದಂಥಾತನಾಗಿಯೂ, ವಿಶ್ವಕದ್ರುಭಿಃ=ಬ್ಯಾಟೆಯ ನಾಯ್ಗಳಿಂದ, ಪಾರ್ಶ್ವವಿಧೃತಃ=ಎಡಬಲಗಳಲ್ಲಿ ಯಿರಲ್ಪಟ್ಟವನಾಗಿಯೂ, ಅನೇಕವಾಗುರಾದ್ಯುಪಕರಣೈಃ, ಅನೇಕ=ಬಾಳವಾದ, ವಾಗುರಾ=ಹಗ್ಗದಬಲೆಗಳು, ಆದಿ=ಮೊದಲಾದ, ಉಪಕರಣೈಃ=ಬ್ಯಾಟೆಯ ಸಾಧನಗಳಿಂದ, ಯೋಧೈಃ=ವನಚರಯೋಧರಿಂದ, ಅನುದ್ರುತಃ=ಪರಿವೃತನಾದಂಥಾತನಾಗಿಯೂ, ಮೃದುಭದ್ರವಿನಯಾಭ್ಯಾಂ=ಮೃದುವಾದ, ಭದ್ರವಿನಯಾಭ್ಯಾಂ=ಮಂಗಲಕರವಿನಯಗಳುಳ್ಳಂಥ, ಯದುಮುದ್ರತನಯಾಭ್ಯಾಂ=ಕುಂತೀಮಾದ್ರೀಯರಿಂದ, ಅನುರುದ್ಧಃ=ಯುಕ್ತನಾಗಿಯೂ, ಸಿದ್ಧಗಣಗಣನೀಯಮಹಿಮವತಃ, ಸಿದ್ಧಃ=ಯೋಗಿಗಳ, ಗಣ=ಸಮೂಹದಿಂದ, ಗಣನೀಯ=ಗಣನಾಮಾಡಲಿಕ್ಕೆ ಯೋ

ಗ್ಯವಾದ, ಮಹಿಮವತಃ=ಪ್ರಭಾವವುಳ್ಳಂಥ, ಹಿಮವತಃ ಹಿಮಾಚಲದ, ಮಹತೀಂ=ವಿಸ್ತಾರವಾದ, ಅಟವೀವೀಥಿಕಾಂ = ಅಡವಿಯ ಮಾರ್ಗವನ್ನು, ಜಗಾಹೆ = ಪ್ರವೇಶಿಸಿದನು.

ಭಾವಾರ್ಥ

ಕುಂತೀಮಾದ್ರಿಯರನ್ನು ಮದುವೆಯ ಮಾಡಿಕೊಂಡ ಬಳಿಕ ಪಾಂಡುರಾಯನು ಒಂದಾನೊಂದು ಕಾಲದಲ್ಲಿ ಬ್ಯಾಟೆಯಾಡುವ ಅಪೇಕ್ಷದ ಮನವುಳ್ಳವನಾಗಿಯೂ ಗಾಳಿಯಕಿಂತಲೂ ಮನೋವೇಗದಕಿಂತಲೂ ಅತಿ ವೇಗದ ಬಿಳಿ ಕುದುರೆಯನ್ನು ಏರಿದವನಾಗಿಯೂ ನಾಯ್ಗಳಿಂದಲೂ ಬಲೆ ಮೊದಲಾದವುಗಳಿಂದಲೂ ವನಚರರಿಂದಲೂ ಬೇಡರಿಂದಲೂ ಯುಕ್ತನಾಗಿಯೂ ಯೋಗಿಗಳಿಂದೊಪ್ಪುವ ಹಿಮಾಚಲದ ಅಡವಿಯ ಹಾದಿ ಹಿಡಿದನು.

॥ಇತಿಪೂರಾಮಾಯಣೆಸವ್ಯಾಖ್ಯಾನೆ ಬಾಲಕಾಂಡಃ॥

॥ಮಂದಾಕ್ರಾಂತವೃತ್ತಂ॥

ಸಂತಾಪಘ್ನಂ ಸಕಲಜಗತಾಂ ಶಾರ್ಙ್ಗಚಾಪಾಭಿರಾಮಂ।
ಲಕ್ಷ್ಮೀವಿದ್ಯುಲ್ಲಸಿತ ಮತಸೀಗುಚ್ಛಸಚ್ಛಾಯ ಕಾಯಂ॥
ವೈಕುಂಠಾಖ್ಯಂ ಮುನಿಜನ ಮನಶ್ಚಾತಕಾನಾಂ ಶರಣ್ಯಂ।
ಕಾರುಣ್ಯಾಪಂತ್ರಿದಶಪರಿಷತ್ಕಾಲಮೇಘಂದದರ್ಶ॥೨೨॥

ಅನ್ವಯ

ಸಕಲಜಗತಾಂ=ಸಮಸ್ತ ಲೋಕಗಳ, ಸಂತಾಪಘ್ನಂ =ತಾಪತ್ರಯಗಳನ್ನು ನಾಶಮಾಡುವಂಥ (ಬೇಸಗೆಯಿಂದ

ಹುಟ್ಟಿದ ಸಂತಾಪವನ್ನು ನಾಶಮಾಡುವಂಥ। ಶಾರ್ಙಚಾಪಾಭಿರಾಮಂ=ಶಾರ್ಙವೆಂಬ ಕಾಮನ ಬಿಲ್ಲಿಂದ ಅಭಿರಾಮನಾದಂಥ। ಲಕ್ಷ್ಮೀವಿದ್ಯುತ್‌ಲಸಿತಂ=ಲಕ್ಷ್ಮೀಯೆಂಬ ಮಿಂಚನಿಂದ ಶೋಭಿಸಿದಂಥ। ಅತಸೀಗುಚ್ಛಸಚ್ಛಾಯಕಾಯಂ, ಅತಸೀ=ಅಗಸಿಯ, ಗುಚ್ಛ=ಹೂ ಗೊಂಚಲದ ಹಾಂಗೆ, ಸಚ್ಛಾಯ=ಪ್ರಕಾಶಮಾನವಾದ, (ಸಮಾನವಾದ) ಕಾಯಂ=ಶರೀರವುಳ್ಳಂಥ। ಮುನಿಜನಮನಶ್ಚಾತಕಾನಾಂ=ಮುನಿಜನರ ಮನಗಳೆಂಬ ಚಾತಕಪಕ್ಷಿಗಳ, ರಕ್ಷಣ್ಯಂ=ರಕ್ಷಿಸುವಲ್ಲಿ ಯೋಗ್ಯನಾದಂಥ। ಕಾರುಣ್ಯಾಪಂ=ಕರುಣಾರಸವೆಂಬ ನೀರುಳ್ಳಂಥ। ವೈಕುಂಠಾಖ್ಯಂ ಕಾಲಮೇಘಂ=ನಾರಾಯಣನೆಂಬ ಕಾಲಮೇಘವನ್ನು ತ್ರಿದಶಪರಿಷತ್, ತ್ರಿದಶ=ಬ್ರಹ್ಮ ಮೊದಲಾದ ದೇವತೆಗಳ, ಪರಿಷತ್=ಸಮಾಜವು। ದದರ್ಶ=ಕಂಡಿತು.

॥ಭಾವಾರ್ಥ॥

ಸಕಲ ಲೋಕಗಳ ತಾಪತ್ರಯಗಳೆಂಬ ಬೇಸಗೆಯ ಸಂತಾಪವನ್ನು ಪರಿಹರಿಸುವಂಥ, ಶಾರ್ಙವೆಂಬ ಕಾಮನ ಬಿಲ್ಲಿಂದ ಶೋಭಿಸುವಂಥ, ಅಗಸಿಯ ಹೂವಿನ ಕಾಂತಿಯ ಹಾಂಗೆ ಕಾಯಕಾಂತಿಯುಳ್ಳಂಥ, ಮುನಿಗಳ ಮನಶ್ಚಾತಕ ಪಕ್ಷಿಗಳನ್ನು ರಕ್ಷಿಸುವಂಥ, ಕರುಣಾರಸವುಳ್ಳಂಥ, ನಾರಾಯಣ ಮೂರ್ತಿಯೆಂಬ ನೀಲಮೇಘವನ್ನು ಬ್ರಹ್ಮಾದಿ ದೇವತೆಗಳು ಕಂಡುಕೊಂಡರು.

ಶಾಂತವೀರ ರಾಚದೇವ ಕಿತ್ತೂರ ಟ್ರೇನಿಂಗಕಾಲೇಜ
ಬೆಳಗಾವ.

NOTICES.

ನೋಟೀಸುಗಳು.

ಮುಳೆ ಟ್ರೇನಿಂಗ ಸ್ಕೂಲಿನೊಳಗೆ ಹಿಂದಿನ ಸರಟೀಫಿಕೇಟಿನ ಪರೀಕ್ಷೆಗೆ ಬರಲಿಚ್ಛಿಸುವಂಥವರೆಲ್ಲರನ್ನು ಪರೀಕ್ಷಕರು ತೆಗೆದುಕೊಂಡಿದ್ದರೆಂದು ಕಂಡು ಬರುತ್ತದೆ. ಅದು ಹ್ಯಾಗಂದರೆ, ಈಶಾನ್ಯ ಭಾಗದವರಾದ ಕೆಲವರು ಅಸಿಸ್ಟಂಟ ಮಾಸ್ತರರು, ಬೇರೊಂದು ಭಾಗದವನಾದ ಅಸಿಸ್ಟಂಟನೊಬ್ಬನು ನಿಕೃಷ್ಟ ಪಕ್ಷಕ್ಕೆ, ಯಾವ ಶಾಲೆಯಲ್ಲಿಯೂ ಕೆಲಸವಿಲ್ಲದಂಥವನೊಬ್ಬನು, ಈ ಮೂರಿಗೆ ಜನರು ಇನಸ್ಪೆಕ್ಟರರ ವಿಶೇಷವಾದ ಅಪ್ಪಣೆ ಯಿಲ್ಲದೆ, ಟ್ರೇನಿಂಗ ಸ್ಕೂಲಿನ ವರ್ಗಗಳಲ್ಲಿ ಅವರು ಒಂದು ದಿವಸಾದರೂ ಕಲಿಯದಿದ್ದಾಗ್ಯೂ ಪರೀಕ್ಷೆಯಲ್ಲಿ ತೆಗೆದುಕೊಳ್ಳಲ್ಪಟ್ಟರು.

೨ ಈ ಸಂಗತಿಗಳಿಂದ, ರೀತಿಯ ಪ್ರಕಾರ ಟ್ರೇನಿಂಗ ಸ್ಕೂಲಿನಲ್ಲಿ ಕಲಿಯದಂಥ ಯಾವನೊಬ್ಬ ಉಮೇದವಾರನು, ಪ್ರವೇಶ ಪರೀಕ್ಷೆಯ ಹೊರ್ತು, ಬೇರೊಂದು ಪರೀಕ್ಷೆಗೆ ಹೋಗಬೇಕಾದರೆ, ಇನಸ್ಪೆಕ್ಟರ ಸಾಹೇಬರ ಅಪ್ಪಣೆಯು ಅಗತ್ಯವಾದದ್ದೆಂದು ತೋರಿಸುವದು ಅವಶ್ಯವಿರುತ್ತದೆ. ಮತ್ತು ಈ ಬಗ್ಗೆ ಇನಸ್ಪೆಕ್ಟರರು ಟ್ರೇನಿಂಗ ಕಾಲೇಜದಲ್ಲಿ ಸರಟೀಫಿಕೇಟಿನ ಪರೀಕ್ಷೆಯ ಸಂಬಂಧವುಳ್ಳ ಯಾವತ್ತು ಜನರಿಗೆ ನೋಟೀಸು ಕೊಡುವರೆಂದು ಕೋರುತ್ತೇವೆ.

ಬಹು ಮೂಸಾರ್ಥವಾಗಿಯಾಗಲಿ, ಶಿಕ್ಷೆಯ ಉದ್ದೇಶದಿಂದಾಗಲಿ, ಶಿಕ್ಷಕರನ್ನು ಸರಟೀಫಿಕೇಟಿನ ಪರೀಕ್ಷೆಗೆ

ಂಸಬಹುದು. ಆದರೆ ಬೇಕಾದವರನ್ನು ಬೇಕಾದ ಹಾ
ಪರೀಕ್ಷೆಗೆ ಬರಗೊಡುವದರಿಂದ ಕಾಲೇಜದ ಅಭ್ಯಾಸಪ
ನ್ನು ಕಮಾಕದ ಯೋಗ್ಯತೆಗೆ ಇಳಿಸಿದ ಹಾಗಾಗುವದು.

ಮು. ಪುಣೆ ತಾ. ೧೦
ಜುಲಾಯಿ ಸನ್ನ೧೮೭೪
ನೇ ಇಸವಿ.

K. M. Chatfield.
Ag. Director of Public Instruction

ನಿಜವಾದ ಭಾಷಾಂತರವು.

ಮು. ಧಾರವಾಡ ತಾ.
೫ ಅಗಷ್ಟ ಸನ್ನ೧೮೭೪
ನೇ ಇಸವಿ.

Venkat Rango Katti.
ಕನ್ನಡ ಟ್ರಾನ್ಸಲೇಟರ.
ಎ. ಡಿ.

ಈ ಕೆಳಗಿನ ಸರಕಾರೀ ಹುಕುಮು, ಸನ್ನ ೧೮೭೪ ನೇ ಇಸವೀ ಜುಲಾಯಿ ತಿಂಗಳನ ೨೨ ನೇ ತಾರೀಖಿನದು, ಸರಕಾರೀ ಗ್ಯಾಝೇಟಿನ ೬೧೨ ನೇ ಪುಟದಲ್ಲಿ ಛಾಪಿಸಲ್ಪಟ್ಟಿದ್ದು, ಮುಲಕೀ, ಫೌಜದಾರೀ, ಪೋಲೀಸ ಖಾತೆಗಳಲ್ಲಿ ಕೈ ಕೆಳಗಿನ ನೌಕರರಿಗಾಗಿ ನೇಮಿಸಿದ ಪರೀಕ್ಷೆಗೆ ಹೋಗಲಿಚ್ಛಿಸುವಂಥ ವಿದ್ಯಾಖಾತೆಯೊಳಗಿನ ನೌಕರರಿಗೆ ತಿಳಿಯಪಡಿಸುವದಕ್ಕಾಗಿಯೂ, ದಿಗ್ದರ್ಶನಾರ್ಥವಾಗಿಯೂ ಪುನಃ ಇಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ.

" ರೆವಿನ್ಯೂ ಖಾತೆ.

ನಾಮದಾರ ಗವ್ಹರನರ್ ಇನ್ ಕಾವ್ನಿನ್ ಸಿಲ್ಲಿನವರು ಆಜ್ಞಾಪಿಸುವದೇನಂದರೆ, ಸರಕಾರೀ ಬೇರೆ ಖಾತೆಗಳಲಿ, ಕಾಯಂ ನೌಕರಿಯನ್ನಾಗಲಿ ಹಂಗಾಮೀ ನೌಕರಿಯನ್ನಾಗಲಿ ಮಾಡುವಂಥ ನೌಕರರೆಲ್ಲರನ್ನು ಮುಲಕೀ, ಫೌಜ

ವಾರೀ, ಪೋಲಿಸ ಖಾತೆಗಳಲ್ಲಿ ಕೈ ಕೆಳಗಿನ ನೌಕರ
ಗಾಗಿ ನೇಮಿಸಿದ ಪರೀಕ್ಷೆಗೆ ಹೋಗಗೊಡಬಹುದು—ಈ ಪ
ರೀಕ್ಷೆಯು ಸಂಗತಿಯು ಸಂನ ೧೮೭೦ನೇ ಇಸವೀ ಜ
ನ ತಿಗಳಿನ ೨೩ ನೇ ತಾರೀಖಿನ ಮುಂಬಯಿ ಸರಕಾರೀ
ಗ್ಯಾಝೇಟಿನ ೬೯೬ ನೇ ಪುಟದಲ್ಲಿ ಸದರೀ ಇಸವಿಯ
ಸದರೀ ತಿಂಗಳಿನ ೨೭ನೇ ತಾರೀಖಿನ ಈ ಖಾತೆಯು ಪ
ಕಟನೆಯು ಕೆಳಗ ಪ್ರಸಿದ್ಧಿಸಲ್ಪಟ್ಟದೆ—”

ನಿಜವಾದ ಭಾಷಾಂತರವು.

ಧಾರವಾಡ ತಾ.
೨೭ ಅಗಸ್ಟ ಸನ್ನ
೧೮೭೪ ನೇ ಇ.

Venkat Rango Katti
ಕನ್ನಡ ತ್ರಾನ್ಸಲೇಟರ ಎ. ಡಿ.

ಬೆಳಗಾಂವ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ಬೆಳಗಾಂವ ಜಿಲ್ಲೇದ ಡಿಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರವರಕಡಿಂದ ತಿಳಿಯಪಡಿಸುವದೇನಂದರೆ — ಮಾಸ್ತರ
ಜನರ ಕಡಿಂದ ಬರುವ ಕಾಗದ ಪತ್ರಗಳು ಬಹಳ ಮಾಡಿ
ತೆಳ್ಳಗಿನ ಕಾಗದದ ಮೇಲೆ ಬರೆದು ಬರುವದರಿಂದ ಕಾಗ
ದ ಬಡೆದು ಅಕ್ಷರಗಳು ಸ್ಪಷ್ಟವಾಗಿ ತಿಳಿಯುವದಿಲ್ಲ. ಇ
ದರಪಶೆಯಿಂದ ಕಾಗದ ಪತ್ರದ ವ್ಯವಹಾರವು. ಫುಲಸ್ಕೇಪ
ಕಾಗದದ ಮೇಲೆ ಇಡಬೇಕು ತಿಳಿಯುವದು ತಾ. ೧೬
ಜುಲಾಯಿ ಸಂನ ೧೮೭೪ ಇಸವಿ—

P. V. Chintamanpetkar.
ಡಿಪ್ಯುಟಿ ಎ. ಇನ್ಸ್‌ಪೆಕ್ಟರ ಜಿ. ಬೆಳಗಾಂವಿ—

ಬೆಳಗಾಂವ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ಳಗಾಂವ ಜಿಲ್ಹೇದ ಡಿಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರವರಕಡಿಂದ ತಿಳಿಯಪಡಿಸುವದೇನಂದರೆ — ಟಿಕೇಟು ಯಾವ ರೀತಿಯಿಂದ ಹಚ್ಚಬೇಕು ಈ ಬಗ್ಗೆ ಇತ್ತಕಡಿಂದ ಬ್ರುವಾರಿ ತಿಂಗಳದಲ್ಲಿ ಸರಕ್ಯುಲರ ಹುಕುಮು ಆಗಿ ದ್ದು ಅದರಂತೆ ಕೆಲವು ಮಾಸ್ತರರು ವರ್ತಿಸುವದಿಲ್ಲ ಆದ್ದ ರಿಂದ ಲಖೋಟಿಗಳು ನಾಟಪೇಡಾಗಿ ನಮಗೆ ಹಾಸಲು ಡಬೇಕಾಗುತ್ತದೆ ಆದರೆ ಇನ್ನುಮೇಲೆ ಹೀಗೆ ನಾಟ ಡಾಗಿ ಯಾವ ಮಾಸ್ತರರಕಡಿಂದ ಲಖೋಟಿಗಳು ಬಂ ದ್ದವು ಅವರ ವಿಷಯಕ್ಕೆ ಯೋಗ್ಯ ತಜವೀಜು ಮಾಡಲಾ ಗುವದು ತಿಳಿಯೋದು ತಾ. ೧೬ ಜುಲಾಯಿ ಸನ್ ೧೮೭೪ ನೇ ಇಸವಿ—

P. V. Chintamanpetkar.

ಡಿ. ಎ. ಇನ್‌ಸ್ಪೆಕ್ಟರ ಜಿಲ್ಹಾ ಬೆಳಗಾಂವಿ.

ಬೆಳಗಾಂವಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ಬೆಳಗಾಂವ ಜಿಲ್ಹೇದ ಡಿಪ್ಯುಟಿ ಎ. ಇನಸ್ಪೆಕ್ಟರರವರ ಕಡಿಂದ ತಿಳಿಯಪಡಿಸುವದೇನಂದರೆ —ಸರ್ವಿಸ ಟಿಕೇಟುಗಳನ್ನು ತರಿಸುವದಕ್ಕೆ ಪರ ಒಬ್ಬ ಮಾಸ್ತರನು ಸಾದಿಲವಾರದೊಳಗಿಂದ ೮ ಎಂಟು ಆಣೆ ರೊಕ್ಕವನ್ನು ತಮ್ಮ ತಾಲೂಕ ಮಾಸ್ತರರ ಕಡಿಗೆ ಕಳುಹಿಸಿ ಕೊಡುತ್ತಿರಬೇಕು ಮತ್ತು ತಾಲೂಕ ಮಾಸ್ತರರು ಸರ್ವಿಸ ಟಿಕೇಟುಗಳನ್ನು

ತರಿಸಿ ಪ್ರತಿ ಒಬ್ಬ ಮಾಸ್ತರರ ಕಡಿಗೆ ಕಳುಹಿಸಿಕೊಡುತ್ತಿರಬೇಕು ಇದರಂತೆ ಸರ್ವೀಸ ಟಿಕೇಟುಗಳು ತೀರುತ್ತಲೇ ಪುನಃ ಮೇಲೆ ಬರೆದಂತೆ ಮಾಡುತ್ತಾ ಹೋಗಬೇಕು ತಿಳಿಯುವದು ತಾ. ೧೬ ಜುಲಾಯಿ ಸನ್ ೧೮೭೪ ಇಸವಿ-

P. V. Chintamanpetkar.

ಡಿ. ಎ. ಇನ್‌ಸ್ಪೆಕ್ಟರ ಜಿಲ್ಲಾ ಬೆಳಗಾಂವಿ.

ಸರಟಿಫಿಕೇಟ ಪರೀಕ್ಷೆಯ ವಿಷಯಕ್ಕೆ.

ಈ ವರ್ಷದ ಸರಟೀಫಿಕೇಟ ಪರೀಕ್ಷೆಯು ಸನ್ನ ೧೮೭೪ ನೇ ಇಸವಿ ಅಗಟಂಬರ ತಿಂಗಳ ೧೨ ನೇ ತಾರೀಖ ಸೋಮವಾರ ದಿವಸ ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ನೈಹಬೂರ್ನ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹದ್ದೂರರವರು ತೆಗೆದುಕೊಳ್ಳುವರು. ಈ ಪರೀಕ್ಷೆಯನ್ನು ಕೊಡಲಪೇಕ್ಷಿಸುವ ಅಸ್ಟ್ರೇಂಟ ಮಾಸ್ತರರು ಮೈಹಬೂರ್ನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆಯನ್ನು ಮೊದಲಿಗಾಗಿಯೇ ಪಡೆದು, ನಾಲ್ಕು ದಿವಸ ಪೂರ್ವದಲ್ಲಿಯೇ ತಮ್ಮ ಹೆಸರುಗಳನ್ನು ರಜಿಸ್ತರದಲ್ಲಿ ಕೇರಿಸಲಿಕ್ಕೆ ಪ್ರಿನಸಿಪಾಲ ಟ್ರೇನಿಂಗ ಕಾಲೇಜ ಬೆಳಗಾವಿ ಇವರ ಕಡಿಗೆ ಬಂದು ಹಾಜರಾಗತಕ್ಕದ್ದು. ತಿಳಿಯುವದು ತಾರೀಖು ೫ ನೇ ಆಗಸ್ಟ ಸನ್ನ ೧೮೭೪ ಇಸವಿ.

Bhoojungrao K. Hoolgoal.

ಪ್ರಿನಸಿಪಾಲ ಟ್ರೇನಿಂಗಕಾಲೇಜ ಬೆಳಗಾವಿ

ಪ್ರವೇಶ ಪರೀಕ್ಷೆಯ ವಿಷಯಕ್ಕೆ

ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ಅಭ್ಯಾಸಮಾಡಲಿಚ್ಛಿಸುವವರಿಗೆ ತಿಳಿಯಪಡಿಸುವದೇನಂದರೆ — ಸದರ ಪರೀಕ್ಷೆಯು ತಾರೀಖು ೫ ನೇ ಅಕಟೋಬರ ಸನ್ ೧೮೭೪ ಇಸವಿ ಸೋಮವಾರ ದಿವಸ ಟ್ರೇನಿಂಗ ಕಾಲೇಜದಲ್ಲಿಯೂ, ಧಾರವಾಡ, ಕಲಾದಗಿ, ಉತ್ತರಕಾನಡಾ, ಜಿಲ್ಹೆಯ ಸ್ಥಳಗಳಲ್ಲಿಯೂ ಆಗುವದು. ಟ್ರೇನಿಂಗ ಕಾಲೇಜದಲ್ಲಿ ಆಗುವ ಪರೀಕ್ಷೆಗೆ ಕಾಲೇಜದ ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ನಾಲ್ಕು ತಿಂಗಳುಗಳಿಂದ ಅಭ್ಯಾಸ ಮಾಡುತ್ತಿರುವ ಜನರ ಹೊರ್ತು ಬೇರೆ ಯಾವ ಉಮೇದವಾರರನ್ನಾದರೂ ತೆಗೆದುಕೊಂಬೋಣಾಗಲಿಕ್ಕಿಲ್ಲ. ಧಾರವಾಡ, ಕಲಾದಗಿ, ಉತ್ತರಕಾನಡಾ, ಈ ಜಿಲ್ಹೆಗಳ ಸ್ಥಳಗಳಲ್ಲಿ ಆಗುವ ಪರೀಕ್ಷೆಗೆ ಆಯಾ ಜಿಲ್ಹೆಗಳಲ್ಲಿಯೇ ವಾಸವಾಗಿರುವ ವಿದ್ಯಾರ್ಥಿಗಳನ್ನೇ ಮಾತ್ರ ತೆಗೆದುಕೊಂಬೋಣಾದೀತು. ಅವರು ಆಯಾ ಜಿಲ್ಹೆಗಳ ಡೆಪ್ಯುಟಿ ಎ. ಇನಸ್ಪೆಕ್ಟರವರ ಕಡೆಗೆ ಹಾಜರಾಗಿ ತಾವು ಅಭ್ಯಾಸ ಮಾಡಿರುವ ಸಾಲಿಯ ಮಾಸ್ತರರ ಕಡಿಂದ ತಮ್ಮ ವಯಸ್ಸು ೧೭ನೇ ವರ್ಷ ಪೂರ್ಣ ಆಗಿರುವ ಬಗ್ಗೆಯೂ, ಪರೀಕ್ಷೆ ಕೊಡಲಿಕ್ಕೆ ಲಾಯಖರಿರುವ ಬಗ್ಗೆಯೂ, ಒಳ್ಳೇನಡತೆಯುಳ್ಳವರಾಗಿರುವ ಬಗ್ಗೆಯೂ ಸರಟೀಫಿಕೀಟಗಳನ್ನು ತಂದು ತಮ್ಮ ಹೆಸರುಗಳನ್ನು ಪರೀಕ್ಷೆಯ ಪಟ್ಟಿಗೆ ದಾಖಲು ಮಾಡಿಸಬೇಕು. ಈ ಪರೀಕ್ಷೆಯು ೫ ನೇ ಷ್ಟ್ಯಾಂಡರ್ಡನಂತೆ ಆಗುವದು ತಿಳಿಯುವದು ತಾ. ೫ ಅಗಸ್ಟ ಸನ್ ೧೮೭೪ ಇಸವಿ.

Bhoojungrao K. Hoolgoal.

ಪ್ರಿನಸಿಪಾಲ ಟ್ರೇನಿಂಗಕಾಲೇಜ ಬೆಳಗಾವಿ.

Correspondence.

ಪತ್ರವ್ಯವಹಾರವು

ಈ ಮುಂಬಾಯಿ ಇಲಾಖೆಯಲ್ಲಿ ನಾನಾ ಭಾಷೆಗಳ ವರ್ತಮಾನ ಪತ್ರಗಳು ಹೊರಡುತ್ತವೆ. ಪರಂತು ನಂಮ್ಮ ಬಡ ಕನ್ನಡ ಮಾತಿನ ಪತ್ರವು ಹೊರಡುವದೇ ಇಲ್ಲ. ನಿದಾನ ಪಕ್ಷಕ್ಕೆ ದಕ್ಷಿಣ ಭಾಗದ ನಾಲ್ಕು ಜಿಲ್ಲೆಗಳಿಗೆ ನಾಲ್ಕಾದರೂ ಇರಬೇಕು. ಅವು ಇಲ್ಲದಿದ್ದರೆ ಕನ್ನಡ ಜಿಲ್ಲೆ ಯೆನಿಸುವ ಧಾರವಾಡದಲ್ಲಿ ಹೊರಡುವ ಪತ್ರಗಳಲ್ಲಿ ಒಂದಾದರೂ ಕನ್ನಡವಾಗಿರಬೇಕು ಅದು ಮಹಾರಾಷ್ಟ್ರವೇ. ಇದರ ಮೇಲಿಂದ ಕನ್ನಡ ಜನರು ಬದುಕಿರುವರೋ? ಸತ್ತರೋ? ತಿಳಿಯದು. ಭೂಮಿಯಲ್ಲಿ ಮನುಷ್ಯರಾಗಿ ಹುಟ್ಟಿದ ಮೇಲೆ ಅವರಿಗೆ ಕುಸುವಾದರೂ ತಮ್ಮ ಅಭಿಮಾನವಿರಬೇಕು. ಅಂಥಾ ಚಿನ್ಹವು ಕನ್ನಡಿಗರಲ್ಲಿ ಕಾಣಿಸುವದಿಲ್ಲ. ಹಾಗೆ ಪೌರುಷ್ಯವು ಇವರಲ್ಲಿದ್ದರೆ ಮೊಂನೆ ತಲೆಯೆತ್ತಿದ್ದ "ಸುದ್ದೀಸೊಬಗಿಗೆ" ತಕ್ಕಷ್ಟು ಸಂಪುತಗಳು ದೊರೆಯುತ್ತಿದ್ದಿಲ್ಲವೋ? ಇನ್ನಾದರೂ ನಮ್ಮ ಸೂಚನೆಯು ಇಷ್ಟೆದಲ್ಲಾ ಉಳಿದ ಜನರು ಬೇಕಾದಂತೆ ಇರಲೂ ಲ್ಲರ್ಯಾಕ್ಕೆ ದಕ್ಷಿಣ ಭಾಗದಲ್ಲಿ ಸುಮಾರು ೪೦೦ ಸರಕಾರೀ ಶಾಲೆಗಳವೆ. ಇವುಗಳಲ್ಲಿ ಮಹಾರಾಷ್ಟ್ರ ಜನರು ಹೋಗಲಾಗಿ ಕನ್ನಡಿಗರಾದ ಸ್ಕೂಲ್ಮಾಸ್ತರರೂ, ಹೆಚ್ಚಿನ ಪಗಾರವುಳ್ಳ ಮಾದತನೀಸರೂ ಕೂಡಿ, ಅಜಮಾಸು ೩೦೦

ಜನರಿದ್ದಾರು; ಇದರಲ್ಲಿ ಸಂಶಯವಿಲ್ಲ. ಅವರೆಲ್ಲಾ ಒಂದೊಂದು ಪ್ರತಿ ತಕ್ಕೊಳ್ಳುತ್ತೇವೆಂದು ತಿಳಿಸಿದರೆ ಸದರಹೂ ಪತ್ರವು ಹೊರಡದೇ ಇರಲಿಕ್ಕಿಲ್ಲ. ಇದಲ್ಲದೆ ಅನ್ಯ ಜಾತಿಯ ಸುವಿಚಾರಿಗಳಾದ ದೊಡ್ಡ ಸರದೇಸಾಯರೂ, ಸಾವುಕಾರರೂ ಆಶ್ರಯವನ್ನು ಕೊಡದೆ ಇರಲಿಕ್ಕಿಲ್ಲ. ಅವರಿಗೆ ಜುಲುಮೆಯನ್ನು ಮಾಡುವಷ್ಟು ಸಲಿಗೆಯು ನಮಗಿಲ್ಲ. ಆರೆಯನ್ನು ಅರಿಯದ ಎಷ್ಟೋ ಮಂದಿ ಕನ್ನಡಿಗರು ನಮ್ಮ ಮಾತಿನ ವರ್ತಮಾನಪತ್ರವು ಹೊರಟರೆ ತಕ್ಕೊಳ್ಳುತ್ತೇವೆಂದು, ಅಂದದ್ದನ್ನು ನಾನು ಪ್ರತ್ಯಕ್ಷವಾಗಿ ಕೇಳಿದ್ದೇನೆ. ಈ ಮಾತು ಹಾಗಿರಲಿ, ಸ್ಕೂಲಮಾಸ್ತರ ಜನರು ಇದನ್ನು ಅವಶ್ಯವಾಗಿ, ಧ್ಯಾನದಲ್ಲಿಟ್ಟು, ಹಾಗೆ ಮಾಡತಕ್ಕದ್ದು ಯಾಕಂದರೆ ಇವರು ಇಂಥಾ ಕೆಲಸಕ್ಕೆ ಮುಂದಾಗುವದು ಇವರ ಕರ್ತವ್ಯ ಕಾರ್ಯವಾಗಿಧೆ. ಒಂದಾದರೂ ಕನ್ನಡ ಪತ್ರವು ಹೊರಡುವದರಿಂದ ಮೇಲೆ, ಇದು ನಮಗೆ (ಕನ್ನಡಿಗರಿಗೆ) ಬಹಳ ಸಾಜಕೆಯನ್ನುಂಟು ಮಾಡುತ್ತದೆ. ಈ ಮಾತಿನ ಕಡೆಗೆ ಕನ್ನಡ ಸ್ಕೂಲಮಾಸ್ತರರೆಲ್ಲರೂ ಸ್ವಲ್ಪವಾದರೂ, ತಮ್ಮ ಭಾಷೆಯ ಅಭಿಮಾನವೂ, ಸದ ಸದ್ವಿಚಾರವೂ ಇದ್ದವರು ಲಕ್ಷ್ಯ ಕೊಟ್ಟಾರು; ಕೊಡದೇ ಇರರೆಂದು ನಂಬಿಗೆಯು ತೋರುತ್ತದೆ. ದಾವಮಾತಂನಾದರೂ ಚಂನಾಗಿ ಆಲೋಚಿಸಿ, ಯೋಗ್ಯ ಕಂಡರೆ ಅದಕ್ಕೆ ತಕ್ಕ ಪ್ರಯತ್ನವನ್ನು ತನ್ನ ಶಕ್ತ್ಯನುಸಾರವಾಗಿ, ಮಾಡುವಾತನು ಯೋಗ್ಯನಲ್ಲದೇ, ತತ್ಕಾಲವೇ ಅದನ್ನು ಧಿಕ್ಕರಿಸಿ ಬಿಡುವ ಮನುಷ್ಯನು ಜಾಣನೆಂದು ಹೇಳಕೂಡದು.

ನನಗೆ ಅವಕಾಶಾಭಾವದಿಂದ ಈ ವಿಷಯವನ್ನು ಇಷ್ಟರಲ್ಲಿಯೇ ಮುಗಿಸುತ್ತೇನೆ. ವಿಸ್ತಾರವಾಗಿ ಬರೆಯ ಬೇಕಾದರೆ ಇಂನೂ ಬಹಳ ಮಾತುಗಳುಂಟು. ಆದರೆ ಅವೆಲ್ಲಾ ಮುಖ್ಯವಾದವುಗಳಲ್ಲ.

ಮೇಲೆ ಬರೆದ ಸಂಗತಿಗಳಲ್ಲಿ ಏನಾದರೂ ಸಯುಕ್ತಿಕವಾಗಿ ಕಂಡರೆ ವಾಚಕರು ಅವನ್ನು ಪರಿಗ್ರಹಿಸಬೇಕೆಂದು ಲೋಕೋಪಕಾರ ಮನಸ್ಸಿನಿಂದ ಬೇಡಿಕೊಳ್ಳುತ್ತೇನೆ. ಮತ್ತು ದೇಶಾಚಾರ ಸಂಬಂಧದಿಂದ ಬರೆದ ಕೆಲವು ಸಂಗತಿಗಳಿಂದ ದಾರಾದರೂ ಮನಸಿನಲ್ಲಿ ವಿಕಲ್ಪವನ್ನು ಭಾವಿಸಲಾಗದು. "ನಕ್ಕು ಹೇಳಿದವನು ಕೆಡಕು ಹೇಳಿದನಂತೆ ಸಿಟ್ಟಿನಿಂದ ಮಾತಾಡಿದವನು ಹಿತವನ್ನು ಹೇಳಿದನಂತೆಯೆಂದು ನಾಡಗಾದೆಯುಂಟು.

ತಾರೀಖು ೨ನೇ ಡಿಶಂಬರ ಸನ್ನ ೧೮೭೪ ಇಸವಿ.	ಧೋಂಡೋ ನರಸಿಂಹ ಸ್ಕೂಲಮಾಸ್ತರ.

ಮೆಹೆರಬಾನ ದಕ್ಷಿಣಭಾಗದ ಕಂನಡ ಶಾಲಾ ಪತ್ರಕದ ಎಡಿಟರ ಮಹಾರಾಯರಿಗೆ—

ವಿನಂತಿ ವಿಶೇಷ ನಾನು ಕೆಳಗೆ ಬರೆದಿರುವ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಶಾಲಾಪತ್ರಕದಲ್ಲಿ ಮುದ್ರಿಸಿ ಪ್ರಸಿದ್ಧಿ ಪಡಿಸುವಿರೆಂದು ಪೂರ್ಣ ಆಶೆಯುಳ್ಳವನಾಗಿದ್ದೇನೆ.

॥ಪದ॥ರಾಗಸಾರಂಗಿ॥ಎಂಥಾ ಸೋಜೀಗವಾಯಿತೆಲೆ ಕಾಂತೆ।
ಇದ।ರಂತಸ್ಥವನುಪೇಳೆ ಮತಿವಂತೆ ॥ಪಲ್ಲ॥
ಸೊಳ್ಳೆ ವಂದಾನೆಯ ತಿಂದೀತು।

ಕೋಳಿ|ಪಿಳ್ಳೆಯು ಗರುಡನ ಕೊಂದೀತು||
ಜೊಳ್ಳು ಬೀಜವು ಮೊಳತಿದ್ದೀತು|
ದೊಡ್ಡ|ಕೊಳ್ಳೀಯುರಿಯು ತಣ್ಣಗಿದ್ದೀತು||೧||
ಏಣನೊಂದುಡವನು ಹಡದೀತು|
ಅದು|ಕೋಣಗಳೆಂಟನು ಬಡದೀತು||
ಪ್ರಾಣವಿಲ್ಲದ ಶಿಸುಹುಟ್ಟೀತು|
ಹೆತ್ತ|ಬಾಣತಿಯನು ನುಂಗಿಬಿಟ್ಟೀತು||೨||
ಗೂಗೆಕಾಗೆಯ ತಿಂದು ತೇಗೀತು|
ಕಂಡು|ಭೋಗಿ ಹೆಡೆಯನೆತ್ತಿ ಕೂಗೀತು|
ಕೂಗಲು ಗಿಡಗನು ಸತ್ತೀತು|
ಸಾಯು|ಲಾಗಳೆ ಗಿಣಿಕಾಣುತತ್ತೀತು||೩||
ಕುರಿಯೊಂದು ನರಿಯನು ಪೆತ್ತೀತು|
ಅದು| ಗಿರಿಗಳೇಳನು ಒಂದೆ ಹೊತ್ತೀತು||
ಕರಡಿಯುಕಪ್ಪು ಮುರಿದಿಕ್ಕೀತು|
ಸಣ್ಣ| ಇರುವಿಯುಕೈಗದು ಶಿಕ್ಕೀತು||೪||
ಇಲಿಯೊಂದು ಬೆಕ್ಕನು ಹಿಡಿದೀತು|
ಚಿಕ್ಕ| ಮೊಲಸಾಕು ನಾಯ್ಗಳ ಕಡದೀತು||
ಹುಲಿಯು ಗೋವನ ಕಂಡು ನಡುಗೀತು|
ಅದು|ಸಲೆಗುರುಶಿದ್ಧನೋಳಡಗೀತು||೫||

ಹಿಂಪಕ್ಕೆ ಪ್ರಸಿದ್ಧ ಹೊಂದಿದ ಸರ್ಪಭೂಷಣ ಕವಿಯು ಎಂಬವರು ರಚಿಸಿರುವ ಪದಗಳಲ್ಲಿ ಇದು ಸ್ವಲ್ಪ ಆಶ್ಚರ್ಯವಾಗಿ ಕಂಡುಬಂತು. ಆದರೆ ಇದರ ಶಬ್ದಾರ್ಥ ಭಾವಾರ್ಥಗಳನ್ನು ನಂಮ ಬಾಂಧವರಾದ ಮಾಸ್ತರರೂ ಬೇರೆ ವಿದ್ವಜ್ಜನರೂ ಇದನ್ನು ಚೆನ್ನಾಗಿ ವಿಂಗಡಿಸಿ ಅರುಹಿಸು

ವರೆಂದು ಅಪೇಕ್ಷಿಸಿದ್ದೇನೆ—

ಮುಕ್ಕಾಮು ಕಡಕೋಡ ತಾಲೂಕ ವ ಜಿಲ್ಹಾ ಧಾರವಾಡ ತಾರೀಖು ೧।೨ ೧೮೭೪ ಇಸವಿ.	ಸಹಿ ನೀಲಕಂಠ ತಿಪ್ಪನಗೌಡಾ ಪಾಟೀಲ ೨ ನೇ ಶಿಕ್ಷಕ.

ವಾದಿರಾಜಕೃತ ದಶಾವತಾರಚರಿತ್ರ.

॥ಅಶ್ವಧಾಟಿ॥

ಪ್ರೋಷ್ಠೀಶವಿಗ್ರಹಸುನಿಷ್ಠೀವನೋದ್ಧತ ವಿಶಿಷ್ಟಾಂ
ಬುಚಾರು ಜಲಧೇ
ಕೋಷ್ಠಾಂತರಾಹಿತವಿಚೇಷ್ಟಾಗಮೌಘಪರಮೇಷ್ಠೀ
ಡಿತತ್ವಮವಮಾಂ।
ಪ್ರೇಷ್ಠಾರ್ಕಸೂನುಮನು ಚೇಷ್ಟಾರ್ಥಮಾತ್ಮವಿದತೀ
ಷ್ಟೋಯುಗಾಂತಸಮಯೇ।
ಸ್ಥೇಷ್ಠಾತ್ಮಶೃಂಗಧೃತಕಾಷ್ಠಾಂಬುವಾಹನವರಾಷ್ಟಾ
ಪದಪ್ರಭತನೋ॥೧॥

ಅರ್ಥ

ಬಹಳ ಶ್ವಾಸಬಿಡೋಣದರಿಂದ ಅಲ್ಲೋಲ ಕಲ್ಲೋಲವಾದ ಎಲ್ಲ ಜಲಜಂತುಗಳುಳ್ಳ ಸಮುದ್ರವೊಂದು ಪ್ರದೇಶದ ಮಧ್ಯದಲ್ಲಿ ಕ್ರೀಡಿಸುವಂಥವನೇ; ನಾಲ್ಕು ವೇದಗಳನ್ನು ಬಲ್ಲ ಬ್ರಹ್ಮದೇವರಿಂದ ಹೊಗಳಲ್ಪಡುವವನೇ; ಸೂರ್ಯನಿಗೆ ಪ್ರೀತಿಯುಳ್ಳ ಮಗನಾದ ಒಬ್ಬ ಮನುವಿಗೆ ಆತ್ಮಜ್ಞಾನವುಳ್ಳ ಅತಿ ಪ್ರಿಯನಾದ ನೀನು ಅಟವನ್ನು ತೋರಿಸುವವರ ಸಲುವಾಗಿ ಪ್ರಳಯಕಾಲದಲ್ಲಿ

ಸ್ವಂತ ತಲೆಯ ಮೇಲೆ ಇರುವದೊಂದು ದೃಢವಾದ ಕೋಡಿನಲ್ಲಿ ನಾವಂನು (ನೌಕೆಯಂನು) ಧರಿಸಿದವನೇ; ಉತ್ತಮವಾದ ಬಂಗಾರದ ಪ್ರಭೆಯಂತೆ ಹೊಳೆಯುವ ದೊಡ್ಡ ಮೀನದ ಆಕೃತಿಯನ್ನು ಧರಿಸಿದವನೇ (ಮತ್ಸ್ಯಾವತಾರಿಯಾದ ದೇವರೇ;) ನೀನು ನನ್ನನ್ನು ಸಂರಕ್ಷಿಸು||೧||

ಈ ಶ್ಲೋಕದಲ್ಲಿ ಶ್ವಂಕಶೃಂಗ ಹಚ್ಚಿಕೊಳ್ಳತಕ್ಕದ್ದು.

ಮಾಂ, ಕರ್ಮ ಅವ ಕ್ರಿಯಾಪದ ಸ. ಕ. ಪ್ರ.

ರಾ. ಸಾ. ಕನ್ನಡ ಕಾಲಪತ್ರಿಕ ಕರ್ತರಿಗೆ—

ವಿ. ವಿ. ನಾನು ಕೆಳಗೆ ಬರೆದಿರುವ ಎರಡು ಪದ್ಯಗಳನ್ನು ತಮ್ಮ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವಿರೆಂದೂ, ಯಾರಾದರೂ ಅವುಗಳೊಳಗಿನ ಮೊದಲನೇ ಪದ್ಯದ ಮೂರು ಅರ್ಥಗಳು (ಅನ್ವಯ ಸಹಿತವಾಗಿ) ಎರಡನೇ ಪದ್ಯದ 'ಉತ್ತರ' ಅರ್ಥಸಹಿತವಾಗಿ ಕೊಟ್ಟರೆ ಇದೇ ಪತ್ರಿಕೆಯಲ್ಲಿ ಮುದ್ರಿಸಿ ನನ್ನ ಅಭಿಲಾಷೆಯನ್ನು ಕೊನೆಗಾಣಿಸುವಿರೆಂದು ನೆರೆನಂಬಿ ಬಿಂನಹ ಮಾಡಿದ್ದೇನೆ.

ರಾಜಶೇಖರವಿಳಾಸ ಪಂಚಮಾಶ್ವಾಸಂ

೨೦ನೇ ಪದ್ಯ. ಮಂ ವಿಂ—

ಮರುದಾಕೀರ್ಣಲಸತ್ ಘನಪ್ರಸವತಾರಾರಾಜಿತಂಹಂಸಬಂ|
ಧುರಶಾಮಾಳಿರುಚಿಪ್ರಭಾನಕವಿ ರಾಜಾಲಂಕೃತಂದಿವ್ಯಸಿಂ||
ಧುರಸತ್ವಾವಹರಮ್ಯಮಾತ್ತ ಕಮಲಾಮಾಂಗಪ್ರಭಾಭಾಸುರಂ|

ಸರದಂತೆಂಬರದಂತೆರಂಜಿಸಿದುದಾರಾಜೇಂದ್ರನೊಡ್ಡೋ
ಲಗಂ॥೧॥

ರಾಜಶೇಖರವಿಳಾಸ ಏಕಾದಶಾಶ್ವಾಸಂ.

೧೨೩ ನೇ ಪದ್ಯ—ಸ್ರಗ್ಧರಾವೃತ್ತಂ.—

—ಬಹಿರ್ಲಾಪಿಕಾ—

ಬ್ರಹ್ಮಾಣೀಕಾಜನೇಷ್ಟಂ, ದಧತಿಝಟಿತಿಕೇ, ತಾಪ
ಸಾಂಗಂಚಕೇಸ್ಯು|
ಕ್ರೀತಾಕಾಕಾತ್ರವಿಶ್ವಂ, ನಿವಸತಿವಿಬುಧಾ, ಬೋಧ
ನಂಕಿಂನೃಪಾಲಃ॥
ಕಸ್ಯೈಸನ್ನದ್ಧಈಶಃ, ಪತಿರಿತಿವಿದಿತಃ, ಕಸ್ಯವಂದ್ಯೌ
ಚಕೌಕಿಂ|
ವಕ್ತೀಶಂಕಾಜಗತ್ಸಂ, ಹರಣಚರಣಕೌ, ಮಂಗಳೋ
ಕ್ತಿಃಕವೇಃಕಾ॥೨॥

ಮು. ಶಿಗ್ಲಿ. ತಾ. ಲಕ್ಷ್ಮೇಶ್ವ } ವಿಷ್ಣು ಪರಶುರಾಮ
ರ, ತಾ. ಜೂನ್ ೧೮೨೪ } ವೈದ್ಯ. ಸ್ಕೂ. ಮಾ. ಶಿ.

ಮಹಾರಾಜ ರಾಜಶ್ರೀ ದಕ್ಷಿಣ ಪ್ರಾಂತದೊಳಗಿನ ಶಾ
ಲಾಪತ್ರಿಕೆಯ ಎಡಿಟರರಿಗೆ—

ವಿನಂತಿ ವಿಶೇಷ—ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ತಮ್ಮ ಕರಪದ್ಮಗಳಲ್ಲುದ್ಭವಿಸುವ ಸುಂದರವಾದ ಮಾಸಪತ್ರಿಕೆಯಲ್ಲಿ ಸ್ಥಲದೊರೆಯುವದೆಂಬ ಮಹತ್ವಾಕಾಂಕ್ಷೆಯಿಂದ ಈ ಪತ್ರವನ್ನು ಬರೆದಿದ್ದೇನೆ ಬಡವನ ಅಪೇಕ್ಷೆಯನ್ನು ನೆರವೇರಿಸುವಲ್ಲಿ ಸಮರ್ಥರೇ ಇದ್ದೀರಿ.

ಶ್ರೀಮಂತ ರಾ. ರಾ. ಭಾಸ್ಕರಾವಜಿ ಅಪ್ಪಾ ಜಹಾಗೀ

ದಾರ ಹೆಬ್ಬಳ್ಳಿ ಇವರು ಸೆಕಂಡಕ್ಲಾಸ ಜಹಾಗೀರದಾರ ರ ಘರಾಣೆದೊಳಗಿನವರಿದ್ದು ಈ ವರ್ಷ ಮುಂಬೈ ಯುನಿವರ್ಸಿಟಿಯಲ್ಲಿ ಲಿಟ್ಲಗೋ ಪರೀಕ್ಷೆ ಕೊಟ್ಟು ಪಾಸಾಗಿರುತ್ತಾರೆ ಇದಲ್ಲದೆ ಮುಂದೆ ಬಿಯೆ ಪರೀಕ್ಷೆ ಕೊಡುವ ಉದ್ದೇಶದಿಂದ ಪುಣೇದ ಡೇಕನ್ ಕಾಲೇಜದೊಳಗೆ ಅಭ್ಯಾಸ ನಡಿಸಿದ್ದಾರೆ. ಇವರು ಕಳೆದ ಮೇ ತಿಂಗಳಿನ ಸೂಟಿಯೊಳಗೆ ಈ ಊರಿಗೆ ಬಂದಾಗ್ಯೆ ತಾ. ೨ ಜೂನ ೧೮೭೪ ಇ. ದಿವಸ ನಮ್ಮ ಸಾಲಿಗೆ ಬಂದು ೧ನೇ ೨ನೇ ವರ್ಗದ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಗೆದುಕೊಂಡು ಸದರೀ ವಿದ್ಯಾರ್ಥಿಗಳು ಹುಷಾರಿಯಿಂದ ಪರೀಕ್ಷೆ ಕೊಟ್ಟದರಿಂದ ಸಂತೋಷಪಟ್ಟು ಅವರಿಗೆ ಕೆಲವು ಪುಸ್ತಕಗಳನ್ನು ಇನಾಮು ಕೊಟ್ಟದ್ದಲ್ಲದೆ ಕೆಳಗಿನ ಕ್ಲಾಸದ ವಿದ್ಯಾರ್ಥಿಗಳಿಗೆ ೧ ರುಪಾಯಿದ ಮಿಠಾಯಿಯನ್ನು ಹಂಚಿದರು. ಇವರ ಮನಸ್ಸು ಯಾವಾಗಲೂ ಜನರ ವಿದ್ಯಾವೃದ್ಧಿಯಕಡೆಗೂ, ತಮ್ಮ ಅಭ್ಯಾಸದಕಡೆಗೂ ಅವಲಂಬಿಸಿರುತ್ತದೆ. ಇವರಂತೆ ಯಾವತ್ತು ಶ್ರೀಮಂತ ಜನರೂ, ದೊಡ್ಡ ದೊಡ್ಡ ಯೋಗ್ಯತೆಯ ಗೃಹಸ್ಥರೂ ವಿದ್ಯಾವೃದ್ಧಿಯ ಕಡೆಗೆ ಮನಸ್ಸು ಹಾಕಿದರೆ ನಮ್ಮ ಹಿಂದುಸ್ಥಾನದ ಜನರ ಕಲ್ಯಾಣವಾಗಿ ಇಂಗ್ಲಿಷ ಸರಕಾರದ ಉದ್ದೇಶವು ಸಫಲವಾದೀತು ಇತಿ ಬಿನ್ನಹ.

ಮು. ಹೆಬ್ಬಳ್ಳಿ	ವೆಂಕಾಜಿ ಭಗವಂತ ಸ್ಕೂಲ
ತಾ. ೧೪ ಜೂನ	ಮಾಸ್ತರ ಹೆಬ್ಬಳ್ಳಿ ತಾಲೂಕ
ಸನ್ ೧೮೭೪ ಇಸವಿ.	ಧಾರವಾಡ.

ರಾವಸಾಹೇಬ ಕನ್ನಡ ಮತಪತ್ರಕದ ಎಡಿಟರವರ ಚರಣಾರವಿಂದಕ್ಕೆ.

ತಾಲೂಕ ಡಂಬಳ ಕಸಬಾ ಲಕ್ಕುಂಡಿ ಸಾಲಿಯ ಮಾಸ್ತರನ ವಿನಯಪೂರ್ವಕ ಪ್ರಾರ್ಥನೆ ಏನಂದರೆ ಈ ಕೆಳಗ ಬರೆದಿರುವ ನಾಲ್ಕು ಪಂಕ್ತಿಗಳನ್ನು ತಮ್ಮ ಅಂದವಾದ ಪತ್ರಕದ್ವಾರದಿಂದ ಪ್ರಸಿದ್ಧ ಮಾಡಬೇಕೆಂಬ ಅಪೇಕ್ಷೆಯಿಂದ ಬರೆದಿದ್ದೇನೆ. ನನ್ನ ಇಚ್ಛೆಯನ್ನು ತುಚ್ಛ ಮಾಡದೆ, ಕೊನೆಗಾಣಿಸುವಲ್ಲಿ ಅಧ್ಯಕ್ಷರೇ ಇದ್ದೀರಿ. ಈ ದಿವಸ ಪ್ರಾತಃಕಾಲದಲ್ಲಿ ತಾಡಪತ್ರಿಕಾಸಿಮ್ ಸಾಹೇಬ ಸಾವಕಾರ, ಬಾಬಾಸಾಹೇಬ ಸಾವಕಾರ, ಮತ್ತು ಊರೊಳಗಿನ ವಿನಕೇಜನರು ಬಂದು ಎಲ್ಲಾ ವರ್ಗದ ಪರೀಕ್ಷೆಯನ್ನು ತೆಗದುಕೊಂಡರು. ಪರೀಕ್ಷೆಯು ಬಹಳ ಚನ್ನಾಗಿ ಆಯಿತೆಂದು ಬಹಳ ಖುಷಿಯಾಗಿ (೧) ರೂಪಾಯದ ಮಿಠಾಯಿಯನ್ನು ತರಿಸಿ ಎಲ್ಲ ಹುಡುಗರಿಗೆ ಹಂಚಿದರು. ಇವರು (೬ನೇ) ಸ್ಟ್ಯಾಂಡರ್ಡದಂತೆ ಕಲಿಯುವ ಹುಡುಗರಿಗೆ ಸಕಾಕೆಯನ್ನೂ ಮುಸಲ್ಮಾನ ಅರಸರ ಇತಿಹಾಸವನ್ನೂ ಬಹಳ ಚನ್ನಾಗಿ ಕೇಳಿದರು. ಹುಡುಗರು ಉತ್ತರ ಕೊಟ್ಟದ್ದು ನೋಡಿ ಮಾಸ್ತರನೂ ಮತ್ತು ಶಿಕ್ಷಕರೂ ಬಹಳ ಚನ್ನಾಗಿ ಮೇಹನತ ಮಾಡಿದ್ದಾರೆಂದು ಹಾಜರಿಯಲ್ಲಿ ಶರಾ ಬರೆದು ಸಹಿ ಮಾಡಿದ್ದಾರೆ. ಇದಲ್ಲದೆ ಒಳಗದೆ ಈ ಊರಿಗೆ ರಾವಸಾಹೇಬ ಭಿಷ್ಟೇ ಭೀಮಾಜಿ ಮಾಮಲೇದಾರ ಇವರು ಬಂದವೇಳೆದಲ್ಲಿ ರಾಮಚಂದ್ರ ಶಿವಾಜಿ ಕುಲಕರ್ಣಿ, ವ ಅಂದಾನಪ್ಪ ಶೆಟ್ಟಿ ಈ ಉಭಯತರನ್ನು ಕರಿಸಿ ಪರ್ಗತಮಾಡಿಸಿ ೨೦ ರೂ. ವಸೂಲು ಮಾಡಿ ಸದರ

ರುಪಾಯಿಗಳ ಕಿಮ್ಮತ್ತಿನಲ್ಲಿ ಒಂದು ಘಡಿಯಾರ ತರಿಸಿ ಸಾಲಿಯು ಉಪಯೋಗಕ್ಕೋಸ್ಕರ ಕೊಟ್ಟರು. ಸದರಹ್ರ ಜನರು ವಿದ್ಯಾವೃದ್ಧಿ ಯಾಗುವದಕ್ಕೋಸ್ಕರ ಬಹಳ ದಿವಸದಿಂದ ಸಾಲೀಕೆಲಸಗಳಿಗೆ ಬಹಳ ಮದ್ದತು ಮಾಡುತ್ತಾರೆ. ಇವರ ಉಪಕಾರವನ್ನು ವಿದ್ಯಾರ್ಥಿಗಳು ನಾನೂ ಬಹಳ ಸ್ಮರಿಸುತ್ತೇವೆ ಇವರ ಕಿರ್ತ್ತಿಯನ್ನು ಇಲ್ಲಿಯ ಪೋಲೀಸ, ಮುಲ್ಕೀ ಪಾಟೀಲರು, ಮತ್ತು ಬಸವಂತ ಶಿವಾಜಿ ಕುಲಕರ್ಣಿ ಇವರು ತ್ರಿಗದು ಕೊಂಡರೆ ಬಹಳ ಹಿತವಾಗುವದಲ್ಲದೆ ಸಾಲೀ ಕೆಲಸಕ್ಕೆ ಬಹಳ ಮದ್ದತು ಆಗುವದೆಂದು ಕೋರುತ್ತೇನೆ.

ಸು. ಲಕ್ಕುಂಡಿ ತಾ॥ ೩೧ ನೇ ಜುಲೈ ಸನ್ ೧೮೭೮ ಇಸವಿ.	ಶ್ರೀನಿವಾಸ ವೆಂಕಟೇಶ ಗಜೇಂದ್ರಗಡಕರ ಹೆಡ್ಡ ಮಾಸ್ತರ.

ಶ್ರೀಮಂತ ರಾಜಮಾನ್ಯರಾಜಶ್ರೀ ರಾವಸಾಹೇಬ ಕನ್ನಡ ಮಠಪತ್ರ ಕರ್ತರಾದ ಎಡಿಟರ ಮಹಾರಾಯರಿಗೆ—

ಕೆಳಗೆ ಬರೆದಿರುವ ನಾಲ್ಕು ಪಂಕ್ತಿಗಳನ್ನು ತಮ್ಮ ಕರಗಳಲ್ಲಿ ಉದ್ಭವಿಸುವ ಸುಂದರವಾದ ಶಾಲಾಪತ್ರಕದಲ್ಲಿ ತಾತ್ಸಾರ ಮಾಡದೆ ಮುದ್ರಿಸಬೇಕೆಂದು ಇಚ್ಛೈಸುತ್ತೇನೆ.

ಲೆಕ್ಕವು—ಒಂದು ಊರಿನಿಂದ ಅ ಬ ಇವರಿಬ್ಬರು ಪ್ರವಾಸಕ್ಕೆ ಹೊರಟರು. ಅ ಎಂಬವನು ಪರ ದಿನಸಕ್ಕೆ ೧೨ ಹರದಾರಿ ನಡಿಯುತ್ತಾನೆ ಬ ಎಂಬವನು ಮೊದಲನೇ ದಿವಸ ೬ ಹರದಾರಿ ಎರಡನೇ ದಿವಸ ೭ ಹರದಾರಿ ಈ ಪ್ರ

ಕಾರ ದಿವಸ ದಿವಸ ಒಂದೊಂದು ಹರದಾರಿ ಅಧಿಕ ನಡಿಯುತ್ತಾನೆ ಆದರೆ ಬ ಎಂಬುವನು ಅ ಎಂಬವನನ್ನು ಎಷ್ಟು ದಿವಸಕ್ಕೆ ಮುಟ್ಟ್ಯಾನು.

ಎಂಬದನ್ನು ಯಾರಾದರು ವಿದ್ವಜ್ಜನರು ರೀತಿಪೂರ ಬರೆದು ಸೇವಕನ ಸಂಶಯವನ್ನು ದೂರ ಮಾಡಬೇಕು, ಎಂದು ಬೇಡಿಕೊಳ್ಳುತ್ತೇನೆ. ಇಂತಿ ವಿಜ್ಞಾಪನಃ

ಸೇವಕ

ತಾ. ೨೪|೬|೧೮೨೪ ಮು.
ಧ. ತಾ. ಮು. ಜಿ. ಕ.

ಸಹಿ ಸಂಗಪ್ಪಾ ಪರಪ್ಪಾ
ವಿ. ಧವಳಗಿ

ಪ್ರಕಟನೆಯು.

ವೆರ್ಥ ಪ್ರೈಜ ಎಂಬ ಇನಾಮು.

(ಕನ್ನಡ ಭಾಷೆಯಲ್ಲಿ)

ಈ ವರ್ಷ,—೪೦ ರುಪಾಯಿದ್ದು, ೨೫ ರುಪಾಯಿದ್ದು, ೧೫ ರುಪಾಯಿದ್ದು, ಈ ಮೇರಿಗೆ ಮೂರು ಇನಾಮುಗಳನ್ನು ಇಟ್ಟಿದ್ದೇವೆ. ಅವು ಯೋಗ್ಯತಾನುಸಾರವಾಗಿ ೧ನೇ, ೨ನೇ, ೩ನೇ, ನಂಬರದ ಉಮೇದವಾರರಿಗೆ ಅನುಕ್ರಮದಿಂದ ಕೊಡಲಾದೀತು.

ಈ ಇನಾಮುಗಳನ್ನು ಕೊಡುವದಕ್ಕೋಸ್ಕರ ಪರೀಕ್ಷೆಯು ಎಲ್ಲಿ ಯಾಗುವದೂ, ಎಂದು ಆಗುವದೂ ಎಂಬುವದರ ವಿಷಯವಾಗಿ ಮುಂದೆ ಪ್ರಕಟಿಸುವೆವು. ಆದರೂ ಬಹುಶಃ ಅದು ಧಾರವಾಡದಲ್ಲಿ, ಬರುವ ಮೇ ತಿಂಗಳಲ್ಲಿ ಆದೀತು.

ಈ ಪರೀಕ್ಷೆಯ ನಿಯಮಗಳನ್ನು ತಿಳಕೊಳ್ಳಲಪೇಕ್ಷಿಸುವ ಉಮೇದವಾರರು ಹೋದ ವರ್ಷಗಳ ಕನ್ನಡ ಶಾಲಾ ಪತ್ರಕಗಳಲ್ಲಿಯ ಪ್ರಕಟನೆಗಳನ್ನು ನೋಡಬೇಕು.

ಬೆಳಗಾವಿ ತಾ. ೨೨ನೇ ಅಗಷ್ಟ ೧೮೭೪ ಇ.

W. A. Russell
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೯

ಬೆಳಗಾವಿ, ಮಾಹೆ ಸಪ್ಟಂಬರ ೧೮೭೪.

EDUCATIONAL NEWS.

ವಿದ್ಯಾಸಂಬಂಧವಾದ ವೃತ್ತಾಂತಗಳು.

ಮಿತಿ ಮೀರಿ ವಿದ್ಯಾಭ್ಯಾಸದಿಂದ ಮನುಷ್ಯನ ದೃಷ್ಟಿಯು ಮಂದವಾಗುತ್ತದೆಂದು ಬಹು ದೇಶಗಳ ಕೂಗಾಟ ಕೇಳಿ, ಈ ಸಂಗತಿಯನ್ನು ವಿಚಾರಿಸುವದಕ್ಕೋಸ್ಕರವಾಗಿ ಸ್ವಿತ್ಸರ್ಲಂಡದಲ್ಲಿ ವೊಂದು ಕಮೀಟಿಯು ನೇಮಿಸಲ್ಪಟ್ಟಿದೆ. ಈ ಕಮೀಟಿಯಲ್ಲಿ ಝೂರಿಕ್ ಪಟ್ಟಣದ ಯುನಿವ್ಹರ್ಸಿಟಿಯ ಗುರುಗಳೂ, ಎರಡನೇ ಪ್ರತಿಯ ಶಾಲೆಗಳ ಶಿಕ್ಷಕರೂ, ಕಡೆಯ ಪ್ರತಿಯ ಶಾಲೆಗಳ ಶಿಕ್ಷಕರೂ ಕೂಡಿರುತ್ತಾರೆ. ವಿದ್ಯಾಭ್ಯಾಸದಿಂದ ಕಣ್ಣಿಗೆ ಉಪದ್ರವವಾಗುವದು ನಿಜವೆಂದು ಕಂಡು ಬಂದರೆ, ಆ ಉಪದ್ರವ ಪರಿಹಾರವಾಗುವ ಹಾಗೆ, ಇಲ್ಲವೆ ಕಡಿಮೆಯಾಗುವ ಹಾಗೆ ಉಪಾಯಗಳನ್ನು ಯೋಜಿಸುವ ಆಲೋಚನೆಯುಂಟು.

ಅಮೇರಿಕದ ನ್ಯೂಯಾರ್ಕ ಪಟ್ಟಣದ ಸಂಸ್ಥಾನದವರು ಹುಡುಗರಿಗೆ ಬಲಾತ್ಕಾರದಿಂದ ವಿದ್ಯಾಭ್ಯಾಸ ಮಾಡಿಸು

ವ ಬಗ್ಗೆ ಹೊಸದಾಗಿ ಕಾಯದೆಯನ್ನು ಮಾಡಿರುತ್ತಾರೆ. ಈ ಸಂಸ್ಥಾನದವರು ವಿದ್ಯಾವೃದ್ಧಿಯ ಸಲುವಾಗಿ ವರ್ಷಕ್ಕೆ ೭೫೦೦೦೦೦ ರೂಪಾಯಿ ವೆಚ್ಚ ಮಾಡುತ್ತಾರೆ. ಆದರೆ ಹಿಂದುಸ್ಥಾನದ ಉತ್ಪನ್ನವು ೫೦ ಕೋಟಿಗಿಂತ ಹೆಚ್ಚಿದ್ದಾಗ್ಯೂ, ನಮ್ಮ ಸರಕಾರದವರು ವಿದ್ಯದ ಸಲುವಾಗಿ ವರ್ಷಕ್ಕೆ ೪೫೭೩೮೧೦ ರೂಪಾಯಿಗಿಂತ ಹೆಚ್ಚು ವೆಚ್ಚ ಮಾಡುವದಿಲ್ಲ. ನ್ಯೂಯಾರ್ಕ ಸಂಸ್ಥಾನದ ಪ್ರಜೆಗಳ ಸಂಖ್ಯವು ಹಿಂದುಸ್ಥಾನದ ಪ್ರಜಾ ಸಂಖ್ಯೆದ ಸುಮಾರು ನಾಲ್ಕನೇ ಪಾಲಿನಷ್ಟು ಪುಂಟು.

ಲಂಡನ್ ಯುನಿವ್ಹರ್ಸಿಟಿಯಲ್ಲಿ ಪದವಿಗಳನ್ನು ಹೊಂದಿದ ವಿದ್ವಾಂಸರು ಯುನಿವ್ಹರ್ಸಿಟಿಯ ಯಾವತ್ತು ಪರೀಕ್ಷೆಗಳಲ್ಲಿ ಹೆಂಗಸರನ್ನು ತಕ್ಕೊಳ್ಳುವ ಬಗ್ಗೆ ಶಿಫಾರಸು ಮಾಡ ತಕ್ಕದ್ದೆಂತ ಠರಾವು ಮಾಡಿದ್ದರು. ಈಗ ಯುನಿವ್ಹರ್ಸಿಟಿಯವರು ಹೆಂಗಸರ ಪರೀಕ್ಷೆಯನ್ನು ಸ್ವತಂತ್ರವಾಗಿ ತಕ್ಕೊಳ್ಳುತ್ತಿರುತ್ತಾರೆ. ಈ ಶಿಫಾರಸು ಮಾನ್ಯವಾಗಿದ್ದರೆ, ಗಂಡಸರಂತೆ ಹೆಂಗಸರು ಸಹ ಯುನಿವ್ಹರ್ಸಿಟಿಯ ಯಾವತ್ತು ಪದವಿಗಳಿಗೆ ಬಾಧ್ಯರಾಗುತ್ತಿದ್ದರು. ಆದರೆ ಆ ಯುನಿವ್ಹರ್ಸಿಟಿಯ ಸೀನೇಟ ಸಭೆಯವರು ಈ ಶಿಫಾರಸಿಗೆ ಸಂಮತಿ ಪಡಲಿಲ್ಲ. ಅವರು ನಿರ್ಣಯಿಸಿದ್ದೇನಂದರೆ— "ಈಗ ಹೆಂಗಸರಿಗೆ ಅನುಕೂಲಿಸಿ ಕೊಟ್ಟ ವಿದ್ಯಾಭ್ಯಾಸದ ಲಾಭವನ್ನು ಇನ್ನೂ ಹೆಚ್ಚಿಗೆ ಬೆಳಸುವ ಬಗ್ಗೆ ಈ ಸಭೆಯವರ ಅಭಿಲಾಷೆಯುಂಟು. ಆದರೆ ಹೆಂಗಸರಿಗೆ ವಿದ್ಯದ ಪದವಿಗಳನ್ನು ಕೊಡುವದಕ್ಕೋಸ್ಕರ,

ಹೊಸ ಸನದು ಬೇಡುವ ಬಗ್ಗೆ ನಾವು ಸಿದ್ಧರಾಗಿರುವದಿಲ್ಲ”.

ಪುಣೆಯ ದಕ್ಷಿಣಾ ಪ್ರೈಜ ಕಮೀಟಿಯವರು ಹಿಂದೆ ಕೆಲವು ವರ್ಷ ಮಹಾರಾಷ್ಟ್ರ, ಕನ್ನಡ, ಗುಜರಾಥೀ, ಈ ಮೂರು ಭಾಷೆಗಳಲ್ಲಿ ಹೇಳದ ವಿಷಯಗಳನ್ನು ಕುರಿತು ನಿಬಂಧಗಳನ್ನೂ ಹೊಸ ಪದ್ಯಗಳನ್ನೂ ರಚಿಸುವವರಿಗೆ ಇನಾಮುಗಳನ್ನು ಕೊಡುತ್ತಿದ್ದರು. ಕಳೆದ ಒಂದೆರಡು ವರ್ಷಗಳಲ್ಲಿ ಈ ಪದ್ಧತಿಯು ಮುಗ್ಗಿತ್ತೆಂತ ಕಾಣುತ್ತದೆ. ಆದರೆ ಹೋದ ತಿಂಗಳ ಎಜ್ಯುಕೇಶನಲ್ ರಿಕಾರ್ಡಿನಲ್ಲಿ (ಮುಂಬಯಿಯ ಇಂಗ್ಲಿಷ ಶಾಲಾಪತ್ರಿಕೆಯಲ್ಲಿ) ಸದರೀ ಕಮೀಟಿಯವರು ಕೊಟ್ಟ ಜಾಹೀರಾತಿನಲ್ಲಿ ಮಹಾರಾಷ್ಟ್ರಭಾಷೆಯಲ್ಲಿ ಮಾತ್ರ ಬಂಗಾಲದ ಬರವನ್ನು ಕುರಿತು ಹೊಸ ಪದ್ಯಗಳನ್ನು ರಚಿಸುವವರಿಗೂ, ಕಲಾ ಕೌಶಲ್ಯಗಳಿಗೆ ಉತ್ತೇಜನ ಕೊಡುವ ಬಗ್ಗೆ ನಿಬಂಧವನ್ನು ಬರೆಯುವವರಿಗೂ ನಾಲ್ನಾಲ್ಕು ನೂರು ರೂಪಾಯಿಗಳ ಇನಾಮುಗಳು ಪ್ರಕಟಿಸಲ್ಪಟ್ಟವೆ. ಈ ವರ್ಷ ಕನ್ನಡ ಭಾಷೆಯನ್ನು ದುರ್ಲಕ್ಷಿಸಿದ ಕಾರಣವು ತಿಳಿಯುವದಿಲ್ಲ. ಈ ಭಾಷೆಗೆ ಈ ಬಗೆಯ ಉತ್ತೇಜನಗಳನ್ನು ಕೊಡುವದು ಮಹಾರಾಷ್ಟ್ರಕ್ಕೆ ಕೊಡುವದಕ್ಕಿಂತ ಬಹಳ ಹೆಚ್ಚಿಗೆ ಅವಶ್ಯವಾಗಿರುತ್ತದೆ. ಈ ಬಗ್ಗೆ ಮೆ. ಡಾಯರೆಕ್ಟರ ಧೊರೆಗಳು ವಿಚಾರಿಸುವರೆಂದು ಕೋರುತ್ತೇವೆ.

ತನಗೆ ತಾನೇ ನೆರವಾಗುವದು.

ಆದರೆ ತಾಳ್ಮೆಯಿಂದ ಮಾರ್ಗ ಪ್ರತೀಕ್ಷೆಯು ಮಾಡುವದನ್ನು ನಾವು ಸಂತೋಷವೃತ್ತಿಯಿಂದ ಕಲಿಯಬೇಕು. ಸಂತೋಷವೃತ್ತಿಯೆಂಬದು ಅತ್ಯುತ್ತಮವಾದ ಕೃತ್ಯತ್ವಗುಣವುಂಟು. ಇದರಿಂದ ಮನುಷ್ಯನ ಸ್ವಭಾವದಲ್ಲಿ ಪ್ರಸಂಗ ಬಂದಂತೆ ನಡೆಯುವ ಶಕ್ತಿಯುಂಟಾಗುತ್ತದೆ. ತಾಳ್ಮೆಯು ಸ್ವಭಾವವೇ ಕ್ರಿಸ್ತೀ ಧರ್ಮದ ಹತ್ತು ಭಾಗಗಳಲ್ಲಿ ಒಂಭತ್ತು ಅಂಶಗಳಾಗಿರುತ್ತದೆಂದು ಒಬ್ಬ ಧರ್ಮಾಧ್ಯಕ್ಷನು ಹೇಳಿದ ಹಾಗೆ, ಸಂತೋಷವೃತ್ತಿಯೂ, ನಿಷ್ಠೆಯೂ, ವ್ಯವಹಾರ ಚಾತುರ್ಯದ ಹತ್ತು ಭಾಗಗಳಲ್ಲಿ ಒಂಬತ್ತುಗಳಿಗೆ ಸರಿಯಾಗಿರುತ್ತದೆ. ಇವು ಸೌಖ್ಯದ ಮರ್ಮಗಳಾಗಿದ್ದಂತೆ ಇಷ್ಟ ಸಾಧನೆಯ ಮರ್ಮಗಳೂ ಆಗಿರುತ್ತವೆ. ಚುರುಕುತನವೂ, ನಂಬಿಗೆಯೂ ಮೊದಲಾದ ಸದ್ಗುಣಗಳೆಲ್ಲ ಮುಖ್ಯವಾಗಿ ಕಪಟವಿಲ್ಲದೆ ಚಿತ್ತೈಕ್ಯದಿಂದ ಮನಮುಟ್ಟಿ ಕೆಲಸ ಮಾಡುವದಕ್ಕೆ ಸಂಬಂಧವಾಗಿರುವದರಿಂದ ಈ ವಿಧವಾಗಿ ಕೆಲಸ ಮಾಡುವವರಲ್ಲಿಯೇ ನಾವು ಈ ಜನ್ಮದಲ್ಲಿ ಪಡೆಯತಕ್ಕ ಬಹುಮೇಲಾದ ಆನಂದವುಂಟೆಂದು ಹೇಳಬಹುದು. ಸಿಡ್ನೀಸ್ಮಿತ್ಥನೆಂಬವನು ಯಾರ್ಕಶಾಯರದೊಳಗೆ ಫೋಸ್ಟನಲೀಕ್ಲೇ ಯೆಂಬಲ್ಲಿ ತಾಲೂಕದ ಉಪಾಧ್ಯಾಯನ ಕೆಲಸ ನಡಿಸುವಾಗ, ಅವನು ಆ ಕೆಲಸಕ್ಕೆ ಮೆಚ್ಚದಿದ್ದಾಗ್ಯೂ, ಸಂತೋಷವೃತ್ತಿಯುಳ್ಳವನಾಗಿ ತನ್ನ ಕೈಲಾದ ಮಟ್ಟಿಗೂ ಯತ್ನ ಮಾಡುವ ದೃಢನಿಶ್ಚಯದಿಂದ ಹೋದನು. ಅವನು

ಆಗ ನುಡಿದದ್ದೇನಂದರೆ, "ಈ ಕೆಲಸಕ್ಕಿಂತ ನನ್ನ ಯೋಗ್ಯ
ತೆಯು ಹೆಚ್ಚುಂಟೆಂಬ ಅಧ್ಯತೆಯಿಂದ, ನಾನು ಬಹಳ ದೂ
ರಿದೆನು, ನನ್ನವರು ಇಲ್ಲಿ, ಯಾರು ಇಲ್ಲ. ಯೆಂಬ ಮುಂ
ತಾದ ಕೀಳು ಕಿರಿ ಕಿರಿಗಳನ್ನು ಆಗಾಗ್ಗೆ ಬರೆದು ಟಪ್ಪಾಲಿ
ನಿಂದ ಕಳುಹಿಸುವದಕ್ಕೆ ಬದಲಾಗಿ ಇದೇ ಕೆಲಸದಲ್ಲಿ ನ
ನ್ನ ಮೆಚ್ಚಿಕೆಯುಂಟಾಗಿ ಮನಸು ತೊಡಗುವ ಹಾಗೆ ಮಾ
ಡುವ ನಿಶ್ಚಯವನ್ನು ಹಿಡಿದಿದ್ದೇನೆ." ಇದೇ ಮೇರೆಗೆ
ಡಾಕ್ಟರ ಹೂಕನು ಲೀಡ್ಸೆಂಬ ಊರಿನಿಂದ ಹೊಸ ಕೆಲಸ
ದ ಮೇಲೆ ಹೋಗುವಾಗ, ಅಂದದ್ದೇನಂದರೆ, "ನಾನು
ಎಲ್ಲಿದ್ದರೂ ದೇವರ ಕೃಪೆಯಿಂದ ನನ್ನ ಕೈಗೆ ಸಿಕ್ಕ ಕೆಲ
ಸವನ್ನು ನನ್ನಲ್ಲಿ ತ್ರಾಣವಿರುವ ಮಟ್ಟಿಗೂ ಮಾಡುವೆ
ನು; ನನಗೆ ಯೇನು ಕೆಲಸವಿಲ್ಲದಿದ್ದರೆ, ಹೊಸ ಕೆಲಸವ
ನ್ನು ಸೃಷ್ಟಿಸುವೆನು"

ವಿಶೇಷವಾಗಿ ಪ್ರಜೆಗಳ ಹಿತಕ್ಕೋಸ್ಕರವಾಗಿ ಶ್ರಮ
ಮಾಡುವವರು ಬಹು ಕಾಲದ ವರೆಗೆ ತಾಳ್ಮೆಯಿಂದ ಕೆಲಸ
ಮಾಡಬೇಕಾಗುತ್ತದೆ. ತಮ್ಮ ಕೆಲಸದ ಪರಿಣಾಮವು ಬೇ
ಗ ದೃಷ್ಟಿಗೋಚರವಾಗುವದು, ಅಥವಾ ಅದರಿಂದ ಬೇಗ
ಫಲ ಪ್ರಾಪ್ತಿಯಾಗುವದು, ಯೆಂಬ ಲಕ್ಷಣ ನೋಡಿ ಸಂ
ತೋಷಪಡುವ ಪ್ರಸಂಗಗಳು ಬಹು ಅಪರೂಪವಾಗಿ ಬ
ರುತ್ತವೆ. ಅವರು ಬಿತ್ತಿದ ಬೀಜಗಳು ಒಂದೊಂದು ವೇ
ಳೆ ಚಳಿಗಾಲದ ನೀರ ಗಡ್ಡೆಯ ಕೆಳಗೆ ಅಡಗಿ ಹೋಗುತ್ತ
ವೆ; ಮುಂದೆ ವಸಂತ ಸಮಯವು ಬಂದೊದಗುವದರೊಳ
ಗೇ ಅವುಗಳನ್ನು ಬಿತ್ತಿದವನು ತನ್ನ ವಿಶ್ರಾಂತಿಯ ಸ್ಥಾನ
ದಲ್ಲಿ ಮಲಗಿ ಹೋಗಿರಬಹುದು. ಜನರ ಹಿತಕ್ಕೋಸ್ಕರ

ವಾಗಿ ಉದ್ಯೋಗ ಮಾಡುವ ಯೆಲ್ಲ ಮನುಷ್ಯರಿಗೂ, ರೋಲಂಡ ಹಿಲ್ಲನಂತೆ, ಅವರು ಜೀವದಿಂದಿರುವದರೊಳಗೇ ಅವರ ಯತ್ನದ ಫಲವು ದೃಷ್ಟಿಗೋಚರವಾಗದು. ಆದಂ ಸ್ಮಿತ್ಥನು ಗ್ಲಾಸಗೋ ಪಟ್ಟಣದ ಮಲಿನವಾದ ಪ್ರಾಚೀನ ವಿದ್ಯಾಲಯದಲ್ಲಿ ಬಹು ದಿವಸದ ಶ್ರಮ ಮಾಡಿ ಪ್ರಜೆಗಳ ಸುಧಾರಣೆಯ ಬೀಜವನ್ನು ಬಿತ್ತಿ, "ರಾಷ್ಟ್ರಗಳ ಸಂಪತ್ತಿ" ಯೆಂಬ ಗ್ರಂಥವನ್ನು ರಚಿಸಿಟ್ಟನು; ಆದರೆ ಅದರಿಂದ ನಿಜವಾದ ಫಲಗಳುಂಟಾಗುವದಕ್ಕೆ ಯೆಂಬತ್ತು ವರ್ಷಗಳು ಹೋಗಬೇಕಾಯಿತು; ಈ ಕಾಲದ ವರೆಗೂ ಆ ಫಲಗಳೆಲ್ಲ ಪ್ರಾಪ್ತಿಯಾದವೆಂಬ ಹಾಗಿಲ್ಲ.

ಮನುಷ್ಯನು ತನ್ನ ಆಶೆಯೆಂಬ ಧನವನ್ನು ಕಳೆದುಕೊಂಡ ಮೇಲೆ ಅವನು ಯಾತರಿಂದಲೂ ಪುನಃ ಧನಿಕನಾಗನು. ಇದರಿಂದ ಮನುಷ್ಯನ ಸ್ವಭಾವವೇ ಬದಲಾಗುತ್ತದೆ. ಒಬ್ಬ ದೊಡ್ಡವನಾದಾಗ್ಯೂ ದುಃಖಿತನಾದ ತರ್ಕಜ್ಞಾನಿಯು "ನನ್ನ ಆಶೆ ಯೆಲ್ಲ ನಷ್ಟವಾದ ಮೇಲೆ ನಾನು ಹ್ಯಾಗೆ ಕೆಲಸ ಮಾಡಲಿ, ಹ್ಯಾಗೆ ಸುಖಿಯಾಗುವೆನು;" ಯೆಂದು ನುಡಿದಿದ್ಧಾನೆ. ಕೇರೀ ಯೆಂಬ ಧರ್ಮೋಪದೇಶಕನು ಅತಿ ಧೈರ್ಯಶಾಲಿಯೂ, ಅತಿ ಸಂತೋಷವೃತ್ತಿಯುಳ್ಳವನೂ ಇದ್ದನು; ಯಾಕಂದರೆ ಅವನು ತುಂಬಾ ಆಶೆಯು ಹಿಡಿದು ಕೆಲಸ ಮಾಡುತ್ತಿದ್ದನು. ಹಿಂದು ದೇಶದಲ್ಲಿರುವಾಗ ಇವನು ಒಂದು ದಿವಸದಲ್ಲಿ ಮೂರು ಮಂದಿ ಪಂಡಿತರನ್ನು ಸಹಜವಾಗಿ ದಣಿಸುತ್ತಿದ್ದನು. ಅವರು ಇವನಿಗಾಗಿ ಪುಸ್ತಕಗಳನ್ನು ಬರೆಯುತ್ತಿದ್ದರು; ಇವನು ಸ್ವತಃ ಒಂದು ಕೆಲಸದಲ್ಲಿ ಬೇಸರಿಕೆಯು ಪಟ್ಟರೆ, ಅದ

ನ್ನು ಬಿಟ್ಟು ಇನ್ನೊಂದನ್ನು ಕೈಯಲ್ಲಿ ತೆಗೆದುಕೊಳ್ಳುವ
ನು. ಕೇರಿಯು ಒಬ್ಬ ಸಮ್ಮಗಾರನ ಮಗನು; ಅವನಿ
ಗೆ ಸಹಾಯ ಮಾಡಿದ ವಾರ್ಡ, ಮಾರ್ಶಮನ್ನೆಂಬವರಲ್ಲಿ
ಮೊದಲಿನವನು ಬಡಿಗನ ಮಗನೂ, ಎರಡನೆಯವನು
ನೇಕಾರನ ಮಗನೂ ಇದ್ದನು. ಇವರ ಶ್ರಮದಿಂದ ಶ್ರೀ
ರಾಮಪುರವೆಂಬಲ್ಲಿ ಒಂದು ಭವ್ಯವಾದ ವಿದ್ಯಾಲಯವು
ಸ್ಥಾಪಿಸಲ್ಪಟ್ಟಿತು; ಹದಿನಾರು ಧರ್ಮೋಪದೇಶಕರಸ್ಥಾನ
ಗಳುಂಟಾದವು; ಹದಿನಾರು ಭಾಷೆಗಳಲ್ಲಿ ಬಾಯಬಲ್ಲೆಂಬ
ಧರ್ಮ ಪುಸ್ತಕದ ಭಾಷಾಂತರಗಳಾದವು; ಈ ಮೇರೆಗೆ
ಇಂಗ್ಲಿಷರ ವಶದಲ್ಲಿದ್ದ ಹಿಂದು ದೇಶದ ಭಾಗಗಳಲ್ಲಿ ಸು
ಖಕಾರಕವಾದ ಮನಸ್ಸುಧಾರಣೆಯ ಬೀಜಾರೋಪಣವಾ
ಯಿತು. ಕೇರಿಯು ತಾನು ಕಡಿಮೆ ಕುಲದಲ್ಲಿ ಹುಟ್ಟಿ
ದ್ದಕ್ಕೆ ಎಂದೂ ನಾಚುತ್ತಿದ್ದಿಲ್ಲ. ಒಂದು ಸಮಯದ
ಲ್ಲಿ ಸರ್ವಾಧಿಪತಿಯ ಸಂಗಡ ಬಂದ ಜನರು ಊಟಕ್ಕೆ ಕೂ
ತಿರಲಾಗಿ, ಕೇರಿಯ ಎದುರಿನಲ್ಲಿ ಕೂತ ಒಬ್ಬ ಮನು
ಷ್ಯನು ಅವನಿಗೆ ಕೇಳಿಸುವ ಹಾಗೆ, ಕೇರಿಯು ಹಿಂದಕ್ಕೆ
ಜೋಡುಗಳನ್ನು ಹೊಲಿಯುತ್ತಿದ್ದಿಲ್ಲವೋ? ಎಂದು ಮ
ತ್ತೊಬ್ಬನನ್ನು ಕೇಳಿದನು. ಅದನ್ನು ಕೇಳಿ ಕೇರಿಯು
ಆ ಕ್ಷಣವೇ ಕೂಗಿ ಹೇಳಿದ್ದೇನಂದರೆ, “ಇಲ್ಲ, ಒಡೆಯ
ರೇ, ಹಳೆ ಜೋಡುಗಳನ್ನು ಹೊಲಿದು ನೆಟ್ಟಗೆ ಮಾತ್ರ
ಮಾಡುತ್ತಿದ್ದೆನು. ಇವನ ಚಿಕ್ಕಂದಿನ ಕಥೆಯೊಂದು ಅ
ತಿ ಚಮತ್ಕಾರವಾದದ್ದುಂಟು. ಒಂದು ದಿವಸ ಇವನು
ಒಂದು ಮರವನ್ನು ಏರುತ್ತಿರಲಾಗಿ ಕಾಲು ಜಾರಿ, ಕೆ
ಳಗೆ ಬಿದ್ದು ಕಾಲ ಮುರಿದುಕೊಂಡನು. ಆದದರಿಂದ

ಕೆಲವು ದಿವಸ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದನು. ಆವರೆ ಕಾಲು ಸೆಟ್ಟಗಾಗಿ, ಆಶ್ರಯವಿಲ್ಲದೆ ನಡೆಯಲಿಕ್ಕೆ ಬರಹತ್ತಿದ ಕೂಡಲೆ ಇವನು ಮೊದಲು ಮಾಡಿದ ಕೆಲಸವೇನೆಂದರೆ, ಪುನಃ ಅದೇ ಮರಕ್ಕೆ ಹೋಗಿ ಅದರ ಮೇಲೆ ಏರಿ ಕೂತನು. ಇವನು ಕೈಕೊಂಡ ಧರ್ಮೋಪದೇಶದ ಕೆಲಸಕ್ಕೆ ಈ ವಿಧದ ಕುಂದದ ಧೈರ್ಯವು ಅವಶ್ಯಕವಾಗಿತ್ತು; ಆ ಕೆಲಸವನ್ನು ಇವನು ಗಾಂಭೀರ್ಯದಿಂದಲೂ ದೃಢನಿಶ್ಚಯದಿಂದಲೂ ನಡಿಸಿದನು.

ಡಾಕ್ತರ ಯಂಗನೆಂಬ ತತ್ವಜ್ಞಾನಿಯು, "ಒಬ್ಬ ಮನುಷ್ಯನಿಂದ ಆದ ಕೆಲಸವು ಇನ್ನೊಬ್ಬ ಬೇಕಾದವನ ಕೈಯಿಂದ ಆಗಬಹುದೆಂದು" ಯಾವಾಗಲೂ ಅನ್ನುತ್ತಿದ್ದನು. ಇದರಂತೆ ಇವನು ಕೈ ಹಾಕಿದ ಕೆಲಸದಲ್ಲಿ ಬೇಕಾದಷ್ಟು ಕಷ್ಟ ಒದಗಿದಾಗ್ಯೂ, ಇವನು ಎಂದೆಂದು ಹಿಂದಕ್ಕೆ ಸರಿಯುತ್ತಿದ್ದಿಲ್ಲೆಂಬುದಕ್ಕೆ ಸಂದೇಹವಿಲ್ಲ. ಇವನು ಮೊಟ್ಟ ಮೊದಲು ಕುದುರೆಯ ಮೇಲೆ ಕೂತ ಸಮಯದಲ್ಲಿ ಪ್ರಸಿದ್ಧ ಬೇಟೆಗಾರನಾದ ಯೂರೀಗ್ರಾಮದ ಬಾರ್ಕ್ಲೇಯೆಂಬುವನ ಮೊಮ್ಮಗನ ಸಂಗಡ ತಿರುಗಾಡಿದನೆಂದು ಹೇಳುತ್ತಾರೆ. ಆ ಕಾಲದಲ್ಲಿ ಇವರಿಬ್ಬರ ಮುಂಭಾಗದಲ್ಲಿ ಹೋಗುತ್ತಿದ್ದ ಒಬ್ಬ ರಾವುತನು ಒಂದು ಎತ್ತರವಾದ ಬೇಲಿಯ ಮೇಲಿಂದ ತನ್ನ ಕುದುರೆಯನ್ನು ಹಾರಿಸಲಾಗಿ, ಯಂಗನು ಅವನಂತೆ ಮಾಡಲೆತ್ನಿಸಿ, ಕುದುರೆಯ ಮೇಲಿಂದ ಕೆಳಗೆ ಬಿದ್ದನು. ಆದರೆ ಒಂದು ಅಕ್ಷರ ನುಡಿಯದೆ ಅವನು ಪುನಃ ತನ್ನ ಕುದುರೆಯನ್ನೇರಿ ಪುನಃ ಹಾರಿಸಲಾಗಿ, ಮುಂದಕ್ಕೆ ಸರಿದು ಹೋಗಿ ಅದರ ಕೊರಳನ

ಮೇಲೆ ಬಿದ್ದನು. ಆದರೂ ಅವನು ಧೈರ್ಯ ಗುಂದದೆ ಮೂರನೇ ಸಾರಿ ಯತ್ನ ಮಾಡಿ, ಬೇಲಿಯನ್ನು ಹಾರಿ ಪಾರಾಗಿ ಹೋದನು.

Champu Ramayan and Champu Bharata with Commentaries in Canarese by Mr. Shantaviraya.

॥ಚಂಪೂರಾಮಾಯಣೆಸವ್ಯಾಖ್ಯಾನೆಬಾಲಕಾಂಡಃ॥

॥ವಸಂತತಿಲಕಾವೃತ್ತಂ॥

ಅಸ್ತಿಪ್ರಶಸ್ತವಿಭವೈರ್ವಿಬುಧೈರಲಂಘ್ಯಾ।
ಲಂಕೇತಿನಾಮರಜನೀಚರರಾಜಧಾನೀ।
ಮಾಣಿಕ್ಯಮಂದಿರಭುವಾಂಮಹಸಾಂಪ್ರರೋಹೈ।
ಸ್ತೇಜಸ್ತ್ರಯಾಯದಿನದೀಪದಶಾಂದಿಶಂತೀ॥೨೦॥

ಅನ್ವಯ

ಪ್ರಶಸ್ತವಿಭವೈಃ=ಪ್ರಖ್ಯಾತವಾದ ವಸ್ತುಗಳ ಸಂಪದವುಳ್ಳ, ವಿಬುಧೈಃ=ವಿಬುಧೈಃ=ದೇವತೆಗಳಿಂದ ಅಲಂಘ್ಯಾ=ಲಂಘಿಸಲ್ಕ ಶಕ್ಯವಾದಂಥ।ಮಾಣಿಕ್ಯಮಂದಿರಭುವಾಂ।ಮಾಣಿಕ್ಯ=ರತ್ನಮಯವಾದ, ಮಂದಿರ=ಮನೆಯಿಂದ, ಭುವಾಂ=ಹುಟ್ಟಿದ, ಮಹಸಾಂ=ತೇಜಗಳ, ಪ್ರರೋಹೈಃ=ಅಂಕುರಗಳಿಂದ, ತೇಜಸ್ತ್ರಯಾಯ, ತೇಜಸ್=ಸೂರ್ಯ ಚಂದ್ರಾಗ್ನಿ ಪ್ರಕಾಶಗಳ, ತ್ರಯಾಯ=ಮೂರಕ್ಕೂ, ದಿನದೀಪದಶಾಂ=ಹಗಲಿನ ದೀಪಗಳವಸ್ಥೆಯನ್ನು, ದಿಶಂತಿ=ಕೊಡುವಂಥ।ಲಂಕೇತಿನಾಮರಜನೀಚರರಾಜಧಾನೀ, ಲಂಕಾ ಇತಿ=ಲಂಕೆ ಯೆಂಬ, ನಾಮ=ಹೆಸರಿನ, ರಜನೀಚರ=ರಾಕ್ಷಸರ, ರಾಜಧಾನೀ=ಮುಖ್ಯವಾದ ಪಟ್ಟಣವು। ಅಸ್ತಿ=ಇರುತ್ತದೆ.

ಶಾಸ್ತ್ರವಿಷಯ

ರಾಜಧಾನೀ(ಕ) ಅಸ್ತಿ (ಕ್ರಿ) ಅಕರ್ಮಕ।—ಅಸ್ತಿ=(ಅಸ್+ತಿ) ಅಸ್ ಎಂಬುದು ಎರಡನೇ ಗಣದಧಾತು, ತಿ ಎಂಬುದು ಲಟ್, ವರ್ತಮಾನ, ಪ್ರ. ಏ.

ಭಾವಾರ್ಥ

ಪ್ರಖ್ಯಾತವಾದ ವೈಭವವುಳ್ಳ ದೇವತೆಗಳಿಂದ ಪೋರಲ್ಕೆ ಅಸಾಧ್ಯವಾದಂಥ ಮನೆಗ ತೆತ್ತಿಸಿದ ರತ್ನಗಳ ಕಾಂತಿಯಿಂದ ಸೂರ್ಯ ಚಂದ್ರಾಗ್ನಿಗಳ ಕಾಂತಿಯನ್ನು ಹಗಲಿನ ದೀಪದ ಹಾಗೆ ನಿಸ್ತೇಜ ಮಾಡುವಂಥ, ರಾಕ್ಷಸರಿಗೆ ಆಶ್ರಯವಾದಂಥ ರಾವಣನ ರಾಜಧಾನಿಯಾದ ಲಂಕಾಪಟ್ಟಣವು ಮನೋಹರವಾಗಿರುವದು.

॥ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮ ಸ್ತಬಕಃ॥

॥ಗದ್ಯ॥

ತತ್ರ ಸತ್ರಾವದಾತಿಕ್ಷುಲ್ಲಕವನಮಲ್ಲೀಮತಲ್ಲಿಕೋದ್ವೇಲ್ಲಿತಧಮ್ಮಿಲ್ಲಃ ಅವಲಗ್ನದೃಢಲಗ್ನಕಕ್ಷ್ಯಪುಟವಿಚ್ಛುರಿತಚ್ಛುರಿಕಃ ನಿಷಂಗಾನುಷಂಗಮಾಂಸಲಿತಕ್ರಮಾಂಸಲಲಿತಃ ಪತನಿರಾಸನಪರಂ ಶರಾಸನವರಂ ಕರೇಕುರ್ವಾಣಃ ಗೀರ್ವಾಣಚಕ್ರವರ್ತಿಸಮವಿಕ್ರಮಃ ಕ್ರಮೇಣ ವಿವಿಧಮೃಗವಧಂ ವಿಧಾತುಮುಪಚಕ್ರಮೇ॥

॥ಅನ್ವಯ॥

ತತ್ರ=ಆಹಿಮಶೈಲಾರಣ್ಯದಲ್ಲಿ, ತಾವತ್=ಆಗ, ಅತಿಕ್ಷುಲ್ಲಕ=ಸ್ವಲ್ಪವಾದ, ವನಮಲ್ಲೀಮತಲ್ಲಿಕಾ= ಪ್ರಶಸ್ತವಾದ ವನಮಲ್ಲಿಗೆಯ ಬಳ್ಳಿಯಿಂದ, ಉದ್ವೇಲ್ಲಿತ= ಉತ್ಕರ್ಷವಾಗಿ ಬಂಧಿಸಿದ, ಧಮ್ಮಿಲ್ಲಃ=ಕಚಭಾರವುಳ್ಳಂಥ। ಅ

ವಿಲಗ್ನ=ನಡುವಿನಲ್ಲಿ, ದೃಢ=ಗಟ್ಟ್ಯಾಗಿ, ಲಗ್ನ= ಬದ್ಧವಾದ, ಕಚ್ಛಪುಟ=ವೀರಗಚ್ಚೆಯಲ್ಲಿ, ವಿಚ್ಛುರಿತ=ಸೇರಿಸಿದ, ಛುರಿಕಃ=ಆಯುಧವುಳ್ಳಂಥ (ಸುರಾಯು) ನಿಷಂಗ=ಬತ್ತಳಿಕೆಯು, ಅನುಷಂಗ=ಧಾರಣದಿಂದ, ಮಾಂಸಲಿತತಮ=ವಿಶಾಂತಪೂರಿತವಾದ, ಅಂಸ=ಭುಜಗಗಳಿಂದ, ಲಲಿತಃ=ರಮಣೀಯವಾದಂಥ। ಗೀರ್ವಾಣ=ದೇವತೆಗಳ್ಗೆ, ಚಕ್ರವರ್ತಿ=ಮಹಾರಾಜನಾದ ಇಂದ್ರಂಗೆ, ಸಮ= ಸದೃಶವಾದ, ವಿಕ್ರಮಃ=ಪರಾಕ್ರಮವುಳ್ಳಂಥ; ಸಃ=ಆ ಪಾಂಡುರಾಜನು। ಪರನಿರಾಸನಪರಂ = ಶತ್ರುಗಳ ನಾಶಾಸಕ್ತನಾದಂಥ; ಶರಾಸನವರಂ=ಘನವಾದ ಧನುವನ್ನು। ಕರೇ=ಹಸ್ತದಲ್ಲಿ। ಕ್ರಾವಾರ್ಣಃ=ಮಾಡಿದಂಥಾತನಾಗಿ। ಕ್ರಮೇಣ= ಕ್ರಮದಿಂದ। ವಿವಿಧ=ಹಲವು ತೆರದ,ಮೃಗ=ಮೃಗಗಳ, ವಧಂ=ಹಿಂಸೆಯನ್ನು। ವಿಧಾತುಂ=ಮಾಡುವಗೋಸ್ಕರ। ಉಪಕ್ರಮೇ= ಆರಂಭಿಸಿದನು.

॥ಭಾವಾರ್ಥ॥

ಆ ಹಿಮಶೈಲದ ವನದಲ್ಲಿ ಆಗ ಮೃದುವಾದ ಮಲ್ಲಿಗೆ ಬಳ್ಳಿಯಿಂದ ಮೇಲವೇಗಮಾಡಿ ಕಟ್ಟಿದ ಮುಡಿಯುಳ್ಳಂಥ, ನಡುವಿಗೆ ಗಟ್ಟ್ಯಾಗಿ ಕಟ್ಟಿದ ವೀರಗಚ್ಚೆಯಲ್ಲಿ ಚೂರಿಯನ್ನು ಸೇರಿಸಿದಂಥ, ಬತ್ತಳಿಕೆಯನ್ನು ಧರಿಸಿಕೊಂಡ ಭುಜದಿಂದ ರಮ್ಯನಾದಂಥ, ಇಂದ್ರಂಗೆ ಸಮವಾದ ಪರಾಕ್ರಮವುಳ್ಳಂಥ, ಆ ಪಾಂಡುರಾಜನು ವೈರಿಗಳ ಬಾಗಿಸಿದ ಬಿಲ್ಲನ್ನು ಹಿಡಿದು ಮೃಗಗಳನ್ನು ಕೊಲ್ಲುವದಕ್ಕೆ ತೊಡಗಿದನು.

NOTICES

ನೋಟೀಸುಗಳು.

ದಕ್ಷಿಣ ಭಾಗದೊಳಗಿನ ತಾಲೂಕ ಶಾಲೆಗಳ ಮಾಸ್ತರರು ಕೆಳಗೆ ಬರೆದ ನಿಯಮಗಳಂತೆ ನಡೆಯಬೇಕೆಂದು ಇದರಿಂದ ಅಪ್ಪಣೆ ಮಾಡಲ್ಪಟ್ಟಿರುತ್ತದೆ.

ತ್ರಿಜೋರಿಯಲ್ಲಿ ಶಾಲೆಗಳ ಫೀ ಭರಣಾ ಮಾಡುವಾಗ್ಗೆ ಕೆಳಗೆ ಬರೆದ ವಿವರಗಳನ್ನು ಚಲನಿನಲ್ಲಿ ಬರೆಯತಕ್ಕದ್ದು.

(ಅ) ಶಾಲೆಗಳ ಹೆಸರುಗಳು.

(ಬ) ಪ್ರತಿಯೊಂದು ಶಾಲೆಯ ಫೀ ಒಟ್ಟು ಜಮಾ ಆದದ್ದು.

(ಕ) ಯಾವ ತಿಂಗಳ ಬಗ್ಗೆ ಫೀ ಜಮಾ ಆಗಿರುತ್ತದೆಂಬುವದು.

೨ ತಿಜೋರಿಯಲ್ಲಿ, ಶಾಲೆಯ ಫೀ ಹೊರ್ತಾಗಿ ಬೇರೆ ಹಣವು ಭರಣಾ ಆಗಿದ್ದರೆ ಅವನ್ನು ಚಲನಿನಲ್ಲಿ ಬೇರೆ ಬರೆದು ಕಾಣಿಸತಕ್ಕದ್ದು.

ಬೆಳಗಾಂವಿ
ತಾ. ೨೪ ಅಗಷ್ಟ
ಸನ್ನ ೧೮೭೪ ಇ.

W. A. Russell
ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ.

ಮೊಹಬ್ಬತನ ಡಿರೆಕ್ಟರ ಸಾಹೇಬರವರು ಸನ್ನ ೧೮೬೯।೭೦ ನೇ ಇಸವಿಯಲ್ಲಿ ಮಾಸ್ತರ ಜನರ ಬಗ್ಗೆ ಮಾಡಿದ ನಿಯಮಗಳಲ್ಲಿ (ಅ) ನಿಯಮವು ಎಲ್ಲ ಜನರಿಗೆ ತಿಳಿಯುವ ಸಲುವಾಗಿ ಪುನಃ ಪ್ರಸಿದ್ಧ ಮಾಡಲ್ಪಟ್ಟಿದೆ.

"(ಅ) ಸನ್ನ ೧೮೬೫ ನೇ ಇಸವಿಯ ಜ್ಯಾನೇವಾರಿ ತಿಂಗಳ ೧ ನೇ ತಾರೀಖಿನ ದಿವಸ ಅಥವಾ ತದನಂತರ ನೇಮಿಸಲ್ಪಟ್ಟ ಅಂಟ್ರೇಂಡ ಮಾಸ್ತರರು ಟ್ರೇನಿಂಗಕಾಲೇಜದ ಸರಟಿಫಿಕೇಟಿನ ಬಗ್ಗೆ ಆಗುವ ಒಂದಾದರು ಪರೀಕ್ಷೆಯಲ್ಲಿ ಪಾಸಾಗುವ ಮಟ್ಟಿಗೂ ಬಢತಿಗೆ ಯೋಗ್ಯರಾಗಲಿಕ್ಕಿಲ್ಲ. ಈ ಹುಕುಮು ಮುಟ್ಟಿದಂದಿನಿಂದ ೨ ವರುಷಕ್ಕಿಂತ ಹೆಚ್ಚು ದಿವಸ ಅವರು ಪಾಸಾಗದೆ ಉಳಿದರೆ, ಅವಶ್ಯ ಕಂಡಬಂದಲ್ಲಿ ಮುಂಚಿತವಾಗಿ ಆರು ತಿಂಗಳ ನೋಟೀಸ ಕೊಟ್ಟು ಕೆಲಸದಿಂದ ತೆಗೆದು ಹಾಕಲ್ಪಡುವದಕ್ಕೆ ಅವರು ಪಾತ್ರರಾಗುವರು. ಕಾಲೇಜದಲ್ಲಿ ಬಂದು ಅಭ್ಯಾಸ ಮಾಡದಿದ್ದರೂ ಅವರನ್ನು ಪರೀಕ್ಷೆಗೆ ತೆಗೆದುಕೊಳ್ಳಬೇಕು. ಆದರೆ ಕಾಲೇಜಕ್ಕೆ ಹೋಗಲಪೇಕ್ಷಿಸುವ ಹಾಗು ಒಳ್ಳೇ ಶಿಕ್ಷಕರಾಗುವಂತೆ ಕಾಣಬರುವವರನ್ನು ಕಾಲೇಜದಲ್ಲಿ ಅಭ್ಯಾಸ ಮಾಡುವದಕ್ಕೆ ಪಗಾರ ಕೊಟ್ಟು ಕಳುಹಿಸುವ ತಜವೀಜು ಇನಸ್ಪೇಕ್ಟರರು ಮಾಡಬೇಕು."

೨ ಈ ನೇಮಕ್ಕೊಳಗಾದ ಎಲ್ಲ ಮಾಸ್ತರರು ಸನ್ನ ೧೮೭೪ ನೇ ಇಸವಿಯ ಅಕಟೋಬರ ೧೨ ನೇ ತಾರೀಖಿಗೆ ಆಗುವ ಟ್ರೇನಿಂಗಕಾಲೇಜದ ಸರಟಿಫಿಕೇಟ ಪರೀಕ್ಷೆಗೆ ಅಥವಾ ವಿಶೇಷ ಅಪ್ಪಣೆಪೂರದ ಪಕ್ಷ ಸನ್ನ ೧೮೭೫ ನೇ ಇಸವಿಯಲ್ಲಾಗುವ ಪರೀಕ್ಷೆಗೆ ಬರಬೇಕು.

ತಾರೀಖು ೧ ನೇ ಸಪಟಂಬರ ಸನ್ನ ೧೮೭೪ ಇಸವಿ. } *W. A. Russell.* ಎ. ಇ. ಪಶ್ಚಿಂಭಾಗ.

ಧಾರವಾಡ ಜಿಲ್ಹೇದೊಳಗೆ

ಸನ್ನ ೧೮೭೪ ಇ. ಜುಲೈ ತಿಂಗಳಲ್ಲಿ

ಆದ.

ನೇಮಣೂಕುಗಳು.

೧ ನವಲಗುಂದ ಬ್ರೆಂಚ— ಈ ಹೊಸ ಸಾಲಿಯು ಹೆಡ್ಡ ಮಾಸ್ತರ ಕೆಲಸಕ್ಕೆ ಧಾರವಾಡ ೨ನೇ ನಂಬರದ ಸಾಲಿಯು ಅ. ಮಾಸ್ತರರಾದ ಮರೆಯ್ಯಾ ರಾಚಯ್ಯಾ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮.

೨ ನವಲಗುಂದ ಗೆರ್ಲ— (ಹೊಸ ಸಾಲಿ) ಇಲ್ಲಿಯು ಹೆಡ್ಡ ಮಾಸ್ತರ ಕೆಲಕ್ಕೆ ಅಂಣಿಗೇರಿ ಸಾಲಿಯು ಅ. ನಾದ ಸಾತಯ್ಯಾ ಶಂಕರಯ್ಯಾ ಇವರನ್ನು ನೇಮಿಸಿರುತ್ತದೆ. ಸಂ ಸಂಬಳ ರೂಪಾಯಿ ೧೨.

೩ ನರಗುಂದಗೆರ್ಲ — (ಹೊಸ ಸಾಲಿ) ಈ ಜಾಗಾದ ಮೇಲೆ ನರಗುಂದ ಕನ್ನಡ ಸಾಲಿಯು ೨ನೇ ಅ. ನಾದ ನೀಲಕಂಠಯ್ಯಾ ಶಂಕರಯ್ಯಾ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨

೪ ಗುಡೀಸಾಗರ— (ಹೊಸ ಸಾಲಿ) ಇಲ್ಲಿಯು ಹೆಡ್ಡ ಮಾಸ್ತರ ಜಾಗಾದ ಮೇಲೆ ನವಲಗುಂದ ಸಾಲಿಯು ೧ನೇ ಅ. ನಾದ ಬಸಪ್ಪಾ ಶಿವಲಿಂಗಪ್ಪಾ ಹೊಂನೀದಿಬ್ಬ ಇವನನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೨.

೫ ಚಿಕ್ಕನರಗುಂದ— (ಹೊಸ ಸಾಲಿ) ಇಲ್ಲಿಯು ಹೆಡ್ಡ ಮಾಸ್ತರ ಜಾಗಾದ ಮೇಲೆ ಗದಗಬೆಟಗೇರೀ ೧ ನೇ ಅ. ನಾದ ನೀರಪ್ಪಾ ಬಸೆಟ್ಟೆಪ್ಪಾ ಮಾಲೀ ಇವನನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨.

೬ ತುಪ್ಪದ ಕುರಹಟ್ಟಿ-(ಹೊಸ ಸಾಲಿ) ಈ ಸಾಲಿಯು ಹೆಡ್ಡ ಮಾಸ್ತರ ಕೆಲಸಕ್ಕೆ ಧಾರವಾಡ ೨ನೇ ನಂಬರದ ಕನ್ನಡ ಸಾಲಿಯ ಅ. ಮಾಸ್ತರರಾದ ಗವುಸಖಾನ ವಲ್ಲದ ಸರದಾರಖಾನ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨.

೭ ರೋಣ ಬ್ರೆಂಚ- (ಹೊಸ ಸಾಲಿ) ಇಲ್ಲಿಯ ಹೆಡ್ಡ ಮಾಸ್ತರ ಜಾಗಾದ ಮೇಲೆ ನೇಪುಪ್ಪ ಪಾರೆಪ್ಪ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮.

೮ ಹುಲಲ್ಲೂರ- (ಹೊಸ ಸಾಲಿ) ಇಲ್ಲಿಯ ಹೆಡ್ಡ ಮಾಸ್ತರ ಜಾಗಾದ ಮೇಲೆ ಬಾಳಕೃಷ್ಣ ಬಾಪ್ರಾಜಿ ಟ್ರೇನಿಂಗ ಕಾಲೇಜದ ವಿದ್ಯಾರ್ಥಿ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೨.

೯ ಹೊಳಿಆಲೂರ- (ಹೊಸ ಸಾಲಿ) ಇಲ್ಲಿಯ ಹೆಡ್ಡ ಮಾಸ್ತರ ಜಾಗಾದ ಮೇಲೆ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಯಾದ ಸ್ವಾಮಿ ಶ್ರೀಪತ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೨.

೧೦ ಧುಂಮುವಾಡ- (ಹೊಸ ಸಾಲಿ) ಇಲ್ಲಿಯ ಹೆಡ್ಡ ಮಾಸ್ತರ ಕೆಲಸಕ್ಕೆ ಕಲಘಟಗೀ ತಾಲೂಕ ಹಿರೇಹೊಂನೀಹಳ್ಳಿ ಸಾಲಿಯ ಮಾಜೀ ಮಾಸ್ತರನಾದ ಹಣಮಂತ ದೇವಜೀ ಸವಣೂರಕರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮.

೧೧ ದೇವೀಕೊಪ್ಪ-(ಹೊಸ ಸಾಲಿಯ) ಹೆಡ್ಡಮಾಸ್ತರ ಜಾಗಾದ ಮೇಲೆ ಹಾವೇರೀ ಸಾಲಿಯ ಅ. ಮಾಸ್ತರರಾದ ವೀರಭದ್ರಯ್ಯಾ ವಿರಬಸಯ್ಯಾ ಇವರನ್ನು ನೇಮಿ

ಸಿರುತ್ತದೆ. ಸಂಬಳ ರೂಪಾಯಿ ೮.

೧೨ ಹುರಳೀಕೊಪ್ಪ— (ಹೊಸ ಸಾಲಿ) ಇಲ್ಲಿಯ ಮಾಸ್ತರ ಜಾಗಕ್ಕೆ ಅಮರಗೋಳ ಸಾಲಿಯ ಶಿಕ್ಷಕನಾದ ಶಾಮಾಚೀ ಕೃಷ್ಣ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೮.

೧೩ ಕಳಸ— (ಹೊಸ ಸಾಲಿ) ಇಲ್ಲಿಯ ಹೆಡ್ಡ ಮಾಸ್ತರ ಜಾಗಾದ ಮೇಲೆ ಟ್ರೇನಿಂಗಕಾಲೇಜದ ವಿದ್ಯಾರ್ಥಿಯಾದ ಶೇಷಗಿರಿ ಶ್ರೀನಿವಾಸ ಹ್ರಡೇದ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೨.

Chanbussappa B. Dharwar.

ಡಿಪ್ಯುಟಿ ಇ. ಇ. ಜಿಲ್ಹಾ ಧಾರವಾಡ.

Correspondence.

ಪತ್ರವ್ಯವಹಾರವು.

ಶ್ರೀಮಂತ ರಾ. ರಾ. ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಕರ್ತೃಗಳ ಚರಣ ಸನ್ನಿಧಾನಕ್ಕೆ

ಕೆಳಗೆ ಸಹಿಮಾಡುವವನ ಅತಿ ವಿನಯಪೂರ್ವಕ ವಿಜ್ಞಾಪನಃ ಏನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಕರಯುಗ್ಮಂಗಳೊಳಗೆ ಹುಟ್ಟುವ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವದಕ್ಕೆ ಸ್ಥಳ ದೊರದೀತೆಂದು ಪರಮಾಪೇಕ್ಷೆಯಿಂ ತಾಳ್ದು ಇರುತ್ತೇನೆ.

ಈ ಸಾಲಿಗೆ ತಾರೀಖು ೧೫ ನೇ ಮಾಹೆ ಜೂನ ಸನ್ನ ೧೮೭೪ರ ಇಸವಿ ದಿವಸಾ ಶ್ರೀಮತ್ ಚನ್ನ್ಮಲಾದ್ರಿ ಬ್ರಹ

ಸ್ಥಿತದ ಖಾಸ ಚರಮೂರ್ತಿಗಳಾದ ಶಿದ್ಧರಾಮ ದೇಶಿಕೇಂದ್ರ ಸಂಸ್ಥಾನ ಚಿತ್ರಕಲ್ಲದುರ್ಗ ಇವರು ಈ ಸಾಲಿಯ ಕಮೋಟಿದಾರರೊಡಗೂಡಿ ಬಂದು ೧|೨ ನೇ ವರ್ಗದ ವಿದ್ಯಾರ್ಥಿಯರ ಪರೀಕ್ಷೆ. ತೆಗೆದುಕೊಂಡು ಆನಂದ ಭರಿತರಾಗಿ ಒಂದು ರೂಪಾಯಿದ ಮಿಠಾಯಿ ಹಂಚಿದರು. ತಾರೀಖು ೧೪ನೇ ದಿವಸ ಶ್ರೀಮಂತ ರಾ. ರಾ. ನರಸೊ ಕೃಷ್ಣ ಡೇಥಕಾನಿಷ್ಟೆ ಬಲ್ಲ ತಾಲೂಕ ಪರಸಗಡ ಇವರು ಪರೀಕ್ಷೆ ತೆಗೆದುಕೊಂಡು ಬಹಳ ಆನಂದ ಪಟ್ಟರು. ಮತ್ತು ವಿದ್ಯಾರ್ಥಿಯರ ಅಭ್ಯಾಸ ನೆಟ್ಟಗೆ ನಡಿಸಿದ ಮುಂತಾದ ಸಂಗತಿ ಹಾಜರಿ ರಜಿಷ್ಟರದಲ್ಲಿ ಬರೆದಿರುತ್ತಾರೆ. ಸದರಹೂ ಸ್ವಾಮಿಯವರದೂ ಸೈನ್ಯಾಧಿಪರೆಂದೆನಿಪ ಫೌಜದಾರರದೂ ಲಕ್ಷ್ಯವು ವಿದ್ಯಾಭಿವೃದ್ಧಿಯ ಕಡಿಗೆ ವಿಶೇಷವಾಗಿರುತ್ತದೆ. ಈ ಊರೊಳಗಣ ಎಲ್ಲ ಜನರಿಗೆ ತಮ್ಮ ತಮ್ಮ ಹುಡುಗರನ್ನು ಸಾಲಿಗೆ ಕಳಸುವದಕ್ಕೆ ಸ್ವತಃ ಬಹಳ ಪ್ರಕಾರ ಬೋಧ ಮಾಡಿದರು. ಇದರಂತೆ ಎಲ್ಲ ಉದಾರ ಮನಸುಳ್ಳ ಗೃಹಸ್ಥರು ಹಳ್ಳಿ ಊರ ಸಾಲೆಗಳ ಮೇಲೆ ಚಿತ್ತ ಕೊಡುವರು ಎಂದು ಮಹತ್ಕಾಂಕ್ಷೆ ಧರಿಸುತ್ತೇನೆ. ಪತ್ರ ವಿಸ್ತಾರದ ಮಾಫಿ ದೈನ್ಯ ಪೂರ್ವಕ ಬೇಡಿಕೊಳ್ಳುತ್ತೇನೆ ಇಂತಿ ವಿಜ್ಞಾಪನೆ.

ತಾ. ೧೫ ನೇ ಜುಲಾಯಿ } ಕೃಷ್ಣಾಜಿ ಸರಗೊ ಸ್ಕೂಲಮಾ
ಸನ್ನ ೧೮೭೪ ಇಸವಿ. } ಸ್ತರಹೂಲಿ ತಾಲೂಕ ಪರಸಗಡ

ಮಹಾರಾಜ ರಾಜಮಾನ್ಯ ರಾಜಶ್ರೀ ದಕ್ಷಿಣಭಾಗದ ಶಾಲಾಪತ್ರಿಕೆಯ ಎಡಿಟರ ಇವರಿಗೆ—

ವಿನಯಪೂರ್ವಕ ವಿಜ್ಞಾಪನಃ ಏನಂದರೆ—ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಕರದ್ವಯಗಳಲ್ಲಿ ಉದ್ಭವಿಸುವ ಇಂದುಪ್ರಕಾಶ ಸಮವಾದ ಅಂದೋಲ ಪತ್ರಿಕೆಯಲ್ಲಿ ಅಚ್ಚು ಹಾಕಿಸಿ ಪ್ರಕಟಿಸುವದಕ್ಕೆ ಸ್ಥ ಆ ಬೋರದೀತೆಂಬ ಅಪೇಕ್ಷೆಯನ್ನು ಮಾಡಿದ್ಧೇನೆ. ಆದರೆ ಉಪೇಕ್ಷಾ ಮಾಡದೆ ಮುದ್ರಿಸುವಿರೆಂದು ಕೋರುತ್ತೇನೆ.

ತಾ. ೭ ನೇ ಮಾಹೆ ಅಗಸ್ಟ ಸನ್ನ ೧೮೭೪ ನೇ ಇಸವಿ ದಿವಸ ಈ ತಾಲೂಕದ ಮಾಮಲೇದಾರ ಸಾಹೇಬರಾದ ರಾವಸಾಹೇಬ ಶ್ರೀನಿವಾಸ ಬಾಳಾಜಿ ಚಿಟಗುಬ್ಬಿ ಇವರು ಸಾಲಿಯೊಳಗೆ ಬಂದು, ಈ ಗ್ರಾಮದ ಪಂಚ ಜನರ ಸಮಕ್ಷ ಮೊದಲನೇ ಎರಡನೇ ಮೂರನೇ ವರ್ಗದ ಪರೀಕ್ಷೆ ತೆಗೆದುಕೊಂಡರು. ಹುಡುಗರು ಬಹಳ ಚನ್ನಾಗಿ ಉತ್ತರಗಳನ್ನು ಕೊಟ್ಟರು. ಓದೋಣ, ಬರಿಯೋಣ, ಗಣೀತ, ಮೊದಲಾದ ಅಭ್ಯಾಸ ನೆಟ್ಟಗೆ ಅದೆ ಹೊರ್ತು ಮಾಸ್ತರನು ಹುಡುಗರಿಗೆ ಕಲಿಸುವದರಲ್ಲಿ ಮೆಹನತ್ತಿಯುಳ್ಳವನಾಗಿದ್ಧಾನೆಂದು ಷರಾ ಸಹ ಬರೆದು ಇದ್ಧಾರೆ. ಈ ಘೊರೆಗಳ ಲಕ್ಷವು ವಿದ್ಯಾಅಭಿವೃದ್ಧಿಯ ಕಡಿಗೆ ವಿಶೇಷವಾಗಿ ಇದ್ದು, ಚಿಕ್ಕ ಮಕ್ಕಳಿಗೆ ಕಲಿಯುವ ಬಗ್ಗೆ ಉತ್ತೇಜನ ಕೊಡುತ್ತಾರೆ.

ಇಲ್ಲಿಯ ಜನರಿಗೆ ತಮ್ಮ ತಮ್ಮ ಮಕ್ಕಳನ್ನು ಸಾಲಿಗೆ ಕಳುಹಿಸಬೇಕೆಂಬದಾಗಿ ಸ್ವತಾಃ ಬೋಧಿಸಿದರು. ಹಾಗೂ ಇಲ್ಲಿಯ ಸಾಲಿಯು ಚಂದಾಗಿಲ್ಲ ಹೊಸ ಸಾಲಿಯು ಕಟ್ಟಿಸೋಣದರ ಬಗ್ಗೆ ಗ್ರಾಮಸ್ಥರ ಕಡಿಗೆ ಹುಕುಮ ಕೊ

ಟ್ಟದ್ಧಾರೆ ಆದರೆ ಈ ಕೆಲಸವು ತೀವ್ರವೇ ರಾವಸಾಹೇಬರವರು ಮಾಡಸ್ಕ್ಯಾರು ಹೀಗೆ ಕಂಡು ಬರುತ್ತದೆ. ಇದರಂತೆ ದೊಡ್ಡ ದೊಡ್ಡ ಅಧಿಕಾರಿಗಳು ಶಾಲೆಯ ಕಡೆಗೆ ಲಕ್ಷ ಕೊಟ್ಟರೆ ವಿದ್ಯಾಭಿವೃದ್ಧಿಗೆ ಉತ್ತೇಜನವಾಗುವದಲ್ಲದೆ ಜನರಿಗೆ ಹಿತಕರವಾಗುವದೆಂದು ಇಚ್ಛಿಸುತ್ತೇನೆ.

ಮುಕ್ಕಾಮು ನಂದಗಾಂವಿ ತಾಲೂಕ ಅಥಣೀ ಜಿಲ್ಲಾ ಬೆಳಗಾಂವ ತಾ. ೧೮ ಮಾಹೆ ಅಗಸ್ಟ ಸನ್ನ ೧೮೭೪ ಇ.

ನಾರಾಯಣ ಭಗವಂತ ವಿಜಾಪೂರಕರ ಬ್ರೇಂಚ ಸ್ಕೂಲ ಮಾ. ನಂದಗಾವ.

ರಾವಸಾಹೇಬ ದಕ್ಷಿಣ ಭಾಗದ ಕನ್ನಡ ಶಾಲಾಪತ್ರಕದ ಎಡಿಟರರ ಸನ್ನಿಧಿಗೆ—

ಸೇವಕನು ಮಾಡುವ ಬಿನ್ನಹವೇನಂದರೆ—ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮಿಂದವಾದ ಶಾಲಾಪತ್ರಕದಲ್ಲಿ ಛಾಪಿಸಿ ಪ್ರಕಟಿಸುವಿರೆಂದು ಕಾಂಕ್ಷೆ ತಾಳಿದ್ದೇನೆ.

ಗಣಿತ ಶಾಸ್ತ್ರದಲ್ಲಿ ಉಪಯೋಗಿಸುವ ಗುರುತುಗಳ ಹೆಸರುಗಳು ಅಂಕಗಣಿತದಲ್ಲಿ ಹೇಳಲ್ಪಟ್ಟವೆ. ಆದಾಗ್ಯೂ ಉದಾಹರಣೆಯಲ್ಲಿ ಅವುಗಳ ಉಚ್ಚಾರ ಹ್ಯಾಗೆ ಮಾಡಬೇಕೆಂಬದರ ಬಗ್ಗೆ ಬರೆದು ತೋರಿಸಿರುವದಿಲ್ಲ. ಒಂದೇ ಲೆಕ್ಕದಲ್ಲ್ಯಾಕಾಗವಲ್ಲದು ಅವುಗಳ ಉಚ್ಚಾರ ಬರೆದು ತೋರಿಸಿದ್ದರೆ, ಜನರಿಗೆ ಓದಲಿಕ್ಕೆ ತೊಂದರೆ ಉಂಟಾಗುತ್ತಿದ್ದಿಲ್ಲ. ಈ ವಿಷಯದಲ್ಲಿ ನನಗೆ ಬಂದ ಸಂಶಯವು ಕೆಳಗೆ ಬರೆದ ಪ್ರಕಾರ—

(+,—,×,÷,=) ಇವುಗಳಿಗೆ ಅನುಕ್ರಮದಿಂದ ಅಧಿಕ,

ಯೋಗ, ಗುಣಕ, ಭಾಜಕ, ಸರಿ, ಎಂದು ಅಂಕಗಣಿತದಲ್ಲಿ, ಗುರುತುಗಳ ಹೆಸರುಗಳು ಮಾತ್ರ, ಹೇಳಲ್ಪಟ್ಟವೆ. ಹೀಗಿದ್ದು ಬಹುತರವಾಗಿ ಎಲ್ಲ ಜನರು ಓದುವದು ಹ್ಯಾಗಂದರೆ; (೨/೩ + ೩/೪) ಎರಡು ಮೂರಾಂಶ ಅಧಿಕ ಮೂರು ನಾಲ್ಕಾಂಶ; (೨/೩ — ೩/೪) ಎರಡು ಮೂರಾಂಶ ಉಣೆ ಮೂರು ನಾಲ್ಕಾಂಶ; (೨/೩ × ೩/೪) ಎರಡು ಮೂರಾಂಶ ಗುಣಿಲೆ ಮೂರು ನಾಲ್ಕಾಂಶ; (೨/೩ ÷ ೩/೪) ಎರಡು ಮೂರಾಂಶ ಭಾಗಿಲೆ ಮೂರು ನಾಲ್ಕಾಂಶ; ಮತ್ತು (=) ಈ ಚಿನ್ಹಕ್ಕೆ ಬರೋಬರಿಯೆನ್ನುತ್ತಾರೆ. ಆದರೆ ಹೀಗೆ ಉಚ್ಚಾರ ಮಾಡುವ ಪದ್ಧತಿ ಮಹಾರಾಷ್ಟ್ರವಾಯಿತೋ ಸಂಸ್ಕೃತವಾಯಿತೋ? ಕದಾಚಿತ ಒಂದು ವೇಳೆ ಸಂಸ್ಕೃತವಾಗಿದ್ದರೆ ಕನ್ನಡದಲ್ಲ್ಯಾದರೂ ಇದೇ ಮೇರಿಗೆ ಉಚ್ಚರಿಸಬೇಕೋ ಅಥವಾ ಅಂಕಗಣಿತದಲ್ಲಿ ಹೇಳಿರುವ ಪ್ರಕಾರ, ೨/೩ ಯೋಗ ೩/೪; ೨/೩ ಗುಣಕ ೩/೪; ೨/೩ ಭಾಜಕ ೩/೪; ೨/೩ ಸರಿ ೮/೧೨; ವೆಂದೆನಬೇಕು? ಎಂಬವರ ಬಗ್ಗೆ ಬಹಳ ತೊಡರು ಬಿದ್ದಿರುತ್ತದೆ. ಆದರೆ ಇದನ್ನು ತಮ್ಮ ಸುಂದರವಾದ ಸ್ಕೂಲಪೇಪರಿನಲ್ಲಿ ಪ್ರಕಟಿಸಿದ ಹೊರತು ನನ್ನ ಸಂಶಯವು ಪರಿಹಾರವಾಗದೆಂದು ತಿಳಿದು ತಮ್ಮ ಸನ್ನಿಧಿಗೆ ಕಳುಹಿಸಿದ್ದೇನೆ. ವಿದ್ವಾಜ್ಜನರು ಇದನ್ನು ಕಂಡು, ಯಥಾಯೋಗ್ಯ ಉತ್ತರ ಕೊಡುವರೆಂದು ನಾನು ಅಪೇಕ್ಷಿಸಿದ್ದೇನೆ. ಇಂತಿ ಬಿನ್ನಹ

ತಾರೀಖು ೩ ನೇ ಮಾಹೆ ಅಗಸ್ಟ ಸನ್ನ ೧೮೭೪ ಇಸವಿ.	ವೆಂಕಟಲಿಂಗ ಧನಲಿಂಗ ಪ್ರಥಮ ಮುದತನೀಸ ಸ್ಕೂ. ಧುಂಡಶಿ ತಾಲೂಕ ಬಂಕಾಪೂರ.

ಮ. ರಾ. ರಾಜಶ್ರೀ ಕನ್ನಡ ಮಾಸಪತ್ರಿಕೆಯ ಎಡಿಟರವ
ರ ಸನ್ನಿಧಾನಕ್ಕೆ
ವಿ. ವಿ. ಸೇವಕನಾದ ನಾನು ಕಳುಹಿದ ಕವಿತೆಗಳೆರಡಕ್ಕೆ
ಸ್ಥಳ ದೊರದೀತೆಂದು ಬಹಳಾಪೇಕ್ಷಿಸುತ್ತೇನೆ.

ಸ್ವಕೃತಕವಿತೆಗಳು.

ವಾ. ಷ. ನಳನಾಳಮುಡಿಯೊಳ್ತೊಟ್ಟ ಮಾಲೆಯಂತೆ ರಗಿ|
ದಳರವಪಲ್ಲಕಿಯ ಮೆಲ್ಲಲಿಯೊಲಂಬುಗಳ|
ಘಳಲನೆಳವರವಾಣಿಯಿಂದಘರಿಸಿರ್ಪನದಿಯಾದರತೀರ ದೇಶದೋಳ್||
ಕಳಕಂಠದೊಳ್ಗಳರವಕಿಂದುಸಮಕಾಂತಿಗ|
ಖಿಳವೋಕದೊಳ್ನರಕಾಂತಕನಧಿಕಭಕ್ತಿಗೆ|
ಇಳೆಕೆಯಾಗದುತ್ಕರ್ಷಯಿಂದಿರ್ಪನಾರದನಿಳತಂದನತಿ ಬಳಲ್ದು||೧||

ಕ. ಜಿಣಗುಸೇರಂಬುಜಕರಗಳ|
ಗಣಿತಕ್ರಿಮಿಕೀಟಗಳವಗಾಹಿಸುತಿರ್ಪ||
ಮಣಿಗರ್ಭಸೆಂಪಿಂದತಾಂ|
ಮಣಿಗಳಾಂತೋಲ್ತನ್ನಿನ್ನಗೆಯೊಳ್ಕ್ರಪ್ಪಗುಂ||೨||

ವಾ. ಷ. ಅಂದಿಪಾರ್ಪಗೆಯಜಲಮಧ್ಯದೋಳ್ಕ್ರಂದಿ|
ತಂದುರಿಯಂನೀಗಿಪ್ರೋಗ್ವೆನೆಂಬುಜ್ಜುಗದಿಂ|
ಬಂದನಿತರೊಳನಿಮಿಷಯುಗಂನೆರೆದಿರ್ಪ್ರದೀಕ್ಷಿಸುತಲ ಲರ್ಪಲ್ಲಸ||
ದಂಪುಗಕ್ಕೊಳಗಾಗಿತುರುಮಿಂಡಿಕೃಷ್ಣಸ|
ಮಂದಿರದೋಳಸ್ರೋರ್ಪಿಸೆಯುಳಂಕೇಳ್ವನಾ|

ನೆಂದವಂಗವಿಸಿದ ನಾಗಸತ್ರಿಯಾಪೇಕ್ಷೆಯಿಂ ಗದಾಗ್ರಜ
ನಿದ್ದೆಡೆಗೆ॥೩॥

ಮುಂದಕ್ಕೆ ಸಾಗುವದು.

ತಾ. ೨೬।೨) ವಿಠಲ ನಾರಾಯಣ ಕಣಗಲಿ ಮು. ಮು
೧೮೨೪ ಇ. } ನ್ನೊಳ್ಳಿ ತಾ. ಪರಸಗಡ ಜಿ. ಬೆಳಗಾಂವ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರವರ ಸಂನಿಧಾನಕ್ಕೆ—

ವಿನಂತಿ ವಿಶೇಷ ತಮ್ಮ ಪತ್ರಿಕೆಯು ಯಾವತ್ತು ಮಹಾಧಿಕಾರಸ್ತರಿಗೆ ಕೇವಲ ಆಶ್ರಯ ಭೂತವಾದಂಥಾದ್ದು ಅದರಲ್ಲಿ ಸ್ಥಳದೊರಿಯುತ್ತದೆಂತ ನಿಶ್ಚಯವಾದ ಕಾರಣಾ ನನಗೂ ಯತ್ಕಿಂಚಿತ ಸ್ಥಳದೊರದೀತೆಂದು ಅಭಿಲಾಷೆಯಿಂದ, ಬರೆದಿರುತ್ತೇನೆ. ರಾ. ರಾಮಚಂದ್ರ ಭೀಮಾಜಿ ವಿದ್ಯಾರ್ಥಿ ಶಾಳಾ ನಂದಿಕೇಶ್ವರ ಇವರು ಹೋದ ತಿಂಗಳ ಮಾಹಪತ್ರಿಕದ (೬೨) ನೇ ಪಾನಿನಲ್ಲಿ ಒಂದು ಶ್ಲೋಕವನ್ನು ಬರೆದು ಅದರ ಅರ್ಥವನ್ನು ವಿಂಗಡಿಸಿ ಇದೇ ಪತ್ರದ್ವಾರದಿಂದ ತಿಳಿಸಬೇಕೆಂದು ಸೂಚನಾ ಕೊಟ್ಟ ಪ್ರಯುಕ್ತಾ ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಬರೆದಿದ್ದೇನೆ. ದಯಮಾಡಿ, ಸ್ಥಳ ಕೊಡುವ ಕೃಪೆಯಾಗಬೇಕು.

॥ಶ್ಲೋಕ॥ ಎಣಿಸಲ್ ಪಂಕ್ತಿಯುಲೆಖ್ಖಾ;
ಗುಣಿಸಲ್ ಶೌರ್ಯದರಿಂದಾ॥
ಘನದೊಳ್ ಋಣಮಂಕಳೆದುಲು।
ಬಿಪ್ಪುದುತ್ತಪ್ಪದೆ ತವಣೆಯುಲೆಖ್ಖಾ॥೧॥

ಇವರಲ್ಲಿ ಕಠಿಣ ಶಬ್ದಗಳಿಲ್ಲದ್ದರಿಂದ ಅರ್ಥ ಬರಿಯು

ತ ಅವಶ್ಯವಿಲ್ಲದ್ದರಿಂದ ಬರದಿಲ್ಲ, ಈ ಶ್ಲೋಕದಂತೆ ಒಂ
ತು ಉದಾಹರಣ ರೀತಿವಾರ ಮಾಡಿ ಸಮಜಾತಿಯನ್ನು
ಕೆಳಗೆ ಬರೆದಿದ್ಧೇನೆ, ಸುಜ್ಞರು ಭಾವಿಸತಕ್ಕದ್ದು.

ಉಂ = ೧೭

೧೫

೨೫

ಸಾ. ೫೩

ಘನ, ೫×೧೦=೫೦ ಏಕಂ ಸ್ಥಾನದ್ದು. ೨೮

ಋಣ,— ೨೭ ಕಳೆದರೆ ದಸಕು. ೭

೨೩ ಬಾಕೀ ೧೯೩

ದಾಹಂ ಸ್ಥಾನದ್ದು ಇದರಂತೆ.

ಘನ. ೬೦—೪೧ ಋಣ=೧೯ ಬಾಕಿ ೧.

ಇದರೊಳಗೆ ಏಕಂ ಸ್ಥಾನದೊಳಗಿನ ನಾಲುಗಳನ್ನು ಎಣಿಸಿದರೆ (೫) ನಾಲು ಅಂತ ಅದಕ್ಕೆ (೧೦) ರಿಂದ ಗುಣಿಸಬೇಕು. ಅಂದರೆ ಐವತ್ತಾಯಿತು. ಇದೇ ಘನವೆಂದು ತಿಳಿಯಬೇಕು.

ಋಣವನ್ನು ತೆಗೆಯುವದು. ಏಕ್ಕಂ ಸ್ಥಾನದೊಳಗಿನ ಒಂದೊಂದು ಅಂಕೆಯನ್ನು (೧೦ ರಲ್ಲಿ) ಕಳೆಯಬೇಕು. ಬಾಕೀ ಉಳಿದ ಅಂಕೆಗಳನ್ನೆಲ್ಲ ಕೂಡಿಸಿದರೆ ಋಣವು ಬರುತ್ತದೆ.

೮+೫+೫+೨+೭=೨೭, ಆ ಮೇಲಿನ ಘನದೊಳಗೆ ಕಳೆಯಬೇಕು. ಬಾಕೀ (೨೩) ಉಳದ್ದರಲ್ಲಿ (೩) ಏಕ್ಕಂ ಸ್ಥಾನದ ಗೆರಿಯು ಕೆಳಗೆ ಬರೆವದು, (೨) ಈ ಅಂಕಿಯನ್ನು ದಸಗೆಂದು ತಿಳಿದು ದಾಹಂ ಸ್ಥಾನದ ಅಂಕಿಗಳ

ಬುಡಕ್ಕೆ ಹಾಕಿರುತ್ತದೆ, ಬಾಹಂ ಸ್ಥಾನದ ಅಂಕೆಗಳ ಸ್ಥಾಲುಗಳನ್ನು ಎಣಿಸುವಾಗ್ಯೆ ದಸಕು ಸುದ್ಧಾ ಸಾಲೆಂದು ಎಣಿಸಿ ಮೇಲೆ ತೋರಿಸಿದ ರೀತಿಯಂತೇನೇ ಎಲ್ಲಾ ಸಾಲುಗಳನ್ನು ಮಾಡುತ್ತ ಹೋಗಬೇಕು. ಅಂದರೆ=ಶ್ಲೋಕದ ಅಭಿಪ್ರಾಯವಾಯಿತು. ಇದನ್ನು ನಾನು ಹಲರ್ಗಪುರದ ಕುಲಕರ್ಣಿ ದಾದಪ್ಪಾ ಎಂಬವರಿಂದ ತಿಳುಕೊಂಡು ಸಕಲರಿಗೂ ತಿಳಿಯಬೇಕೆಂಬಿಚ್ಛೆಯಿಂದ ತಮ್ಮ ಕಡಿಗೆ ಕಳುಹಿಸಿರುತ್ತೇನೆ. ಇದರಲ್ಲಿ ಹಸ್ತದೋಷದಿಂದ ತಪ್ಪಿದ್ದರೆ ತಿದ್ದಿ ಮುದ್ರಿಸುವಿರೆಂದು ಮಹತ್ವಾಕಾಂಕ್ಷೆಯುಂಟು. ನಾನೆಂದೂ ತಮ್ಮ ಕಡಿಗೆ ಪತ್ರ ಬರೆದವನಲ್ಲ ಆದ್ದರಿಂದ ಈ ಪತ್ರ ಅನಾದರ ಮಾಡಬಾರದೆಂದು ವಿನಯಪೂರ್ವಕ ಪ್ರಾರ್ಥನೆ ಇದೆ. ಇಂತಿ ಬಿನ್ನಹಃ ಪತ್ರ ವಿಸ್ತಾರವಾದದ್ದು ಮಾಫಿ ಇರಬೇಕು.

ಮುಕ್ಕಾಮ ಲಕ್ಕುಂಡಿ
ತಾಲೂಕ ಡಂಬಳ ಜಿ
ಲ್ಹಾ ಧಾರವಾಡ ತಾರೀ
ಖು ೩ನೇ ಮಾಹೆ ಜು
ಲೈ ಸನ್ ೧೮೭೪೯.

ಲಕ್ಕುಂಡಿ ಸಾಲಿ ವಿದ್ಯಾರ್ಥಿ
ಕೃಷ್ಣಾಜಿ ಗೋವಿಂದ ಸ
ರಾಫ.

ಜಾಹೀರಾತ.

ಕರ್ನಾಟಕ ಜ್ಞಾನಮಂಜರೀ

ಈ ಹೆಸರಿನದೊಂದು ಮಾಸಿಕ ಪುಸ್ತಕವನ್ನು ಬರುವ ಅಗಟಂಬರ ತಿಂಗಳಿಂದ ಪ್ರಕಟಿಸುವ ನಿಶ್ಚಯ ಮಾಡಿದ್ದೇನೆ. ಮೊದಲನೇ ಅಂಕವು ತಾರೀಖು ೧೨ ಮಾಹೆ ಅಗಟಂಬರ ದಿವಸ ವಿಜಯ ದಶಮಿಯ ಸುಮುಹೂರ್ತದಿಂದ ಪ್ರಸಿದ್ಧಿಸಲ್ಪಡುವದು. ತದನಂತರ ಅದು ಪ್ರತಿ ತಿಂಗಳ ಮೊದಲನೇ ತಾರೀಖಿನ ದಿವಸ ಪ್ರಕಟಿಸಲ್ಪಡುವದು.

ಈ ಪುಸ್ತಕದೊಳಗೆ ಕೆಳಗಿನ ವಿಷಯಗಳು ಬರುವವು.

೧ ಶಾಸ್ತ್ರೀಯ ವಿಷಯ: ಅರ್ಥಶಾಸ್ತ್ರ ಪದಾರ್ಥವಿಜ್ಞಾನ ಇತ್ಯಾದಿ.

೨ ತಿದ್ದುಪಾಠ, ನೀತಿ ಮುಂತಾದ ವಿಷಯಗಳನ್ನು ಕುರಿತು ನಿಬಂಧಗಳು.

೩ ಪುಸ್ತಕಪರೀಕ್ಷೆ.

೪ ವಿಖ್ಯಾತ ಪುರುಷರ ಚರಿತ್ರ.

೫ ಪ್ರಸಿದ್ಧ ಸ್ಥಳಗಳ ವರ್ಣನೆ.

೬ ಮನೋರಂಜಕ ಕಲ್ಪಿತ ಕಥೆಗಳು.

೭ ನಾಟಕಗಳು.

೮ ಶಿಕ್ಷಣಪದ್ಧತಿ.

೯ ಶಿಲಾಲೇಖಗಳು.

೧೦ ಸುಭಾಷಿತ ಶ್ಲೋಕಗಳು.

೧೧ ಹಳೆಗನ್ನಡ ಗ್ರಂಥಗಳ ವಿವೇಚನೆ.

೧೨ ನಗೆಮಾತುಗಳು.

ಸದರವು ವಿಷಯಗಳನ್ನು ಕುರಿತು ಕಾಲಕಾಲಕ್ಕೆ ತಪ್ಪ

ದೆ ಬರೆದು ಕಳುಹುವೆವೆಂದು ೧೦।೧೨ ವಿದ್ವಾನ ಗೃಹಸ್ಥ ಒಪ್ಪಿಕೊಂಡಿರುವದರಿಂದ ಈ ಕೆಲಸವು ಚೆಂನಾಗಿ ನಡೆದೀತೆಂಬ ಖಾತ್ರಿ ಜನರಿಗೆ ಆದೀತು. ಈ ಪುಸ್ತಕವು ಡೇಮಿ ಚತುಷ್ಪತ್ರಿ ಆಕಾರದ (ರಾಜಶೇಖರ ಅಶ್ವಾಸ ೧।೨ ಆಕಾರದ) ೨ ಪುಟಗಳಷ್ಟು ದೊಡ್ಡದಾಗುವದು. ಇದರ ಮುಂಗಡ ವರ್ಷ ಕ್ರಯ ೨॥ ಎರಡು ವರೆ ರುಪಾಯಿಗಳು ಹಾಗು ಹಿಂದಾ ಕೊಡುವ ಕ್ರಯ ೩॥ ಮೂರುವರೆ ರುಪಾಯಿಗಳು ಇಟ್ಟಿದ್ದೇವೆ. ಟಪಾಲ ಹಾಸಲು ವರ್ಗಣೀದಾರರಿಗೆ ಬೀಳಲಿಕ್ಕಿಲ್ಲ. ಎರಡು ತಿಂಗಳೊಳಗೆ ಸಂದಹಣ ಮುಂಗಡವೆಂದು ತಿಳಿಯಬೇಕು.

ಕಂನಡ ಭಾಷೆಯಲ್ಲಿ ಹೊರಡುವ ಮಾಸಿಕ ಪುಸ್ತಕವಿದೇ ಪ್ರಥಮದಾದ್ದರಿಂದ ಹಾಗು ಸಾಂಪ್ರತಕ್ಕೆ ಅಂಥ ಪುಸ್ತಕದ ಅವಶ್ಯಕತೆ ಹೆಚ್ಚಾಗಿರುವದರಿಂದ, ಕಂನಡ ಬಲ್ಲಂಥ ಎಲ್ಲ ಜನರೂ, ಅದರಲ್ಲಿ ವಿಶೇಷವಾಗಿ ಜ್ಞಾನವನ್ನು ಪಡೆದು ವಿದ್ವಾಂಸರಾದ ಕಂನಡಿಗರೂ ಇಂಥ ಕೆಲಸಕ್ಕೆ ಸಾಹ್ಯ ಮಾಡತಕ್ಕದ್ದು ಅವರವರ ಕರ್ತವ್ಯ ಕರ್ಮವೇಸರಿ. ಆದ್ದರಿಂದ ವಿಶೇಷ ಆಶ್ರಯ ದೊರಕುವದೆಂಬ ತುಂಬಾ ಕೋರಿಕೆಯುಂಟು.

ವಿಶೇಷ ಸೂಚನೇ. ಪುಸ್ತಕಕ್ಕೆ ವರ್ಗಣೀದಾರರಾಗಲಪೇಕ್ಷಿಸುವರು ತಂಮ ಹೆಸರಂನೂ, ತಾಂವಿರುವ ಸ್ಥಳದ ಹೆಸರಂನೂ, ಕೆಳಗೆ ಸಹೀ ಮಾಡುವವರ ಬಳಿಗೆ ತಾರೀಖ ೧ ಅಗಷ್ಟಂಬರದೊಳಗಾಗಿಯೇ ಮುಟ್ಟುವಂತೆ ಬರೆದು ತಿಳಿಸಬೇಕು. ವರ್ಗಣೀ ಕಳುಹಿಸತಕ್ಕದ್ದು ಮೊದಲನೇ ಅಂಕವು ಮುಟ್ಟಿದಂದಿನಿಂದ ಎರಡು ತಿಂಗಳೊಳಗಾಗಿ ಮುಟ್ಟಿಸಬೇಕು.

ಮ್ಯಾನೇಜರ.

ಶಾಲಾಪತ್ರಕವು.

ಪುಸ್ತಕ ೩೦] [ಸಂಚಿಕೆ ೭

ಬೆಳಗಾವಿ, ಮಾಹೆ ಅಕ್ಟೋಬರ ೧೮೭೪.

EDUCATIONAL NEWS.

ವಿದ್ಯಾಸಂಬಂಧದ ವೃತ್ತಾಂತಗಳು.

ಧಾರವಾಡದಲ್ಲಿ ಹಾಯ್ಸ್ಕೂಲಿನ ಸಲುವಾಗಿಯೂ ಟ್ರೇನಿಂಗಕಾಲೇಜದಸಲುವಾಗಿಯೂ ಹೊಸ ಶಾಲಾಗೃಹಗಳನ್ನು ಕಟ್ಟುವ ಕೆಲಸವು ಈಗ ಸುಮಾರು ೩ ವರ್ಷ ನಡೆದಿತ್ತು— ಅದು ಮುಗಿದು ಯೆರಡೂ ಗೃಹಗಳು ಸಿದ್ಧವಾಗಿ, ಹಾಯ್ಸ್ಕೂಲಿನ ಗೃಹದೊಳಗೆ ಆ ಸ್ಕೂಲು ಹೋಗಿ ಯೆರಡು ಮೂರು ತಿಂಗಳಾಯಿತು—ಟ್ರೇನಿಂಗಕಾಲೇಜವಾದರೂ ಬೆಳಗಾವಿಯಿಂದ ಅದೇ ತಿಂಗಳಲ್ಲಿ ಬರತಕ್ಕದ್ದುಂಟು— ಈ ಯೆರಡೂ ಶಾಲೆಗಳ ಸಂಬಂಧದಿಂದ ಧಾರವಾಡದ ಕಲೆಕ್ಟರರಾದ ಮಿ. ರಾಬರ್ಟಸನ್ ದೊರೆಗಳ ಹೆಸರು ಧಾರವಾಡದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವದು— ಯಾಕಂದರೆ ಅವರ ಶ್ರಮದಿಂದಲೇ ಧಾರವಾಡದಲ್ಲಿ ಹಾಯ್ಸ್ಕೂಲು ಸ್ಥಾಪಿಸಲ್ಪಟ್ಟು, ಆವೆರಡೂ ಭವ್ಯವಾದ ಮಂದಿರಗಳುಂಟಾದವು.

ಹೋದ ತಿಂಗಳಲ್ಲಿ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ವಾರ್ಷಿಕ ಇನಾಮು ಕೊಡುವ ಸಮಾರಂಭವಾಯಿತು. ಆ ಸಮಯದಲ್ಲಿ ಮಿ. ರಾಬರ್ಟಸನ್ ಧೊರೆಗಳೂ, ಮಿ. ರಸೆಲ್ ಧೊರೆಗಳೂ, ಬೇರೆ ಹಲ ಜನರು ಯುರೋಪಿಯನ್, ನೇಟಿವ ಗೃಹಸ್ಥರು ಕೂಡಿದ ಬಳಿಕ, ರಾಬರ್ಟಸನ್ ಧೊರೆಗಳು ಕೂಡಿದ ಜನರಿಗೂ ವಿದ್ಯಾರ್ಥಿಗಳಿಗೂ ಸಂತೋಷವಾಗುವಹಾಗೆ ಸಂಭಾಷಣೆಯು ಮಾಡಿ ಇನಾಮುಗಳನ್ನು ಕೊಟ್ಟರು.

ಧಾರವಾಡದಲ್ಲಿ ಹೆಂಗಸರ ನಾರ್ಮಲ್‌ಸ್ಕೂಲು ಸ್ಥಾಪಿಸುವ ಉದ್ಯೋಗವು ನಡೆವದೆ.

ಧಾರವಾಡ, ಬೆಳಗಾವಿ, ಜಿಲ್ಲೆಗಳಲ್ಲಿ ಕಳೆದ ತಿಂಗಳಲ್ಲಿ ಆದ ಮುಲಕೀ ಪರೀಕ್ಷೆಗಳ ವಿವರು—

ಬೆಳಗಾವಿ—ಪರೀಕ್ಷೆಗೆ ಬಂದ ಉಮೇದವಾರರು, ಇಂಗ್ಲಿಷದಲ್ಲಿ ೫೫ ದೇಶಭಾಷೆಯಲ್ಲಿ ೧೨೮. ಇಳಿದವರು, ಇಂಗ್ಲಿಷದಲ್ಲಿ ೮, ದೇಶಭಾಷೆಯಲ್ಲಿ ೩೨.

ಧಾರವಾಡ—ಪರೀಕ್ಷೆಗೆ ಬಂದ ಉಮೇದವಾರರು, ಇಂಗ್ಲಿಷದಲ್ಲಿ ೩೫, ದೇಶಭಾಷೆಯಲ್ಲಿ ೨೦— ಇಳಿದವರು, ಇಂಗ್ಲಿಷದಲ್ಲಿ ೨೪, ದೇಶಭಾಷೆಯಲ್ಲಿ ೨೬.

ಬರುವ ಡಿಸೆಂಬರಿನ ೯ನೇ ತಾರೀಖಿನಲ್ಲಿ ಶುಕ್ರಕ್ರಾಂತಿಯುಂಟು; ಅಂದರೆ ಶುಕ್ರನು ಅಸ್ತ ಹೊಂದಿ ಸೂರ್ಯಬಿಂಬದ ಮೇಲಿಂದ ಕ್ರಮಿಸಿದ ಹಾಗೆ ಕಾಣುವನು.

ಆ ಸಮಯದಲ್ಲಿ ಅದಷ್ಟು ಸೂಕ್ಷ್ಮವಾಗಿ ವೇಧಗಳನ್ನು ತಕ್ಕೊಳ್ಳುವದಕ್ಕೋಸ್ಕರ ಯುರೋಪದೊಳಗಿನ ವಿದ್ವಾಂಸರು ಬಗೆ ಬಗೆಯ ಸಿದ್ಧತೆಗಳನ್ನು ನಡಿಸಿರುತ್ತಾರೆ-ಯಾಕಂದರೆ ಈ ಅಲಭ್ಯ ಲಾಭವು ಮುಂದೆ ಬೇಗ ಸಂಭವಿಸುವದಾಗಿಲ್ಲ – ಮದ್ರಾಸದೊಳಗಿನ ವೇಧಶಾಲೆಯ ಫಸ್ಟ್ ಅಸಿಸ್ಟಂಟರಾದ ರಘುನಾಥಾಚಾರ್ಯರೆಂಬವರು ಈ ಕ್ರಾಂತಿಯ ವರ್ಣನೆಯದೊಂದು ಚಿಕ್ಕ ಪುಸ್ತಕವನ್ನು ಕ್ರಾಂತಿಯಾಗುವ ಪೂರ್ವದಲ್ಲಿಯೇ ಪ್ರಸಿದ್ಧಿಸುವರಿದ್ದಾರೆ–ಈ ಪುಸ್ತಕವನ್ನು ಪ್ರಖ್ಯಾತರಾದ ಮಾಗ್‌ಸನ್ನೆಂಬ ಜೋತಿಷಿಗಳು ಪರೀಕ್ಷಿಸಿ ಮಾನ್ಯ ಮಾಡಿದರಿಂದ, ಮದ್ರಾಸ ಸರಕಾರದವರು ೩೫೦೦ ಪ್ರತಿಗಳನ್ನು ತಕ್ಕೊಂಡು ಸರಕಾರೀ ನೌಕರರು ಮುಂತಾದವರಿಗೆ ಕೊಡುವದನ್ನು ನಿಶ್ಚಯಿಸಿರುತ್ತಾರೆ–ಈ ಪುಸ್ತಕವು ಸುಮಾರು ೨೫ ಅಷ್ಟಪತ್ರೀ ಪುಟಗಳುಳ್ಳದ್ದಾಗುವದು; ಇದರ ಕ್ರಯ ೬ ಅಣೆ.

ಯುರೋಪದೊಳಗಿನ ಯಾವತ್ತು ದೇಶಗಳಲ್ಲಿ ಪ್ರೇತಗಳನ್ನು ಹೂಗಿಯುವ ಸಡಾವಳಿಯಿದ್ದದ್ದು ಎಲ್ಲರಿಗೂ ಗೊತ್ತುಂಟು–ಆದರೆ ಇತ್ತಲಾಗಿ ಜರ್ಮನಿ ಮುಂತಾದ ದೇಶಗಳೊಳಗಿನ ಪ್ರಖ್ಯಾತ ವಿದ್ವಾಂಸರು ಹಿಂದೂ ಜನರಂತೆ ಪ್ರೇತಗಳನ್ನು ಸುಡುವದರಲ್ಲಿ ಬಹಳ ಲಾಭಗಳುಂಟೆಂದು ನಿರ್ಣಯಿಸಿದರಿಂದ, ಆ ಖಂಡದೊಳಗಿನ ೭೨ ಪಟ್ಟಣಗಳ ನಿವಾಸಿಗಳು ಶವದಹನ ಸಭೆಗಳನ್ನು ಸ್ಥಾಪಿಸಿಕೊಂಡು ಈ ಹೊಸ ರೂಢಿಯನ್ನು ಅನುಸರಿಸಲಿಕ್ಕೆ ಅತ್ಯುತ್ಸುಕರಾ

ಗಿರುತ್ತಾರೆ—ಇಂಗ್ಲಂಡದಲ್ಲಿಯೂ ಈ ಉದ್ಯೋಗ ನಡೆದಿರುತ್ತದೆ.

ಇದಲ್ಲದೆ ಕಲಕತ್ತೆಯ ಬ್ರಹ್ಮಸಮಾಜದವರ ಏಕೇಶ್ವರ ಧರ್ಮವನ್ನು ಏಲಾಯತಿಯೊಳಗಿನವರೆಷ್ಟೋ ಜನರು ಸ್ವೀಕರಿಸಿದ್ದುಂಟು—ಬಹು ಪ್ರಸಿದ್ಧ ಕ್ರಿಸ್ತೀ ಧರ್ಮೋಪದೇಶಕನು ಈ ಧರ್ಮವನ್ನು ಸ್ವೀಕರಿಸಿದನೆಂದು ಕೇಳುತ್ತೇವೆ.

ಪಾರಿಸ ಪಟ್ಟಣದಲ್ಲಿ ಮದ್ಯಗಳಿಗೆ ಬದಲಾಗಿ ಹಾಲು ಕುಡಿಯುವ ರೂಢಿಯನ್ನುಂಟು ಮಾಡುವದೊಂದು ಸಮಾಜವು ಸ್ಥಾಪಿಸಲ್ಪಟ್ಟಿರುತ್ತದೆ. ಮದ್ಯ ವ್ಯಸನವನ್ನು ಹಿಂಮೆಟ್ಟಿಸುವದೇ ಈ ಸಮಾಜದವರ ಮುಖ್ಯೋದ್ದೇಶವು.

ಗಿರಣಿ ರೋಗವನ್ನು ನಿಶ್ಚಯವಾಗಿ ಪರಿಹರಿಸುವಂಥಾದೊಂದು ಯೆಣ್ಣೆಯನ್ನು ಡಾಕ್ತರ ಜೋಗಲ್ಲೆಂಬವರು ಗೊತ್ತು ಹಚ್ಚಿರುತ್ತಾರೆ. ಇದರ ಹೆಸರು “ಗುರ್ಜನ ಆಯಿಲ್.” ಇದು ಅಂದಾಮಾನ (ಜನ್ಮಶಿಕ್ಷೆಯ ಜನರನ್ನು ಕಳುಹುವ) ದ್ವೀಪದಲ್ಲಿ ಹುಟ್ಟುತ್ತದೆ. ಆದರೆ ಇದು ಕಲಕತ್ತೆಯಲ್ಲಿ “ಪ್ರಿನ್ಸಿಪಲ್ ಮೆಡಿಕಲ್ ಶಾಪಕೀಪರ” ಯೆಂಬವರ ಅಂಗಡಿಯಲ್ಲಿ ದೊರೆಯುತ್ತದೆ. ಇಂಡಿಯಾ ಸರಕಾರದವರು ಈ ಯೆಣ್ಣೆಯನ್ನು ಆದಷ್ಟು ಬೇಗ ಪ್ರಸಿದ್ಧಿಗೆ ತರುವ ಬಗ್ಗೆ ಠರಾವು ಮಾಡಿರುತ್ತಾರೆ.

SELF HELP

ತನಗೆ ತಾನೇ ನೆರವಾಗುವದು.

ತಾರ್ತರ ದೇಶದ ತೈಮುರ್ಲಂಗನೆಂಬವನು ಆಪತ್ಕಾಲದಲ್ಲಿ ದೃಢ ನಿಶ್ಚಯವನ್ನು ಹ್ಯಾಗೆ ಹಿಡಿಯಬೇಕೆಂಬದನ್ನು ಜೇಡಹುಳದಿಂದ ಕಲಿತುಕೊಂಡ ಕಥೆಯು ಲೋಕ ಪ್ರಸಿದ್ಧವೇ ಉಂಟು. ಅಮೇರಿಕದ ಆದುಬನ್ನನೆಂಬವನ ಕಥೆಯಾದರೂ ಕಡಿಮೆ ಚಮತ್ಕಾರವುಳ್ಳದ್ದಲ್ಲ. ಇವನು ಪಕ್ಷಿಗಳ ಗುಣಧರ್ಮಾದಿಗಳನ್ನು ತಿಳಿದುಕೊಳ್ಳುವ ಉದ್ಯೋಗ ನಡಿಸಿದ್ದನು. ಇವನು ತಾನೇ ತನ್ನ ಕಥೆಯನ್ನು ಹೇಳಿದ್ದು ಹ್ಯಾಗೆಂದರೆ, „ನಾನು ಮೊದಲು ಕೊರೆದ ಇನ್ನೂರು ಚಿತ್ರಗಳು ಅಕಸ್ಮಾತ್ತಾಗಿ ಕೆಟ್ಟು ಹೋದದರಿಂದ ಪಕ್ಷಿಗಳ ಬಗ್ಗೆ ನಾನು ನಡಿಸಿದ ಶೋಧವು ಬಹುಶಃ ನಿಂತು ಹೋಯಿತು. ಆ ಕಥೆಯನ್ನು ಹೇಳುತ್ತೇನೆ. ಅದರಿಂದ ಕೇವಲ ಮನೋಭಂಗವನ್ನುಂಟು ಮಾಡುವಂಥ ಕಷ್ಟ ಬಂದಾಗ್ಯೂ, ಸೃಷ್ಟಿಯ ಕೌತುಕಗಳನ್ನು ಸಂಗ್ರಹಿಸಲಿಚ್ಛಿಸುವವನಿಗೆ ಆವೇಶದ (ನನ್ನ ದೃಢನಿಶ್ಚಯಕ್ಕೆ ನಾನು ಬೇರೆ ಯಾವದೊಂದು ಹೆಸರನ್ನು ಕೊಡಲಾರೆನು) ಸಹಾಯದಿಂದ ಎಷ್ಟು ಮಟ್ಟಿಗೆ ಬಲವುಂಟಾಗುತ್ತದೆಂದು ತಿಳಿಯುವದು. ಕೆಂತಕೀ ಪ್ರಾಂತದೊಳಗೆ ಓಹಿಯೋ ಹೊಳೆಯ ದಡದಲ್ಲಿ ಹೆಂಡರಸನ್ನೆಂಬ ಹಳ್ಳಿಯಲ್ಲಿ ನಾನು ಬಹಳ ದಿವಸ ವಾಸಿಸಿದನಂತರ ಒಂದು ಕೆಲಸದ ನಿಮಿತ್ತವಾಗಿ ಫಿಲಾಡೆಲ್ಫಿಯ ಪಟ್ಟಣಕ್ಕೆ ಹೊರಟೆನು. ನಾನು ಹೊರಡುವ ಪೂರ್ವದಲ್ಲಿಯೇ ನನ್ನ ಚಿತ್ರಗಳನ್ನೆಲ್ಲ ನೋಡಿಕೊಂಡು, ಒಂದು ಕಟ್ಟಿಗೆಯ

ಪೆಟ್ಟಿಗೆಯೊಳಗೆ ಚೆಂನಾಗಿ ಇಟ್ಟು ನನ್ನ ಪ್ರೊಟ್ಟಿ ಅಪ್ಪನ
ಕೈಯಲ್ಲಿ ಅದಕ್ಕೆ ಯೇನು ನೋಯಬಾರದ ಹಾಗೆ ಜಾಗ್ರ
ತೆಯಿಂದ ಕಾಯ್ದುಕೋ ಯೆಂದು ಹೇಳಿಕೊಟ್ಟು ಹೋ
ದೆನು. ಮುಂದೆ ಕೆಲವು ತಿಂಗಳುಗಳ ವರೆಗೆ ನಾನು ತಿ
ರುಗಿ ಬರಲಿಲ್ಲ; ಬಂದಮೇಲೆ ಪ್ರಪಂಚ ಸುಖದಲ್ಲಿ ಕೆಲ
ದಿವಸಗಳನ್ನು ಕಳೆದನಂತರ ನನ್ನ ಪೆಟ್ಟಿಗೆಯ ಬಗ್ಗೆ ಶೋ
ಧ ಮಾಡಿದೆನು; ಅದಕ್ಕೆ ನಾನು ಪ್ರೀತಿಯಿಂದ ನನ್ನ ಸಂಪ
ತ್ತಿಯೆಂದೆನ್ನುತ್ತಿದ್ದೆನು. ಅದನ್ನು ತಂದು ಸಂಭ್ರಮದಿಂ
ದ ನನ್ನ ಮುಂದಿಟ್ಟುಕೊಂಡು ತೆರೆದೆನು; ಆದರೆ ಅದರೊ
ಳಗೆ ಯೆರಡು ಇಲಿಗಳು ಮನೆ ಮಾಡಿಕೊಂಡು ಕಾಗದಗ
ಳನ್ನೆಲ್ಲ ತುಂಡು ತುಂಡಾಗಿ ಕತ್ತರಿಸಿ, ಆ ತುಂಡುಗಳ
ರಾಶಿಯಲ್ಲಿ ತಮ್ಮ ಮರಿಗಳನ್ನಿಟ್ಟುಕೊಂಡು ಸುಖದಿಂದ
ಇದ್ದದ್ದನ್ನು ನೋಡಿ, ನನ್ನ ಮನಸಿನ ಸ್ಥಿತಿಯು ಹ್ಯಾ
ಗಾಗಿದ್ದೀತೆಂಬುದನ್ನು ಕುರಿತು ಓದುವವರೇ ತರ್ಕಿಸಲಿ!
ಆ ಕಾಗದಗಳಲ್ಲೆಲ್ಲ ಕೂಡಿ ಸುಮಾರು ಒಂದು ಸಾವಿರ ಪ
ಕ್ಷಿಗಳ ಚಿತ್ರಗಳಿದ್ದವು. ಈ ಕೇಡನ್ನು ನೋಡಿದಕ್ಷ
ಣವೇ ನನ್ನ ತಲೆಗೇರಿದ ಬೆಂಕಿಯು ಅಸಹ್ಯವಾಗಿ ಮೈ
ಯೊಳಗಿನ ಜ್ಞಾನತಂತುಗಳಿಗೆಲ್ಲ ನೋವುಂಟಾಯಿತು.
ಮುಂದೆ ಯೆಷ್ಟೋ ದಿವಸಗಳ ವರೆಗೆ ಹಗಲು ರಾತ್ರಿಗಳಲ
ಲ್ಲಿ ಏಕಪ್ರಕಾರವೇ ಕತ್ತಲಿದ್ದಂತೆ ನನಗೆ ಭ್ರಾಂತಿಯುಂ
ಟಾಗಿ ನಿದ್ರೆಯಲ್ಲಿಯೇ ಕಾಲ ಕಳೆದೆನು. ಆದರೆ ಕಡೆ
ಯಲ್ಲಿ ಶರೀರ ಸಾಮರ್ಥ್ಯದ ಸಹಾಯದಿಂದ ಚೇತನಾಶಕ್ತಿ
ಯು ಜಾಗ್ರತವಾಗಿ, ಯೇನು ಆಗೇ ಯಿಲ್ಲೆಂಬ ಹಾಗೆ
ಚಕ್ಕಂದದಿಂದ ನನ್ನ ತುಬಾಕಿಯನ್ನು ಹೆಗಲ ಮೇಲೆ ಚ

ಲ್ಲಿ ಕೊಂಡು, ಟಿಪ್ಪಣಿಯ ವಹಿಯನ್ನು, ಪೆನ್ಸಿಲ್ಲುಗಳನ್ನು ತೆಗೆದುಕೊಂಡು ಅಡವಿಗೆ ಪುನಃ ನಡೆದನು. ಇನ್ನು ಮೇಲೆ ಮೊದಲಿಗಿಂತ ಮೇಲಾದ ಚಿತ್ರಗಳನ್ನು ಕೊರೆಯುವೆನೆಂದು ನೋಡಿ ನಾನು ಸಂತೋಷಪಟ್ಟೆನು. ಮುಂದೆ ಮೂರು ವರ್ಷಗಳು ತುಂಬುವದರೊಳಗೇ ನನ್ನ ಪೆಟ್ಟಿಗೆಯು ಮೊದಲಿನಂತೆ ಚಿತ್ರಗಳಿಂದ ತುಂಬಿ ಹೋಯಿತು.

ಸರ್ ಇಝಾಕನ್ಯೂಟನ್ನನ ಕಾಗದಗಳು ಅಪಘಾತದಿಂದ ನಾಶಪಟ್ಟ ಸಂಗತಿಯು ಯೆಲ್ಲರಿಗೂ ಗೊತ್ತಾದದ್ದೇ ಸರಿ. ಅವನ ಡಾಯಮಂಡನೆಂಬ ಚಿಕ್ಕ ನಾಯಿಯು ಒಂದು ದಿವಸ ಅವನ ಟೇಬಲಿನ ಮೇಲೆ ಹಚ್ಚಿಟ್ಟ ದೀಪವನ್ನು ಕೆಡಹಿದರಿಂದ ಅವನು ಬಹಳ ವರ್ಷಗಳಿಂದ ಶ್ರಮಪಟ್ಟು ಬರೆದಿಟ್ಟ ಕಾಗದಗಳೆಲ್ಲ ಕ್ಷಣದೊಳಗೆ ಸುಟ್ಟು ಹೋದವು. ಈ ಕೇಡಿನಿಂದ ಆ ತತ್ವಜ್ಞಾನಿಗೆ ಬಹು ದುಃಖವುಂಟಾಗಿ, ಶರೀರ ಪ್ರಕೃತಿಯು ತ್ರಾಣಗುಂದಿ, ಅವನ ತಿಳುವಳಿಕೆಗೆ ಸಹ ಮೋಸ ಬಂತೆಂದು ಹೇಳುತ್ತಾರೆ. ಕೆಲಮಟ್ಟಿಗೆ ಇದೇ ವಿಧದ ಅಪಘಾತವು ಕಾರ್ಲಾಯಿಲ್ಲನೆಂಬವನು ರಚಿಸಿದ 'ಫ್ರಾನ್ಸದೇಶದ ರಾಜ್ಯಕ್ರಾಂತಿ' ಯೆಂಬ ಪುಸ್ತಕದ ಮೊದಲನೇ ಭಾಗಕ್ಕೆ ಆಯಿತು. ಅವನು ತಾನು ಬರೆದ ಪುಸ್ತಕವನ್ನು ಒಬ್ಬ ಅಕ್ಷರಸ್ಥನಾದ ನೆರೆಯವನಿಗೆ ಓದಲಿಕ್ಕೆ ಕೊಟ್ಟಿದ್ದನು. ಅವನು ಅದನ್ನು ತನ್ನ ಮನೆಯಲ್ಲಿ ನೆಲದ ಮೇಲೆ ದುರ್ಲಕ್ಷ್ಯದಿಂದ ಚಲ್ಲಿ, ಕೆಲವು ವಾರಗಳವರೆಗೆ ಅಲ್ಲಿಯೇ ಮರೆತು ಬಿಟ್ಟನು. ಮುಂದೆ ಆ ಪುಸ್ತಕವನ್ನು ಛಾಪಿಸುವವರು ಮೂಲ ಪ್ರತಿಯ ಸಲುವಾಗಿ ಬಹಳ ವೊತ್ತರ ಮಾಡಿದರಿಂದ ಗ್ರಂಥಕರ್ತನು

ಆ ಪುಸ್ತಕವನ್ನು ಬೇಡ ಕಳುಹಿಸಿದನು. ಆಗ ಅದನ್ನು ಹುಡುಕಲಾಗಿ, ಆ ನೆರೆಯವನ ಮನೆಯ ಒಕ್ಕಲಗಿತ್ತಿಯು, ಅದು ನೆಲದ ಮೇಲೆ ಬಿದ್ದುದ್ದನ್ನು ನೋಡಿ ಖರಡುಗಳ ಸುರುಳಿಯೊಂದೆಣಿಸಿ, ಅಡಿಗೆಯ ಮನೆಯ ಒಲೆಯ ಹೊತ್ತಿಸುವದಕ್ಕೋಸ್ಕರ ಅದನ್ನು ಹರಿದು ಸುಟ್ಟುಬಿಟ್ಟಿದ್ದಳೆಂದು ಗೊತ್ತು ಹತ್ತಿತು. ಇದೇ ವೇಳೆಗೆ ಅವನು ಕಾರ್ಲ್ಯಯಿಲ್ಲನಿಗೆ ಉತ್ತರ ಹೇಳಿಕಳುಹಿಸಿದನು. ಆಗಲವನ ಮನಸಿಗೆ ಯೆಷ್ಟು ಖೇದವಾಗಿದ್ದೀತೆಂಬದನ್ನು ತಿಳುಕೊಳ್ಳಬಹುದು. ಆದರೆ ಪುನಃ ಸ್ಥಿರ ಮನಸಿನಿಂದ ಕೂತುಕೊಂಡು ಅದೇ ಪುಸ್ತಕವನ್ನು ಮತ್ತೆ ಬರೆಯುವದರ ಹೊರ್ತು ಬೇರೆ ಯೇನು ಉಪಾಯವೇ ಉಳಿಯಲಿಲ್ಲ. ಅವನ ಹತ್ತಿರ ಮೊದಲಿಗೆ ಮಾಡಿದ ಮಸೂದೆಯ ಪ್ರತಿಯು ಸಹ ಇದ್ದಿಲ್ಲ. ಆದದರಿಂದ ಬಹು ದಿವಸಗಳ ಹಿಂದೆ ತಾನು ಮರೆತುಬಿಟ್ಟ ಸಂಗತಿಗಳನ್ನೂ, ವಿಚಾರಗಳನ್ನೂ, ಶಬ್ದರಚನೆಗಳನ್ನೂ ಪುನಃ ಕೈಲಾದ ಮಟ್ಟಿಗೆ ನೆನಪು ಮಾಡಿಕೊಂಡು ಬರೆಯಬೇಕಾಯಿತು. ಮೊದಲು ಅದನ್ನು ಬರೆದಾಗ ಅವನು ಪ್ರೀತಿಯಿಂದ ಕೆಲಸ ಮಾಡಿದ್ದನು. ಆದರೆ ಅದನ್ನು ಈಗ ಯೆರಡನೆ ಸಾರೆ ರಚಿಸಬೇಕಾದರೆ ಅವನು ಯೆಷ್ಟು ಕಷ್ಟ ಪಟ್ಟು, ಬೆಸತ್ತು ದಣಿದು ಹೋದನೆಂಬದನ್ನು ವರ್ಣಿಸಿದರೆ, ಅದನ್ನು ಯಾರು ನಂಬಲಿಕ್ಕಿಲ್ಲ; ಆದರೂ ಇದನ್ನೆಲ್ಲ ಸಹಿಸಿಕೊಂಡು ಅವನು ದೃಢನಿಶ್ಚಯದಿಂದ ಆ ಪುಸ್ತಕವನ್ನು ಕಡೆವರೆಗೆ ಬರೆದು ಮುಗಿಸಿದನು. ಮನಸಿನಲ್ಲಿ ಹಿಡಿದ ಉದ್ದೇಶವನ್ನು ಕಡೆಗಾಣಿಸುವ ನಿಶ್ಚಯವು ಹ್ಯಾಗಿರುತ್ತದೆಂಬದಕ್ಕೆ ಈ ಸಂಗತಿಯು

ಕ್ಕೆ ಉದಾಹರಣೆಯಾಗಿರುತ್ತದೆ; ಇದಕ್ಕಿಂತ ಹೆಚ್ಚಿನ ಉ
ಾಹರಣೆಯು ಸಿಕ್ಕುವದು ಅಪರೂಪ.

ಹೆಸರಾದ ಶೋಧಕರ ವೃತ್ತಾಂತಗಳಿಂದ ಸಹ ದೃಢನಿ
ಯವೆಂಬ ಗುಣದ ಬೆಲೆಯು ಬಹು ಸರಸಾಗಿ ತಿಳಿಯು
ತ್ತದೆ. ಜಾರ್ಜ್ ಸ್ಟೀಫನ್ಸನ್ನನೆಂಬವನು ಪ್ರಾಯದವರಾದ
ತನ್ನ ವಿದ್ಯಾರ್ಥಿಗಳಿಗೆ ಬೋಧಿಸುವಾಗ ತನ್ನ ಉಪದೇಶವ
ನ್ನೆಲ್ಲ ಸ್ವಲ್ಪ ಶಬ್ದಗಳೊಳಗೇ ಮುಗಿಸಿ ಬಿಡುತ್ತಿದ್ದನು.
ಅದು ಹ್ಯಾಗೆಂದರೆ, „ನಾನು ಮಾಡಿದ ಹಾಗೆ ನೀವು ಮಾಡಿ
ರಿ. ದೃಢನಿಶ್ಚಯವನ್ನು ಹಿಡಿಯಿರಿ.” ಅವನು ತನ್ನ ಉಗಿ
ಬಂಡಿಯನ್ನು ಸುಧಾರಿಸುವ ಕೆಲಸದಲ್ಲಿ ಸುಮಾರು ಹದಿ
ನೈದು ವರ್ಷಗಳ ವರೆಗೆ ಶ್ರಮ ಪಟ್ಟು, ಕಡೆಯಲ್ಲಿ ರೇ
ನಹಿಲ್ಲ ಯೆಂಬ ಗ್ರಾಮದಲ್ಲಿ ಅದನ್ನು ಸಿದ್ಧಿಗೆ ಪ್ರೊಯಿದ
ನು. ಇದೇ ಮೇರೆಗೆ ವಾಟ್ಟನು ತನ್ನ ಯಂತ್ರದ ಕೆಲ
ಸದಲ್ಲಿ ಮೂವತ್ತು ವರ್ಷ ಕಷ್ಟಪಟ್ಟು ಅದನ್ನು ಕಡೆಗಾ
ಣಿಸಿದನು. ಆದರೆ ಶಾಸ್ತ್ರ, ಕಲಾ, ಉದ್ಯೋಗಗಳ ಹಲ
ವಿಧದ ಕೆಲಸಗಳಲ್ಲಿ ಇದೇ ಮೇರೆಗೆ ಒಡೆದು ಕಾಣಿಸುವ
ದೃಢನಿಶ್ಚಯದ ಉದಾಹರಣೆಗಳು ಸಿಕ್ಕುವವು. ನಿನವೇ
ಯೆಂಬ ಹಾಳು ಪಟ್ಟಣದ ಬಿಳೇ ಕಲ್ಲುಗಳನ್ನು ಅಗೆದು
ಅವುಗಳ ಮೇಲೆ ಕೊರೆದ ಲಿಪಿಯನ್ನು ಗೊತ್ತು ಹಚ್ಚಿದ
ಸಂಗತಿಯು ಅತಿ ಕೌತುಕವಾದದ್ದೆಂದು ಹೇಳಬಹುದು.
ಈ ಲಿಪಿಯು ಬಾಣಗಳ ಕೊನೆಯಂತೆ ಆಕಾರವುಳ್ಳದ್ದಿ
ದ್ದು, ಬಹು ಕಾಲದಿಂದ, ಅಂದರೆ ಮಾಸಿಡೋನಿಯಾದ ಅರ
ಸನಾದ ಸಿಕಂದರಪಾದಶಾಹನು ಪಾರ್ಸಿಸ್ತಾನವನ್ನು ಜಯಿಸಿ
ದಂದಿನಿಂದ ನಷ್ಟವಾಗಿತ್ತು.

—000—

Champu Ramayan and Champu Bharata with Commentaries in Canarese by Mr. Shantaviraya.

॥ಚಂಪೂರಾಮಾಯಣೆಸವ್ಯಾಖ್ಯಾನೆಬಾಲಕಾಂಡಃ॥

॥ಗದ್ಯ॥

ಇತಿಪ್ರಣಮ್ಯೋತ್ಥಿತಾನೇತಾನ್ ಸ್ತುತಿರವಮುಖರಿತಹರಿನ್ಮುಖಾನ್ ಹರಿಹಯಪ್ರಮುಖಾನಖಿಲಾನಮರಾನರುಣಾರುಣತಾಮರಸವಿಲಾಸಚೋರೈಃ ಲೋಚನಮರೀಚಿಸಂತಾನೈರಾನಂದಯನ್ ಭಗವಾನರವಿಂದಲೋಚನಃ ಸ್ಫುಟಮಭಾಷತ॥೨೬॥

॥ಅನ್ವಯ॥

ಇತಿ=ಹೀಂಗೆಂದು। ಪ್ರಣಮ್ಯ=ನಮಸ್ಕರಿಸಿ। ಉತ್ಥಿತಾನ್= ಏಳಲ್ಪಟ್ಟಂಥ। ಸ್ತುತಿರವಮುಖರಿತಹರಿನ್ಮುಖಾನ್ ಸ್ತುತಿರವ=ಸ್ತೋತ್ರಧ್ವನಿಗಳಿಂದ, ಮುಖರಿತ=ಪ್ರತಿಧ್ವನಿಗೊಳಲ್ಪಟ್ಟ, ಹರಿತ್ ಮುಖಾನ್=ದಿಕ್ಮುಖಗಳುಳ್ಳಂಥ ಹರಿಹಯಪ್ರಮುಖಾನ್ = ಇಂದ್ರಮುಖ್ಯನಾದಂಥ। ಅಖಿಲಾನ್=ಸಮಸ್ತರಾದಂಥ। ಅಮರಾನ್=ಸುರರನ್ನು। ಅರುಣಾರುಣತಾಮರಸವಿಲಾಸಚೋರೈಃ, ಅರುಣ ಅರುಣ=ಅತ್ಯಂತಲೋಹಿತವಾದ, ತಾಮರಸ=ಕಮಲದ, ವಿಲಾಸವನ್ನು। ಚೋರೈಃ=ಕದ್ದಂಥ। ಲೋಚನಮರೀಚಿಸಂತಾನೈಃ, ಲೋಚನ=ನೇತ್ರಗಳ, ಮರೀಚಿ=ಪ್ರಭೆಗಳ, ಸಂತಾನೈಃ= ಸಮೂಹಗಳಿಂದ। ಆನಂದಯನ್=ಸಂತೋಷಿಸುವಂಥ। ಭಗವಾನ್=ಜ್ಞಾನಮೊದಲಾದಐಶ್ವರ್ಯಗಳುಳ್ಳಂಥ। ಅರವಿಂದಲೋಚನಃ=ಕಮಲಾಕ್ಷನಾದ ನಾರಾಯಣನು। ಸ್ಫುಟಂ=ಸ್ಪಷ್ಟವಾಗಿ। ಅಭಾಷತ=ನುಡಿದನು.

||ಶಾಸ್ತ್ರವಿಷಯಃ||

ಕಣ್ಣುಗಳ ಸ್ಥಾನ ತಾರತಮ್ಯದಲ್ಲಿ ಕೆಂಪು ಇದ್ದದರಿಂದ
ರಾಯಣನು ಶ್ರೀಯುಕ್ತನಾದನು ಎಂಬುವದಕ್ಕೆ ನಾರದ
ುನಿಯು ಹೇಳಿದ,

ಸಾಮುದ್ರಿಕೆ||ಪಾಣಿಪಾದತಳೇ ರಕ್ತೇ|
ನೇತ್ರಾಂತೇ ಚ ನಖಾಸ್ತಥಾ||
ತಾಲುಜಿಹ್ವಾಧರೋಷ್ಠಾಶ್ಚ|
ಸಪ್ತರಕ್ತಸ್ಸುಖೀಭವೇತ್||೨೦||

ಪ್ರಣಮ್ಯ=(ಪ್ರ + ನಮ್ + ಯ) * ಅಟ್ ಕುಪ್ವಾಙ್ ನು
ಮ್ ವ್ಯವಾಯೇಽಪಿ|೮|೪|೨| * ರಷಾಭ್ಯಾಂ ನೋ ಣಃ ಸಮಾನ
ಪದೇ|೮|೪|೧|ಈ ಪಾಣಿನಿಯ ಸೂತ್ರಗಳಿಂದ ರೇಫದ ಮುಂ
ದಿನ ನಕಾರಕ್ಕೆ ಣಕಾರವಾಯಿತು—

ಆನಂದಯನ್=(ಆ + ನಂದ್ + ಅಯ್ + ಅನ್) ಆ ಎಂಬು
ದು ಉಪಸರ್ಗ. ನದಿ ಎಂಬುದು ೧ನೇ ಗಣದ ಧಾತು(ಪ)
ಇದಿತೋ ನುಮ್ ಧಾತೋಃ|೭|೧|೫೮|ಈ ಸೂತ್ರದಿಂದ ದ್
ಕಾರದೊಳಗಿನ ಇಕಾರ ಹೋಗಿ ನ್ ಆಗಮವು ಬಂದು ನಂ
ದ್ ಆಯಿತು, ಅಯ್ ಎಂಬುದು ಇ+ಅ=ಅಯ್ ಇದು,
ಗುಣಭೇದ. ಅನ್ ಎಂಬುದು ವರ್ತಮಾನ ಕೃದ್ವಾಚಿ
ಯಾದ ಪುಲ್ಲಿಂಗದಲ್ಲಿ ಶತೃ ಪ್ರತ್ಯಯವಾಗಿ ವಿಶೇಷ
ಣವಾಯಿತು.

ಅಭಾಷತ=(ಅ + ಭಾಷ್ + ಅ + ತ) ಅ ಎಂಬುದು * ಲ
ುಙ್ ಲಙ್ ಲೃಙ್ಕ್ಷ್ವಡುದಾತ್ತಃ|೬|೪|೭೧|ಈ ಸೂತ್ರದಿಂದ
ಅಗಮವು ಬಂದುದು, ಭಾಷ್ ಎಂಬುದು ೧ನೇ ಗಣದ ಧಾ
ತು, ಅ ಎಂಬುದು * ಕರ್ತರಿ ಶಪ್|೩|೧|೬೮|ಈ ಸೂತ್ರದಿಂ

ಪ ವಿಕರಣವಾಯ್ತು, ತ ಎಂಬುದು ಆತ್ಮನೆ ಪದ, ಲಙ್
ಕಾರ, ಪ್ರಥಮಪುರುಷ, ಏಕವಚನ, *ಅನದ್ಯತನೆ ಲಙ್
।೩।೨।೧೧೧।ಈ ಸೂತ್ರದಿಂದ ಇಂದ ಅಲ್ಲ ಎಂಬ ಭೂತ
ಕಾಲ. *ಪರೋಕ್ಷೇ ಚ ಲೋಕವಿಜ್ಞಾತೇ ಪ್ರಯೋಕ್ತುರ್ದರ್ಶನವಿ
ಷಯೇ, ಹೀಂಗೆಂಬ ಕಾತ್ಯಾಯನ ಮುನಿಯ ಮತವನ್ನು
ಪತಂಜಲಿಯು ಮಹಾ ಭಾಷ್ಯದಲ್ಲ್ಯದರು ಪರೋಕ್ಷ
ಭೂತಕಾಲದಲ್ಲಿಯೂ.

॥ಕರ್ಣಾಟಕ ಭಾವಾರ್ಥ॥

ನಮಸ್ಕರಿಸಿ ಎದ್ದಂಥ, ದಿಕ್ಕುಗಳಲ್ಲಿ ಪ್ರತಿಧ್ವನಿಗೊ
ಡುವ ಸ್ತೋತ್ರಧ್ವನಿಯುಳ್ಳಂಥ ಇಂದ್ರ ಮೊದಲಾದ ದೇ
ವತೆಗಳನ್ನು ಕಮಲದ ಅಂದ ಚಂದಗಳ ಅಪಹರಿಸಿದ ಕ
ಣ್ಗಳಿಂದ ನೋಡಿ ಸಂತೋಷಿಸುವ ನಾರಾಯಣನು ಸ್ಪಷ್ಟ
ವಾಗಿ ಮಾತಾಡಿದನು.

॥ಸಂಸ್ಕೃತ ಭಾವಾರ್ಥ॥

ಇತಿ ಸಾಷ್ಟಾಂಗಪ್ರಣಾಮಂ ಕೃತ್ವಾ ಉತ್ಥಾನಂ ಪ್ರಾಪ್ತಾ
ನ್ ಸ್ತೋತ್ರಧ್ವನಿಭಿಃ ಪ್ರತಿಧ್ವನಿವಶಾತ್ ಮುಖರಿತ ದಿಕ್
ಮುಖಾನ್ ಇಂದ್ರಾದಿಸುರಾನ್ ಕಮಲಸ್ಯ ಲೋಹಿತಾದಿ
ಶೋಭಾಪಹೃತ ನೇತ್ರಾಭ್ಯಾಂ ದೃಷ್ಟ್ವಾ ಸಂತೋಷಿತಶ್ರೀ
ನಾರಾಯಣಃ ಅಪ್ರೋಚತ್.

ಶಾಂತವೀರ ರಾಚದೇವ ಕಿತ್ತೂರ ಟ್ರೇನಿಂಗಕಾಲೇಜ.

NOTICES.

ನೋಟೀಸುಗಳು.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತ

ರರಿಗೆ ತಿಳಿಯಪಡಿಸುವದೇನಂದರೆ—ವಿಜಾಪೂರ ತಾಲೂಕ ಪೈಕಿ ಕನ್ನೂರ ಮಾಜಿ ಮಾಸ್ತರ ಭೀಮಾಜಿ ತಮ್ಮಾಜಿ ಮಸೂತಿ ಇವನು ಬಗರ ಹುಕುಮಿನಿಂದ ಸಾಲಿ ಕೆಲಸ ಬಿಟ್ಟು ಊರಿಗೆ ಹೋಗಿದ್ದನು. ಹಾಗು ತಿರಿಗಿ ಹಾಜರಾದ ತಾರೀಖು ಸುಳ್ಳು ಬರೆದುತಿಳಿಸಿದನು, ಮತ್ತು ಮಾನೀಟರನು ಗೈರ ಹಾಜರ ಇದ್ದನೆಂದು ಸುಳ್ಳು ರಿಪೋರ್ಟ ಮಾಡಿದನು, ಮುಂತಾದ ಕಾರಣದಿಂದ ವೆ. ಎ. ಇನಸ್ಪೆಕಟರ ಸಾಹೇಬ ಬಹಾದ್ದೂರವರ ಮಂಜೂರಿಯಿಂದ ಅವನ ಜಾನೇವಾರಿ ೧೮೭೪, ವ ಫೆಬ್ರುವಾರಿ ೧೮೭೪, ಪೈಕಿ, ಸಂಬಳಾ ಸರಕಾರಕ್ಕೆ ಜಮಾ ಮಾಡಸಿರುತ್ತದೆ. ಇದರ ಹೊರ್ತು ಅವನು ಕಾಲೇಜದಲ್ಲಿ ಕಲಿತು ತಯಾರಾದನಂತರ ಕೆಲಸಾ ಕೊಡುವದಾದರೆ ಹೆಡ್‌ಮಾಸ್ತರ ಜಾಗೆ ಕೊಡದೆ ಅಶಿಷ್ಟಂಟ ಜಾಗೆ ಕೊಡತಕ್ಕದ್ದೆಂದು ಸದರ ಸಾಹೇಬರವರು ಠರಾವ ಮಾಡಿರುತ್ತಾರೆ. ಈ ಮುಜಕೂರ ಯಾವತ್ತು ಮಾಸ್ತರರು ತಿಳಕೊಂಡು ಜಾಗ್ರತೆಯಿಂದ ನಡದು ಕೊಳ್ಳಬೇಕು ತಿಳಿಯುವದು. ತಾರೀಖು ೧೯ ಸಪಟಂಬರ ೧೮೭೪ ಇ.

Ramchander A. Sawunoor.

ಡಿ. ಎ. ಇ. ಜಿಲ್ಹಾ ಕಲಾದಗಿ.

ಬೆಳಗಾಂವ ಜಿಲ್ಹೇದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ಬೆಳಗಾಂವ ಜಿಲ್ಹೇದ ಡಿ. ಎ. ಇನಸ್ಪೆಕ್ಟರರಕಡಿಂದ ತಿಳಿಯಪಡಿಸುವದೇನಂದರೆ— ಮಾಸ್ತರ ಜನರು ಈಗ ಕ

ಳುಹಿಸುತ್ತಿರುವ ದರಮಾಹೀಪತ್ರಿಕೆಯಲ್ಲಿ ಸಾದೀಲವಾರದ ಹಣದ ಜಮಾಖರ್ಚಿನ ವಿವರ ತೋರಿಸುವದಿಲ್ಲಾದಕಾರಣ ಲೆಕ್ಕಕ್ಕೆ ತೊಂದರೆ ಬರುತ್ತದೆ ಇದರದೆಸೆಯಿಂದ ಇಂನು ಮೇಲೆ ಯಾವತ್ತು ಮಾಸ್ತರರು ದರಮಾಹೀಪತ್ರಿಕೆಯಲ್ಲಿ ಸಾದೀಲವಾರದ ಜಮಾಖರ್ಚಿನ ವಿವರವಂನು ಬರೆಯುತ್ತಾ ಇರಬೇಕು. ತಾರೀಖು ೧೫ನೇ ಸಪ್ಟೆಂಬರ ಸಂನ ೧೮೭೪ ಇಸ್ವಿ.

P. V. Chintamanpetkar

ಡಿ. ಎ. ಇ. ಜಿಲ್ಲಾ ಬೆಳಗಾಂವ.

ಬೆಳಗಾಂವ ಜಿಲ್ಹೇದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ಬೆಳಗಾಂವ ಜಿಲ್ಹೇದ ಡಿ. ಎ. ಇನಸ್ಪೆಕ್ಟರರಕಡಿಯಿಂದ ತಿಳಿಯಪಡಿಸುವದೇನಂದರೆ—ಗೋಕಾಕ ತಾಲೂಕ ಪೈಕಿ ಯಾದವಾಡ ಸಾಲಿಯ ಹೆಡ್‌ಮಾಸ್ತರರಾದ ಹಣಮಂತ ಮಾಳಬಾ, ಅಥಣೀ ತಾಲೂಕ ಪೈಕಿ ಬೇಡಗ ಸಾಲಿಯ ಹೆಡ್ಡಮಾಸ್ತರರಾದ ಗೋಪಾಳ ರಾಮಚಂದ್ರ ಮತ್ತು ಹೂಲೀ (ತಾಲೂಕ ಪರಸಗಡ) ಮಾಸ್ತರರಾದ ರಾಘವೇಂದ್ರ ಅಪ್ಪಾಜಿ ದಿವೇಕರ ಇವರು ರಜಾದ ಮಂಜೂರಿ ಹುಕುಮು ಪಡಕೊಳ್ಳದೆ ತಂಮ ಊರಿಗೆ ಹೋದದ್ದರಿಂದ ಸದರಿಯವರ ವಿಷಯವಾಗಿ ಡಿ. ಎ. ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ಕಡೆಗೆ ಬರಿಯಲಾಗಿ ಆ ಮೆಹೆರ್ಬಾನರವರು ಸದರೀ ಮೂವ್ವರು ಜನ ಮಾಸ್ತರರಿಗೆ ಇದೊಂದಾವರ್ತಿ ಕ್ಷಮಾ ಮಾಡಿ ಪುನಃ ಹೀಗೆ ಮಾಡಿ

ದರೆ ಸದರಿಯವರಿಗೆ ಏಕದಮ್ಮ ಈ ಖಾತೇದಿಂದ ತೆಗಿಯೋಣಾದೀತೆಂದು ತಿಳಿಹಿಸುವ ಬಗ್ಗೆ ಬರೆದಿದ್ಧಾರೆ ಆದಕಾರಣಾ ಯಾವತ್ತು ಮಾಸ್ತರರು ಇದರ ಕಡೆಗೆ ಚನ್ನಾಗಿ ಲಕ್ಷ ಕೊಟ್ಟು ಯೋಗ್ಯ ರೀತಿಯಿಂದಾ ನಡಿಯಬೇಕೆಂತಾ ಅಪೇಕ್ಷಿಸುತ್ತೇವೆ. ತಾರೀಖು ೧೫ನೇ ಸಪ್ಟೆಂಬರ ಸನ್ ೧೮೭೪ ಇಸವಿ.

P. V. Chintamanpetkar.

ಡಿ. ಎ. ಇ. ಜಿಲ್ಲಾ ಬೆಳಗಾಂವ

ಬೆಳಗಾಂವ ಜಿಲ್ಹೇದೊಳಗೆ ಸಂನ ೧೮೭೪ ಇಸವಿ ಅಗಸ್ಟ ತಿಂಗಳಲ್ಲಿ ಆದ ನೇಮಣೂಕು ಮುಂತಾದವುಗಳು.

೧ **ಬಡಸ**—ಈ ಹೊಸ ಸಾಲಿಯ ಹೆಡ್‌ಮಾಸ್ತರ ಕೆಲಸಕ್ಕೆ ಮೋದಗೆ ಸಾಲಿಯ ೧ನೇ ಅಶಿಷ್ಟಂಟರಾದ ರಾಮಚಂದ್ರ ಗುಂಡೋ ಬಂಬುಳವಾಡ ಇವರನ್ನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೦

೨ ಮುತ್ನಾಳ ಬ್ರೆಂಚ—(ಹೊಸ ಸಾಲಿ) ಇಲ್ಲಿಯ ಹೆಡ್ಡಮಾಸ್ತರ ಕೆಲಸಕ್ಕೆ ಮೋದಗೆ ಸಾಲಿಯ ೨ನೇ ಅಶಿಷ್ಟಂಟರಾದ ರಾಮಚಂದ್ರ ದೇವರಾಯಾಚಾರ್ಯ ಇವರಂನು ನೇಮಿಸಿರುತ್ತದೆ ಸಂಬಳ ರೂಪಾಯಿ ೮

೩ ಗಳತಗೆ—(ಹೊಸ ಸಾಲಿ) ಈ ಜಾಗಾದಮೇಲೆ ಕಿತ್ತೂರ ೧ನೇ ನಂಬರದ ಸಾಲಿಯ ೧ನೇ ಅಶಿಷ್ಟಂಟರಾದ ವೀರಪ್ಪಾ ಫಕೀರಪ್ಪಾ ತುಪ್ಪದ ಇವರಂನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೨

೪ ಇಂಗಳಗಿ—(ಹೊಸ ಸಾಲಿ) ಈ ಜಾಗಾದಮೇಲೆ ಧಮ್ಮಣಗೀ ಸಾಲಿಯ ಮಾಸ್ತರರಾದ ಹಣಮಂತ ಶಿದ್ರೋಜೀ ದೇಶಪಾಂಡೆ ಇವರಂನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೨

೫ ಧಮ್ಮಣಗೀ ಸಾಲಿಯ ಮಾಸ್ತರರ ಕೆಲಸಕ್ಕೆ ನಂದಗಡ ಸಾಲಿಯ ೧ನೇ ಅಶಿಷ್ಟಂಟರಾದ ಸಂಣೊ ಸುಬ್ಬಣ್ಣಾಚಾರ್ಯ ಇವರಂನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೨

೬ ಬಾಗೇವಾಡೀ ೧ನೇ ಅಶಿಷ್ಟಂಟ ಮಾಸ್ತರ ಕೆಲಸಕ್ಕೆ ಅದೇ ಸಾಲಿಯ ೨ನೇ ಅಶಿಷ್ಟಂಟನಂನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮

೭ ನೇರ್ಲಗಿ—(ಹೊಸ ಸಾಲಿ) ಈ ಜಾಗಾಕ್ಕೆ ಸದಲಗೀ ಸಾಲಿಯ ಮಾಸ್ತರರಾದ ಶಂಕರ ಕೃಷ್ಣ ಕುಲಕರ್ಣಿ ಇವರಂನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨

೮ ಸದಲಗೀ ಸಾಲಿಯ ಹೆಡ್ಡಮಾಸ್ತರಕ್ಕೆ ಅಲ್ಲಿಯ ನಾಜೀಮಾಸ್ತರರಾದ ಆಬಾಜಿ ಬಾಬೂರಾವ ವತಕಿ ಇವರಂನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨

೯ ಸಿದ್ಧಾಣೀ ಸಾಲಿಯ ೩ನೇ ಅಶಿಷ್ಟಂಟ ಮಾಸ್ತರ ಕೆಲಸಕ್ಕೆ ಯಮಕನಮರ್ಡೀ ಸಾಲಿಯ ೧ನೇ ಅಶಿಷ್ಟಂಟರಾದ ದೇವರಾವ ಭಾವು ಪಾಟೀಲ ಇವರಂನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮

೧೦ ಗೋಕಾವೀ ೧ನೇ ನಂಬರದ ಸಾಲಿಯ ಹೆಡ್ಡಮಾಸ್ತರರಾದ ದೇವಪ್ಪಾ ಛತ್ರಪ್ಪಾ ಇವರಂನು ಕಲಾದಗಿ ಜಿಲ್ಲೇದ ಇಂಡೀ ಸಾಲಿಯ ಹೆಡ್‌ಮಾಸ್ತರ ಕೆಲಸಕ್ಕೆ ವ

ರ್ಗವಾಗಿ ಅವರ ಜಾಗಕ್ಕೆ ಇಂಡೀ ಸಾಲಿಯು ಹೆಡ್ಡಮಾಸ್ತರರಾದ ಗಣೇಶರಾವಜಿ ತಿಗಡಿಕರ ಇವರನ್ನು ನೇಮಿಸುತ್ತದೆ. ಸಂಬಳ ರೂಪಾಯಿ ೪೦

೧೧ ಖವಟಕೊಪ್ಪ-(ಹೊಸ ಸಾಲಿ) ಈ ಜಾಗಕ್ಕೆ ನಿಪಾಣಿ ಸಾಲಿಯು ೨ನೇ ಅಶಿಸ್ಟಂಟರಾದ ರಾಮಚಂದ್ರ ಅಣ್ಣಾಜಿ ಕಕ್ಕಮರಿ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨

೧೨ ಕೇಡಬಾಳ ಸಾಲಿಯು ಹೆಡ್‌ಮಾಸ್ತರ ಕೆಲಸಕ್ಕೆ ಪಾರಶ್ವಾಡ ಸಾಲಿಯು ಮಾಸ್ತರರಾದ ವ್ಯಂಕಾಜಿ ಗೋವಿಂದ ಕಿತ್ತೂರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೭

೧೩ ನಂದಗಡ ಸಾಲಿಯು ೧ನೇ ಅಶಿಸ್ಟಂಟ ಕೆಲಸಕ್ಕೆ ಬಾಗೇವಾಡಿ ಸಾಲಿಯು ೧ನೇ ಅಶಿಸ್ಟಂಟರಾದ ಕೃಷ್ಣಾಜಿ ಬಾಳಾಜಿ ಕಿತ್ತೂರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೦

೧೪ ಪಾರಶ್ವಾಡ ಸಾಲಿಯು ಹೆಡ್‌ಮಾಸ್ತರ ಕೆಲಸಕ್ಕೆ ಬೀಡೀ ಸಾಲಿಯು ಹೆಡ್‌ಮಾಸ್ತರರಾದ ವಿಷ್ಣು ಲಕ್ಷ್ಮಣ ಕೇಳಕರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೫

೧೫ ಬೀಡೀ ಸಾಲಿಯು ಮಾಸ್ತರ ಕೆಲಸಕ್ಕೆ ಅಲ್ಲಿಯ ಮಾಜೀ ಮಾಸ್ತರರಾದ ಸಿವರಾಮ ಸುಬ್ಬಾಜಿ ಇವರನ್ನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೫.

೧೬ ಕಿತ್ತೂರ ೧ನೇ ಸಾಲಿಯು ೧ ನೇ ಅ. ಮಾಸ್ತರ ಕೆಲಸಕ್ಕೆ ಟ್ರೇಂಡರಾದ ಶಿವಯೋಗಪ್ಪಾ ಬಸಲಿಂಗಪ್ಪಾ ಇ

ವರನ್ನು ನೇಮಿಸಿರುತ್ತದೆ ಸಂಬಳ ರೂ. ೧೨.

೧೭ ಹೊಸೂರ(ಹೊಸ ಸಾಲಿ)ಇಲ್ಲಿಯ ಮಾಸ್ತರ ಕೆಲಸಕ್ಕೆ ಶೇಡಬಾಳ ಮಾಸ್ತರರಾದ ರಾಮಚಂದ್ರ ಅಂಣಾಜಿ ಕಿತ್ತೂರ ಇವರನ್ನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೨.

೧೮ ಸಂಪಗಾವೀ ತಾ. ಹೊಸೂರ (ಹೊಸಸಾಲಿ)ಇಲ್ಲಿಯ ಮಾಸ್ತರ ಕೆಲಸಕ್ಕೆ ಸಂಪಗಾವೀ ಸಾಲಿಯ ೨ ನೇ ಅ. ರಾದ ಮೋಲಗಿರಿ ಸಿದ್ಧಪ್ಪಾ ಇವರನ್ನು ನೇಮಿಸಿರುತ್ತದೆ ಸಂಬಳ ರೂಪಾಯಿ ೧೨.

೧೯ ಸಂಪಗಾವೀ ಸಾಲಿಯ ೨ ನೇ ಅ. ಮಾಸ್ತರ ಕೆಲಸಕ್ಕೆ ದಿವಾಕರ ಸದಾಸಿವ ಜೋಶಿ ಮಿಶ್ರಿಕೋಟಿಸಾಲಿಯ ೧ನೇ ಅ. ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨

೨೦ ಕಾಗವಾಡ ಸಾಲಿಯ ಮಾಸ್ತರರಾದ ಎಶವಂತ ಸಖಾರಾಮ ಇವರಿಗೆ ತಾ. ೮ ನೇ ಅಗಷ್ಟದಿಂದ ೧ ತಿಂಗಳದ ಸಂಬಳವಿಲ್ಲದ ರಜಾ ಕೊಟ್ಟಿರುತ್ತದೆ.

೨೧ ಮುನವಳ್ಳಿ ಸಾಲಿಯ ಹೆಡ್ಡಮಾಸ್ತರರಾದ ಶಂಕರ ಜೀವಾಜಿ ಚಿಟ್ಣೀಸ ಇವರಿಗೆ ತಾ. ೮ನೇ ಅಗಷ್ಟದಿಂದ ೧ ತಿಂಗಳದಹಕ್ಕಿನ ರಜಾ ಕೊಟ್ಟಿರುತ್ತದೆ.

೨೨ ಹಾರೂಬೀಡಿಹೊಂಗಲ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ತಿಗಡೀ ಸಾಲಿಯ ಮಾಸ್ತರರಾದ ತಾತ್ಯಾ ಕೃಷ್ಣ ಉಗಾರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೮.

೨೩ ತಿಗಡೀ ಸಾಲಿಯ ಮಾಸ್ತರ ಕೆಲಸಕ್ಕೆ ಹಾರ

ಬೈಲಹೊಂಗಲ ಸಾಲಿಯ ಹೆಡ್ಡ ಮಾಸ್ತರರಾದ ಡೊಂಗರಿ ವಲ್ಲದ ಬಾಬಾಸಾಹೇಬ ಇವರು ಕೆಲವು ತಪ್ಪುಗಳಂನು ಮಾಡಿದ್ದರಿಂದ ಅವರಂನು ಕಡಿಮಿ ಸಂಬಳದ ಮೇಲೆ ನೇಮಿಸಿರುತ್ತದೆ ಸಂಬಳ ರೂಪಾಯಿ ೩೫.

೨೪ ಬೆಳಗಾಂವೀ ಹಿಂದುಸ್ಥಾನೀ ಗಂಡು ಹುಡುಗರ ಸಾಲಿಯ ಹೆಡ್ಡಮಾಸ್ತರರಾದ ಗೌಸನೋಹದೀನ ವಲ್ಲದ ಗೋರಿ ಇವರು ತಮ್ಮ ಕೆಲಸದ ಮೇಲೆ ಚಂನಾಗಿ ಲಕ್ಷ ಇಡಲಿಲ್ಲಾದ ಕಾರಣ ಅವರಿಗೆ ೨ ರೂಪಾಯಿ ಸಂಬಳ ಕಡಿಮಿ ಮಾಡಿರುತ್ತದೆ.

P. V. Chintamanpetkar.

ಡಿಪುಟಿ ಇ. ಇ. ಜಿಲ್ಹಾ ಬೆಳಗಾಂವ

ಧಾರವಾಡ ಜಿಲ್ಹೆಯಲ್ಲಿ
ಆದ.

ನೇಮಣೂಕುಗಳು.

೧ ಮುಗದ– ಈ ಸಾಲಿಯನ್ನು ಹುಡುಗರ ಸಂಖ್ಯೆ ಕಡಿಮೆಯಾದದರಿಂದ ತೆಗೆದಿತ್ತು. ಅನಂತರ ಪುನಃ ಇದನ್ನು ಹಾಕಬೇಕೆಂದು ಗೊತ್ತಾದ ಕಾರಣ ಸದರೀ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ, ಫಕೀರಪ್ಪಾ ರಾಣಪ್ಪಾ ಅ. ಮಾಸ್ತರ ತೇಗೂರ ಇವರನ್ನು ನೇಮಿಸಿರುತ್ತದೆ–ಸಂಬಳ ರೂಪಾಯಿ ೮.

೨ ಶೆಲವಡಿ– ಈ ಸಾಲಿಯಲ್ಲಿ ಹೊಸದಾಗಿ ಆಗಿರುವ ೩ನೇ ಅ. ಜಾಗಾದ ಮೇಲೆ ಟ್ರೇಂಡ ವಿದ್ಯಾರ್ಥಿಯಾದ ಶೀವಾಜೀ ರಾಮಾಚಾರ್ಯ ಇವರನ್ನು ನೇಮಿಸಿರುತ್ತದೆ–

ಸಂಬಳ ರೂಪಾಯಿ ೧೨.

೩ ಅಮರಗೋಳ—ಇಲ್ಲಿಯು ಹೆಡ್ಡ ಮಾಸ್ತರ ಜಾಗಾದ ಮೇಲೆ ಧಾರವಾಡ ೩ ನೇ ನಂಬರದ ಸಾಲಿಯು ೧ ನೇ ಅ. ಸಾದ ಹಣಮಂತ್ರಸಿಂಗ ಭೀಮಸಿಂಗ ಇವರನ್ನು ನೇಮಿಸಿರುತ್ತದೆ- ಅವರ ಪಗಾರ ೧೦ ರೂಪಾಯಿ ಇದ್ದು ಸದರ ಪ್ರಾ ಜಾಗಾ ೧೨ ರೂಪಾಯಿದ್ದು ಇರುತ್ತದೆ.

೪ ಭದ್ರಾಪೂರ—(ಹೊಸಸಾಲಿ) ಈ ಸಾಲಿಯು ಹೆಡ್ಡ ಮಾಸ್ತರ ಜಾಗಾಕ್ಕೆ ರೋಣ ತಾ. ಬೆಳವಣಿಕೀ ಸಾಲಿಯ ಮಾಸ್ತರರಾದ ಷಣ್ಮುಖಯ್ಯಾ ಬಸಲಿಂಗಯ್ಯಾ ಇವರನ್ನು ನೇಮಿಸಿರುತ್ತದೆ. ಇವರಿಗೆ ಬೆಳವಣಿಕಿಯಲ್ಲಿ ೧೧ ರೂಪಾಯಿ ಸಿಗತಿದ್ದು ಭದ್ರಾಪೂರದ ಜಾಗಾ ೧೨ ರೂಪಾಯಿ ಇರುತ್ತದೆ.

೫ ಗದಗಬೆಟಗೇರಿ ನಾಯಿಟಸ್ಕೂಲ—(ಹೊಸಸಾಲಿ) ಈ ಸಾಲಿಯು ಮಾಸ್ತರ ಕೆಲಸಕ್ಕೆ ಅಂದಾನ್ಯೆಯ್ಯಾ ಅಂದಾನ್ಯೆಯ್ಯಾ ಇವರನ್ನು ನೇಮಿಸಿರುತ್ತದೆ—ಪಗಾರ ರೂಪಾಯಿ ೬.

೬ ಇಂಗಳಗಿ (ಹೊಸ ಸಾಲಿ) ಇಲ್ಲಿಯು ಸಾಲಿಯು ಹೆಡ್ಡ ಮಾಸ್ತರ ಜಾಗಾದ ಮೇಲೆ ಹುಬ್ಬಳ್ಳಿ ಕಂನಡ ಮರಾಠಿ ಸಾಲಿಯು ೧ ನೇ ಅ. ಸಾದ, ಕಾಶೀನಾಥ ಮಹಾದೂಸಾ ಇವರನ್ನು ನೇಮಿಸಿರುತ್ತದೆ—ಪಗಾರ ರೂಪಾಯಿ ೯.

೭ ಕಾರಡಗಿ (ಹೊಸ ಸಾಲಿ) ಇಲ್ಲಿಯು ಸಾಲಿಯು ಹೆಡ್ಡ ಮಾಸ್ತರ ಜಾಗಾದ ಮೇಲೆ ಗದಗ ಸಾಲಿಯು ಅ. ಮಾಸ್ತರರಾದ ನೀಲಕಂಠಯ್ಯಾ ಸಂಗಯ್ಯಾ ಇವರಂನು ನೇಮಿಸಿರುತ್ತದೆ—ಇವರಿಗೆ ಗದಗಿನಲ್ಲಿ ೯ ರೂ. ಸಿಗತಿದ್ದು ಕಾರ

ಜಗಿಗೆ ೧೨ ರೂಪಾಯಿದ ಮೇಲೆ ನೇಮಿಸಿರುತ್ತದೆ.

೮ ಹಿರೇಬೆಂಡೀಗೇರಿ (ಹೊಸ ಶಾಲಿ) ಇಲ್ಲಿಯ ಮಾಸ್ತರ ಜಾಗದ ಮೇಲೆ, ಹಾವೇರೀ ಶಾಲಿಯ ಅ. ಮಾಸ್ತರರಾದ ಬಸಪ್ಪಾ ತಮ್ಮಣ್ಣಪ್ಪಾ ಕಸೋಜ ಇವರನ್ನು ನೇಮಿಸಿರುತ್ತದೆ_ಪಗಾರ ರೂಪಾಯಿ ೧೧.

೯ ದುಂಡಸೀಗೆಲ್ರ (ಹೊಸ ಶಾಲಿ) ಈ ಶಾಲಿಯ ಹೆಡ್ಡ ಮಾಸ್ತರ ಜಾಗದ ಮೇಲೆ, ನಂದಯ್ಯಾ ಬಸಯ್ಯಾ ಸವಣೂರು ಇವರನ್ನು ನೇಮಿಸಿರುತ್ತದೆ–ಸಂಬಳ ರೂಪಾಯಿ ೧೦.

೧೦ ಹಾವೇರಿ–ಇಲ್ಲಿಯ ಶಾಲಿಯ ೧ನೇ ಅ. ಸಾದ ಜಗಂನಾಥ ಶ್ರೀಧರ ಗೋಖಲೇ ಇವರನ್ನು ಕೋಡ ತಾ. ಕಜವಿ ಶಾಲಿಯ ಹೆಡ್ಡ ಮಾಸ್ತರ ಕೆಲಸಕ್ಕೆ ನೇಮಿಸಿ, ಸದರೀ ಜಾಗದ ಮೇಲೆ, ಟ್ರೇನಿಂಗಕಾಲೇಜದ ವಿದ್ಯಾರ್ಥಿಯಾದ ಸುಬ್ಬಾಜೀ ಶಿವರಾಮ ಇವರನ್ನು ನೇಮಿಸಿರುತ್ತದೆ. ಸಂಬಳ (ಉಭಯತರದೂ) ರೂಪಾಯಿ ೧೫.

೧೧ ಹತ್ತಿಮತ್ತೂರ ಈ ಶಾಲಿಯನ್ನು ಪ್ರೆಂಚ ಸ್ಕೂಲ ಮಾಡಿದ್ದರಿಂದ, ಇಲ್ಲಿಯ ಮಾಸ್ತರರಾದ, ದತ್ತಾತ್ರೀ ಶ್ರೀಪಾದ ವಡಣಗಿಕರ ಇವರನ್ನು ಕೋಡತಾಲೂಕ ಚಿನ್ನಮುಳಗುಂದ ಶಾಲಿಯ ಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ. ಸಂಬಳ ರೂ. ೧೫ ಸದರೀ ಹತ್ತೀಮತ್ತೂರ ಶಾಲಿಯ ಮಾಸ್ತರ ಕೆಲಸಕ್ಕೆ ರಾಣೇಬೆನ್ನೂರ ತಾಲೂಕ ಮೋಟೇಬೆನ್ನೂರ ಶಾಲಿಯ ಅ. ಮಾಸ್ತರರಾದ ಫಕರೂ ಪಲ್ಲದ ಬೂಷಣ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮

೧೨ ಕನವಳ್ಳಿ (ತಾ. ಕಜೀಗಿ) ಇಲ್ಲಿಯ ಮಾಸ್ತರರಾದ ಮುದವೀರಯ್ಯಾ ಶೆಟ್ಟಿದೇವರಯ್ಯಾ ಇವರನ್ನು ರಾಣೀಬೆಂನೂರ ಗರ್ಲ್ಸಸ್ಕೂಲಿನ ಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ. ಪಗಾರ ರೂ. ೧೨ ಸದರೀ ಕನವಳ್ಳೀ ಸಾಲಿಯ ಮಾಸ್ತರ ಕೆಲಸಕ್ಕೆ ಕಲಘಟಗಿ ಸಾಲಿಯ ಅ. ಮಾಸ್ತರರಾದ, ಘೊಂಡೋ ನರಸಿಂಹ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೦

೧೩ ಹಾನಗಲ್ಲಗರ್ಲ (ಹೊಸಸಾಲಿ) ಇಲ್ಲಿಯ ಮಾಸ್ತರ ಜಾಗಾದ ಮೇಲೆ ಆಲೂರ ಸಾಲಿಯ ಅ. ಮಾಸ್ತರರಾದ ಮಹದೇವ ನಾರಾಯಣ ಜಮಖಂಡಿಕರ ಇವರನ್ನು ನೇಮಿರುಸಿರುತ್ತದೆ. ಪಗಾರ ರೂ. ೧೦.

೧೪ ಹಾನಗಲ್ಲಬ್ರ್ಯಾಂಚ (ಹೊಸಸಾಲಿ) ಇಲ್ಲಿಯ ಮಾಸ್ತರ ಕೆಲಸಕ್ಕೆ ಹಾನಗಲ್ಲಸಾಲಿಯ ಅ. ಮಾಸ್ತರರಾದ ಚಿದಂಬರ ಲಿಂಗೋ ಇವರನ್ನು ನೇಮಿಸಿರುತ್ತದೆ. ಪಗಾರ ರೂ. ೮

೧೫ ಸಮಸಗಿ (ಹೊಸ ಸಾಲಿ) ಈ ಸಾಲಿಯ ಹೆಡ್ಡ ಮಾಸ್ತರ ಜಾಗಾದ ಮೇಲೆ, ಶಿಗ್ಗಾಂವೀ ಸಾಲಿಯ ೧ ನೇ ಅ. ನಾದ ಕೃಷ್ಣಾಜೀ ವ್ಯೆಂಕಟೇಶ ಇವರನ್ನು ನೇಮಿಸಿರುತ್ತದೆ. ಪಗಾರ ರೂ. ೧೦ ಸದರೀ ಶಿಗ್ಗಾಂವೀ ಸಾಲಿಯ ಅ. ಜಾಗಾದ ಮೇಲೆ ಹುಬ್ಬಳ್ಳೀ ೨ ನೇ ನಂಬರದ ಸಾಲಿಯ ಅ. ಮಾಸ್ತರರಾದ ಶಿವನಗೌಡಾ ಇವರನ್ನು ನೇಮಿಸಿರುತ್ತದೆ. ಸಂಬಳ ರೂ. ೧೦

Chanbussappa B. Dharwar.

ಡೆಪ್ಯೂಟಿ ಇ. ಇ. ಜಿಲ್ಲಾ ಧಾರವಾಡ.

Correspondence.

ಪತ್ರವ್ಯವಹಾರವು.

ನಮಗೆ ಪತ್ರಗಳನ್ನು ಕಳುಹುವವರಿಗೆ ಸೂಚನೆ

ನಾವು ಹಿಂದಕ್ಕೊಮ್ಮೆ ಸೂಚನೆಯು ಕೊಟ್ಟದ್ದನ್ನು ಬಹು ಜನರು ಮರೆತ ಹಾಗೆ ಕಾಣುತ್ತದೆ. ಈಗ ಬರುವ ಪತ್ರಗಳಲ್ಲಿ ಮುಖ್ಯ ದೋಷಗಳೇನಂದರೆ—

೧ ಪತ್ರವನ್ನು ಆರಂಭಿಸುವ ಪದ್ಧತಿಯಲ್ಲಿ ನಿಯಮವೇನು ಇರುವದಿಲ್ಲ.

೨ ಪತ್ರ ಬರೆಯುವದರಲ್ಲಿ ಶುದ್ಧಾಶುದ್ಧಕ್ಕೆ ಚನ್ನಾಗಿ ಲಕ್ಷ ಕೊಡಲ್ಪಡುವದಿಲ್ಲ.

೩ ಕವಿತೆಗಳೂ, ಲೆಕ್ಖಗಳೂ ಹೊರ್ತಾಗಿ ಬೇರೆ ವಿಷಯಗಳು ಬಹುತರವಾಗಿ ಬರುವದಿಲ್ಲ; ಒಂದು ವೇಳೆ ಬಂದರೆ, ಅವು ಅಪ್ರಸಿದ್ಧ ಜನರನ್ನು ಮಿತಿ ಮೀರಿ ಹೊಗಳುವಂಥವೂ, ದ್ವೇಷವನ್ನು ಪ್ರಕಟಿಸುವಂಥವೂ ಇರುತ್ತವೆ.

ಆದದರಿಂದ ಎಷ್ಟೋ ಪತ್ರಗಳು ನಿಷ್ಫಲವಾಗಿ ಹೋಗುತ್ತವೆಂದು ನೋಡಿ ನಾವು ಖೇದ ಪಡುತ್ತೇವೆ. ತಮ್ಮ ಪತ್ರಗಳು ವ್ಯರ್ಥವಾಗಬಾರದೆಂಬ ಅಪೇಕ್ಷೆಯುಳ್ಳವರು ಈ ದೋಷಗಳನ್ನು ತಿದ್ದುವದು ಅತ್ಯವಶ್ಯವುಂಟು. ಪತ್ರದ ಆರಂಭದಲ್ಲಿ—

" ಕನ್ನಡಶಾಲಾಪತ್ರಕರ್ತರಿಗೆ—

ವಿ. ವಿ. —"

ಇಷ್ಟು ಬರೆದರೆ ಸಾಕು. ಹೆಚ್ಚಿಗೆ ಬರೆಯುವದರಿಂದ ನಿರರ್ಥಕವಾಗಿ ಸ್ಥಳ ಹೋಗುವದು.

ಶಿಕ್ಷಣ ಪದ್ಧತಿಯ ಸಂಬಂಧದ ವಾದವಿವಾದಗಳನ್ನು ಇದುವರೆಗೆ ಯಾರೂ ತೆಗೆಯಲಿಲ್ಲೆಂದು ನೋಡಿ ನಾವು ಆಶ್ಚರ್ಯಪಡುತ್ತೇವೆ. ಇದೇ ಮೇರೆಗೆ ಪ್ರಸಿದ್ಧ ಸ್ಥಳಗಳ ವರ್ಣನೆಗಳೂ, ಪ್ರಾಚೀನ ಇತಿಹಾಸದ ಸಂಗತಿಗಳೂ ಶಿಲಾಲೇಖಗಳೂ, ಸ್ವದೇಶದ ಶಿಲ್ಪಕಲಾಕೌಶಲ್ಯಾದಿಗಳೂ ಮುಂತಾದ ಹಲವು ಅತ್ಯುಪಯುಕ್ತವಾದ ಮನೋರಂಜಕ ವಿಷಯಗಳು ಸಹಸ್ರಾವಧಿಯುಂಟು. ಅವುಗಳ ಬಗ್ಗೆ ಆದಷ್ಟು ಶೋಧ ಮಾಡಿ ಶ್ರಮ ಪಟ್ಟು ಬರೆದಂಥಾ ಪತ್ರಗಳು ಅತ್ಯಾದರ ಪೂರ್ವಕವಾಗಿ ಸ್ವೀಕರಿಸಲ್ಪಡುವವು.

ಪ. ಕ.

ಶಾಲಾಪತ್ರಕವು.

ಪುಸ್ತಕ ೧೦] [ಸಂಚಿಕೆ ೮

ಬೆಳಗಾವಿ, ಮಾಹೆ ನವೆಂಬರ ೧೮೭೪.

EDUCATIONAL NEWS.

ವಿದ್ಯಾಸಂಬಂಧದ ವೃತ್ತಾಂತಗಳು.

ಹೋದ ತಿಂಗಳಿಂದ ಬೆಳಗಾವಿಯಲ್ಲಿ "ಕರ್ನಾಟಕಜ್ಞಾನ ಮಂಜರೀ" ಯೆಂಬದೊಂದು ಕನ್ನಡ ಮಾಸಿಕಪುಸ್ತಕವು ಆರಂಭವಾಗಿರುತ್ತದೆ. ಇದಕ್ಕೆ ಬಹುಜನರು ಪ್ರಮುಖರು ಸಹಾಯಕರಿದ್ದಾರೆಂದು ಕೇಳುತ್ತೇವೆ. ಇದು ಒಳ್ಳೇ ಸುಚಿಹ್ನವು ಈ ಪುಸ್ತಕವು ಬಹುದಿವಸ ಬಾಳಲೆಂದು ನಾವು ಮನಃಪೂರ್ವಕವಾಗಿ ಹರಿಸುತ್ತೇವೆ. ಕ್ರಯ, ವರ್ಷಕ್ಕೆ ೨॥ ರೂಪಾಯಿ, ಮುಂಗಡ.

ಈಗ ಶಾಲೆಗಳಲ್ಲಿ ನಡೆಯುವ ಪುಸ್ತಕಗಳ ಯೋಗ್ಯತೆಯನ್ನು ವಿಚಾರಿಸುವದಕ್ಕೋಸ್ಕರ ಹೋದವರ್ಷ ಪುಣೆಯಲ್ಲಿ ವೊಂದು ಕಮಿಟಿಯು ಕೂಡಿತ್ತು. ಆ ಕಮಿಟಿಯವರ ಸೂಚನೆಗಳಂತೆ ಪುಸ್ತಕಗಳನ್ನು ತಪಾಸಿಸುವ ಕೆಲಸವು ಈಗ ತ್ರಾನ್ಸಲೇಟರರ ಆಫೀಸಿನಲ್ಲಿ ನಡೆದಿರುತ್ತದೆ. ಕನ್ನಡ ವಾಚನದ ಪುಸ್ತಕಗಳಲ್ಲಿ ಬಹಳ ಹೆಚ್ಚು ಕಡಿಮೆಯಾಗತಕ್ಕದ್ದುಂಟು.

ಇಂಗ್ಲಿಷ ಶಾಲೆಗಳ ಫೀ ಹೆಚ್ಚಾಗುವ ಸುದ್ದಿಯುಂಟು. ಆದರೆ ದೇಶಭಾಷೆಗಳ ಶಾಲೆಗಳಲ್ಲಿ ಫೀ ಹೆಚ್ಚಾಗಲಿಕ್ಕಿಲ್ಲೆಂದು ಕೇಳುತ್ತೇವೆ.

ಕಲ್ಯಾಣದಿಂದ ಹೈದರಾಬಾದಿಗೆ ಹೊಗೆಬಂಡಿ ಹೋದ ತಿಂಗಳಲ್ಲಿ ಸುರುವಾಯಿತು.

ಜರ್ಮನಿಯೊಳಗಿನ ಬವೇರಿಯ ಯೆಂಬ ಪಟ್ಟಣದಲ್ಲಿ ಒಬ್ಬ ವಿದ್ವಾಂಸನು ಒಂದು ಹೊಸ ಯಂತ್ರವನ್ನು ರಚಿಸಿರುತ್ತಾನೆ. ಅದರ ಸಹಾಯದಿಂದ ಯಾವತ್ತೊಂದು ಪದಾರ್ಥದ ಆಕೃತಿಯು, ನಕಾಶ, ಫೋಟೋಗ್ರಾಫ್, ಸಹಿ, ಮುಂತಾದವು ತಂತಿಟಪಾಲ ಮಾರ್ಗದಿಂದ ಕಳುಹಲಿಕ್ಕೆ ಅನುಕೂಲವಾಗುತ್ತವೆ. ಕಳುಹುವವರು ತಾವು ಕಳುಹತಕ್ಕ ಆಕೃತಿ ಮುಂತಾದದ್ದನ್ನು ಒಂದು ಬೆಳ್ಳಿಯ ತಗಡಿನ ಮೇಲೆ ಒಂದು ಬಗೆಯ ಮಸಿಯಿಂದ ಬರೆದು, ಆ ತಗಡನ್ನು ಯಂತ್ರಕ್ಕೆ ಹಚ್ಚಿದ್ದೊಂದು ರೀತಿಗೆ ಸುತ್ತಲಾಗಿ ಆ ಚಿತ್ರವು ತಂತಿಟಪಾಲಿನಿಂದ ಬೇಕಾದ ಸ್ಥಳಕ್ಕೆ ಹೋಗುತ್ತದೆ! ಮನುಷ್ಯನ ಬುದ್ಧಿಗೆ ಜೋಡಿಲ್ಲ.

ಬೆಳಗಾವೀ ಡಿಪ್ಯೂಟಿಯವರು ಬಿ. ಎ ಪರೀಕ್ಷೆ ಕೊಡುವದಕ್ಕೆ ಇದೇ ತಿಂಗಳಲ್ಲಿ ಹೋಗತಕ್ಕವರಿದ್ದಾರೆಂದೂ ಅವರು ಬರುವ ವರೆಗೂ ಅವರ ಕೆಲಸ, ಯೆ. ಇನಸ್ಪೆಕ್ಟರ ಸಾಹೇಬರವರ ಕಚೇರಿಯಲ್ಲಿ ನಡೆಯುತ್ತದೆಂದೂ ಕೇಳುತ್ತೇವೆ.

SEHLFLFE

ತನಗೆ ತಾನೇ ನೆರವಾಗುವದು.

ಈಸ್ಟ್ ಇಂಡಿಯಾ ಕಂಪನಿಯವರ ದಂಡಿನ ಶಾಲೆಯಲ್ಲಿ ಕಲಿಯುತ್ತಿದ್ದ ಒಬ್ಬ ಬುದ್ಧಿವಂತನಾದ ಗೃಹಸ್ಥನು ಪಾರ್ಸಿಸ್ತಾನದೊಳಗೆ ಕರ್ಮನಾಶಾಯೆಂಬ ವೂರಲ್ಲಿ ಇರುತ್ತಿದ್ದನು. ಅವನು ನೆರೆಯಲ್ಲಿದ್ದ ಪ್ರಾಚೀನಕಾಲದ *ಸ್ಮಾರಕಸ್ತಂಭಗಳ ಮೇಲೆ ಈ ವಿಲಕ್ಷಣತರದ ಬಾಣಾಕೃತಿಯ ಲಿಪಿಯನ್ನು ನೋಡಿದ್ದನು. ಅವು ಬಹು ಪುರಾತನಕಾಲದವುಗಳಾದದರಿಂದ ಅವುಗಳ ಇತಿಹಾಸ ಸಂಬಂಧವು ಯಾರಿಗೂ ಗೊತ್ತಿದ್ದಿಲ್ಲ. ಅವನು ಆ ಲೇಖಗಳ ಪ್ರತಿಗಳನ್ನು ಬರಕೊಂಡನು. ಅವುಗಳಲ್ಲಿ ಬೆಹಿಸ್ತೂನ್ನೆಂಬಲ್ಲಿಯ ಅಪ್ರಮಾಣವಾದ ಶಿಲೆಯ ಮೇಲಿನ ಲೇಖವೇ ಮುಖ್ಯವಾದದ್ದು. ಈ ಶಿಲೆಯು ಸುಮಾರು ೧೭೦೦ ಫೂಟು ನೆಟ್ಟಗೆ ಮೇಲಕ್ಕೆ ಹೋಗಿದ್ದು, ಅದರ ಬುಡದಲ್ಲಿ ೩೦೦ ಫೂಟುಗಳ ಎತ್ತರದ ವರೆಗೆ ಪಾರಸೀಕ, ಸಿಥಿಯನ್, ಅಸೀರಿಯನ್ನೆಂಬ ಮೂರು ಭಾಷೆಗಳಲ್ಲಿ ಲೇಖಗಳು ಬರೆಯಲ್ಪಟ್ಟಿದ್ದವು. ಆ ಭಾಷೆಗಳಲ್ಲಿ ಒಂದಕ್ಕೊಂದು ಸರಿನೋಡಿ, ಗೊತ್ತಿದ್ದ ಭಾಷೆಯನ್ನು ಗೊತ್ತಿಲ್ಲದರ ಸಂಗಡಲೂ, ನಡೆಯುವ ಭಾಷೆಯನ್ನು ಮುಳುಗಿ ಹೋದದರ ಸಂಗಡಲೂ ತುಲನೆಯ ಮಾಡಿ ಬಹುಶ್ರಮದಿಂದ ಆ ವಿದ್ಯಾರ್ಥಿಯು ಆ ಹೊಸಲಿಪಿಯ ಜ್ಞಾನವನ್ನು ತಕ್ಕ ಮಟ್ಟಿಗೆ ಸಂಪಾದಿಸಿಕೊಂಡು, ಅದರ ವರ್ಣಮಾಲಿಕೆಯನ್ನು

---

* ನೆನಪಿನ ಸಲುವಾಗಿ ಕಟ್ಟಿದ ಕಂಬ ಮುಂತಾದ ಇಮಾರತುಗಳು.

ಸಹ ರಚಿಸಿದರು. ಅವನ ಹೆಸರು ರಾಲಿನ್ಸನ್ನನು; (ಇವನು ಮುಂದೆ ಸರ್ ಯೆಂಬ ಪದವಿಯನ್ನು ಹೊಂದಿದನು.) ಆ ಪ್ರತಿಗಳನ್ನು ಪರೀಕ್ಷಾರ್ಥವಾಗಿ ಇಂಗ್ಲಂಡಕ್ಕೆ ಕಳುಹಿದನು. ಆ ಕಾಲದಲ್ಲಿ ಯಾವ ಮಹಾವಿದ್ಯಾಲಯದೊಳಗಿನ ಗುರುಗಳಿಗಾದರೂ ಆ ಲಿಪಿಯ ಜ್ಞಾನವಿದ್ದಿಲ್ಲ. ಆದರೆ ಇಸ್ತಇಂಡಿಯಾಕಾಂಪನಿಯೆಂಬ ಸಭೆಯವರ ಪೂರ್ವಕಾಲದ ಕಾರಕೂನನೊಬ್ಬನಿದ್ದನು. ಅವನು ಸಂಕೋಚವೃತ್ತಿಯುಳ್ಳವನಾಗಿದ್ದು ಯಾವ ವಿಧದಿಂದಲೂ ಪ್ರಸಿದ್ಧಿಗೆ ಬಂದವನಲ್ಲ; ಅವನ ಹೆಸರು ನಾರಿಸನು. ಅವನು ಈ ಅಪ್ರಸಿದ್ಧವಾದ ಲಿಪಿಯನ್ನು ಕಲಿತಿದ್ದನು. ಅವನ ಕೈಯಲ್ಲಿ ಪಾರ್ಸಸ್ತಾನದಿಂದ ಬಂದ ಪ್ರತಿಗಳನ್ನು ಕೊಡಲಾಗಿ, ಅವನು ಬೆಹಿಸ್ತೂನದ ಶಿಲೆಯನ್ನು ಯೆಂದೂ ನೋಡದೆ ಇದ್ದಾಗ್ಯೂ, ಆ ಲಿಪಿಯನ್ನು ಚನ್ನಾಗಿ ಬಲ್ಲವನಾದದರಿಂದ ರಾಲಿನ್ಸನ್ನನು ಆ ತೊಡಕುಳ್ಳ ಶಿಲಾಲೇಖವನ್ನು ಸಮವಾಗಿ ಬರೆದುಕೊಂಡಿಲ್ಲೆಂದು ಹೇಳಿದನು. ರಾಲಿನ್ಸನ್ನನು ಈ ವರ್ತಮಾನ ಕೇಳಿದಾಗ ಆ ಶಿಲೆಯ ನೆರೆಯಲ್ಲಿಯೇ ಇರುತ್ತಿದ್ದ ಕಾರಣ ಅವನು ಪುನಃ ಶಿಲೆಯಿದ್ದಲ್ಲಿಗೆ ಹೋಗಿ ತನ್ನ ಪ್ರತಿಗೂ, ಅದಕ್ಕೂ ಸರಿನೋಡಲಾಗಿ, ನಾರಿಸನ ಮಾತು ನಿಜವೆಂದು ತಿಳಿದುಕೊಂಡನು. ಪುನಃ ತನ್ನ ಪ್ರತಿಯೊಳಗಿನ ಶುದ್ಧಾಶುದ್ಧಗಳನ್ನು ಲಕ್ಷಗೊಟ್ಟು ಶೋಧಿಸುತ್ತ ಹೋಗಿ, ಅವನು ಆ ಲಿಪಿಯ ಜ್ಞಾನವನ್ನು ಹೆಚ್ಚಿಗೆ ಸಂಪಾದಿಸಿಕೊಂಡನು.

ಆದರೆ ಈ ಮೇರೆಗೆ ಸ್ವಂತ ಅಭ್ಯಾಸದಿಂದ ಕಲಿತುಕೊಂಡವರಾದ ಈ ಇಬ್ಬರ ಜ್ಞಾನವು ಪ್ರಯೋಜನವುಳ್ಳ

ನ್ನಾಗಬೇಕಾದರೆ ಹೊಸ ಲೇಖಗಳನ್ನು ಸಂಪಾದಿಸಿಕೊಟ್ಟು ಇವರ ಜ್ಞಾನವನ್ನು ಪೂರ್ಣ ಮಾಡುವದಕ್ಕೋಸ್ಕರ ಇನ್ನೊಬ್ಬ ಮೂರನೇಯವನು ಬೇಕಾಗಿದ್ದನು. ಈ ವಿಧದ ಮನುಷ್ಯನು ಆಸ್ತಿನ್‌ಲೇಯಾರ್ಡನೆಂಬವನಿದ್ದನು. ಇವನು ಮೊದಲು ಲಂಡನದಲ್ಲಿ ಒಬ್ಬ ವಕೀಲನ ಕಾರಕೂನನಾಗಿದ್ದನು. ಆದರೆ ಒಬ್ಬ ದಂಡಿನೊಳಗಿನ ವಿದ್ಯಾರ್ಥಿಯು, ಒಬ್ಬ ಮುದಿ ಕಾರಕೂನನು, ಒಬ್ಬ ವಕೀಲನ ಕಾರಕೂನನು, ಹೀಗೆ ಮೂರು ಮಂದಿ ಕೂಡಿ ಮುಳುಗಿ ಹೋದ ಭಾಷೆಯನ್ನೂ, ನೆಲದೊಳಗೆ ಹೂಗಿದು ಹೋದ ಬಾಬಿಲನ್ ಪಟ್ಟಣದ ಇತಿಹಾಸವನ್ನೂ ಗೊತ್ತು ಹಚ್ಚುವರೆಂದು ಯಾರಿಗೂ ತೋರಿದ್ದಿಲ್ಲ; ಆದರೆ ಹೀಗಾದದ್ದಂತು ಸರಿ. ಲೇಯಾರ್ಡನು ಇಪ್ಪತ್ತೆರಡು ವರ್ಷದ ವಯಸ್ಸಿನವನಿದ್ದನು. ಅವನು ಪೂರ್ವ ದೇಶಗಳಲ್ಲಿ ಪ್ರವಾಸಕ್ಕೆ ಹೊರಟು, ಯುಫ್ರೇತೀಸ ಹೊಳೆಯನ್ನು ದಾಟಿ ಮುಂದಕ್ಕೆ ಹೋಗುವ ಅಪೇಕ್ಷೆಯುಳ್ಳವನಾಗಿ, ಸಂಗಡ ಒಬ್ಬನೇ ಜೊತೆಗಾರನನ್ನು ಕರಕೊಂಡು ತನ್ನ ಸಂರಕ್ಷಣಕ್ಕೋಸ್ಕರವಾಗಿ ಕೇವಲ ತನ್ನ ಬಾಹುಬಲದಲ್ಲಿಯೂ, ವಿಶೇಷವಾಗಿ ತನ್ನ ಆನಂದ ವೃತ್ತಿಯಲ್ಲಿಯೂ, ಸಭ್ಯರೀತಿಯಲ್ಲಿಯೂ, ಶೌರ್ಯ ಸ್ವಭಾವದಲ್ಲಿಯೂ, ನಂಬಿಕೆಯನ್ನಿಟ್ಟು, ತಮ್ಮತಮ್ಮೊಳಗೆ ಕೊಲೆಯುಳ್ಳ ಕದನಗಳಲ್ಲಿ ಯೆಸಗಿದ್ದ ಜನರೊಳಗಿಂದ ಯೇನೂ ಮೋಸಪಡದೆ ಸಾಗಿದನು. ಅವನ ಹತ್ತರ ಪ್ರವಾಸಕ್ಕೆ ತಕ್ಕ ಸಾಧನವು ಬಹು ಸ್ವಲ್ಪವಿದ್ದಾಗ್ಯೂ, ಆಸಕ್ತಿಯಿಂದಲೂ, ದೃಢ

ದ್ವೇಶದಿಂದಲೂ, ಭವ್ಯವಾದ ಸಮಾಧಾನವೃತ್ತಿಯಿಂದ
ಲೂ ಅವನು ಆಶ್ರಯಪಟ್ಟಿದ್ದನು. ಹೊಸ ವಸ್ತುಗಳ
ನ್ನು ಹುಡುಕಿ ಗೊತ್ತು ಹಚ್ಚಬೇಕೆಂಬದರ ಬಗ್ಗೆ ಅತಿನಿಕ್ಕ
ರವಾದ ಆವೇಶದಿಂದಲೇ ಅವನಲ್ಲಿ ಇಷ್ಟು ಸಮಾಧಾನ
ವೃತ್ತಿಯುಂಟಾಗಿತ್ತು. ಅವನು ಕಡೆಯಲ್ಲಿ ಇತಿಹಾಸ
ರೂಪಸಂಪತ್ತಿಯನ್ನು ಗೊತ್ತು ಹಚ್ಚಿ ನೆಲದೊಳಗಿಂದ ಅ
ಗಿದು ತೆಗೆದನು. ಇದರಂಥ ಶೋಧವು ಇವನ ಪೂರ್ವ
ದಲ್ಲಿ ಒಬ್ಬನೇ ಮನುಷ್ಯನ ಉದ್ಯೋಗದಿಂದ ಯೆಂದೂ
ಆಗಿದ್ದಿಲ್ಲ. ಸುಮಾರು ಯೆರಡು ಮೈಲು ವಿಸ್ತಾರವಾದ
ಪ್ರದೇಶದೊಳಗೆ ನೆಲದಲ್ಲಿ ಕೊರೆದು ಮಾಡಿದ ಚಿತ್ರಗಳ
ನ್ನು ಲೇಯಾರ್ಡನು ಗೊತ್ತು ಹಚ್ಚಿದನು. ಈ ಬೆಲೆಯುಳ್ಳ
ಪುರಾತನದ ಒಡವೆಗಳೊಳಗಿಂದ ಆರಿಸಿತಂದ ಚಿತ್ರಗಳು
ಈಗ ಇಂಗ್ಲಂಡದ ಪದಾರ್ಥಸಂಗ್ರಹಾಲಯದಲ್ಲಿ ಉಂಟು.
ಇವುಗಳಿಂದ ಸುಮಾರು ಮೂರು ಸಾವಿರ ವರ್ಷಗಳ ಹಿಂ
ದೆ ವರ್ತಿಸಿ, ಬಾಯಬಲ್ಲಿನಲ್ಲಿ ವರ್ಣಿಸಲ್ಪಟ್ಟ ಸಂಗತಿಗ
ಳು ಅತಿವಿಲಕ್ಷಣರೀತಿಯಿಂದ ನಿಜವೆಂದು ಸ್ಥಾಪಿಸಲ್ಪ
ಟ್ಟ ಕಾರಣ, ಈ ಚಿತ್ರಗಳು ದೇವರಿಂದ ಕೊಡಲ್ಪಟ್ಟ
ಹೊಸ *ಪ್ರಕಟನೆಗಳಂತೆ ಬೈಲಿಗೆ ಬಂದವು ಈ ಚಿತ್ರಗಳ
ನ್ನು ಅಗಿದು ತೆಗೆದ ಸಂಗತಿಯನ್ನು ಲೇಯಾರ್ಡನೇ ಸ್ವ
ತಃ "ನಿನವೆಯ ಸ್ಮಾರಕ ಕೃತ್ಯಗಳು." ಯೆಂಬ ತನ್ನ
ಗ್ರಂಥದಲ್ಲಿ ವರ್ಣಿಸಿದ್ದಾನೆ. ಈ ಸಂಗತಿಯು ನಮಗೆ
ಗೊತ್ತಾಗಿದ್ದ ಬೇರೆಬೇರೆ ವ್ಯಕ್ತಿಗಳ ಉದ್ಯೋಗ, ಸಾಹ

* ಬಾಯಬಲ್ಲೆಂಬ ಪುಸ್ತಕವು ದೇವರಿಂದಲೇ ಕೊಡಲ್ಪಟ್ಟ ರತ್ನ
ವೆಂದು ಖ್ರಿಸ್ತಿಯನ್ನರು ನಂಬುತ್ತಾರೆ. ಅದಕ್ಕೆ ವಾಡಿಕೆಯಾಗಿ ಪ್ರ
ಕಟನೆಯೆಂದೆನ್ನುತ್ತಾರೆ.

ಸ, ಸಾಮರ್ಥ್ಯಗಳ ಯೆಲ್ಲ ವರ್ಣನೆಗಳಿಗಿಂತ ಹೆಚ್ಚಿ ಕೌ ತುಕವುಳ್ಳದ್ದಿ, ಹೆಚ್ಚು ಸರಲತ್ವವುಳ್ಳದ್ದು ಯೆಂದು ಯಾವಾಗಲೂ ಯೆಣಿಸಲ್ಪಡುವದು.

The conquest of th e wort by Ravana.

ರಾವಣ ದಿಗ್ವಿಜಯ

॥ದ್ವಿಪದೆ॥

ಪ್ರಾಚೇತಸಾಖ್ಯಮುನಿಪತಿಯು ಬಲವಂದು॥
ವಾಚಸ್ಪತ್ಯಾಚಾರ್ಯನ[೧]ಡಿಗಳಿಗೆ ನಿಂದು॥೧॥
ಗುರುಹಿರಿಯರಂಘ್ರಿಯಂ ನೆನೆದು ಮಾನಸದಿ॥
ಧರೆಯು ಕವಿಗಳಿಗೆ ಕೈಮುಗಿದು ಸಂತಸದಿ॥೨॥
ಉತ್ತಮೋತ್ತರಕಾಂಡರಾಮಾಯಣದೊಳು॥
ಪತ್ತುತಲೆಯವನ ಮಗನೊಲಿದು ಸಮರದೊಳು॥೩॥
ಶಕ್ರ[೨]ನಂ ಸೆರೆವಿಡಿದು ಜೈಸಿ ಸ್ವರ್ಗವನು॥
ವಿಕ್ರಮದೊಳಿಂದ್ರಜಿತುವೆಂಬ ನಾಮವನು॥೪॥
ಪಡೆದನೆಂಬೀ ಘನಚರಿತ್ರವನು ಭರದಿ॥
ಪೊಡವಿಯೊಳ್ವರ್ಣಿಸುವೆ ಜನರರಿವ ತೆರದಿ॥೫॥

ವಾರ್ಧಕ॥ ವಿನುತವಾಲ್ಮೀಕಿಸ್ಮೃತಿಮಂದರದಿ[೩] ಮಥಿಸಲಾ
ಜನಕಸಂಭವೆ[೪] ಲಕ್ಷ್ಮಿ ಸುಗ್ರೀವ ಕಲ್ಪತರು[೫]॥
ಹನುಮ ಕೌಸ್ತುಭರತ್ನ ಸೌಮಿತ್ರಿ[೬] ಹಿಮಕಿರಣ[೭]ನಂಗದೈ
ರಾವತಗಜಂ॥

---

೧ ಬೃಹಸ್ಪತಿಯು, ೨ ಇಂದ್ರನ, ೩ ಮಂದರಪರ್ವತದಿಂದ, ೪ ಸೀತಾ ೫ ಕಲ್ಪವೃಕ್ಷ, ೬ ಲಕ್ಷ್ಮಣ, ೭ ಚಂದ್ರ.

ಅನಲ[೮] ಜೋಚ್ಚೈಶ್ರವ[೯] ಸುಷೇಣ ಸುಮನಸಧೇನು[೧೦]
ಘನವಿಭೀಷಣ ಸುಧಾ[೧೧] ರಾವಣೋತ್ಕಟಗರಳ[೧೨]
ಜನಿಸಿದರ್ ರಾಮಾಯಣಾಖ್ಯದುಗ್ಧಾರ್ಣವಂ[೧೩] ಶ್ರೇಯಸವ
[೧೪]ನೆಮಗೀಯಲೀ[೧೫] ||೬||

NOTICES.

ನೋಟೀಸುಗಳು.

ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಧೊರೆಗಳ ಆಫೀಸಿನಿಂದ—

ಧಾರವಾಡದ ಡೆಪ್ಯೂಟೀ ಎಜ್ಯುಕೇಶನಲ್ ಇನಸ್ಪೆಕ್ಟರರು (ಡಾಯರೆಕ್ಟರ ಧೊರೆಗಳು ರೆಹ್ವಿನ್ಯೂ ಕಮಿಶನರವರ ವಿದ್ಯಮಾನದಿಂದ ಮಾಡಿದ ವ್ಯವಸ್ಥೆಯು ಮೇರೆಗೆ) ಈ ಕೆಳಗಿನ ಅಪ್ಪಣೆಗಳಂತೆ ವಹಿವಾಟು ಇಡತಕ್ಕದ್ದು.

(a) ತಾಲೂಕ ಮಾಸ್ತರರ ವಿದ್ಯಮಾನವಾಗಿ ಇತರ ಗ್ರಾಮಗಳ ಮಾಸ್ತರರ ಸಂಬಳ ಮುಟ್ಟಿಸುವ ವಹಿವಾಟು ಇದುವರೆಗೆ ನಡಿದದ್ದು ಮುಂದೆ ನಿಲ್ಲಿಸತಕ್ಕದ್ದು.

(b) ಮುಂದಿನ ತಿಂಗಳಿನಿಂದ ತಾಲೂಕ ಮಾಸ್ತರರಿಗೆ ಬದಲಾ ಮಾಮುಲತ್‌ದಾರರೇ ಮಾಸ್ತರ ಜನರ ಸಂಬಳ ಮುಟ್ಟಿಸುವರು.

(c) ಸಂಬಳದ ಅಬಸ್ಟ್ರಾಕ್ಟಗಳು ತಾಲೂಕ ಖಜ್ಯಾನೆಗಳ ಚೆಕ್ಕುಗಳು ಸಹಿತವಾಗಿ ಮಾಮುಲತ್‌ದಾರರ ಕಡೆಗೆ ಕಳುಹತಕ್ಕವು, ಮತ್ತು ತಾಲೂಕ ಮಾಸ್ತರರು ತಂಮ ಶಿಪಾಯಿಗಳನ್ನು ಮಾಮುಲತ್‌ದಾರರ ಕೈಕೆಳಗೆ ಕೊಡುವ

---

೮ ನಳ, ೯ ಸುರಲೋಕದ ಕುದುರೆ, ೧೦ ಕಾಮಧೇನು, ೧೧ ಅಮೃತ, ೧೨ ತೀಕ್ಷ್ಣವಿಷ, ೧೩ ಕ್ಷೀರಸಮುದ್ರ, ೧೪ ಶುಭವನ್ನು, ೧೫ ಕೊಡಲಿ.

ಬಗ್ಗೆ ಅವರಿಗೆ ಹುಕುಮು ಕೊಡತಕ್ಕದ್ದು.

(d) ಸಂಬಳ ಹಂಚುವ ಕೆಲಸ ತೀರಿದ ಬಳಿಕ ಶಿಪಾಯಿಯು ಹೆಡ್‌ಮಾಸ್ತರರ ಕೈಕೆಳಗೆ ಬಂದು ಶಾಲೆಯಲ್ಲಿ ಕೆಲಸ ಮಾಡುವನು.

(e) ಹಳ್ಳಿಗಳ ಶಾಲೆಗಳ ಫೀ ಹಣವನ್ನು ತಾಲೂಕ ಶಾಲೆಯ ಶಿಪಾಯಿಯು ಈಗಿನ ವಹಿವಾಟಿನಂತೆ ಮುಂದಾದರೂ ತಂದು ತಾಲೂಕ ಮಾಸ್ತರರ ಕೈಯಲ್ಲಿ ಕೊಡುವನು.

೨. ತಾಲೂಕ ಮಾಸ್ತರರು ಈಗ ಹಣದ ಲೆಕ್ಕವನ್ನು ಇಡಬೇಕಾಗುತ್ತದೆ; ಮುಂದೆ ಆ ಕೆಲಸ ಕಟ್ಟು ಮಾಡಿ ಅವರಿಗೆ ತಮ್ಮ ಕಲಿಸುವ ಕೆಲಸಕ್ಕೆ ಹೆಚ್ಚಿಗೆ ವೇಳೆ ಕೊಡಲಿಕ್ಕೆ ಅನುಕೂಲವಾಗಬೇಕೆಂಬದಾಗಿ ಈ ಮೇಲಿನ ವ್ಯವಸ್ಥೆಯು ಮಾಡಲ್ಪಟ್ಟಿರುತ್ತದೆ.

೩. ದಕ್ಷಿಣಭಾಗದೊಳಗಿನ ಕಲೆಕ್ಟರರು ತಮ್ಮ ತಮ್ಮ ಕೈಕೆಳಗಿನ ಮಾಮಲತ್‌ದಾರರಿಗೆ ಅವಶ್ಯಕವಾದ ಹುಕುಮುಗಳನ್ನು ಕೊಡಬೇಕಾಗಿ ಅವರಿಗೆ ಸೂಚನೆಯು ಬರೆಯಲ್ಪಟ್ಟದೆ.

ಬೆಳಗಾವಿ ತಾ. ೧೭ನೇ ಅಗಟಂಬರ೧೮೭೪ಇ. — W. A. Russell. ಇ. ಇನಸ್ಪೆಕ್ಟರ ದಕ್ಷಿಣಭಾಗ.

ಕಾನಡಾ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೂ ಅಸಿಸ್ಟಂಟರರಿಗೂ ತಿಳಿಯ ಪಡಿಸುವದೇನಂದರೆ— ೮ ರೂಪಾಯಿಕ್ಕಿಂತ ಕಡಿಮೆ ಸಂಬಳವುಳ್ಳ ಅಸಿಸ್ಟಂಟರು ವರ್ಷಕ್ಕೊಂದು ಆಗುವ ಟ್ರೇನಿಂಗಕಾಲೇಜದ ಪ್ರವೇ

ಕ ಪರೀಕ್ಷೆಯಲ್ಲಿ ಪಾಸಾದ ಹೊರ್ತು ಅವರಿಗೆ ಟ್ರೇನಿಂಗ
ಕಾಲೇಜದಲ್ಲಿ ಅಭ್ಯಾಸ ಮಾಡುವ ಬಗ್ಗೆ ಕಳುಹಿಸೋಣಾ
ಗಲಿಕ್ಕಿಲ್ಲ ತಾರೀಖು ೮ನೇ ಅಗಟೆಂಬರ ಸನ್ನ ೧೮೭೪
ಇಸವಿ ಕಾರವಾರ.

R. W. Bhanap.
ಡಿ. ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ.

ರಾವಸಾಹೇಬ ಎಲ್ಲಾ ತಾಲೂಕ ಮಾಮಲೇದಾರರಿಗೆ—
ಆ ಜಲಫರ್ ಮೆಕ್‌ಡೋನಾಲ್ಡ ಸಾಹೇಬ ಕಲೆಕ್ಟರ ಜಿಲ್ಲಾ
ಕಾನಡಾ ಸಲ್ಲಾಂ ಬಿಗರ ಯಾವ ಗ್ರಾಮದಲ್ಲಿ ಸರಕಾರಿ ಶಾ
ಲೆ. ದೇವಸ್ಥಾನ ಅಥವಾ ಧರ್ಮಶಾಲೆಯಲ್ಲಿ ಹಾಕಲ್ಪಟ್ಟಿ
ರುತ್ತದೋ ಅಲ್ಲಿ ಹಾದಿಕಾರರು ಅಥವಾ ಬೇರೆ ಯಾರು
ಬಂದಾಗ್ಯೂ ಆ ಸ್ಥಳದಲ್ಲಿ ಶಾಲೆ ನಡೆಯುವದಕ್ಕೆ ಹರಕ
ತು ಮಾಡಬಾರದು ಮತ್ತು ಅಲ್ಲಿಂದ ಶಾಲೆ ಕಟ್ಟಿಸಬಾರ
ದು. ಏಕೆಂದರೆ ನಮ್ಮ ತಿಳುವಳಿಕೆಯಲ್ಲಿ ಬಂದಿರುತ್ತದ
ಲ್ಲಿ ಸರಕಾರಿ ನೌಕರರು ಗ್ರಾಮಾಂತರಕ್ಕೆ ಹೋದಾಗ್ಗೆ ಶಾ
ಲೆ ಹಾಕಿರುವ ದೇವಸ್ಥಾನದಲ್ಲಿ ಇಳದು ಶಾಲೆ ಅಲ್ಲಿಂದ
ತಪ್ಪಿಸಿದರು ಯಂತಾ ಈ ರೀತಿ ವಹಿವಾಟು ಮುಂಸಾಯಿ
ಇರುತ್ತದೆ. ಕಾರಣಾ ಎಲ್ಲರು ಮೇಲೆ ಬರೆದಂತೆ ವರ್ತಿಸ
ತಕ್ಕದ್ದದೆ.

ಇದರ ಪ್ರತಿ ನಿಮ್ಮ ತಾಲೂಕಿನ ಚೀಫಕಾನಿಷ್ಟೇಬಲ್ಲ
ರಿಗೆ ಕೊಡಬೇಕು ಹಾಗೂ ಬೇರೆ ಖಾತೇದ ಅಮಲದಾರರಿ
ಗೆ ಬಾಯಿಯಿಂದ ತಿಳಿಸಬೇಕು. ಯಾವ ಗ್ರಾಮದಲ್ಲಿ
ಸದರಿಯಂತೆ ಸರಕಾರಿ ಶಾಲೆ ದೇವಸ್ಥಾನ ಅಗರ ಧರ್ಮ

ಶಾಲೆಯಲ್ಲಿ ಆಗುತ್ತ ಇದ್ದೀತು ಆ ಗ್ರಾಮದ ಪಾಟೀಲ
ಶಾನಭೋಗರಿಗೆ ಈ ಸರಕ್ಯೂಲರ ಪ್ರತಿ ಕೊಟ್ಟು ಅವರಿಂ
ತ ಮಹಿವಾಟು ಆಗಲೊಲ್ಲದರ ಕಡೆಗೆ ಲಕ್ಷ ಇಡಬೇಕೆಂತಲೂ ಹಾ
ಗೂ ಯಾರಾದರೂ ಕಾಮದಾರರು ಸದರ ತಿಕಾಣದಲ್ಲಿ ಇ
ಳಿಯಲಿಕ್ಕೆ ಬಂದರೆ ಅವರಿಗೆ ಇದು ತೋರಿಸಿ ಹೇಳಬೇ
ಕು. ಜರ ಅವರಿಂದ ಬರಬೇಕಾದ ಮಹಿವಾಟು ಆದಲ್ಲಿ ಏಕನಂ
ರಿಪೋರ್ಟ ಮಾಡಬೇಕು ಹಾಗೆ ಮಾಡಿದ್ದರೆ ಯೋಗ್ಯ ಜ
ಬಾಬು ತೆಗೆದುಕೊಂಬೋಣಾದೀತೆಂತಲೂ ನೆಟ್ಟಗೆ ಲೇಜಿ
ತಾಕೀದಿ ಕೊಡಬೇಕು. ತಿಳಿಯೋದು ತಾರೀಖು ೧೭ನೇ
ಸಪಟೆಂಬರ ಸನ್ನ ೧೮೭೯ನೇ ಇಸವಿ.

ಸಹಿ ಎ. ಆರ. ಮೆಕ್‌ಡೋನಾಲ್ಡ.
ಕಲೆಕ್ಟರ

ಈ ಮೇಲಿನ ಯಥಾ ಪ್ರತಿ ನಕಲನ್ನು ಕಾನಡಾ ಜಿ
ಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರ ತಿಳುವಳಿಕೆ
ಬಗ್ಗೆ ಪ್ರಸಿದ್ಧಿಸಲ್ಪಟ್ಟಿರುತ್ತದೆ. ತಾರೀಖು ೧೭ನೇ ಆಕ
ಟೆಂಬರ ಸನ್ನ ೧೮೭೯ನೇ ಇಸವಿ ಕಾರವಾರ

R. W. Bhanap.
ಡಿ. ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ

ಮೇಹರಬಾನ್ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ
ಹೇಬಬಹಾದ್ದೂರ ದಕ್ಷಿಣಭಾಗ ಇವರ ಮಂಜೂರಿಯಿಂದ
ವಗೈರೆ ಕಾನಡಾ ಜಿಲ್ಲೆಯಲ್ಲಿ ಕೆಳಗೆ ಬರೆದ ಸ್ಕೂಲಮಾ
ಸ್ತರರ ನೇಮಣೂಕುಗಳನ್ನೂ ವರ್ಗಾವರ್ಗಿಗಳೂ ಆ
ಗಿರುತ್ತವೆ.

೧ ಎಲ್ಲಾಪೂರ ತಾಲೂಕಪೈಕಿ ಹುನಗುಂದ ಸ್ಕೂಲಮಾಸ್ತರ ರಾಮಚಂದ್ರ ಗಣಪಯ್ಯಾ ಇವರು ಟ್ರೇಂಡರಾದದರಿಂದ ಇವರನು ಸುಪು: ಸ್ಕೂಲಮಾಸ್ತರ ಕೆಲಸಕ್ಕೆ ೨೦ ರೂಪಾಯಿ ಸಂಬಳದಮೇಲೆ, ಮತ್ತು ಸುಪು ಸ್ಕೂಲಮಾಸ್ತರ ಹಣಮಂತ ರಾಮಚಂದ್ರ ಇವರು ಅಂಟ್ರೇಂಡರಾದದರಿಂದ ೩ ರೂಪಾಯಿ ಕಡಿಮೆ ಮಾಡಿ ೧೫ ರೂಪಾಯಿ ಸಂಬಳದಮೇಲೆ ಹುನಗುಂದ ಸ್ಕೂಲಮಾಸ್ತರ ಕೆಲಸಕ್ಕೆ ಈ ಪ್ರಕಾರ ವರ್ಗಾವರ್ಗಿಗಳನು ಆಗಿರುತ್ತವೆ.

೨ ಸದಾಸಿವಗಡ ಸೆಕೆಂಡಗ್ರೇಡ ಎಂಗ್ಲೋವ್ಹರನೇಕ್ಯುಲರ ಸ್ಕೂಲ ಹೆಡ್ಡಮಾಸ್ತರ ಕೆಲಸಕ್ಕೆ ಶಿರ್ಸಿ ಸೆಕೆಂಡಗ್ರೇಡ ಎಂಗ್ಲೋವ್ಹರನೇಕ್ಯುಲರ ಸ್ಕೂಲ ೧ನೇ ಅಶಿಷ್ಟಂಟರಾದ ಅನಂತ ಗೋಪಾಳ ಜಾಂಭೇಕರ ಇವರನು ನೇಮಿಸಿರುತ್ತದೆ. ಪಗಾರಾ ರೂಪಾಯಿ ೩೦.

೩ ಹೊನ್ನಾವರವ್ಹರನೇಕ್ಯುಲರ ಸ್ಕೂಲ ಹೆಡ್ಡ ಮಾಸ್ತರ ಜಾಗೇದಮೇಲೆ ಸದಾಸಿವಗಡ ಸೆಕೆಂಡಗ್ರೇಡ ಎಂಗ್ಲೋವ್ಹರನೇಕ್ಯುಲರ ಸ್ಕೂಲಮಾಸ್ತರರಾದ ವಾಸುದೇವ ಅನಂತ ಇವರಿಗೆ ವರ್ಗ ಮಾಡಿರುತ್ತದೆ. ಸಂಬಳ ರೂಪಾಯಿ ೩೦.

೪ ಶಿರ್ಸಿ ಎಂಗ್ಲೋವ್ಹರನ್ಯಾಕ್ಯುಲರ ಸ್ಕೂಲ ಹೆಡ್ಡಮಾಸ್ತರ ಕೆಲಸಕ್ಕೆ ಅಂಕೋಲಾ ಸ್ಕೂಲ ಮಾಸ್ತರರಾದ ಪೇವಪ್ಪಾ ನಾರಾಯಣ ಇವರನು ನೇಮಿಸಿರುತ್ತದೆ. ಗಾರಾ ರೂಪಾಯಿ ೪೫.

೫ ಶಿರ್ಸಿ ಎಂಗ್ಲೋವ್ಹರನೇಕ್ಯುಲರ ಸ್ಕೂಲಮಾಸ್ತ

ರರಾದ ಪರಮೇಶ್ವರ ಶಂಕರ ಇವರಿಗೆ ಅದೇ ಸ್ಕೂಲ ೧ನೇ ಅಶಿಷ್ಟಂಟ ಜಾಗೇದಮೇಲೆ ನೇಮಿಸಿರುತ್ತದೆ. ಸಂಬಳ ರೂಪಾಯಿ ೩೫.

೬ ಹೊಸಕೋಟ ಸ್ಕೂಲ ಮಾಸ್ತರ ಜಾಗೇದಮೇಲೆ ಶಿರ್ಸೀ ಗರ್ಲ ಸ್ಕೂಲ ಮಾಸ್ತರರಾದ ಮಂಗೇಶ ರಾಮಚಂದ್ರ ಕಂಟಕ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೫.

೭ ಶಿರ್ಸೀ ಗರ್ಲ ಸ್ಕೂಲ ಮಾಸ್ತರ ಕೆಲಸಕ್ಕೆ ಉಪ್ಪಿನಪಟ್ಟಣ ಸ್ಕೂಲಮಾಸ್ತರರಾದ ಪರಮೇಶ್ವರ ಪ್ರಟ್ಟಿಯಾ ಇವರಿಗೆ ೧೫ ರೂಪಾಯಿ ಸಂಬಳದಮೇಲೆ ನೇಮಿಸಿರುತ್ತದೆ.

೮ ಉಪ್ಪಿನಪಟ್ಟಣ ಸ್ಕೂಲಮಾಸ್ತರ ಜಾಗೇದಮೇಲೆ ಮುಂಕಿ ಸ್ಕೂಲಮಾಸ್ತರ ನಾರಾಯಣ ಅಚ್ಯುತ ಇವರಿಗೆ ಸಮ ಪಗಾರದಮೇಲೆ (೧೨ ರೂಪಾಯಿ) ಮೇಲೆ ನೇಮಿಸಿರುತ್ತದೆ.

೯ ಮುಂಕಿ ಸ್ಕೂಲಮಾಸ್ತರ ಜಾಗೇದ ಮೇಲೆ ಹೊನ್ನಾವರ ವ್ಹರ್ನ್ಯಾಕ್ಯುಲರ ಸ್ಕೂಲ ೧ನೇ ಅಶಿಷ್ಟಂಟರಾದ ರಾಮಕೃಷ್ಣ ಶಿವಪ್ಪಾ ಇವರಂನು ೧೦ ರೂಪಾಯಿ ಸಂಬಳದಮೇಲೆ ವರ್ಗ ಮಾಡಿರುತ್ತದೆ.

೧೦ ನಿಲಕುಂದ ಸ್ಕೂಲ ಮಾಸ್ತರ ಕೆಲಸಕ್ಕೆ ೧೨ ರೂಪಾಯಿ ಪಗಾರದಮೇಲೆ ಅಂಟ್ರೇಂಡರಾದ ಶಾಮರಾವ ಶೇಷೋ ಸ್ಕೂಲಮಾಸ್ತರ ಹೊಸಕೋಟ ಇವರಂನು ನೇಮಿಸಿರುತ್ತದೆ.

೧೧ ಶಿರ್ಸಿ ತಾಲೂಕಸ್ಸೈಕಿ ಸೊಂದೇ ಸ್ಕೂಲಮಾ

ಸ್ತರರ ಕೆಲಸಕ್ಕೆ ಟ್ರೇಂಡ ಉಮೇದವಾರ ಅಣ್ಣಾಜೀ ರಂಗರಾವ ಇವರಂನು ನೇಮಿಸಿರುತ್ತದೆ. ಸಂಬಳ ರೂಪಾಯಿ ೧೨.

೧೨ ಓಣಿಕೇರಿ—ಈ ಹೊಸಸಾಲಿ ಮೇಲೆ ಹೊಸಕೋಟ ಮಾಜೀಮಾಸ್ತರರಾದ ಶ್ರೀನಿವಾಸ ಅಣ್ಣಾಜೀ ಇವರನ್ನು ನೇಮಿಸಿರುತ್ತದೆ—ಪಗಾರ ರೂಪಾಯಿ ೧೨.

೧೩ ಶಿಸಿನೀ ಮೊಚ್ಚ ಸ್ಕೂಲಮಾಸ್ತರ ಕೆಲಸಕ್ಕೆ ಉಮೇದವಾರ ಶಿಲೆಮಾನಖಾಂ ವಲ್ಲದ ಬುಡಣಖಾಂ ಇವರನ್ನು ನೇಮಿಸಿರುತ್ತದೆ—ಸಂಬಳ ರೂಪಾಯಿ ೧೦.

೧೪ ಕುಮಟಾ—ತಾಲೂಕ ಪೈಕಿ ಬಾಡಸ್ಕೂಲ ಮಾಸ್ತರ ಜಾಗದ ಮೇಲೆ ಉಮೇದವಾರ ಪ್ರಟಿಷ್ಟ ನರಸಿಂಹ ಇವರನ್ನು ಅಗಟಂಗ ನೇಮಿಸಿರುತ್ತದೆ. ಪಗಾರ ರೂಪಾಯಿ ೬೦.

೧೫ ಅಂಕೋಲಾ—ಎಂಗ್ಲೋವ್ಹರನೇಕ್ಯುಲರ ಸ್ಕೂಲ ಹೆಡ್ಡಮಾಸ್ತರ ಜಾಗದ ಮೇಲೆ ಮೆಟ್ರಿಕ್ಯುಲೇಟೆಡ್ಡ ಉಮೇದವಾರರಾದ ಏಶವಂತ ಬಾಳಕೃಷ್ಣ ದಳವಿ ಇವರಿಗೆ ನೇಮಿಸಿರುತ್ತದೆ. ಸಂಬಳ ರೂಪಾಯಿ ೩೦.

೧೬ **ಸದಾಸಿವಗಡ** — ಎಂಗ್ಲೋವ್ಹರನೇಕ್ಯುಲರ ಸ್ಕೂಲ ೧ನೇ ಅಸಿಸ್ಟಂಟ ಕೆಲಸಕ್ಕೆ ಉಮೇದವಾರ ರಘುನಾಥ ಅಣ್ಣಾಜೀ ಇವರನ್ನು ಅಕಟಂಗ ನೇಮಿಸಿರುತ್ತದೆ. ಸಂಬಳ ರೂಪಾಯಿ ೧೫.

೧೭ ಸುಂಕೇರಿ ಹಿಂದುಸ್ಥಾನಿ ಬ್ರೆಂಚಿ ಈ ಹೊಸಸಾಲಿ ಮೇಲೆ ಅಬದುಲ್ ಕರಿಮುಯುಂಬ ಉಮೇದವಾರರಿಗೆ ೮ ರೂಪಾಯಿ ಸಂಬಳದ ಮೇಲೆ ನೇಮಿಸಿರುತ್ತದೆ.

೧೮ ಕಡವಾಡ ಹಿಂದುಸ್ಥಾನಿ ಬ್ರೆಂಚ- ಈ ಹೊಸಸಾ
ಲಿ ಮೇಲೆ ಉಮೇದವಾರ ಮಹಂಮದ ಉಸಮಾನಖತಿ
ಬ ಇವರಿಗೆ ನೇಮಿಸಿರುತ್ತದೆ. ಪಗಾರ ರೂಪಾಯಿ ೮.

೧೯ ಕುಮಟಾ ಪ್ಹರನೇಕ್ಯುಲರ ಬ್ರೆಂಚ(ಹೊಸ ಸಾ
ಲಿ) ಈ ಸಾಲಿಯ ಮಾಸ್ತರ ಕೆಲಸಕ್ಕೆ ಸುಬರಾವ ವರಲಿಂ
ಗ ಉಮೇದವಾರ ಇವರಿಗೆ ನೇಮಿಸಿರುತ್ತದೆ, ಸಂಬಳ
ರೂಪಾಯಿ ೮

೨೦ ಶಿರ್ಸಿ ಪ್ಹರನೇಕ್ಯುಲರಬ್ರೆಂಚ ಈ ಹೊಸಸಾಲಿ
ಮೇಲೆ ಉಮೇದವಾರರಾದ ರಾಮಯ್ಯಾಗಣಪಯ್ಯಾ ಗೌ
ಡರ ಇವರಿಗೆ ನೇಮಿಸಿರುತ್ತದೆ. ಸಂಬಳರೂಪಾಯಿ೮

೨೧ ಮುರಡೇಶ್ವರ ಹಿಂದುಸ್ಥಾನಿಬ್ರೆಂಚ ಈ ಹೊಸ
ಸಾಲಿಯ ಮೇಲೆ ಉಮೇದವಾರ ಬುಡಣಖಾನ ಶಮಶೇರ
ಖಾನ ಇವರಿಗೆ ನೇಮಿಸಿರುತ್ತದೆ. ಪಗಾರ ರೂಪಾಯಿ೮

೨೨ ಹಲ್ಯಾಳ ಸ್ಕೂಲಮಾಸ್ತರ ಕೇಶವ ಅನಂತ
ಡೊಂಗ್ರೆ ಇವರಿಗೆ ೫ರೂಪಾಯಿ ಬಡ್ತಿಮಾಡಿರುತ್ತದೆ.
ಮೊದಲಿನ ಪಗಾರರೂಪಾಯಿ೨೦

೨೩ ರಾಮಕೃಷ್ಣ ಪಾಂಡುರಂಗ ಸ್ಕೂಲಮಾಸ್ತರ ಹ
ಳದಿಪೂರ ಇವರಿಗೆ ೨ರೂಪಾಯಿ ಬಡ್ತಿ ಕೊಟ್ಟಿರುತ್ತದೆ
ಮೊದಲಿನ ಪಗಾರ ರೂಪಾಯಿ ೧೮

ರಜೆ

ಕುಮಟಾ ಪ್ಹರನೇಕ್ಯುಲರ ಸ್ಕೂಲಹೆಡ್ಡ ಮಾಸ್ತರ
ಕೇಶವ ಹರೀ ಅಭ್ಯಂಕರ ಇವರಿಗೆ ೩ತಿಂಗಳ ಹಕ್ಕಿನ ರ
ಜೆ ರಜಾರಪ್ತ ಆಗುವ ತಾರೀಖಿನಿಂದ ಮಂಜೂರು ಮಾಡಿ

ರುತ್ತದೆ. ತಾರೀಖು ೧೨ ಅಗಟಂಬರ ಸನ್ನ ೧೮೭೪ ಇಸ್ವಿ.

R. W. Bhanap.

ಡೆ. ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ.

ಬೆಳಗಾಂವ ಜಿಲ್ಹೇದಲ್ಲಿ ನಡೆಯುವ ತಿಂಗಳದ ವರ್ಗಾವರ್ಗಿ ಮುಂತಾದ್ದು ಆದಬಗ್ಗೆ ವಿವರ ಕೆಳಗ ಬರೆದ ಪ್ರಕಾರ

೧ ಚಚಡಿ (ತಾಲೂಕ ಪರಸಗಡ)—ಇಲ್ಲಿಯು ಬ್ರೇಂಚಸಾಲಿಯು ಮಾಸ್ತರ ಕೆಲಸಕ್ಕೆ ಎಕಸಂಬಿಯು ಬ್ರೆಂಚಸಾಲಿಯು ಮಾಸ್ತರರಾದ ಶಂಕರ ತ್ರಿಂಬಕ ಇವರನ್ನು ನೇಮಸಿರುತ್ತದೆ ಸಂಬಳ ರೂ. ೮

೧ ಯಕಸಂಬಿ (ತಾ. ಚಿಕ್ಕೋಡಿ) ಈ ಬ್ರೆಂಚಸಾಲಿಯು ಮಾಸ್ತರ ಕೆಲಸಕ್ಕೆ ಬೇಡಕೀಹಾಳ ಬ್ರೆಂಚಸಾಲಿಯ ಮಾಸ್ತರರಾದ ಚೆಂನಪ್ಪಾ ಬಸಲಿಂಗಪ್ಪಾ ಇವರನ್ನು ನೇಮಿಸಿರುತ್ತದೆ ಸಂಬಳ ರು. ೮

೧ ಬೇಡಕೀಹಾಳ (ತಾ. ಚಿಕ್ಕೋಡಿ)—ಈ ಬ್ರೆಂಚಸಾಲಿಯು ಮಾಸ್ತರ ಕೆಲಸಕ್ಕೆ ಚಚಡೀ ಬ್ರೆಂಚ ಸಾಲಿಯು ಮಾಸ್ತರರಾದ ಗೋವಿಂದ ರಾಮಚಂದ್ರ ಪಾತಕ ಇವರನ್ನು ನೇಮಿಸಿರುತ್ತದೆ ಸಂಬಳ ರು. ೮

೧ ಬೆಳಗಾಂವೀ ೧ ನೇ ನಂಬರದ ಆರೇ ಸಾಲಿಯ ಮಾಸ್ತರರಾದ ನಾರೋ ರಾಮಚಂದ್ರ ದಾತಾರ ಇವರಿ ತಾ. ೧೬ ನೇ ಯಿಂದ ೧ ತಿಂಗಳದ ಹಕ್ಕಿನ ರಜಾ ಕೊಟ್ಟಿರುತ್ತದೆ.

೧ ಹೂಲೀ ಮಾಸ್ತರರಾದ ಕೃಷ್ಣಾಜೀ ಸರಸೊ

ಇವರಿಗೆ ತಾ. ೧೫ ನೇ ಅಕಟೋಂಬರದಿಂದ ೧ ತಿಂಗಳದ ಸಂಬಳ ವಿಲ್ಲದ ರಜಾ ಕೊಟ್ಟಿರುತ್ತದೆ.

೧ ಹೇರೇ (ತಾ. ಬೆಳಗಾಂವ) — ಈ ಹೊಸ ಬ್ರಾಂಚಸಾಲಿಯು ಮಾಸ್ತರ ಕೆಲಸದ ಮೇಲೆ ಸಂಕೇಶ್ವರ ಸಾಲಿಯು ೨ ನೇ ಮ. ರಾಮ ಅನಂತ ಮಾಣಕೇಶ್ವರ ಇವರನ್ನು ನೇಮಿಸಿ ಸಂಕೇಶ್ವರದ ಆ. ಕೆಲಸವನ್ನು ತಾತ್ಪೂರ್ತಿಗೆ ತೆರವು ಇಟ್ಟಿದ್ದೇವೆ ಸಂಬಳ ರು. ೮. ತಾ. ೨೨ ಮಾಹೆ ಅಕ್ಟೋಂಬರ ಸಂನ ೧೮೭೪ ಇಸವಿ.

P. V. Chintamanpetkar.

ಡಿ. ಎ. ಇನಸ್ಪೆಕ್ಟರ ಜಿಲ್ಹಾ ಬೆಳಗಾಂವ.

ಬೆಳಗಾಂವ ಜಿಲ್ಹೆದೊಳಗಿನ ಯಾವತ್ತು ಸ್ಕೂಲ ಮಾಸ್ತರ ಮತ್ತು ಆ. ಮಾಸ್ತರರಿಗೆ—

ಬೆಳಗಾಂವ ಜಿಲ್ಹೇದ ಡಿ. ಎ. ಇ. ರ ಕಡಿಂದ ತಿಳಿಸುವದೇನಂದರೆ—ರಜಾ ಬೇಡುವಾಗ್ಗೆ ಪತ್ರಿಕೆಯಲ್ಲಿ ಇಂಥಾ ತಾರೀಖಿನಿಂದ ಇಂಥಾ ತಾರೀಖಿನತನಕಾ ರಜಾ ಬೇಕು ಅಂತಾ ಸ್ಪಷ್ಟವಾಗಿ ಬರಿಯುವೆ ಇದ್ದಲ್ಲಿ ರಜಾ ದೊರಿಯುಲಿಕ್ಕಿಲ್ಲ. ಇದರ ಕಡೆಗೆ ಯಾವತ್ತು ಮಾಸ್ತರ ಮುಂತಾದವರು ಚಂನಾಗಿ ಲಕ್ಷವನ್ನು ಕೊಡಬೇಕೆಂದು ಅಪೇಕ್ಷಿಸುತ್ತೇವೆ. ತಾ. ೨೨ ಮಾಹೆ ಅಕ್ಟೋಂಬರ ಸನ್ನ ೧೮೭೪ ಇಸವಿ.

P. V. Chintamanpetkar.

ಡಿ. ಎ. ಇನಸ್ಪೆಕ್ಟರ ಜಿಲ್ಹಾ ಬೆಳಗಾಂವ.

Correspondence.

ಪತ್ರ ವ್ಯವಹಾರವು.

ರಾವಸಾಹೇಬ ಕಂನಡ ಪಾಠಪತ್ರಿಕೇದ ಎಡೀಟರವರ

ಸಂನಿಧಿಗೆ—

ತಮ್ಮ ಕರದಲ್ಲಿ ಉದ್ಭವಿಸುವ ಪತ್ರದಲ್ಲಿ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ಪ್ರಶಿದ್ಧಿಸುವಿರೆಂದು ಪೂರ್ಣ ಬಯಕೆ ಉಳ್ಳವನಾಗಿರುವೆನು.

ಕನ್ನಡದಲ್ಲಿ ಪ್ರವರ್ತಿಸುವ ಸ್ವರಗಳು “ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ” ಇಷ್ಟು ಉಂಟು ಅಷ್ಟೇ; ಇವುಗಳಲ್ಲಿ „ಅ, ಆ” „ಇ, ಈ” „ಉ, ಊ” ಶುದ್ಧ ಸ್ವರಗಳೆಂತಲೂ; „ಎ, ಏ” „ಒ, ಓ” ಮಿಸ್ರ ಸ್ವರಗಳೆಂತಲೂ; „ಐ, ಔ” ಸಂಧಿಸ್ವರಗಳೆಂತಲೂ, ಶಾಲಾವ್ಯಾಕರಣದಲ್ಲಿ ಮುದ್ರಿಸಲ್ಪಟ್ಟಿದೆ. „ಋ” ಈ ಸ್ವರ ಯಾವದೆಂಬದರ ವಿಷಯವಾಗಿ ವಿವೇಚನ ಮಾಡಲ್ಪಟ್ಟಿಲ್ಲ. ಇದಕ್ಕೆ ಯಾವ ಸ್ವರವೆಂನಬೇಕು.

ಸಂಸ್ಕೃತ ಸ್ವರಸಂಧಿಯಲ್ಲಿ „ಅ, ಆ” ಕಾರಗಳಿಗೆ „ಇ, ಈ” ಕಾರಗಳು ಮುಂದಾದರೆ ಒಂದಕ್ಕೊಂದು ಕಲಿತು „ಏ” ಕಾರವಾಗುವದು, „ಉ, ಊ” ಕಾರ ಪರವಾದರೆ ಒಂದಕ್ಕೊಂದು ಕೂಡಿ „ಓ” ಕಾರವಾಗುವದರಿಂದ ಸಂಸ್ಕೃತ ಲಿಪಿಯಲ್ಲಿ „ಏ, ಓ” ಸ್ವರಗಳು ಮಿಶ್ರ ಅನ್ನುವದಕ್ಕೆ ಸಂಶಯ ಕಾಣ ಬರುವದಿಲ್ಲ.

ಇದೇ ಮೇರೆಗೆ „ಅ” ಆ,ಕಾರಗಳಿಗೆ ಶುದ್ಧ ಸ್ವರವಲ್ಲದ „ಎ, ಐ” ಕಾರಗಳು ಪರವಾದರೆ „ಐ” ಸ್ವರವು, ಮತ್ತು, „ಓ” ಸ್ವರವು ಮುಂದಾದರೆ „ಔ” ಸ್ವರವು ಆಗು

ವದರಿಂದ "ಐ, ಔ" ಸ್ವರಗಳಿಗೆ ಸಂಸ್ಕೃತ ಲಿಪಿಯಲ್ಲಿ ಸಂಧಿಸ್ವರಗಳೆನ್ನಲಿಕ್ಕೆ ಅಡ್ಡಿ ತೋರುವದಿಲ್ಲ. ಕಂನಡ ಲಿಪಿಯಲ್ಲಿ "ಎ, ಒ" ಈ ಎರಡು ಮಿಶ್ರ ಸ್ವರಗಳೆಂದೂ, "ಐ, ಔ" ಈ ಎರಡು ಸಂಧಿಸ್ವರಗಳು ಯೆಂದು ಅನ್ನಬಹುದಾದರೆ ಯಾವ ಸ್ವರಗಳಿಗೆ ಯಾವ ಸ್ವರ ಕಲಿತು ಯಾವ ಕಟ್ಟಳೆ ಮೇರೆಗೆ ಆಗಿರುವವು.

"ಎ, ಒ" ಸ್ವರಗಳು ಸಂಸ್ಕೃತ ಲಿಪಿಯಲ್ಲಿ ಇಲ್ಲವೇ ಇಲ್ಲ. ಇವು ಮಿಶ್ರಸ್ವರಗಳೆಂದು ಯಾವ ಕಟ್ಟಳೆ ಮೇರೆಗೆ ಸಿದ್ಧ ಮಾಡಲ್ಪಟ್ಟಿರುವವು.

ಇದನ್ನು ತಮ್ಮ ರಮ್ಯವಾದ ಪತ್ರದಲ್ಲಿ ಇಡಚ ಹೊತ್ತರ್ನ ನನ್ನ ಸಂಶಯು ದೂರವಾಗವೆಂದು ತಿಳಿದು ಕಳಿಸಿದ್ದೇನೆ. ಯಾರಾದರೂ ನಮ್ಮ ದೇಶಬಾಂಧವರಾದ ಮಾಸ್ತರರಾಗಲಿ, ಬೇರೆ ವಿದ್ವಜ್ಜನರಾಗಲಿ ಇದನ್ನು ನೋಡಿ ಯಥಾಯೋಗ್ಯ ಉತ್ತರ ಕೊಡುವರೆಂದು ಬಯಸಿದ್ದೇನೆ. ಇತಿ ವಿನ್ನಹ

ತಾ. ೧ ನೇ ಅಗಸ್ಟಂ	ತಿಂಮಾಜಿ ಸುಬ್ಬರಾವ ಮಿಶ್ರಿಕೋಟ
ಬರಸ. ೧೮೩೪ಇ.	ಸ್ಕೂ. ಮಾ. ಪೋಟಿಬಿನ್ನೂರ

ಮಂ ರಾಂ ರಾಂ ವೃತ್ತಪತ್ರಕರ್ತರಿಗೆ—

ಸೇವಕನು ಮಾಡುವ ಬಿನ್ನಃ ತಮ್ಮ ಕರಪಂಜರದಿಂದ ಹುಟ್ಟಲ್ಪಟ್ಟ ಮೇ ತಿಂಗಳ ಶಾಲಾಪತ್ರಿಕೆಯಲ್ಲಿ ನಂಮ ಮಿತ್ರರಾದ ಬ್ಯಲಹೊಂಗಲ ಮಾಸ್ತರ ಇವರು (ಙ್ಞ) ಎಂಬ ವತ್ತಕ್ಷರವನು ವರ್ಣಗಳ ಅಂತ್ಯಕ್ಕೆ ಏನು ಕಾರಣ ಶೇರಿಸಲಿಲ್ಲ. ಮತ್ತು (ತ,ನ,ಮ,ಲ) ಈ ವರ್ಣ

ಗಳಂನು (ೂ, ೃ, ೄ, ೢ.) ಇಂಥಾ ಚಿನ್ಹಗಳಿಂದ ಸಜಾತಿಯು ಅಕ್ಷರಕ್ಕಾಗಲಿ ವಿಜಾತಿಯು ಅಕ್ಷರಕ್ಕಾಗಲಿ ವತ್ತು ಏನು ಕಾರಣ ಕೊಡುತ್ತಾರೆ ಎಂಬ ಪ್ರಶ್ನೆಗಳನ್ನು ಕೇಳಿದ್ದರಿಂದ ಅವುಗಳಿಗೆ ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಉತ್ತರ ಕೊಡುವೆನು.

ಉತ್ತರ—(ಜ್ಞ) ಈ ವತ್ತಕ್ಷರವು ಸಂಸ್ಕೃತದಿಂದ ಪ್ರಟ್ಟಿದ ಬಾಲಬೋಧ ಮರಾಠಿ ಮತ್ತು ಕಂನಡ ಈ ಮೂರು ಲಿಪಿಗಳ ಪೈಕಿ ಮೊದಲಿನ ಎರಡವುಗಳಲ್ಲಿ ನೋಡಿದರೆ (ದ) ಈ ವರ್ಣಕ್ಕೆ (ನ) ಈ ವತ್ತು ಕೊಟ್ಟಿರುತ್ತದೆ ಮತ್ತು ಉಚ್ಚರಿಸಿದರೆ ಬರೋಬರಿ ರೀತಿಯಿಂದ ಆಗುತ್ತದೆ ಮತ್ತು ಇದು ವತ್ತಕ್ಷರವಿದ್ದದರಿಂದ ವರ್ಣಗಳಲ್ಲಿ ಸೇರಿಸುವದು ಹ್ಯಾಗೆ (ಸೇರಿಸಬಾರದೆಂಬರ್ಥ) ಆದ್ದರಿಂದ (ಜ್ಞಾ) ಈ ಅಕ್ಷರವಂನು ಹೀಗೆ ಬರೆಯುದಲೆ ಮೊದಲಿನ ಎರಡು ಭಾಷೆಗಳಲ್ಲಿದ್ದಂತೆ ಬರೆಯು ಬೇಕೆಂದು ನನ್ನ ಅಲ್ಪ ಬುದ್ಧಿಗೆ ತೋಚುತ್ತದೆ. ದ್ನ ಜ್ಞ ಜ್ಞ

೨ (ೂ, ೃ, ೄ, ೢ,) ಈ ಚಿನ್ಹಗಳನ್ನು ಒಂದು ಘಳಿಗೆ ಪರೀಕ್ಷಿಸಿ ನೋಡುವ.

ಅಪ್ಪಗಳಿರಾ—ಯಾವದಾದರೊಂದು ಅಕ್ಷರವಂನು ಪತ್ತು ಕೊಡಬೇಕಾದರೆ ಅದರ ತಲೆಯನ್ನು ಅಳಿಕಿಸಿ ಅರ್ಧಾಕ್ಷರ ಮಾತ್ರ, ವತ್ತು ಕೊಡುತ್ತಾರೆ ಅದರ ಹಾಗೆ (ಸಂಪತ್ತು) ಇದರಲ್ಲಿ (ತ) ಈ ವರ್ಣದ ತಲೆಯಂನು ಅಳಿಕಿಸಿ ನೋಡಲಾಗಿ ವತ್ತು ಕೊಟ್ಟ (ು) ಈ ಅಕ್ಷರದ ಹಾಗೆ ಆಗುವದು ನೋಡು.

(ತನ್ನ) ಇದರಲ್ಲಿ (ನ) ಈ ವರ್ಣಕ್ಕೆ (ೃ) ಈ

ವತ್ತು ಕೊಟ್ಟಿದ್ದು ಬರೋಬರಿ ರೀತಿಯಿಂದ ನೋಡಿದರೆ ಅವಸರದಿಂದ ಬರೆಯುವ (ನ) ಇದರ ಹಾಗೆ ಅದೆ ಪರಿಕಿಸು.

(ತಮ್ಮ) ಇದರಲ್ಲಿ (ಮ) ಈ ವರ್ಣದ ತಲೆಯಂನು ಅಳುಕಿಸಿದರೆ (ಮು) ಇದರಂತೆ ಆಗುವದು ಇದಂನು ಎಲ್ಲಾ ಕೂಡಿಸಿ ಬರೆಯಲು (್ಮ) ಈ ಅರ್ಧಾಕ್ಷರದ ಹಾಗೆ ಆಗುವದು ವಿಚಾರಿಸು (್ಮ) ಇದರಲ್ಲಿ (ಅ) ಸ್ವರವು ಶೇರಿದರೆ (ಲ) ಆಗುತ್ತದೆ ಎಂಬ ಸೂತ್ರವು ಅದೆ ಆದಕಾರಣಾ (ಲ) ಈ ವರ್ಣಕ್ಕೆ (ಅ) ಸ್ವರವು ಶೇರದಿರುವದರಿಂದ (್ಮ) ಇದು ಅರ್ಧಾಕ್ಷರವಾಯಿತು ಆದ್ದರಿಂದ ವತ್ತು ಕೊಡುತ್ತಾರೆ ಈ ವ್ಯಾಕರಣದ ವಿಷಯಕ್ಕೆ ಸಮಕ್ಷಮ ಭೆಟ್ಟಿ ಆದಾಗ್ಯೆ ಹೇಳುವೆನು. ಇದರಲ್ಲಿ ಏನಾದರೂ ನ್ಯೂನಾಧಿಕವಿದ್ದರೆ ತಿದ್ದಿ ಪ್ರಕಟಿಸುವ ಮೆಹರ್ಬಾನಗಿ ಆಗಬೇಕೆಂದು ಕೋರುತ್ತೇನೆ.

ಮುಕ್ಕಾಮ ಅಮರಗೊಳ್ಳ
ತಾರೀಖು ೨೧।೯।೭೪೫.

(ಸಹಿ) ವೀರಪ್ಪಾ ಮುರಿಗೆಪ್ಪಾ ಸವದತ್ತಿ ಅ. ಮಾ. ಅಮರಗೊಳ್ಳ ತಾ. ಹು. ಜಿ. ಧಾ.

ಮಹಾರಾಜ ರಾ. ರಾ. ಕನ್ನಡಮೂಲಪತ್ರ ಕರ್ತರಿಗೆ—

ಸೇವಕ ಬಿನ್ನಹ ತಮ್ಮ ಕರಕಮಲದಿಂದ ಹುಟ್ಟಲ್ಪಟ್ಟ ಜೂನತಿಂಗಳ ಸನ್ನ ೧೮೭೯ ಇಸ್ವಿಯ ಶಾಲಾಪತ್ರಿಕೆಯಲ್ಲಿ ನಮ್ಮ ಮಿತ್ರನಾದ ಅಂಣಾಜಿ ಕೃಷ್ಣ ಮುದ್ದತನೀಸ ಮುಗಟಖಾನಹುಬ್ಬಳ್ಳಿ ಇವರು ೧/೪ ಮತ್ತು ೦/೪ ಇವುಗಳ

ಲ್ಲಿ ಏನು ಭೇದವದೆ ಅಂತ ಕೇಳಿದ ಪ್ರಶ್ನಕ್ಕೆ ಸ್ವಲ್ಪ ಸುರುವ.

$\frac{೧}{೪}$ ಮತ್ತು $\frac{೦}{೪}$ ಈ ಎರಡಲ್ಲಿ ಭೇದವೇನು ನೋಡುವ. (೧) ಇದಕ್ಕೆ ೪ ರಿಂದ ಭಾಗಿಸಲು (।) ಪಾವ ಉತ್ತರ ಬರುವದು ನೋಡು ಉಂ ೪)೧(।

೧

―――

೦

ಮತ್ತು (೦) ಇದಕ್ಕೆ (೪) ರಿಂದ ಭಾಗಿಸಿ ನೋಡಲು ಭಾಗಾಕಾರವು (೦) ಸುನ್ನಿಯೇ ಬರುವದು. ಉಂ ೪)೦(೦

೦

―――

೦

ಈ ಎರಡರಲ್ಲಿ ಇಷ್ಟೇ ಭೇದ ಏನಂದರೆ ಮೊದಲನೇದು ಪಾವ ಎಂಬದು ಸ್ಪಷ್ಟ ತೋರಿಸುತ್ತದೆ ಎರಡನೇದು ಏನು ಇಲ್ಲೆಂಬ ಅರ್ಥವನ್ನು ತೋರಿಸುತ್ತದೆ ಅದಕ್ಕೂ ಇದಕ್ಕೂ ಇಷ್ಟೇ ಅಲ್ಲವೇ? (ಹೌದು) ಇದಕ್ಕೂ ಹೆಚ್ಚು ಭೇದ ಏದ್ದರೆ ತಿಳುಹಿಸುವ ಮೇಹರಬಾನಗಿ ಆಗಬೇಕು.

ಮುಕ್ಕಾಮು ಅಮರಗೊಳ್ಳ
ತಾ. ೨೧।೯।೭೪ಇಸವಿ.

ಸಹಿ ವೀರಪ್ಪಾ ಮುರಿಗೆಪ್ಪಾ
ಸವದತ್ತಿ ಅ. ಮಾಸ್ತರ ಅ
ಮರಗೊಳ್ಳ ತಾ. ಹು. ಜಿ. ಧಾ.

ರಾವಸಾಹೇಬ ದಕ್ಷಿಣ ಭಾಗದ ಕನ್ನಡ ಶಾಲಾಪತ್ರಿಕದ ಎಡಿಟರರ ಚರಣಾರವಿಂದಗಳಿಗೆ—

ಸೇವಕನು ಮಾಡುವ ಬಿನ್ನಹವೇನಂದರೆ; ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಮನೋಹರವಾದ

ಮಾತಪತ್ರಕದಲ್ಲಿ ಛಾಪಿಸಿ, ಪ್ರಸಿದ್ಧಿಸುವಿರೆಂದು; ಮಹತ್ತಾಪೇಕ್ಷೆ ಧರಿಸಿದ್ದೇನೆ. ಈ ಸಾಲಿಗೆ ತಾರೀಖು ೨೯ ನೇ ಮಾಹೆ ಸಪಟಂಬರ ಸನ್ನ ೧೮೭೪ ಇಸವಿ ದಿವಸ ರಾ. ರಾ. ಗ್ರಾಮಸ್ಥರೂ, ಪಂಚರೂ, ಕೂಡಿ ಸಾಲಿಯು ೧|೨|೩|೪| ನೇ ವರ್ಗದ ವಿದ್ಯಾರ್ಥಿಯರನ್ನು ಪರೀಕ್ಷಿಸಿ; ಆನಂದ ಪಟ್ಟು ಇವರಲ್ಲಿ ರಾ. ರಾ. ಹಣಮಂತಗೌಡಾ ಬಿನ್ನ ಪಾವಡಿಗೌಡಾ ಕುಲಕರ್ಣಿ ಇವರು ನಾಲ್ಕು ರೂಪಾಯಿದ ಮಿತಾಯಿ ಹಂಚಿ; ಇದಲ್ಲದೆ ಅಭ್ಯಾಸಿಕರಿಗೆ ಹೀಗೆ ಹೇಳಿದರಲ್ಲಾ ಬರುವ ಮಾಸದಲ್ಲಿ ನಾವು ಪರೀಕ್ಷೆಯಂನು ತೆಗೆದುಕೊಂಡು ಪಾಸಾದವರಿಗೆ ಒಂದೊಂದು ರೂಪಾಯಿದ ಪುಸ್ತಕವನ್ನು ಕೊಡುತ್ತೇವೆಂದು ಹೇಳಿ ಸಾಲಿ ಸ್ಥಿತಿ ನೆಟ್ಟಗದೆಂಬುವದರ ವಿಷಯಕ್ಕೆ ರಜಿಸ್ಟ್ರದಲ್ಲಿ ಬರೆದಿರುತ್ತಾರೆ. ಪತ್ರ ವಿಸ್ತಾರದ ಮಾಫಿ ದೈನ್ಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾರೀಖು ೨೯ ನೇ ಮಾಹೆ ಸಪಟಂಬರ ಸನ್ನ ೧೮೭೪ ಇಸವಿ.

ಬಸಪ್ಪಾ ಶಿವಲಿಂಗಪ್ಪಾ ಸ್ಕೂಲಮಾಸ್ತರ ಗುಡಿಸಾಗರ.

ಮೆಹರಬಾನ ರಾವಸಾಹೇಬ ಕನ್ನಡ ಶಾಲಾಪತ್ರಂಎ
ಡಿಟರ ಇವರ ಸೇವಿಗೆ.

ಬಿನ್ನಹಾ ತರುವಾಯಾ — ರಾ. ಸಾ. ತಮ್ಮ ಅಂದವಾದ ಶಾಲಾಪತ್ರಿಕೆಯು ದ್ವಾರದಿಂದ ಕೆಳಗೆ ಬರೆದ ಸಂಗತಿಯನ್ನು ಪ್ರಕಟ ಮಾಡಬೇಕೆಂಬ ಅಪೇಕ್ಷೆಯಿಂದಾ ಬರೆದಿದ್ದೇನೆ.

ಮಹಾರಾಜ ರಾಜಮಾನ್ಯರಾಜಶ್ರೀ ಕೃಷ್ಣಪ್ಪಾ ಭೋ

ಗಪ್ಪಾ ಕಸ್ತೂರಿ ನಾಯಿಕ ದೇಶಾಯಿವ ನಾಡಗೌಡಾ ಕರ್ಯಾತ್ರ ಪತ್ರಿಗೇರಿ ಇನಾಮುಗ್ರಾಮು (ರುವಗಟ್ಟಿ ವಗೈರೆ ಇವರು ಜಹಾಗೀರದಾರ ಘರಾಣೆದೊಳಗಿನವರು ಇದ್ದು ಈ ವರ್ಷ ಅವರಿಗೆ ದೇಸಗತಿಯು ಅಧಿಕಾರದೊರದಿದ್ದು ಚಿಕ್ಕ ವಯಸ್ಸಿನವರು ಪ್ರಷಾರ ಇದ್ಧಾರೆ. ಇವರು ತಾ. ೫ ಸಪಟೆಂಬರ ೧೮೭೪ ಇ. ದಿವಸಾ ಸಂವಪತ್ರಿಗೆ ಬಂದಾಗ ಈ ಸಾಲಿಗೆ ಬಂದು ಇಂಗ್ರೇಜಿ ವರ್ಗವ ಕನ್ನಡ ೧।೨।೩ ವರ್ಗದ ಪರೀಕ್ಷಾ ತೆಕ್ಕೊಂಡು ವಿದ್ಯಾರ್ಥಿಗಳ ಪರೀಕ್ಷಾ ಚನ್ನಾಗಿ ಆದ್ದರಿಂದ ಸಂತೋಷಪಟ್ಟು ೨೪ ಹುಡುಗರಿಗೆ ಪುಸ್ತಕಗಳನ್ನು ಇನಾಮು ಕೊಟ್ಟು ರಜಿಷ್ಟರದಲ್ಲಿ ,ಶರಾ ಬರೆದು ಹೋಗಿದ್ಧಾರೆ. ಮತ್ತು ಗರ್ಲಸ್ಕೂಲಿಗೆ ಹೋಗಿ ಅಲ್ಲಿ ಹೆಂಣುಹುಡುಗಿಯರ ಪರೀಕ್ಷಾತೆಕ್ಕೊಂಡು ೮ ಹುಡುಗಿಯರಿಗೆ ಪುಸ್ತಕಗಳನ್ನು ಇನಾಮು ಕೊಟ್ಟರು. ಈ ದೇಸಾಯಿಯರ ಮನಸ್ಸು ವಿದ್ಯಾವೃದ್ಧಿ ಕಡೆಗೆ ಇದ್ದಂತೆ ಸಂಸ್ಥಾನಿಕರು, ದೊಡ್ಡ ದೊಡ್ಡ ಸಾವಕಾರ ಮುಂತಾದವರು ವಿದ್ಯಾವೃದ್ಧಿ ಕಡೆಗೆ ಲಕ್ಷಕೊಟ್ಟರೆ, ಶಾಲಾಧಿಕಾರಿಗಳಿಗೆ ಸಂತೋಷವಾಗಿ, ಈ ದೇಶದ ಸ್ಥಿತಿ ಚನ್ನಾಗಿ ಸುಧಾರಿಸಿ ವಿದ್ಯಾರ್ಥಿಗಳಿಗೆ ಉತ್ತೇಜನ ಬರುವದು. ಚಿತ್ತಕ್ಕೆ ಅರಿಕೆ ಇರಬೇಕು ಇತಿ ಬಿನ್ನಹಾ

ತಾ. ೯ ಸಪಟೆಂಬರ } ಸಿವರುದ್ರಯ್ಯಾ ಗುರುಲಿಂಗಯ್ಯಾ
ಸ. ೧೮೭೪ ಇಸವಿ. } ಬೆಳಕೂಡಕರ ಅ. ಹ್ಯ. ಹೆ. ಮಾ. ಸ.

ಶಾಲಾಪತ್ರಕವು.

ಪುಸ್ತಕ ೩೦] [ಸಂಚಿಕೆ ೯

ಬೆಳಗಾವಿ, ಮಾಹೆ ಡಿಸಂಬರ ೧೮೭೪.

EDUCATIONAL NEWS.

ವಿದ್ಯಾಸಂಬಂಧದ ವೃತ್ತಾಂತಗಳು.

ಮೆಹೆರ್ಬಾನ್ ಚಾಟ್‌ಫೀಲ್ಡ ಧೊರೆಗಳು ವಿದ್ಯಾಖಾತೆಯ ಡಾಯರೆಕ್ಟರರ ಕೆಲಸಕ್ಕೆ ಕಾಯಮ್ ಮಾಡಲ್ಪಟ್ಟರು. ಈ ಪೂರ್ವದಲ್ಲಿ ಅವರು ಅಕ್ಟಿಂಗ ಡಾಯರೆಕ್ಟರರಾಗಿದ್ದರು.

ಮೆಹೆರ್ಬಾನ ಇನಸ್ಪೆಕ್ಟರ ಧೊರೆಗಳು ಈ ತಿಂಗಳಲ್ಲಿ ಕೊಲ್ಹಾಪುರದ ಹಾಯಸ್ಕೂಲಿನ ವಾರ್ಷಿಕ ಪರೀಕ್ಷೆಯನ್ನು ತೀರಿಸಿಕೊಂಡು ಧಾರವಾಡದ ಹಾಯಸ್ಕೂಲಿನ ಪರೀಕ್ಷೆಗೆ ಹೋಗತಕ್ಕವರಿದ್ದಾರೆ.

ಧಾರವಾಡ ಜಿಲ್ಲೆಯ ಡೆಪ್ಯುಟೀ ಇನಸ್ಪೆಕ್ಟರರು ಸರಕಾರಿ ಕೆಲಸದ ನಿಮಿತ್ತವಾಗಿ ಬೆಳಗಾಂವಿಗೆ ಬಂದು ಸುಮಾರು ಯೆರಡು ತಿಂಗಳಾಯಿತು; ಅವರು ಈ ತಿಂಗಳಲ್ಲಿ ಧಾರವಾಡಕ್ಕೆ ಹೋದರು.

ಟ್ರೇನಿಂಗ ಕಾಲೇಜವು ಸದ್ಯಕ್ಕೆ ವೊಂದು ವರ್ಷ ಧಾರವಾಡಕ್ಕೆ ಹೋಗುವದಿಲ್ಲೆಂತ ಕೇಳುತ್ತೇವೆ.

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ೩೧೧೫ ಜನ ಉಮೇದವಾರರು ಹೋಗಿದ್ದರು. ಅವರಲ್ಲಿ ೪೧೯ ಜನರು ಮಾತ್ರ ಇಂಗ್ಲಿಷದಲ್ಲಿ ಪಾಸ್ ಆದರು. ಇನ್ನು ಇವರಲ್ಲಿ ಎಷ್ಟು ಮಂದಿ ಕಡಿಮೆ ಆಗುತ್ತಾರೋ ತಿಳಿಯದು. ಮುಂಬಯಿ ಹಾಯ್‌ಸ್ಕೂಲಿನಿಂದ ಹೋದ ೧೨೪ ಜನರಲ್ಲಿ ೭೮ ಮಂದಿ ಮಾತ್ರ ಇಂಗ್ಲಿಷದೊಳಗೆ ಇಳಿದರಂತೆ!

ಎಮ್. ಏ. ಪರೀಕ್ಷೆಯಲ್ಲಿ ಇಬ್ಬರೂ, ಎಲ್. ಎಲ್. ಬೀ. ಪರೀಕ್ಷೆಯಲ್ಲಿ ಇಬ್ಬರೂ ಪಾಸ್ ಆದರು. ಬೀ. ಏ. ಪರೀಕ್ಷೆಯಲ್ಲಿ ಬೆಳಗಾವಿಯ ಡಿ. ಇನಸ್ಪೆಕ್ಟರರು ಪಾಸ್ ಆದರು.

ಇಂಡಿಯಾ ಸರಕಾರದವರು ಇನ್ನು ಮುಂದೆ ವಿದ್ಯಾಖಾತೆಯೊಳಗಿನ ದೊಡ್ಡ ದೊಡ್ಡ ಸ್ಥಳಗಳನ್ನು ಲಷ್ಕರೀ ಅಥವಾ ಸಿವ್ಹಿಲ್ ಖಾತೆಯೊಳಗಿನ ಜನರಿಗೆ ಕೊಡದೆ, ವಿದ್ಯಾಖಾತೆಯೊಳಗಿನ ಅಧಿಕಾರಿಗಳಿಗೇ ಕೊಡತಕ್ಕದ್ದೆಂದು ನಿಯಮ ಮಾಡಿದ ಬಗ್ಗೆ ವರ್ತಮಾನಪತ್ರಗಳಲ್ಲಿ ಲೇಖವುಂಟು.

ಕಲಕತ್ತೆಯ ಹತ್ತರ ಬಹಾರನಗರ ಯೆಂಬಲ್ಲಿ "ಭಾರತಶ್ರಮಜೀವಿ" ಯೆಂಬದೊಂದು ಮಾಸಿಕ ಪುಸ್ತಕವು

ಬಂಗಾಲೀ ಭಾಷೆಯಲ್ಲಿ ಇತ್ತ ಕಡೆಯಲ್ಲಿ ಪ್ರಸಿದ್ಧವಾಗುತ್ತದೆ. ಈ ದೇಶದ ಕಲಾಕೌಶಲ್ಯಗಳ ವಿಷಯಗಳನ್ನೂ ಅವುಗಳ ಸುಧಾರಣೆಯ ವಿಚಾರಗಳನ್ನೂ ಪ್ರಸಿದ್ಧಿಸುವದೇ ಈ ಪುಸ್ತಕದ ಮುಖ್ಯ ಉದ್ದೇಶವು. ಈ ಜಾತಿಯ ಮಾಸಿಕ ಪುಸ್ತಕವು ಈ ದೇಶದಲ್ಲಿ ಇದೇ ಮೊದಲನೇದು.

ಈ ದೇಶದ ಬೇರೆ ಬೇರೆ ಪ್ರದೇಶಗಳೊಳಗಿನ ಪಂಡಿತರು ತಂಜಾವರದಲ್ಲಿ ಕೂಡಿ, ವೇದಗಳ ಬಗ್ಗೆ, ಶಾಸ್ತ್ರಗಳ ಬಗ್ಗೆ ವಾದವಿವಾದಗಳನ್ನು ನಡಿಸಿರುತ್ತಾರೆಂದು ಕೇಳುತ್ತೇವೆ.

ಪ್ರಶಿಯಾ ದೇಶದೊಳಗಿನದೊಂದು ಹಳ್ಳಿಯ ಶಾಲೆಗೆ ೬೦೦ ವರ್ಷಗಳಲ್ಲಿ ಆರೇ ನುಂದಿ ಮಾಸ್ತರರಾದರು. ಅವರು ಆರೂ ಮಂದಿ ಒಂದೇ ಮನೆತನದವರೂ ಒಂದೇ ಹೆಸರಿನವರೂ ಇದ್ದರಂತೆ!

ಕೌತುಕದ ವೃತ್ತಾಂತಗಳು.

ಪಂಜಾಬದೊಳಗಿನ ಚೆನಾಬ ಹೊಳೆಗೆ ೬॥. ಮೈಲು ಉದ್ದವಾದದ್ದೊಂದು ಪೂಲು ಕಟ್ಟುತ್ತಾರೆ. ಇಷ್ಟು ದೊಡ್ಡ ಪೂಲು ಯಾವ ಹೊಳೆಗೂ ಇನ್ನೂವರೆಗೆ ಕಟ್ಟಲ್ಪಟ್ಟಿಲ್ಲ.

ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರು ಜೆಹ್ಲಾ ಜ

ಡಚರ ಸ್ಥಳಗಳನ್ನು ನೇಟೀವ ಜನರಿಗೆ ಕೊಡುವ ಬಗ್ಗೆ ಪ್ರಕಾಶವು ಮಾಡಿರುತ್ತಾರೆಂದು ಸುದ್ದಿಯುಂಟು.

ಈ ದೇಶದ ಜನರು ಹೊಟ್ಟೆ ತುಂಬಿಕೊಳ್ಳುವದಕ್ಕೋಸ್ಕರವಾಗಿ ಪರದೇಶಗಳಿಗೆ ಪೂರ್ವದಲ್ಲಿ ಹೋಗುತ್ತಿದ್ದಿಲ್ಲ. ಆದರೆ ಇತ್ತಲಾಗಿ ನಾಲ್ಕು ಮೂರು ವರ್ಷಗಳಲ್ಲಿ ಬಹು ಜನರು ಪರ ದ್ವೀಪಗಳಿಗೂ ದೇಶಗಳಿಗೂ ಹೋದದ್ದುಂಟು. ಮಾರೀಶಸ ದ್ವೀಪಕ್ಕೂ, ಪಶ್ಚಿಮ ಹಿಂದೀ ದ್ವೀಪಗಳಿಗೂ, ಡಚ್ ಜನರು ಒಕ್ಕಲಾಗಿ ನಿಂತ ದ್ವೀಪಗಳಿಗೂ ಕೂಡಿ ಹಿಂದಿನ ಯೆರಡು ವರ್ಷಗಳಲ್ಲಿ ೪೦೦೦೦ಕ್ಕಿಂತ ಹೆಚ್ಚು ಜನರು ನೌಕರಿಯ ಸಲುವಾಗಿ ಹೋದರು. ಅವರಲ್ಲಿ ೩೧೫೨ ಜನ ಬ್ರಾಹ್ಮಣರು, ೬೫೫೯ ಜನ ಒಕ್ಕಲಿಗರು, ೧೭೨೦ ಜನ ಕೈಗಾರಿಕೆಯವರು, ೯೨೭೦ ಜನ ಹೊಲಿಯರು, ೩೬೬೨ ಜನ ಮುಸಲ್ಮಾನರು ಉಂಟು.

ಮುಂಬಯಿಯಲ್ಲಿ ಇದ್ದಲಿಯ ಹೊಗೆಯಿಂದ ಬೀದಿಗಳಲ್ಲಿ ದೀಪಗಳನ್ನು ಹಚ್ಚುತ್ತಿರುತ್ತಾರೆ. ಇತ್ತಕಡೆಯಲ್ಲಿ ಒಬ್ಬ ರಸಾಯನ ಶಾಸ್ತ್ರಜ್ಞನು ಬೇರೊಂದು ಹೊಗೆಯನ್ನು ಶೋಧಿಸಿ ತೆಗೆದಿದ್ದಾನೆ. ಅದು ಗಟಾರದೊಳಗಿನ ಹೊಲಸು ನೀರಿನಿಂದಲೂ, ಓಣಿಯೊಳಗಿನ ಕಸದಿಂದಲೂ, ಮಲದಿಂದಲೂ ಹುಟ್ಟುತ್ತದೆ. ಆದರೆ ಅದಕ್ಕೆ ಇದ್ದಲಿಯ ಹೊಗೆಗೆ ಹತ್ತುವ ವೆಚ್ಚದ ಅರ್ಧಕ್ಕಿಂತ ಕಡಿಮ

ವೆಚ್ಚ ಹತ್ತಿ, ಅದರ ಪ್ರಕಾಶವು ಇದ್ದಲಿಯ ಹೊಗೆಯ ಪ್ರಕಾಶಕ್ಕಿಂತ ಬಹಳ ಹೆಚ್ಚಿರುತ್ತದೆ.

ಜಪಾನ ದೇಶದಲ್ಲಿ ವೊಬ್ಬ ಗೃಹಸ್ಥನು ಹಾರುವದೊಂದು ಯಂತ್ರವನ್ನು ರಚಿಸಿರುತ್ತಾನೆ. ಅದರ ಆಕಾರ ಪ್ರ ಪಕ್ಷಿಯ ಹಾಗಿದೆ. ಅದರೊಳಗೆ ಕೂತು ಆಕಾಶಕ್ಕೆ ಹಾರಿ, ಪುನಃ ಬೇಕಾದಾಗ ಕೆಳಗೆ ಬರಲಿಕ್ಕೆ ಬರುತ್ತದೆ.

SELF HELF.

ತನಗೆ ತಾನೇ ನೆರವಾಗುವದು.

ಕಾವ್ತುದೀಬಘನ್ನನೆಂಬವನ ಚರಿತ್ರೆಯಿಂದ ಇನ್ನೊಂದು ಸ್ಮರಿಸತಕ್ಕಂಥ ತಾಳ್ಮೆಯುಳ್ಳ ಉದ್ಯೋಗದ ಉದಾಹರಣೆಯು ವ್ಯಕ್ತವಾಗುತ್ತದೆ. ಇವನು ತಾಳ್ಮೆಯೇ ಬುದ್ಧಿಕೌಶಲ್ಯನೆಂದೆನ್ನುತ್ತಿದ್ದನು. ಈ ಮಾತಿನ ನಿಜತ್ವವಾದರೂ ಇವನ ಚರಿತ್ರೆಯಿಂದಲೇ ಸಿದ್ಧವಾಗುತ್ತದೆ. ಇವನು ಪ್ರಾಣಿ ಧರ್ಮಶಾಸ್ತ್ರದಲ್ಲಿ ದೊಡ್ಡ ದೊಡ್ಡ ಶೋಧಗಳನ್ನು ಮಾಡಿದಾಗ್ಯೂ, ಚಿಕ್ಕವನಿದ್ದಾಗ ಸಾಮಾನ್ಯತರದ ಬುದ್ಧಿಯುಳ್ಳವನೆಂದೆನಿಸಿಕೊಳ್ಳುತ್ತಿದ್ದನು. ಇವನ ಮನಸಿನಲ್ಲಿ ಯಾವದೊಂದು ವಿಚಾರವು ಬಹು ಮಂದವಾಗಿ ನೆಲೆಗೊಳ್ಳುತ್ತಿದ್ದು, ಮನಸಿನಲ್ಲಿ ಸೇರಿದ ಸಂಗತಿಗಳ ಸ್ಮರಣವಾದರೂ ಮಂದವಾದದ್ದೇ ಇತ್ತು. ಇದಲ್ಲದೆ ಇವನು ಆಲಸ್ಯದ ಸ್ವಭಾವವುಳ್ಳವನಾಗಿ, ಒಳಿತಾಗಿ ಸಂಪತ್ತಿಯುಳ್ಳವನ ಹೊಟ್ಟೆಯಿಂದ ಹುಟ್ಟಿದ ಕಾರಣ ಸೌಖ್ಯ, ಉಪಭೋಗಗಳಿಗೆ ಮೆಚ್ಚಿ ಕಾಲ ಹರಣಮಾಡುವನೆಂದು ತರ್ಕಿಸಬಹು

ದಾಗಿತ್ತು. ಆದರೆ ಆರಂಭದಲ್ಲಿಯೇ ಇವನು ಸೌಖ್ಯವನ್ನು ಅಪೇಕ್ಷಿಸಲಿಕ್ಕಿಲ್ಲೆಂತಲೂ, ಅಭ್ಯಾಸದಲ್ಲಿ ಕಾಲಕಳೆದು ಮನಸ್ಸುಧಾರಣೆಯು ಮಾಡತಕ್ಕದ್ದೆಂತಲೂ ನಿಶ್ಚೈಸಿಕೊಂಡನು. ವೇಳೆಯೆಂಬದೊಂದು ಪರಿಮಿತವಾದ ಸಂಪತ್ತಿಯುಂಟೆಂದೆಣಿಸಿ, ಬೆಳಗಿನಲ್ಲಿ ಹಾಸಿಗೆಯ ಮೇಲೆ ಬಿದ್ದುಕೊಂಡು ತಾನು ಯೆಷ್ಟೋ ತಾಸುಗಳನ್ನು ವ್ಯರ್ಥವಾಗಿ ಕಳೆಯುವದನ್ನರಿತು, ಇವನು ಆ ಸ್ವಭಾವವನ್ನೇ ಬಿಟ್ಟುಕೊಡುವದಕ್ಕೆ ಯತ್ನೈಸಿದನು. ಕೆಲ ದಿವಸಗಳವರೆಗೆ ಬಹು ಯತ್ನ ಪಟ್ಟಾಗ್ಯೂ, ತಾನು ಗೊತ್ತುಮಾಡಿಕೊಂಡ ಕಾಲಕ್ಕೆ ಹಾಸಿಗೆಯಿಂದ ಯೇಳುವದು ಇವನಿಂದಾಗಲಿಲ್ಲ. ಆ ಮೇಲೆ ಇವನು ಜೋಜೆಫನೆಂಬ ತನ್ನ ಆಳನ್ನು ಸಹಾಯಕ್ಕೆ ಕರೆದು, ಬೆಳಗಿನ ಆರು ಘಂಟೆ ಬಡಿಯುವದರೊಳಗೆ ನೀನು ನನ್ನನ್ನು ಹಾಸಿಗೆಯಿಂದ ಯೆಬ್ಬಿಸಿದರೆ, ನಿನಗೆ ಒಂದು ಕ್ರೌನು ಇನಾಮು ಕೊಡುವೆನೆಂದು ಹೇಳಿದನು. ಆ ಮೇಲೆ ಮೊದಲು ಮೊದಲು ಸೇವಕನು ಯೆಬ್ಬಿಸಿದಾಗ ಬಫನ್ನನು ಯೇಳಲಿಚ್ಛೈಸಲಿಲ್ಲ; ನನ್ನ ಮೈಯಲ್ಲಿ ಸ್ವಸ್ಥವಿಲ್ಲೆಂದು ನೆವ ಹೇಳುತ್ತಿದ್ದನು, ಅಥವಾ ಸುಮ್ಮನೇ ಉಪದ್ರವ ಮಾಡಬೇಡೆಂದು ಶಿಟ್ಟಿನ ಲಕ್ಷಣವ ತೋರಿಸುವನು. ಆದರೆ ಅವನು ತಡಮಾಡಿ ಹಾಸಿಗೆಯಿಂದೆದ್ದ ಮೇಲೆ, ನನ್ನ ಅಪ್ಪಣೆಯು ಮುರಿದು ನೀನು ಇಷ್ಟು ಹೊತ್ತು ನನ್ನನ್ನು ಹ್ಯಾಗೆ ಮಲಗಗೊಟ್ಟೆಯೆಂದು ಜೋಜೆಫನಿಗೆ ಬೈಗಳ ಇನಾಮುಗಳನ್ನು ಮಾತ್ರ ಕೊಡಹತ್ತಿದನು. ಆದದರಿಂದ ಜೋಜೆಫನು ಇನ್ನು ಮೇಲೆ ಬೈಗಳಿಗೆ ಬದಲಾಗಿ ಕ್ರೌನುಗಳನ್ನೇ ದೊರಕಿಸತಕ್ಕದ್ದೆ

ದು ನಿಶ್ಚೈಯಿಸಿಕೊಂಡು, ಬಫನ್ನನು ಯೆಷ್ಟು ಹೇಳಿಕೊಂ
ಡಾಗ್ಯೂ, ಯೆಷ್ಟು ತಿಳುವಳಿಕೆಯು ಹೇಳಿದಾಗ್ಯೂ, ನಿನ್ನ
ನ್ನು ಈ ಕ್ಷಣವೇ ಮನೆಯಿಂದ ಹೊರಗೆ ಹಾಕುವೆನೆಂದು
ಯೆಷ್ಟು ಹೆದರಿಸಿದಾಗ್ಯೂ, ಅಂಜದೆ ಪುನಃ ಪುನಃ ಬಲಾ
ತ್ಕಾರಮಾಡಿ ಅವನನ್ನು ಯೆಬ್ಬಿಸುತ್ತಿದ್ದನು. ಹೀಗೆ ನ
ಡೆಯಲಾಗಿ ಒಂದು ದಿವಸ ಏಳುವ ಕಾಲದಲ್ಲಿ ಬಫನ್ನನು
ಅತಿಶಯ ಹಟಹಿಡಿದು ಯೇನು ಮಾಡಿದರೂ ಯೇಳಲಿಲ್ಲ;
ಆಗ ಜೋಜೆಫನು ಇನ್ನು ಕಡೆಯ ಉಪಾಯವನ್ನು ಯೋ
ಜಿಸುವದು ಆವಶ್ಯಕವೆಂದು ನೋಡಿ, ಬರ್ಫನಂತೆ ತಣ್ಣಗಾ
ದ ನೀರು ತುಂಬಿದ ಒಂದು ಹೂಜಿಯನ್ನು ಅವನ ಮುಸು
ಕಿನೊಳಗೆ ಸುರಿದುಬಿಟ್ಟನು; ಅದರಿಂದ ಬಫನ್ನನು ಆ ಕ್ಷ
ಣನೇ ಹಾಸಿಗೆಯು ಬಿಟ್ಟು ಯೆದ್ದನು. ಈ ವಿಧದ ಉಪಾ
ಯುಗಳನ್ನು ಯೆಡೆಬಿಡದೆ ನಡಿಸಿ, ಬಫನ್ನನು ಕಡೆಯಲ್ಲಿ
ತನ್ನ ಸೋಮಾರಿತನದ ಸ್ವಭಾವವನ್ನು ಜಯಿಸಿದನು.
ಮುಂದೆ ಅವನು ತಾನು ಬರೆದ ಪ್ರಾಣಿ ಧರ್ಮಶಾಸ್ತ್ರದ
ಮೂರು ನಾಲ್ಕು ಭಾಗಗಳು ಜೋಜೆಫನ ಸಹಾಯದಿಂದ
ಲೇ ಉಂಟಾದವೆಂದು ಅನ್ನುತ್ತಿದ್ದನು.

ಬಫನ್ನನು ನಾಲ್ವತ್ತು ವರ್ಷಗಳವರೆಗೆ ಪ್ರತಿ ದಿವಸ
ಬೆಳಗಿನ ಒಂಭತ್ತರಿಂದ ಯರಡು ಬಡಿಯುವವರೆಗೂ, ಸಂ
ಜೆಯ ಐದು ಘಂಟೆಯಿಂದ ಒಂಬತ್ತರವರೆಗೂ ಟೇಬಲಿನ
ಹತ್ತರ ಕೂತು ಕೆಲಸಮಾಡುತ್ತಿದ್ದನು. ಅವನ ಆ ಸತ್ತಿಯು
ಬಹು ದಿವಸ ಕ್ರಮದಿಂದಲೂ ನಿಯಮದಿಂದಲೂ ನಡೆದಕಾ
ರಣ ಕಡೆಯಲ್ಲಿ ಅದು ಅವನ ಸ್ವಭಾವವೇ ಆಗಿಹೋಯಿ
ತು. ಅವನ ಚರಿತ್ರೆಯನ್ನು ಬರೆದವನು ಹೇಳಿದ್ದೇನಂದ

ರೆ, "ಕೆಲಸವು ಅವನಿಗೆ ಅತ್ಯಾವಶ್ಯಕವಾದ ಒಡಿವೆಯಾಗಿತ್ತು; ಅಭ್ಯಾಸವೆಂಬದು ಅವನಿಗೆ ಮಂತ್ರವಿದ್ಯದ ಹಾಗಾಗಿತ್ತು; ಅವನು ಹಲಕಾಲಕೀರ್ತಿಯುಳ್ಳ ಕೃತ್ಯಗಳನ್ನು ನಡಿಸಿ, ಕಡೆಯಲ್ಲಿ ಅಭ್ಯಾಸಕ್ಕೆ ಇನ್ನು ಕೆಲವು ವರ್ಷಗಳನ್ನು ಅರ್ಪಿಸುವೆನೆಂದು ಕೋರುತ್ತೇನೆಂತ ಆಗಾಗ್ಗೆ ಅನ್ನುತ್ತಿದ್ದನು. ಅವನು ಯಾವಾಗಲೂ ತನ್ನ ಮನಸ್ಸಿನ ಅತ್ಯುತ್ತಮ ವಿಚಾರಗಳನ್ನು ಯಥಾರ್ಥವಾಗಿ ಸ್ಪಷ್ಟ ತಿಳಿಯುವಹಾಗೆ ಬರೆಯುವದಕ್ಕೆ ಯತ್ನಪಡುತ್ತಿದ್ದನು. ಒಮ್ಮೆ ಬರೆದದ್ದನ್ನು ಪುನಃ ಪುನಃ ಅಳಿಸಿ ಬರೆಯುವದರಲ್ಲಿ ಅವನಿಗೆ ಯೆಷ್ಟುಮಾತ್ರವೂ ದಣುವಿದ್ದಿಲ್ಲ; ಅಂದರೆ ತನ್ನ ಭಾಷೆಗೆ ಯಾರೂ ಕುಂದವಿಡಬಾರದೆಂದು ಅವನು ಕಾವಣಿಸುತ್ತಿದ್ದನು. "ಇಕ್ಲೋಕಿಸ ದೀಲಾನೇಚರ" ಯೆಂಬ ಗ್ರಂಥವನ್ನು ಕುರಿತು ಅವನು ಐವತ್ತು ವರ್ಷಗಳವರೆಗೆ ವಿಚಾರ ನಡಿಸಿದಾಗ್ಯೂ, ಹನ್ನೊಂದುಸಾರೆ ಅವನ್ನು ಬರೆಯುವಮಟ್ಟಿಗೂ ಅವನ ಮನಸ್ಸಿಗೆ ಪ್ರಶಸ್ತವಾಗಲಿಲ್ಲ. ಅವನು ಪೂರ್ಣವಾಗಿ ಉದ್ಯೋಗಶಾಲಿ, ಎಲ್ಲ ಕೆಲಸಗಳಲ್ಲಿ ಬಹು ವ್ಯವಸ್ಥೆಯುಳ್ಳವನೂ ಇದ್ದನು. ವ್ಯವಸ್ಥೆ ಯಿಲ್ಲದಿದ್ದರೆ ಬುದ್ಧಿಕೌಶಲ್ಯದ ಬಲದ ನಾಲ್ಕು ಭಾಗಗಳಲ್ಲಿ ಮೂರು ನಷ್ಟವಾಗಿ ಹೋಗುತ್ತವೆಂದು ಅವನು ಅನ್ನುತ್ತಿದ್ದನು. ಏಕನಿಷ್ಠೆಯ ಆಸಕ್ತಿಯಿಂದಲೂ, ಬಹು ಕ್ರಮವುಳ್ಳ ಉದ್ಯೋಗದಿಂದಲೂ ಅವನು ಗ್ರಂಥಕರ್ತನೆಂಬ ಕೀರ್ತಿಯಂಪಡೆದನು. ಮಾಡಂನೆಕ್ಕರಯೆಂಬ ಸ್ತ್ರೀಯಳು ಹೇಳಿದ್ದೇನಂದರೆ, "ಕೆಲವೊಂದು ವಿಷಯದಲ್ಲಿ ಸ್ಥಿರವಾದ ಲಕ್ಷವನ್ನು ಇಡಲಾಗಿ, ಅದರಿಂದ ಬುದ್ಧಿಕೌಶಲ್ಯವುಂಟು

ಗುತ್ತದೆಂದು ಬಫನ್ನನ ಬಲವಾದ ನಂಬಿಗೆಯಿತ್ತು. ಇವನು ತನ್ನ ಪುಸ್ತಕವನ್ನು ಮೊದಲಿನ ಆವೃತ್ತಿ ಬರೆಯುವಾಗ ತೀರ ಬೇಸರ ಪಟ್ಟೆನೆಂದು ಹೇಳುತ್ತಿದ್ದನು. ಆದರೆ ಅದನ್ನು ಪುನಃ ಪುನಃ ತಿದ್ದಿ, ಕೆಲಮಟ್ಟಿಗೆ ಅದರಲ್ಲಿ ಪೂರ್ಣತ್ವವುಂಟಾಯಿತೆಂದು ತನಗೆ ತೋರಿದಾಗ್ಯೂ, ಪುನಃ ಒಂದುಸಾರೆ ಅದನ್ನು ಲಕ್ಷಪೂರ್ವಕವಾಗಿ ಓದಲಿಕ್ಕೇ ಬೇಕೆಂದು ತನ್ನ ಮೇಲೆ ತಾನೇ ಬಲಾತ್ಕಾರನಡಿಸಿದನು. ಆದರೆ ಕಡೆಯಲ್ಲಿ ಈ ವಿಧವಾಗಿ ಶ್ರಮಪಟ್ಟು ಮೇಲೆ ಮೇಲೆ ತಿದ್ದುವದರಲ್ಲಿಯೇ ಅವನಿಗೆ ಸಂತೋಷವುಂಟಾಯಿತು." ಇನ್ನೊಂದು ಸಂಗತಿಯನ್ನು ಇಲ್ಲಿ ಬರೆಯತಕ್ಕದ್ದು. ಅದೇನಂದರೆ, ಬಫನ್ನನು ತನ್ನ ದೊಡ್ಡ ದೊಡ್ಡ ಗ್ರಂಥಗಳನ್ನು ರಚಿಸಿ ಪ್ರಸಿದ್ಧ ಮಾಡುತ್ತಿದ್ದ ಕಾಲದಲ್ಲೆಲ್ಲ ಅವನು ಮನುಷ್ಯ ಶರೀರದಲ್ಲಿ ಹುಟ್ಟಬಹುದಾದ ಎಲ್ಲ ರೋಗಗಳಲ್ಲಿ ಅತಿ ವ್ಯಥೆಪಡಿಸುವ ರೋಗದಿಂದ ಗ್ರಸ್ತನಾಗಿದ್ದನು.

ವಿದ್ಯಾಸಾಧನೆಯಲ್ಲಿ ಕಾಲಕ್ಷೇಪ ಮಾಡಿದವರ ಚರಿತ್ರೆಗಳಲ್ಲಿ ದೃಢನಿಶ್ಚಯದ ಉದಾಹರಣೆಗಳು ಹೇರಳವಾಗಿ ಸಿಕ್ಕುತ್ತವೆ. ಈ ಸಂಬಂಧದಿಂದ ನೋಡಲಾಗಿ ಸರ್ ವಾಲ್ಟರಸ್ಕಾಟ್ಟನೆಂಬವನ ಚರಿತ್ರಗಿಂತ ಹೆಚ್ಚು ಬುದ್ಧಿಯು ಕಲಿಸುವ ಚರಿತ್ರೆಯು ಇನ್ನೊಂದು ಸಿಕ್ಕುವದು ದುರ್ಲಭವು. ಇವನು ಒಬ್ಬ ವಕೀಲನ ಕೈಕೆಳಗೆ ಇರುವಾಗ ಕೆಲಸ ಮಾಡುವದಕ್ಕೆ ಉಪಯುಕ್ತವಾದ ಆಶ್ಚರ್ಯ ಪಡತಕ್ಕಂಥ ಗುಣಗಳನ್ನು ಕಲಿತುಕೊಂಡನು. ಅಲ್ಲಿ ಬಹಳ ವರ್ಷ ನಿಂತು ನಕಲುಗಳನ್ನು ಬರೆಯುವ ಕಾರಕೂನ

ನಿಗಿಂತ ಹೆಚ್ಚು ಯೋಗ್ಯತೆಯುಳ್ಳದಂಥ ಬೇಸರಿಕೆಯ ಕೆಲಸವನ್ನು ಮಾಡಿದನು. ಅವನು ಈ ವಿಧವ ಕೆಲಸ ಮಾಡುತ್ತಿದ್ದ ಕಾರಣ ಸಾಯಂಕಾಲಕ್ಕೆ ಮನೆಗೆ ಬಂದ ಮೇಲೆ ಬಹಳ ಪ್ರೀತಿಯಿಂದ ಪುಸ್ತಕಗಳನ್ನು ಓದಿ ಅಭ್ಯಾಸ ನಡೆಸುತ್ತಿದ್ದನು. ಅವನು ತಾನು ಯೇನು ಉಲ್ಲಾಸವಿಲ್ಲದ ಕೆಲಸ ಮಾಡಿದ ರೂಢಿಯಿಂದಲೇ ಅಭ್ಯಾಸದ ಸ್ವಭಾವವನ್ನೂ, ತಾಳ್ಮೆಯುಳ್ಳ ಆಸಕ್ತಿಯನ್ನೂ ಕಲಿತುಕೊಂಡೆನೆಂದು ಹೇಳುತ್ತಿದ್ದನು. ಈ ಗುಣಗಳು ಕೇವಲ ವಿದ್ವಾಂಸರೆಂದೆನಿಸಿಕೊಳ್ಳುವ ಜನದಲ್ಲಿ ಒಂದೊಂದು ವೇಳೆ ಬಹಳ ಕೊರತೆಯಾಗಿರುತ್ತವೆ. ನಕಲು ಬರೆಯುವ ಕೆಲಸಕ್ಕೋಸ್ಕರನಾಗಿ ಅವನಿಗೆ ಕೆಲವು ನಿಯಮಿತ ಶಬ್ದಗಳುಳ್ಳ ಒಂದು ಪುಟವನ್ನು ಬರೆದರೆ ೩ ಪೆನ್ಸುಗಳು ದೊರೆಯುತ್ತಿದ್ದವು. ಅವನು ಒಂದೊಂದು ವೇಳೆ ಹಗಲು ರಾತ್ರಿ ಕೂಡಿ ೧೨೦ ಪುಟಗಳನ್ನು ಬರೆದು ಒಂದು ದಿನದಲ್ಲಿ ೩೦ ಶಿಲಿಂಗುಗಳನ್ನು ಸಂಪಾದಿಸುತ್ತಿದ್ದನು. ಈ ಹಣದಿಂದ ಅವನು ತನ್ನ ನಿತ್ಯ ಕ್ರಮದ ಆದಾಯದೊಳಗಿಂದ ಕೊಳ್ಳುವದಕ್ಕೆ ಅಸಾಧ್ಯವಾದಂಥ ಪುಸ್ತಕಗಳನ್ನು ಕೊಳ್ಳುತ್ತಿದ್ದನು.

ಸ್ಕಾಟನು ಮುಪ್ಪಿನ ಕಾಲದಲ್ಲಿ ತಾನು ಒಳ್ಳೇ ವ್ಯವಹಾರಿಕನಾದ ಮನುಷ್ಯನೆಂದು ಅಭಿಮಾನ ವಹಿಸುತ್ತಿದ್ದನು. ಆದರೆ ಬುದ್ಧಿ ಚಾತುರ್ಯವುಳ್ಳವರು ಪ್ರಪಂಚ ವ್ಯವಹಾರದ ಕೆಲಸಗಳನ್ನು ಧಿಕ್ಕರಿಸುತ್ತಾರೆಂದು ಕೆಲವರ ಮತವುಂಟು. ಸ್ಕಾಟನು ಈ ಮತಕ್ಕೆ ಕ್ಷುದ್ರ ಕವಿಗಳ ನಿಂದೋಕ್ತಿಗಳೆಂದು ಹೆಸರಿಟ್ಟು, ಬುದ್ಧಿ ಚಾತುರ್ಯ

ಕ್ಕೂ: ವ್ಯವಹಾರಕೃತ್ಯಗಳ ತಿರಸ್ಕಾರಕ್ಕೂ ಯೇನೇನು ಸಂಬಂಧವಿಲ್ಲೆಂದು ಪ್ರತಿಪಾದಿಸುವನು. ಇದಲ್ಲದೆ ಈ ಮತಕ್ಕೆ ವಿಪರೀತವಾಗಿ ಅವನ ಅಭಿಪ್ರಾಯವೇನಂದರೆ, ನಿರಂತರದಲ್ಲಿ ಪ್ರತ್ಯಕ್ಷ ವಸ್ತುಗಳ ಸಂಬಂಧದಲ್ಲಿ ತಕ್ಕಷ್ಟು ವೇಳೆಯನ್ನು ವೆಚ್ಚ ಮಾಡಲಾಗಿ ಅವರಿಂದ ಪರಿಣಾಮದಲ್ಲಿ ಮೇಲಾದ ಗುಣಗಳಿಗೆ ಹಿತವಾಗುತ್ತದೆ. ಅವನು ಎಡಿನ್ಬರೋ ಪಟ್ಟಣದಲ್ಲಿ ಫೌಜದಾರೀ ಕೋರ್ಟಿನ ಮುತಾಲೀಕನಾಗಿದ್ದಾಗ ತನ್ನ ವಿದ್ಯಾಸಾಧನೆಯ ಕೆಲಸಗಳನ್ನು ನಸಹರಿಯ ಪೂರ್ವದಲ್ಲಿಯೇ ಮುಗಿಸಿ ಆ ಮೇಲೆ ಸಾಯಂಕಾಲದವರೆಗೆ ಕೋರ್ಟಿನಲ್ಲಿ ಕೆಲಸಕ್ಕೆ ಹೋಗುವನು. ಲಾಕಹಾರ್ಟನೆಂಬವನು ಹೇಳಿದ್ದೇನಂದರೆ, "ಸಾರಾಂಶ ನೋಡಲಾಗಿ ಅವನ ಚರಿತ್ರೆಯ ಮುಖ್ಯ ಲಕ್ಷಣವು ಯೇನಂದರೆ, ಅವನು ವರ್ಷದೊಳಗೆ ನಿಕೃಷ್ಟ ಪಕ್ಷಕ್ಕೆ ಆರು ತಿಂಗಳುಗಳಲ್ಲಿ ನಿತ್ಯಶಃ ಯೇನಾದರೂ ಲೌಕೀಕದ ಉದ್ಯೋಗದಲ್ಲಿ ಬಹಳ ವೇಳೆಯನ್ನು ವೆಚ್ಚ ಮಾಡುತ್ತಿದ್ದನು. ಅವನು ತನ್ನ ಪ್ರಪಂಚನಿರ್ವಾಹವು ವ್ಯವಹಾರದ ಉದ್ಯೋಗದಿಂದಲೇ ಆಗತಕ್ಕದ್ದು, ವಿದ್ಯಾಸಂಬಂಧದ ಉದ್ಯೋಗದಿಂದ ಆಗತಕ್ಕದ್ದಲ್ಲವೆಂದು ನಿಯಮ ಮಾಡಿಕೊಂಡಿದ್ದನು. ಅವನು ಒಂದು ಸಮಯದಲ್ಲಿ ನುಡಿದದ್ದೇನಂದರೆ, "ವಿದ್ಯವು ಕೈಯೊಳಗಿನ ಕೋಲಿನಂತೆ ಇರತಕ್ಕದ್ದಷ್ಟೇ ಹೊರ್ತು ಪೂರಾ ಅದನ್ನೇ ಅವಲಂಬಿಸಿ ನಡೆಯುವದು ಸರಿಯಲ್ಲವೆಂದು ನಾನು ನಿಶ್ಚಯ ಮಾಡಿಕೊಂಡೆನು. ಇದಲ್ಲದೆ ವಿದ್ಯಾ ಸಂಬಂಧದ ಕೆಲಸಗಳಿಂದ ಉಂಟಾಗುವ ಲಾಭದೊಳಗಿಂದ ನನ್ನ ನಿತ್ಯದ ವೆಚ್ಚವನ್ನು

ನಡಿಸುವದು ಯೆಷ್ಟು ಅನುಕೂಲವಾದದ್ದಾಗ್ಯೂ, ಹಾಗೆ ಮಾಡುವದು ಅವಶ್ಯಕವಾಗಬಾರದೆಂದು ನಾನು ಕೈಲಾದ ಮಟ್ಟಿಗೂ ಯತ್ನ ಮಾಡುತ್ತಿದ್ದೆ ನು.

BALLADS of DASARU.

ದಾಸರ ಪದಗಳು.

॥ಪದ॥ ರಾಗ ಶಂಕರಾಭರಣ — ಆದಿತಾಳ — ವರದಸು

ಹೃದಯಾ ವರದಸುಹೃಪಯಾ ವರದಸುಹೃದಯಾ ಯೆ

ನು ಮನವೇ॥

ದುರಿತಶರಧಿಯುತ್ತರಿಸಬೇಕಾದರೆ।

ಪರಮಪತಿಯ ನುತಿಸಿರು ಮನವೇ॥ಪ॥

ಘೋರತರದ ಸಂಸಾರವು ದುಃಖದ।

ವಾರಧಿಯಿದರೊಳಗೇನುಂಟು?

ತೋರುವ ಸಿರಿ ಸಂಪತ್ತಿನ ನೆಲೆಯು ವಿ।

ಚಾರಿಸಲದು ಕನಸಿನ ಗಂಟು॥

ಮೂರುದಿನದ ಬಾಳಿಕೆ ಯಿದರೊಳು ನೀ।

ನಾರೈಸುವದೇತರನಂಟೊ?

ಮುರಹರನನು ಮನಮುಟ್ಟಿ ಭಜಿಸಿದರೆ।

ಕಾರಣದಿಂದ ಮುಕುತಿಯುಂಟೊ॥೧॥

ಮಡದಿಸುತರ ಮಮಕಾರಕೆ ನೀ ಮನ।

ಗೊಡುತೊಡನಾಡುತ ನಗಬೇಡಾ॥

ಹಿಡುಕುತ ಮೃತ್ಯುವಯ್ತಂದರೆ ಹೊರ।

ವಡಲೆಂಬರು ತನುವಿನ ಗೂಡಾ॥

ಬಿಡಲಾರದ ಪಾಪದ ಪಾಶಕೆ ಸಿ।

ಕ್ಕಡದು ನೀ ಕಡೆಯಲಿ ಕೆಡಬೇಡಾ॥
ಕಡೆಹಾಯ್ಸುವವನ ಭಜಿಸಲು ಮುಕುತಿಯ।
ಪಡೆಯಬಹುದು ನುತಿಸೋ ಗಾಢಾ ॥೨॥
ನೆತ್ತ ಪಗಡೆ ಚತುರಂಗವ ನಾಡುತ।
ಹೊತ್ತು ಕಳೆವದೇತಕೆ ನೀನೂ॥
ಸುತ್ತಿ ತೊಳಲಿ ಬಳಲುತ ಮಾಡಿದ ಗೃಹ।
ಕೃತ್ಯದಿ ನಿನಗಹ ಫಲವೇನೂ॥
ಕತ್ತಲೆಯೊಳು ಕಣ್ಣನು ತೆರದಂದದಿ।
ವ್ಯರ್ಥದಿ ಸಂಗ್ರಹಿಸುವದೇನೂ॥
ಮೃತ್ಯು ಭಯವ ಗೆಲಬೇಕಾದರೆ ಸ।
ರ್ವೋತ್ತಮದೇವರ ಶರಣೆನ್ನೂ ॥೩॥
ಕೊಳನಬಲದಲಿ ಬೆಳದೀ ಕಾಯದು।
ಬಾಳುವೆ ಯೆಂಬುದು ಸ್ಥಿರವಲ್ಲಾ॥
ಜಾಳಗೆ ತುಂಬಿದ ಹೊನ್ನಾಭರಣವು।
ನಾಳೆಗೆ ಸಂಗಡ ಬಹುದಲ್ಲಾ॥
ಮಾಳಗೆ ಮನೆಯುಪ್ಪರಿಗೆಯು ಕೋಣೆಯು॥
ಪೌಳಗಳೆಲ್ಲಲ್ಲಿಹುದಲ್ಲಾ॥
ಕಾಲನ ಭಯವನು ಕಳೆಯಲು ದೇವರ
ನಾಲಿಗೆಯಲಿ ನುತಿಸೊ ಸೊಲ್ಲಾ ॥೪॥
ಕುಮತಿಗಳಹ ಷಡ್ವರ್ಗಗಳ ಪರಾ।
ಕ್ರಮವೆಲ್ಲವ ನೀ ಪರಿಹರಿಸೂ॥
ಭ್ರಮೆಗೊಳ್ಳಸುವಿಂದ್ರಿಯದಿಚ್ಛೆಗಳಾ।
ಗಮನವ ದಯೆಯಿಂ ನೀ ನಿಲಿಸೂ॥
ಯಮನಾಳ್ಗಳನೆಬ್ಬಟ್ಟುವ ಯತ್ನ।

ಕ್ರಮಗತಿಗಳ ಕಾರ್ಯವ ಬಲಿಸು॥
ಅಮಿತ ಮಹಾಪರಮೌಜಸಿಪಾತ್ಮನ।
ರಮಣೀಯಾಂಘ್ರಿ ಮನದೊಳಿರಿಸು ॥೫॥

NOTICES.

ನೋಟೀಸುಗಳು.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ ವ ಅಸಿಸ್ಟಂಟ ಇವರಿಗೆ.

ತಿಳಿಯಪಡಿಸುವದೇನಂದರೆ—ವಿಜಾಪುರ ೧ ನೇ ನಂಬರ ಶಾಲೆಯ ಮಾನಿಟರ ಗೋಪಾಳ ಮಾರ್ತಂಡ ಯೆಂಬುವವನ ಮೇಲೆ ಸರಕಾರಿ ಪುಸ್ತಕ ಛಪಾಯಿಸಿದ ಬಗ್ಗೆ ಫಿರ್ಯಾದಿಯಾಗಿ ರಾ॥ ಮಾಮಲೇದಾರ ವಿಜಾಪುರ ಇವರು ಸದರ ಮಾನಿಟರನ ಮೇಲೆ ಪೀನಲಕೋಡ ಕಲಮ ೪೨೯ ಪ್ರಕಾರ ಚ್ಯಾರ್ಜ ಇಟ್ಟು ೨ ಎರ್ಡ ತಾಸಿನ ಸಾಧೆ ಕೈದು ಮತ್ತು ೪ ರೂ. ದಂಡ ಈ ಪ್ರ॥ ಅವನಿಗೆ ಶಿಕ್ಷೆ ಮಾಡಿದರು. ಇದು ಯಾವತ್ತು ಮಾಸ್ತರ ವ ಮಾನಿಟರ ವ ಅಸಿಸ್ಟಂಟರಿಗೆ ತಿಳಿಯುವದಕ್ಕಾಗಿ ವ ಜ್ಯಾಗ್ರತೆಯಿಂದ ಇರುವದಕ್ಕಾಗಿ ಪ್ರಕಟಿಸಿದೆ—ತಿಳಿಯುವದು ತಾ॥ ೩ ಮಾಹೆ ದಿಜಂಬರ ೧೮೭೪ ಇಸ್ವಿ.

Ramchaudrv A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಧಾರವಾಡ ಜಿಲ್ಹೆಂದೊಳಗಿನ ಯಾವತ್ತು ಸೆಕಂಡಗ್ರೇಡ ಅ॥ ಮಾ॥ ಮತ್ತು ವ್ಹರನ್ಯಾಕ್ಯುಲರ ಶಾಲೆಯ ಹೆಡ್ಡ ಮಾ

ಸ್ತರರಿಗೆ—ಧಾರವಾಡ ಫಸ್ಟ ಗ್ರೇಡ ಅ॥ ವ್ಹ॥ ಸಾಲಿಯ ಹೆಡ್ಡ ಮಾಸ್ತರರಿಂದ ತಿಳಿಯಪಡಿಸುವದೇನಂದರೆ— ಈ ಹೊತ್ತಿನವರಿಗೆ ಧಾರವಾಡ ಇಂಗ್ರೇಜಿ ಸಾಲಿಯಲ್ಲಿ ಹೊಸದಾಗಿ ಇಂಗ್ರೇಜಿ ಕಲಿಯುವ ಹುಡುಗರನ್ನು ಯಾವದಾದರೂ ತಿಂಗಳಲ್ಲಿ ಕರಕೊಂಬುವ ವಹಿವಾಟು ಇತ್ತು. ಆದರೆ ಈಗ ಮೆ॥ ಏ॥ ಇ॥ ಸಾಹೇಬ ಬಾಹದ್ದೂರ ದಕ್ಷಿಣಭಾಗ ಇವರಕಡೆಯಿಂದ ಕೆಲವು ಹೊಸ ನಮೂನೆಗಳು ಬಂದದರಿಂದ ಈ ವಹಿವಾಟು ಬಂದ ಮಾಡಲ್ಪಟ್ಟದೆ—

ಇನ್ನು ಮೇಲೆ ಹುಡುಗರನ್ನು ದರ ಮೂರು ತಿಂಗಳಗೆ ಅಂದರೆ—ಜನವರಿ, ಎಪ್ರಿಲ್, ಜುಲಾಯಿ, ಮತ್ತು ಅಗಟೋಬರ ಈ ನಾಲ್ಕು ತಿಂಗಳಲ್ಲಿ ತೆಗೆದುಕೊಳ್ಳಲಾಗುವದು—ಪ್ರತ್ಯೇಕ ಪರೀಕ್ಷೆಯ ಸಮಯದಲ್ಲಿ ಪ್ರತ್ಯೇಕ ಸಾಲಿಯಿಂದ ಯೆಷ್ಟು ಹುಡುಗರು ಬಂದರು, ಮತ್ತು ಅವರಿಗೆ ಪ್ರತ್ಯೇಕ ವಿಷಯದಲ್ಲಿ ಎಷ್ಟೆಷ್ಟು ಗುಣಗಳು ದೊರಕಿದವು ಎಂಬುವ ಬಗ್ಗೆ ಪ್ರೊಂದು ಪತ್ರಿಕೆಯು ತಯಾರ ಮಾಡಿ ಮೇಹರಬಾನ ಇನಸ್ಪೇಕ್ಟರ ಸಾಹೇಬ ಮಹಸೂಶರವರ ಕಡೆಗೆ ಹೋಗುವದು.

ಇನ್ನು ಮೇಲೆ ಎಲ್ಲ ಮಾಸ್ತರರು ಮೊದಲಿನ ವಹಿವಾಟು ಬಂದ ಮಾಡಿ ಮೇಲಿನ ನಿಯಮಗಳಿಗೆ ಅನುಸರಿಸಿ ವಹಿವಾಟು ಇಡುವ ತಜವೀಜ ಮಾಡಬೇಕು.

ಧಾರವಾಡ ತಾರೀಖ ೨೫ನೇ
ನವಂಬರ ಸನ್ನ ೧೮೭೪ ಇ.

Bhaskar Dhonddeva Gokhale.
ಡೆ. ಮಾ. ಇ.ಸ. ಧಾರವಾಡ

Correspondence.

ಪತ್ರವ್ಯವಹಾರವು.

ಶ್ರೀಮಂತ ರಾಜಶ್ರೀ ಕನ್ನಡ ಕಾಲಪತ್ರ ಕರ್ತಕರ ಚರಣಸಂನಿಧಾನಕ್ಕೆ—

ಬಿನ್ನಹಾ ಮಾಡಿ ಬರಕೊಳ್ಳುವದೇನಂದರೆ—ಸದರ ಕಾಲಪತ್ರಕದ ೮ನೇ ಪುಸ್ತಕದ ೬೨ನೇ ಸಂಚಿಕೆಯ ೨೮೬ನೇ ಪುಟದಲ್ಲಿ ಹೊಸವಾಡಕರ ಎಂಬ ಮಾಸ್ತರರು ಕೇಳಿದ ಚೌಪದಿಯ ಶ್ಲೋಕದ ಲೆಖ್ಖದ ಉತ್ತರವು ಆದೇ ಪುಸ್ತಕದ ೬೨ನೇ ಸಂಚಿಕೆಯ ೩೦೯ ನೇ ಪುಟದಲ್ಲಿ ಬಾಗವಾಡಿ ಶಿಕ್ಷಕನು ಕೊಟ್ಟಿದ್ದು ನನಗೆ ಸಮವಾಗಿ ತೋರಲಿಲ್ಲಾದ ಕಾರಣ ನಾನು ಯಥಾಮತಿಯಿಂದ ಆ ಉದಾಹರಣವನ್ನು ಮಾಡಿ ಕೆಳಗೆ ಬರದಿರುತ್ತೇನೆ ಇದನ್ನು ತಮ್ಮ ಪತ್ರಕದಲ್ಲಿ ಛಾಪಿಸಿ ಪ್ರಕಟಿಸಿ ಗಣಿತಾಭಿಲಾಷಿತರ ಮನಸ್ಸನ್ನು ತೃಪ್ತಿಬಡಿಸುವಿರೆಂದು ಪ್ರಾರ್ಥನೆ ಇದೆ—

ಗಣೀತಶ್ರೇಢಿಯ ಸೂತ್ರದ ಪ್ರಕಾರಾ—ಮೊದಲ ಮನಿಯಲ್ಲಿ ಕಟ್ಟಿದ ಕುದುರೆಗಳ ಸಂಖ್ಯವು ಗೊತ್ತು ಇಲ್ಲದರಿಂದ (ಕ್ಷ) ಆದಿ ಪದವು—(ಅ)

ಆರಾರಂತೆ ಹೆಚ್ಚಿಗೆ ಕಟ್ಟಿದ್ದರಿಂದ (೬) ಉತ್ತರ ಪದವು—(ಡ)

ಹದಿನಾರು ಮನೆಗಳಲ್ಲಿ ಕಟ್ಟಿದ ಕಾರಣ (೧೬) ಗಛ ಪದವು—(ನ)

ನಾಲ್ಕು ಬೀದಿಯ ಒಟ್ಟಿಣಿಕೆ ನಾಲ್ಕು ಸಾವಿರ (೪೦೦೦) ಸರ್ವಧನ ಪದವು—(ಸ)

ಸಂಕೇತ ಪ್ರಕಾರ — (ಅ+ $\frac{೧}{೨}$ ಡ. $\overline{ನ—೧}$) ನ=ಸ:

(ಕ್ಷ + $\frac{೬}{೨}$. $\overline{೧೬—೧}$) ೧೬ = ೪೦೦೦ ∴ (ಕ್ಷ + ೪೫) ೧೬ = ೪೦೦೦ ∴ ಕ್ಷ + ೪೫ = ೨೫೦ ∴ ಕ್ಷ = ೨೦೫ ಆದರೆ ೨೦೫ಕುದರಿಗಳನ್ನು ಮೊದಲ ಮನೆಯಲ್ಲಿ ಕಟ್ಟಿ ಮುಂದೆ ಆರಾರರಂತೆ ಹೆಚ್ಚಿಗೆ ಕಟ್ಟುತ್ತಾ ಹದಿನಾರು ಮನೆಗಳ ಕೋಷ್ಟಕವನ್ನು ಕೆಳಗೆ ತುಂಬಿಧೆ—

೧	೧೫	೧೪	೪
೧೨	೬	೭	೯
೮	೧೦	೧೧	೫
೧೩	೩	೨	೧೬

೧೦೦೦ (diagonal)

೧೦೦೦	೨೦೫	೨೮೯	೨೮೩	೨೨೩
೧೦೦೦	೨೭೧	೨೩೫	೨೪೧	೨೫೩
೧೦೦೦	೨೪೭	೨೫೯	೨೬೫	೨೨೯
೧೦೦೦	೨೭೭	೨೧೭	೨೧೧	೨೯೫
೧೦೦೦ (diagonal)	೧೦೦೦	೧೦೦೦	೧೦೦೦	೧೦೦೦

ಮುಕ್ಕಾಮ ಇಂಡಿ ತಾ.
೬ ನೇ ದಿಸಂಬರ ಸನ್ನ
೧೮೭೪ ಇಸವಿ.

ರಂಗನಾಥ ನರಸಿಂಹ ವಿಜಾಪೂರಕರ ಪ್ಯೂಪಿಲ ಟೀಚರ ಸರಕಾರಿ ಶಾಳಾ ಇಂಡಿ.

—•—

ಮೇಹರಬಾನ ಕನ್ನಡ ಶಾಲಾಪತ್ರಕದ ಕರ್ತರುಗಳಿಗೆ—

ವಿ. ವಿ. ಸನ್ನ ಮಜಕೂರ ಮಾಹೆ ನವೆಂಬರ ತಿಂಗಳ ಕನ್ನಡಶಾಲಾಪತ್ರಿಕೆಯಲ್ಲಿ ಪತ್ರವ್ಯವಹಾರ ಎಂಬ ಸದರಿನಲ್ಲಿ ಮೋಜೆಬಿನ್ನೂರ ಸ್ಕೂಲಮಾಸ್ತರರ ಪತ್ರ ಪ್ರಸಿದ್ಧಿಸಲ್ಪಟ್ಟದೆ. ಅದರಲ್ಲಿ ಕೆಲವು ವ್ಯಾಕರಣದ ವಿಷಯವಾಗಿ

ಪ್ರಶ್ನೆಗಳನ್ನು ಕೇಳಿದ್ಧಾರೆ ಅವುಗಳಿಗೆ ಕಲ್ಮವಾರ ಉತ್ತರಗಳನ್ನು ಕೆಳಗೆ ಬರಿಯುತ್ತೇನೆ.

(೧) "ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ" ಇಷ್ಟು ಸ್ವರಗಳುಂಟೆಷ್ಟೇ ಎಂದು ಬರಿಯುತ್ತಾರೆ. ಆದರೆ (ಌ) ಎಂಬದನ್ನು ಬಿಟ್ಟಿದ್ಧಾರೆ. ಮತ್ತು (ಋ) ಈ ಸ್ವರಕ್ಕೆ ಯಾವ ಸ್ವರ ಅನ್ನಬೇಕೆಂತ ಕೇಳುತ್ತಾರೆ. ಆದರೆ (ಋ) ಮತ್ತು (ಌ) ಈ ಸ್ವರಗಳಿಗೆ ಅರಿ ಸ್ವರವೆನ್ನ ಬೇಕು. ಯಾಕೆಂದರೆ ಇವು ಒಂದೊಂದು ವೇಳೆ ಆಂಗ್ಲ ಭಾಷೆಯಲ್ಲಿರುವ (W) ಮತ್ತು (Y) ಈ ಸ್ವರಗಳಂತೆ ಈ ೨ ವರ್ಣಗಳು ಸ್ವರಗಳಲ್ಲಿಯೂ, ವ್ಯಂಜನಗಳಲ್ಲಿಯೂ, ಪ್ರಯೋಗಿಸುತ್ತವೆ. ಈ ಬಗ್ಗೆ ಉದಾಹರಣೆಯು ಪಿತೃ+ಅಂಶ=ಪಿತ್ರ್ಯಂಶ, ಭ್ರಾತ್+ಋ=ಭ್ರಾತೃ; ಕ+ಌ=ಕ್ಲೃ, ಌ+ಅಕೃತಿ=ಲಾಕೃತಿ,

(೨) ಕನ್ನಡ ಲಿಪಿಯಲ್ಲಿ ಏ, ಮತ್ತು ಓ, ಈ ಎರಡು ಮಿಶ್ರ ಸ್ವರಗಳೆಂದೂ ಐ, ಮತ್ತು ಔ, ಈ ಎರಡು ಸಂಧಿ ಸ್ವರಗಳೆಂದೂ ಅನ್ನಬಹುದಾದರೆ ಯಾವ ಸ್ವರಗಳಿಗೆ ಯಾವ ಸ್ವರ ಕಲಿತು ಯಾವ ಕಟ್ಟಳೆ ಪ್ರಕಾರ ಆಗಿರುತ್ತವೆಂದು ಕೇಳುತ್ತಾರೆ, ಆದರೆ ಕರ್ನಾಟಕ ಭಾಷೆಯಲ್ಲಿ ಸಂಸ್ಕೃತ ಕಟ್ಟಳೆ ಪ್ರಕಾರವೇ ಮಿಶ್ರ ಸ್ವರನೆಂತಲೂ; ಸಂಧಿಸ್ವರವೆಂತಲೂ; ಅನ್ನಬಹುದು. ಈ ವಿಷಯಕ್ಕೆ ಪ್ರಥಕ್ ಕನ್ನಡ ನೇಮಿದ್ದಂತೆ ಕಾಣುವದಿಲ್ಲ ಈ ಬಗ್ಗೆ ಸಂಸ್ಕೃತ ನೇಮಗಳು (ಅದ್ಗುಣಃ) ಮತ್ತು (ವೃದ್ಧಿರೇಚ್) ಎಂಬ ಕೌಮುದಿಯಲ್ಲಿರುವ ಈ ಎರಡು ಸೂತ್ರಗಳಿಂದ ಮೇಲಿನ ೨ ಸಂಜ್ಞೆಗಳು ಕೊಡಲ್ಪಟ್ಟವೆ.

(೭) ಎ, ಮತ್ತು ಒ, ಈ ಎರಡು ಸ್ವರಗಳು ಸಂಸ್ಕೃತದಲ್ಲಿ ಇಲ್ಲವೇ ಇಲ್ಲವೆಂತಲೂ, ಇವುಗಳಿಗೆ ಯಾವ ಕಟ್ಟಳೆ ಮೇರಿಗೆ ಮಿಶ್ರ ಸ್ವರ ಅನ್ನಬೇಕೆಂದು ಕೇಳುತ್ತಾರೆ. ಆದರೆ ಆ ಭಾಷೆಯಲ್ಲಿ (ಗೀರ್ವಾಣಭಾಷೆ) ಇವುಗಳಿಗೆ ಹ್ರಸ್ವತ್ವ ಮಾತ್ರವಿಲ್ಲ ಈ ಬಗ್ಗೆ ಪ್ರಮಾಣ (ಏಚಾಮಬಿದ್ವಾದಶ॥ ತೇಷಾಂಹ್ರಸ್ವಾಭಾವಾತ್) ಹಾಗು ಹ್ರಸ್ವ ದೀರ್ಘ ಪ್ಲುತ ಈ ಧರ್ಮಗಳು ಕೇವಲ ಉಚ್ಚರಿಸುವ ಕಾಲವನ್ನೆ ತೋರಿಸುತ್ತವಲ್ಲದೆ ಬೇರೆ ಭಿನತ್ವ ತೋರಿಸುವದಿಲ್ಲವೆಂಬ ಬಗ್ಗೆ ಪ್ರಮಾಣ—(ಊಕಾಲೋಜ್ಝ್ರಸ್ವದೀರ್ಘಪ್ಲುತಃ) ಅಂದಬಳಿಕ ೨ ನೇ ಕಲ್ಮಿನಲ್ಲಿ ಕಾಣಿಸಿರುವ ಸೂತ್ರಗಳಿಂದ (ಎ) ಮತ್ತು (ಒ) ಇವುಗಳಿಗೆ ಮಿಶ್ರತ್ವ ಬಂತು.

ಈ ಬಗ್ಗೆ ಇನ್ನು ಅನೇಕ ಪ್ರಮಾಣಗಳು ಮೇಲೆ ಬರೆದ ಸೂತ್ರಗಳರ್ಥ ಬರಿಯಬೇಕೆಂದು ಕಾಂಕ್ಷೆ ಇತ್ತು ಆದರೆ ಪತ್ರ ವಿಸ್ತಾರವಾದೀತೆಂಬ ಭಯದಿಂದ ಸಂಕ್ಷೇಪದಲ್ಲಿ ಮುಗಿಸಿದ್ದೇನೆ ಕಾರಣ ಇದಕ್ಕೆ ಬರುವ ದಿಸೆಂಬರ ತಿಂಗಳ ಶಾಲಾಪತ್ರಿಕೆಯಲ್ಲಿ ಸ್ಥಳದೊರದೀತೆಂತ ನೆರೆನಂಬಿದ್ದೇನೆ.

ತಾರೀಖು ೨೦ ನೇ ನೋವೆಂಬರ ಮು. ಕಾರವಾರ ಜಿಲ್ಲಾ ಮಜಕೂರ.

ಗೋವಿಂದ ಗಂಗಾಧರ ಹೆಡ್ ಮಾ. ಪ್ಲ. ಸ್ಕೂಲ
ಕಾರವಾರ.

ಮಹಾರಾಜ ರಾಜಶ್ರೀ ದಕ್ಷಿಣಪ್ರಾಂತದೊಳಗಿನ ಶಾಲಾಪತ್ರಿಕೆಯ ಎಡಿಟರರಿಗೆ.—

ಕೆಳಗೆ ಸಹಿ ಮಾಡುವವರ ಕಡೆಯಿಂದ ವಿನಯಪೂರ್ವ

ಕ ವಿಜ್ಞಾಪನೆ ಏನಂದರೆ, ಮಾಹೆ ಅಗಸ್ಟ ತಿಂಗಳ ಕಾಲಾಪತ್ರಿಕ ಪಾನು ೧೮೯೯ನೇ ದರಲ್ಲಿ ಸಂಗಪ್ಪಾ ಪರಪ್ಪಾ ಥಳಗಿ ಇವರಿಂದ ಬರೆಯಲ್ಪಟ್ಟ ಲೆಖ್ಖದ ಉತ್ತರವನ್ನು ನಂನ ಅಲ್ಪ ಬುದ್ಧಿಗೆ ತಿಳಿದಷ್ಟು ಬರೆದು ಕಳುಹಿಸಿದ್ದೇನೆ ತಾತ್ಪಾರ ಮಾಡದೆ ಕಾಲಾಪತ್ರಿಕೆಯಲ್ಲಿ ಪ್ರಸಿದ್ಧಗೊಳಸಬೇಕೆಂದು ಇಛ್ಛಿಸುತ್ತೇನೆ.

ಲೆಖ್ಖವು—ಒಂದು ಊರಿನಿಂದ ಅ. ಬ. ಇವರಿಬ್ಬರು ಪ್ರವಾಸಕ್ಕೆ ಹೊರಟರು. ಅ. ಎಂಬವನು ದರ ದಿವಸಕ್ಕೆ ೧೨ ಹರದಾರಿಗಳನ್ನು ನಡಿಯುತ್ತಾನೆ. ಬ. ಎಂಬವನು ಮೊದಲನೇ ದಿವಸ ೧ ಹರದಾರಿ, ಎರಡನೇ ದಿವಸ ೨ ಹರದಾರಿ ಈ ಪ್ರಕಾರ ದಿವಸ ದಿವಸ ಒಂದೊಂದು ಹರದಾರಿ ಅಧಿಕ ನಡಿಯುತ್ತಾನೆ ಆದರೆ ಬ ಎಂಬವನು ಅ ಯೆಂಬವನನ್ನು ಎಷ್ಟು ದಿವಸಕ್ಕೆ ಮುಟ್ಟುತ್ತಾನು—ಇದರ ರೀತಿಯು—ಮುಂದೆ ನಡಿಯುತ್ತಾ ಹೋದ ಪ್ರಮಾಣದ ಹರದಾರಿಗಳೊಳಗೆ ಹಿಂದಿನ ನಡಿಗೆಯು ಪ್ರಥಮ ದಿವಸದ ಹರದಾರಿಗಳನ್ನು ಬಾದುಗಳೆದು ಶೇಷ ಉಳಿದದ್ದಕ್ಕೆ ಹಿಂದಿನಿಂದಿನ ದಿನಕ್ಕೆ ಎಷ್ಟು ಹರದಾರಿಗಳನ್ನು ಅಧಿಕವಾಗಿ ನಡಿಯುತ್ತಕ್ಕದ್ದನೋ ಅದರ ಅರ್ಧದಿಂದ ಭಾಗಿಸಿ ಭಾಗಾಕಾರದಲ್ಲಿ (೧) ಈ ಅಂಕೆಯನ್ನು ಕೂಡಿಸಿದರೆ ಉತ್ತರ ಹೊರಡುತ್ತದೆ.

೧ ಪ್ರಥಮ ದಿವಸ ನಡದದ್ದು—೧ ದಿನ ದಿನಕ್ಕೆ ಹೆಚ್ಚು ನಡದದ್ದು—೧೨ ಮುಂದೆ ನಡಿಯುತ್ತಾ ಹೋದನು.

೧೨—೧=೧೧÷೧/೨=೨೨/೧+೧=೨೩ ದಿವಸದಲ್ಲಿ ಕೂಡುವರು ಇದೇ ಉತ್ತರವು.

ತಾರೀಖು ೭೦ನೇ ಸಪ ಟಂಬರ ೧೮೭೩ ಇ.	ಭೀಮಾಜಿ ಬಾಳಾಜಿ ಕುಲಕರ್ಣಿ ಯಾದವಾಡ ತಾಲೂಕ ವ ಜಿಲ್ಲಾ ಧಾರವಾಡ.

ರಾವಸಾಹೇಬ ಕನ್ನಡಶಾಲಾಪತ್ರಿಕದ ಏಡಿಟರ ಇವರ ಸನ್ನಿಧಾನಕ್ಕೆ—

ವಿನಂತಿ ವಿಜ್ಞಾಪನಃ ಏನಂದರೆ ತಮ್ಮ ಕರಪುಟದಲ್ಲಿ ಹುಟ್ಟುವ ಮಾಸಪತ್ರಿಕದಲ್ಲಿ ಕೆಳಗೆ ಬರೆದ ಎರಡು ಶ್ಲೋಕಗಳಿಗೆ ಸ್ಥಳದೊರಿಯುವದೆಂದು ಪೂರ್ಣವಾಗಿ ನಂಬುತ್ತೇನೆ. ಯಾಕಂದರೆ ಇದು ಪ್ರಥಮ ಪತ್ರವ್ಯವಹಾರ ಇದ್ದದರಿಂದ ಸಂಶಯಪಟ್ಟು ಬೇಡಿಕೊಳ್ಳುತ್ತೇನೆ. ಆದರೆ ಈ ಸಂಶಯವನ್ನು ದೂರ ಮಾಡಿ ಸ್ವಲ್ಪ ಸ್ಥಳ ಕೊಡಬೇಕು. ತಿರಸ್ಕರಿಸಲಾಗದು. ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು ಇಂತಿ ಬಿನ್ನಃ

ಸ್ವಕೃತ. ಭಾ೦॥ಶ್ರೀ ಸುಕಮಲಾನೇತ್ರ ಕುಮುದಕೆ|
ದೋಷನಿಲ್ಲದ ಚಂದ್ರನಾಗಿಹ|
ಶೇಷಶಯನಂ ಭಜಕಮಾನಸ ಹಂಸನಾಗಿರ್ಪ॥
ಭೀಷಣಾನನ ರಾಕ್ಷಸಂಗಳ|
ರೋಷದಲಿ ಸಂಹಾರ ಮಾಡಿದ|
ತೋಷನೆಳಸಲಿ ಎಮಗೆ ಲಕ್ಷ್ಮೀಕಾಂತಸತತದಲಿ ॥೧॥
ಮುಕುಟ ಮಣಿಮಯ ತೇಜಭಾಸುರ|
ನಿಕಟವೋಳ್ಪಟಲದ ಮನೋಹರ|
ಸುಕುಟಿಲೋರಣಿ ಕೇಶಭಾರವನುಳ್ಳ ಕರಿವೊಗವ್ರ॥
ದಟಿತಹಾರದ ಪಟಲದಿಂಸಂ|

ಏಟವಹಾನದ ಮೇಲೆ ಏರಿದ।
ಪಟುತರಾದವ ಮೂಳ್ಪುದೆಮಗ್ಗೆ ವಿಘ್ನ ರಹಿತವನು॥೨॥

ತಾರೀಖು ೨೯ ಸಪ್ಟಂ
ಬರಸನ್ನ ೧೮೭೪ ಮು
ಕ್ಕಾಮು ಬಬಲೇಶ್ವರ
ತಾ॥ ವಿಜಾಪೂರ.

ಗೋಪಾಳ ಗೋವಿಂದ
ಸ್ಕೂಲಮಾಸ್ತರ ಬಬಲೇ
ಶ್ವರ ತಾಲೂಕ ವಿಜಾಪೂ
ರ. ಜಿಲ್ಲಾ ಕಲಾದಗಿ.

अथश्रीकृष्णवेणीस्तवनंप्रारंभम्॥

शार्दूल विक्रीडित वृत्तानि

श्रीकृष्णा विदधातु मंगलमियं या पूतनाशाऽऽस्पदा।
या शाकस्य भयावहा वरयशोदा या मनोहारिणी॥
या गोवर्धन भारतारणपटुः कंसार्थ संस्थापि या।
याऽक्रूरोद्भवमोदिनी प्रभजतां श्रीकृष्णलीला च या॥१॥
कृष्णे पुण्यमहापगेऽयि जननित्वाहं जडोस्यल्पधी—॥
गंभीरां प्रपणाशितुं नच समुद्युक्तोऽपि दक्षो नहि।
किंकुर्यांहि? पुरःसरत्यतिहठाच्चेतो मदीयं यदि।
तस्मान्नर्तयसि त्वमेव तदिदं प्रायो विभातीति मे॥२॥

ಧೂಳೀಧೂಸರ ಕಾಯನಂ ಹಸುಳನಂ ಬೇಕೆಂದು ಬಂ
ದೆತ್ತುತಂ।
ಲೀಳಾ + ಕಾರಣ ಹಾಸ್ಯಯುಗ್ಮುಖವ ಮುದ್ದಿಟ್ಟು ಸ್ವ
ಸಂಗೋಕ್ತಿಯಂ॥
ಕೇಳುತ್ತಂ ತೊದಲಾಡಿಸುತ್ತ ನಗುತಾಟಂಗೈವ ತಾ
ಯಂತೆ ತ

+ ಲೀಳಾ=ಲೀಲಾ ∵ ಳೋಡಃ

ಲ್ಲೀಳಾಕಾಂಕ್ಷಿಣಿಯಾಗಿನೀಂ ಕೇಳಿಕೆಪೆನೆ? ಬಾಲನೀ
ಚಿತ್ರವಂ॥೩॥

इत्थंचेन्मम सुप्रसन्नहृदया मन्येननु त्वां; तथा -।
चेद्देवि! महाबलेश्वरसुते संदर्शनं देहि मे॥
पापादुद्धर मांपितृनपि दयासारे शरण्या यदि।
भक्तानांमवगाहनेच्छु सुजनानां त्वध्वसीतिस्तुता ॥४॥

आर्या

तव संदर्शन पुण्या—दनिमिषारि पत्वोपि धीवरा गदिताः॥
तेषां जीविनिहिंसन—सूत्रमपि पवित्रकं तादीति विदितं ॥५॥

ಕಂದಂ

ಅನಿಮಿಷಪತ್ರಿಯೊಂದದುದುಮುಳ್ಳು
ಗಿನಿಂನೊಳ್ವಿಮಾನಯುತ್ನದಿಂದಾದರದಿಂ॥
ಮನುಜಂಜಳ್ಕಂಬುಗೆನೀ
ಳನಘಂಸದ್ಗತಿಯನ್ನೈದೆವಡೆಯನೆ? ಕೃಷ್ಣೇ॥೬॥

आर्या

धन्या महाबलेश्वर—कन्ये कन्येष्टके गुरौस्नाति॥
जन्हुसुता संगत्यां त्वयियेनन्विति शृणोमिशास्त्रोक्तं॥७॥
त्वमसाधारणमहिमा तटिनि पयोरूपिणी सुविमलासि॥
अयि कृष्णकर्मरिपुरपि तथापि कृष्णेतिसद्भिरालपिता॥८॥
सामृतसंतानयुता तस्मादनिमिषकुलावना कृष्णे।
अतएवामरनगरी धीवरविनुता तवोपमा माप॥९॥

ಮಾಲಿನೀವೃತ್ತಂ

ಸ್ಥಿರಚರಗಳು ಸೋಂಕಲ್ ತಕ್ಷಣಂ ನಿಂನ ಕೃಷ್ಣೇ।
ಪರಿಕಿಸದೆಸುಪಾತ್ರಾಪಾತ್ರವಂ ದೋಷವಂಸಂ॥

ಹರಿಸಿ ಕೊಡುವೆ ಶುದ್ಧಾತ್ಮತ್ವಮಂನೆಂದುನಿಂನಂ।
ಕರೆದರರಿತವರ್ ತಾಯ್ ಕೃಷ್ಣೆಕಾಯೆಂದುಮುನ್ನಂ॥೬೦

ಮಧುಮಾಧವೀ.

ಆಕಾರಣಂ ಜನನಿ ನಿನ್ನ ಜಲಾವಗಾಹಂ।
ಬೇಕೆಂದು ಬಂದೆನತಿ ಕಲ್ಮಷಿ ಯೆಂನದೆಂನಂ॥
ಸಾಕಲ್ಯ ಕಲ್ಮಷಚಯಂದೊಳಗೊಲ್ಮೆಯಿಂನೀ।
ನೇ ಕಾಯದ್ದು ಮಾತೃಕೃಪೆಯುಂ ದಯೆಮಾಳಿಸಿಗಳ್ ॥೬೧

स्रग्धरावृत्तम्.

बालक्रीडाविनोदा युवतिजनमनःसुप्रमोदा सदापि।
वृध्दाल्हाद प्रसादा क्षितिदिविज यतिव्रातसंतोषदाच॥
भोगिस्तोमानुलोला क्रिमिविहगपशुश्वापदाश्लिष्टलीला।
कृष्णे सर्वानुकूलासि सकल भुवनाधारमूलात्वमेव॥१२॥

ಶಿಖರಿಣೀ.

ಕೃತಾರ್ಥಂಗಳ್ ನಿಂನಲ್ಲಿರುವ ಸಲಿಲಂ ಪಾಂಸು ಪುಳಿನ।
ಪ್ರತಾನಂ ಪುಲ್ ಪಂಕಂ ಕ್ರಿಮಿ ತರುಜನಿಪಾಷಾಣನಿಕರ-
ಗತಾವಸ್ಥೆ ಕೃಷ್ಣೇ ಮೊದಲಿವು ಮಹಾಪುಣ್ಯಗಳವು।
ಹಿತಾವುದ್ಧಾರಾರ್ಥಂ ಪಡೆದವು ಭವತ್ಸನ್ನಿಧಿಯನೇ॥೬೩॥

भुजंगप्रयातम्.

नचार्होहमस्मि प्रशस्तु तटस्थान तवानारतंदर्शनादेवपूतान्॥
त्वदंभोवगाहानुपानानुरक्तान नुतैस्तैश्चसद्भिःपुरारब्धपुण्यान्॥१

(ಮುಂದಕ್ಕೆ ಸಾಗುವದು.)

CONTD IN

NEXT ROLL

END